ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಮಕ್ಕಳನ್ನು ಅತಿಯಾಗಿ ಕಟ್ಟುನಿಟ್ಟಿನಿಂದ ಸಲಹಿದರೆ ಮನೆ ಬಿಟ್ಟು ಓಡಿ ಹೋಗುವುದು, ಆತ್ಮಹತ್ಯೆಯಂಥ ದುರಂತ ಸಂಭವಿಸಬಹುದು. ಹಾಗಾದರೆ ಪೋಷಕರು ಏನು ಮಾಡಬೇಕು?

ಟಿಡಿಪಿ ಅಧಿಕಾರಕ್ಕೆ ಬಂದ ನಂತರವೇ ಸದನಕ್ಕೆ ಪ್ರವೇಶ: ನಾಯ್ಡು ಪ್ರತಿಜ್ಞೆ 12
ಚರ್ಚೆ
ಬಿಟ್‌ಕಾಯಿನ್ ಹಗರಣವನ್ನು ಸರ್ಕಾರ ನಿಭಾಯಿಸಿದ ರೀತಿ ಸರಿ ಇದೆಯೇ? 9
ನಿರಂತರ ಮಳೆ: ಬೆಳೆ ನಷ್ಟ, ಮನೆಗಳಿಗೆ ಹಾನಿ 7

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹50,820 (ಬೆಂಗಳೂರು) ▲	₹67,800 (ಬೆಂಗಳೂರು) ▼

ಮಣಿದ ಮೋದಿ, ರೈತರ ಜಯ

ರೈತರ ಒಂದು ವರ್ಷದ ಪ್ರತಿಭಟನೆಗೆ ಗೆಲುವು: ಕಾಯ್ದೆ ಹಿಂಪಡೆಯುವ ಭರವಸೆ ಸಿಕ್ಕರೂ ಹೋರಾಟ ನಿಲ್ಲಿಸದಿರಲು ನಿರ್ಧಾರ

ವಿಶ್ಲೇಷಣೆ
ಡಿ. ಉಮಾಪತಿ

ಬಸವಣ್ಣನರಂತೆ ಗುರು ನಾನಕ್ ಅವರೂ ಕಾಯಕವೇ ಕೈಲಾಸ (ಕೀರತ್ ಕರೋ) ಎಂದು ಬೋಧಿಸಿದ್ದರು. ಕಾಯಕಜೀವಿಗಳ ಪ್ರತಿಭಟನೆಯ ಮುಂದೆ ಅಹಂಕಾರಿ ಪ್ರಭುತ್ವ ನಾನಕ್ ಜಯಂತಿಯಂದು ಶಿರ ಬಾಗಿಸಿದೆ. ಉತ್ತರಪ್ರದೇಶದ ಚುನಾವಣೆಯ ಸೋಲಿನ ಭಯದ ನಡುವೆಯಾದರೂ ಸರಿ, ಜನತಂತ್ರ ಮತ್ತೊಮ್ಮೆ ತಲೆ ಎತ್ತಿದೆ.

ಸೋಲಲು ಒಲ್ಲದ ರೈತರ ದೃಢಸಂಕಲ್ಪದ ಮುಂದೆ ಆಳುವವರ ಹಂಚಿಕೆಗಳು ಹುನ್ನಾರಗಳು ಸದ್ಯಕ್ಕಾದರೂ ಹರಿದುಬಿದ್ದಿವೆ.

ಉಗುಳಿದ್ದನ್ನು ಪುನಃ ನುಂಗಬೇಕಿರುವ ಶೋಚನೀಯ ಸಮಯ. ಚುನಾವಣೆ ಸೋಲಿನ ಅಳುಕು, ಅಧಿಕಾರದ ಗದ್ದುಗೆಯ ಮೋಹ ಏನನ್ನು ಬೇಕಾದರೂ ಮಾಡಿಸೀತು ಎಂಬುದಕ್ಕೆ ಇದೊಂದು ಹೊಳಪಿನ ಉದಾಹರಣೆ. ಚುನಾವಣೆ ಗೆಲ್ಲಲಾದರೂ ಸರಿ, ಮಾಡಿದ ತಪ್ಪನ್ನು ತಿದ್ದಿಕೊಳ್ಳುವ ವಿವೇಕ ಶ್ಲಾಘನೀಯ ಸಂಗತಿ. ಒಂದು ಹೊಸ ಆರಂಭದ ವಚನ ನೀಡಿದ್ದಾರೆ. ಅದನ್ನು ಮುರಿಯದೆ ಅಕ್ಷರಶಃ ನಡೆಸಿಕೊಡುವುದು ಅವರದೇ ಹೊಣೆಗಾರಿಕೆ.

ಪ್ರಧಾನಿಯವರು ಈ ಸಲ ಪ್ರತಿಭಟನನಿರತ ರೈತರನ್ನು ರೈತರೆಂದು ಕರೆದಿರುವುದು ಒಳ್ಳೆಯ ಬೆಳವಣಿಗೆ.

ವಿಶ್ವದ ಅತಿ ದೊಡ್ಡದೆಂಬ ದಾಖಲೆ ನಿಲ್ಲಿಸಿರುವ ಬೃಹತ್ ರೈತ ಆಂದೋಲನಕ್ಕೆ ವರ್ಷ ತುಂಬುವ ಹೊತ್ತಿನಲ್ಲಿ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡುವ ವಚನ ನೀಡಿದ್ದಾರೆ ಪ್ರಧಾನಿ.

ಇದೀಗ ಉತ್ತರ ಪ್ರದೇಶದಂತಹ ದೈತ್ಯ ರಾಜ್ಯವೂ ಸೇರಿದಂತೆ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳು ಕದ ಬಡಿದಿರುವ ಹೊತ್ತಿನಲ್ಲಿ ರೈತ ಸಮುದಾಯವನ್ನು ಸಿಡಿದೆಬ್ಬಿಸಿದ್ದ ಮೂರು 'ಕರಾಳ' ಕೃಷಿ ಕಾಯಿದೆಗಳನ್ನು ರದ್ದು ಮಾಡಲು ಮುಂದಾಗಿದ್ದಾರೆ.

ಮೋದಿಯವರ ಸದರಿ ಮನಃಪರಿವರ್ತನೆಯ ಹಿಂದೆ 2024ರ ಲೋಕಸಭಾ ಚುನಾವಣೆಯ ನಿಚ್ಚಳ ಗೆಲುವಿನ ಲೆಕ್ಕಾಚಾರವನ್ನು ಕಾಣಬಹುದಾಗಿದೆ.

ಉತ್ತರಪ್ರದೇಶ, ಉತ್ತರಾಖಂಡ, ಪಂಜಾಬ್, ಗೋವಾ ಹಾಗೂ ಮಣಿಪುರದ ವಿಧಾನಸಭೆ ಚುನಾವಣೆಗಳು ಸಮೀಪಿಸಿವೆ. ಬಿಜೆಪಿಗೆ ಮತ್ತು ಪ್ರಧಾನಿಗೆ ಗೆಲುವು ಮುಖ್ಯ. ನಾಲ್ಕರಲ್ಲಿ ಬಿಜೆಪಿಯೇ ಅಧಿಕಾರ ಹಿಡಿದಿದೆ. ಉತ್ತರಪ್ರದೇಶ, ಉತ್ತರಾಖಂಡ, ಪಂಜಾಬಿನ ಫಲಿತಾಂಶಗಳು 2024ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಯ ಹಣೆಬರೆಹಕ್ಕೆ ನಿರ್ಣಾಯಕ ಎನಿಸಲಿವೆ. 2024ರಲ್ಲಿ ಮೋದಿಯವರು ಪುನಃ ಪ್ರಧಾನಿ ಆಗಬೇಕಿದ್ದರೆ ಇದೀಗ ಉತ್ತರಪ್ರದೇಶದ ವಿಧಾನಸಭಾ ಚುನಾವಣೆಗಳನ್ನು ಯೋಗಿ ಆದಿತ್ಯನಾಥ ಅವರು ಮತ್ತೊಮ್ಮೆ ಗೆಲ್ಲಲೇಬೇಕಿದೆ.

ಉತ್ತರಪ್ರದೇಶ, ಉತ್ತರಾಖಂಡ ಹಾಗೂ ಪಂಜಾಬಿನ ಒಟ್ಟು ಲೋಕಸಭಾ ಸೀಟುಗಳ ಸಂಖ್ಯೆ 98. ಗೋವಾ ಮಣಿಪುರದಲ್ಲಿ ಕೇವಲ ನಾಲ್ಕು.

42 ಲೋಕಸಭಾ ಸ್ಥಾನಗಳನ್ನು ಹೊಂದಿದ್ದ ಬಂಗಾಳವನ್ನು ಗೆಲ್ಲುವ ಮಹದಾಸೆ ಈಡೇರದೆ ಹೋಯಿತು. ಬಂಗಾಳದಲ್ಲಿ ಗೆದ್ದಿದ್ದರೆ, ಅದು ಉತ್ತರಪ್ರದೇಶದ ವಿಧಾನಸಭಾ ಚುನಾವಣೆ ಗೆಲುವಿಗೆ ಪೂರಕವಾಗುತ್ತಿತ್ತು.

7ನೇ ಪುಟ ನೋಡಿ

ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಘೋಷಿಸಿದ ಬಳಿಕ ದೆಹಲಿಯ ಗಾಜಿಪುರ ಗಡಿಯಲ್ಲಿ ರೈತರು ಸಂಭ್ರಮಿಸಿದರು –ಪಿಟಿಐ ಚಿತ್ರ

ಪ್ರತಿಭಟನೆ ಹಿಂಪಡೆಯುವುದಿಲ್ಲ. ಸಂಸತ್ತಿನಲ್ಲಿ ಈ ಕಾಯ್ದೆಗಳನ್ನು ರದ್ದು ಪಡಿಸುವವರೆಗೂ ಕಾಯುತ್ತೇವೆ

ರಾಕೇಶ್ ಟಿಕಾಯತ್
ಭಾರತೀಯ ಕಿಸಾನ್ ಯೂನಿಯನ್ ನಾಯಕ

ಕೃಷಿ ಕಾಯ್ದೆಗಳಿಗೆ ಸಂಬಂಧಿಸಿದಂತೆ, ಪ್ರಧಾನಿ ನರೇಂದ್ರ ಮೋದಿ ಅವರು ಮಾಡಿರುವ ಘೋಷಣೆಯು ಸ್ವಾಗತಾರ್ಹ ಮತ್ತು ಮುತ್ಸದ್ದಿತನದ ನಡೆ. ನಮ್ಮ ಸರ್ಕಾರ ಸದಾ ರೈತರ ಸೇವೆಯಲ್ಲಿರಲಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ದೇಶದ ಅನ್ನದಾತರು ಸತ್ಯಾಗ್ರಹದ ಮೂಲಕ ದುರಹಂಕಾರವನ್ನು ಮಣಿಸಿದ್ದಾರೆ. ಅನ್ಯಾಯದ ವಿರುದ್ಧದ ಈ ಜಯಕ್ಕೆ ಅಭಿನಂದನೆಗಳು. ಜೈ ಹಿಂದ್, ದೇಶದ ರೈತನಿಗೆ ಜೈ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಕೃಷಿ ಕಾಯ್ದೆಗಳನ್ನು ಹಿಂಪಡೆಯುತ್ತೇವೆ: ಮೋದಿ



ನವದೆಹಲಿ: ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಮೂರು ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಘೋಷಿಸಿದ್ದಾರೆ. ಸದುದ್ದೇಶದ ಈ ಕಾಯ್ದೆಗಳ ಪ್ರಯೋಜನವನ್ನು ರೈತರಿಗೆ ಮನದಟ್ಟು ಮಾಡಲು ಸಾಧ್ಯವಾಗದ್ದಕ್ಕೆ ಅವರು ದೇಶದ ಜನರ ಕ್ಷಮೆಯನ್ನೂ ಕೇಳಿದರು.

'ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಮೂರು ಕಾಯ್ದೆಗಳನ್ನು ಹಿಂದಕ್ಕೆ ಪಡೆಯಲು ನಿರ್ಧರಿಸಿದ್ದೇವೆ. ಸಂಸತ್ತಿನ ಈ ತಿಂಗಳ ಕೊನೆಯಲ್ಲಿ ಆರಂಭವಾಗಲಿರುವ ಚಳಿಗಾಲದ ಅಧಿವೇಶನದಲ್ಲಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಿದ್ದೇವೆ' ಎಂದು ಸುದ್ದಿವಾಹಿನಿಗಳಲ್ಲಿ ಪ್ರಸಾರವಾದ ಭಾಷಣದಲ್ಲಿ ಮೋದಿ ಹೇಳಿದರು.

ರೈತರ ಪ್ರತಿಭಟನೆಯು ಒಂದು ವರ್ಷ ಪೂರೈಸಲು ಒಂದು ವಾರವಷ್ಟೇ ಬಾಕಿ ಇರುವ ಸಂದರ್ಭದಲ್ಲಿ ಪ್ರಧಾನಿಯವರು ಈ ಘೋಷಣೆ ಮಾಡಿದರು. 'ಪ್ರತಿಭಟನೆಯಲ್ಲಿ ಭಾಗಿಯಾಗಿರುವ ಎಲ್ಲ ರೈತರು ಮನೆಗೆ, ನಿಮ್ಮ ಪ್ರೀತಿಪಾತ್ರರ ಬಳಿಗೆ, ನಿಮ್ಮ ಹೊಲಗಳಿಗೆ, ಕುಟುಂಬಕ್ಕೆ ಹಿಂದಿರುಗಬೇಕು ಎಂದು ಮನವಿ ಮಾಡುತ್ತೇನೆ' ಎಂದರು.

ಬೆಂಬಲ ಬೆಲೆ ಸಮಿತಿ: ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನೀಡುವ ವ್ಯವಸ್ಥೆಯನ್ನು ಇನ್ನಷ್ಟು ಪರಿಣಾಮಕಾರಿ ಮತ್ತು ಪಾರದರ್ಶಕ ಆಗಿಸುವುದಕ್ಕಾಗಿ ಸಮಿತಿಯೊಂದನ್ನು ರಚಿಸಲಾಗುವುದು ಎಂದು ಪ್ರಧಾನಿ ತಿಳಿಸಿದ್ದಾರೆ. ಸಮಿತಿಯಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳ ಪ್ರತಿನಿಧಿಗಳು, ರೈತರು, ಕೃಷಿ ವಿಜ್ಞಾನಿಗಳು ಮತ್ತು ಕೃಷಿ ಅರ್ಥಶಾಸ್ತ್ರಜ್ಞರು ಇರಲಿದ್ದಾರೆ ಎಂದೂ ಅವರು ಹೇಳಿದ್ದಾರೆ. ಎಂಎಸ್‌ಪಿಗೆ ಕಾನೂನಿನ ಖಾತರಿ ಬೇಕು ಎಂಬುದು ಪ್ರತಿಭಟನೆ ನಡೆಸುತ್ತಿರುವ ರೈತರ ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿದೆ.

ಎನ್‌ಡಿಎ ಸರ್ಕಾರ ಸ್ಪಂದನಾಶೀಲ. ಹೀಗಾಗಿಯೇ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕು ಎನ್ನುವ ರೈತರ ಬೇಡಿಕೆಗಳಿಗೆ ಸ್ಪಂದಿಸಿದೆ. ಚುನಾವಣೆ ಉದ್ದೇಶಕ್ಕಾಗಿ ಕಾಯ್ದೆ ಹಿಂದಕ್ಕೆ ಪಡೆದಿಲ್ಲ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಸರ್ವಾಧಿಕಾರಿ ಎಷ್ಟೇ ಶಕ್ತಿಶಾಲಿಯಾಗಿರಲಿ, ಎದೆಯಗಲ ಎಷ್ಟೇ ಇಂಚಿನದ್ದಾಗಿರಲಿ, ಜನಶಕ್ತಿಯ ಎದುರು ಆತ ಮಣಿಯಲೇಬೇಕು. ಇದುವೇ ಪ್ರಜಾಪ್ರಭುತ್ವದ ಸೊಗಸು. ಇದುವೇ ರೈತರ ಸ್ವಾತಂತ್ರ್ಯೋತ್ಸವ

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

ಮೋದಿ ಅವರ ಏಕಾಏಕಿ ನಿರ್ಧಾರದಲ್ಲಿ ವಿಶ್ವಾಸದ ಕೊರತೆ ಕಾಣಿಸುತ್ತಿದೆ. ಮೊದಲೇ ಸ್ಪಂದಿಸಿದ್ದರೆ ಮುಜುಗರ ಆಗುತ್ತಿರಲಿಲ್ಲ. ಚುನಾವಣೆಗಳ ಲಾಭ, ನಷ್ಟ ಇಟ್ಟುಕೊಂಡು ಅವರು ಈ ತೀರ್ಮಾನ ತೆಗೆದುಕೊಂಡಿದ್ದಾರೆ

ಎಚ್‌.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಹೋರಾಟದ ಹಾಡು-ಪಾಡು 4
ಹೋರಾಟದ ಹಾದಿಯಲ್ಲಿ 5
ಅನ್ನದಾತರ ಚಾರಿತ್ರಿಕ ಹೋರಾಟ 6

ಭ್ರಷ್ಟಾಚಾರಕ್ಕೆ ಕಡಿವಾಣ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ಕಾಮಗಾರಿಗಳ ಗುತ್ತಿಗೆ ಪ್ರಕ್ರಿಯೆಯಲ್ಲಿ ಇದ್ದ ಸಮಸ್ಯೆಗಳನ್ನು ನಾನು ಅಧಿಕಾರಕ್ಕೆ ಬಂದ ಬಳಿಕ ಸರಿಪಡಿಸಿರುವೆ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಕ್ರಮ ಕೈಗೊಂಡಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಾಮಗಾರಿಗಳಿಗೆ ಮಂಜೂರಾದ ಮೊತ್ತದಲ್ಲಿ ಶೇಕಡ 40ರಷ್ಟು ಲಂಚಕ್ಕೆ ವ್ಯಯವಾಗುತ್ತಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರು ನೀಡಿರುವ ಕುರಿತು 'ಪ್ರಜಾವಾಣಿ'ಯ ವಿಶೇಷ ವರದಿ ಪ್ರಕಟಿಸಿತ್ತು. ಇದಕ್ಕೆ ಪ್ರತಿಕ್ರಿಯಿಸಿದ ಅವರು, 'ಹಿಂದೆ ಇದ್ದ ವ್ಯವಸ್ಥೆಯನ್ನು ಬದಲಾವಣೆ ಮಾಡಲಾಗಿದೆ. ಕಾಮಗಾರಿಗಳ ಗುತ್ತಿಗೆ ಪ್ರಕ್ರಿಯೆಯಲ್ಲಿ ಸುಧಾರಣೆ ತರಲಾಗಿದೆ' ಎಂದರು.

ಗುತ್ತಿಗೆದಾರರ ಸಂಘವು ಪ್ರಧಾನಿಗೆ ನೀಡಿರುವ ದೂರಿನಲ್ಲಿರುವ ಆರೋಪ ಆಧಾರರಹಿತವಾದುದು. ಯಾವುದೇ ದಾಖಲೆ ನೀಡಿಲ್ಲ ಎಂದು ಹೇಳಿದರು.

ಮಳೆ ಹಾನಿ: ₹130 ಕೋಟಿ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಳೆಯಿಂದ ಉಂಟಾದ ಹಾನಿಯ ಪರಿಹಾರ ಕಾರ್ಯಕ್ಕಾಗಿ ತಕ್ಷಣವೇ ₹130 ಕೋಟಿ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕಳೆದ ಎರಡು ತಿಂಗಳಿಂದ ಸುರಿದ ಮಳೆಯಿಂದಾಗಿ ಉಂಟಾದ ಹಾನಿಯ ಕುರಿತು ಅವರು ಶುಕ್ರವಾರ ಸಂಜೆ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಒಗಳ ಜತೆ ವಿಡಿಯೊ ಸಂವಾದ ನಡೆಸಿದರು.

ಮಳೆಯಿಂದ ಹಾನಿಗೀಡಾದ ಮನೆಗಳಿಗೆ ತಕ್ಷಣವೇ ₹10 ಸಾವಿರ ಪರಿಹಾರ ನೀಡಬೇಕು. ಸಾಂತ್ವನ ಕೇಂದ್ರಗಳಲ್ಲಿ ವಾಸ್ತವ್ಯದ ವ್ಯವಸ್ಥೆ ಮಾಡಬೇಕು. ಪರಿಹಾರ ಕಾರ್ಯಕ್ಕೆ ಈ ಹಿಂದಿನ ವರ್ಷಗಳಲ್ಲಿ ಹೊರಡಿಸಿರುವ ಮಾರ್ಗಸೂಚಿಗಳನ್ನೇ ಪಾಲಿಸಲು ಅವರು ಸಲಹೆ ನೀಡಿದರು ಎಂದು ಮೂಲಗಳು ಹೇಳಿವೆ.

ಎಲ್ಲ ಜಿಲ್ಲಾಧಿಕಾರಿಗಳು ಮಳೆಯಿಂದ ಹಾನಿಗೀಡಾದ ಪ್ರದೇಶಗಳಿಗೆ ತಕ್ಷಣವೇ ಭೇಟಿ ನೀಡಬೇಕು. ಬೆಳೆ ಮತ್ತು ಇತರ ಹಾನಿಯ ಬಗ್ಗೆ ವಿಡಿಯೊ ಮಾಡಿಟ್ಟುಕೊಳ್ಳಬೇಕು. ಕೇಂದ್ರ ತಂಡ ಬರುವುದು ಇನ್ನೂ ಒಂದು ತಿಂಗಳಾಗಬಹುದು. ಆ ವೇಳೆಗೆ ಬೆಳೆಯೇ ಇರುವುದಿಲ್ಲ. ಆಗ ಅವರಿಗೆ ಹಾನಿಯ ಕುರಿತ ವಿಡಿಯೊ ನೀಡಬಹುದು ಎಂದು ಅಧಿಕಾರಿಗಳಿಗೆ ಕಂದಾಯ ಸಚಿವ ಆರ್.ಅಶೋಕ ಸಲಹೆ ನೀಡಿದರು ಎನ್ನಲಾಗಿದೆ.

3B ಪುಟ ನೋಡಿ

ಬಿಡಿಎ: ನೂರಾರು ಕೋಟಿ ಅಕ್ರಮ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನ ಹಂಚಿಕೆ, ಭೂಸ್ವಾಧೀನ ಮತ್ತು ಜಮೀನು ಮಾಲೀಕರಿಗೆ ಪರಿಹಾರ ವಿತರಣೆಯಲ್ಲಿ ಅವ್ಯವಹಾರ ನಡೆಯುತ್ತಿರುವ ದೂರುಗಳನ್ನು ಆಧರಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕೇಂದ್ರ ಕಚೇರಿ ಮೇಲೆ ಶುಕ್ರವಾರ ಸಂಜೆ ದಿಢೀರ್ ದಾಳಿಮಾಡಿ, ಶೋಧ ನಡೆಸಿದ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ), ನೂರಾರು ಕೋಟಿ ರೂಪಾಯಿ ಮೌಲ್ಯದ ಅಕ್ರಮಗಳನ್ನು ಪತ್ತೆಮಾಡಿದೆ.

ಎಸಿಬಿ ಬೆಂಗಳೂರು ನಗರ ಘಟಕದ ಕಚೇರಿಯಲ್ಲಿ ಬಿಡಿಎ ಅಧಿಕಾರಿಗಳ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಲಾಗಿದೆ. ಬಿಡಿಎ ಕೇಂದ್ರ ಕಚೇರಿಯಲ್ಲಿರುವ ನಾಲ್ವರು ಉಪ ಕಾರ್ಯದರ್ಶಿಗಳು, ಭೂಸ್ವಾಧೀನ ವಿಭಾಗದ ಐವರು ಹಿರಿಯ ಅಧಿಕಾರಿಗಳು ಸೇರಿದಂತೆ 30ಕ್ಕೂ ಹೆಚ್ಚು ಕಚೇರಿಗಳಲ್ಲಿ ಏಕಕಾಲಕ್ಕೆ ಶೋಧ ನಡೆಸಲಾಗಿದೆ. ನಿವೇಶನ ಹಂಚಿಕೆ, ಭೂಸ್ವಾಧೀನ ಮತ್ತು ಪರಿಹಾರ ವಿತರಣೆಯಲ್ಲಿನ ಅಕ್ರಮಕ್ಕೆ ಸಂಬಂಧಿಸಿದಂತೆ ನೂರಾರು ಕಡತಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.

3B ಪುಟ ನೋಡಿ

ಮುದ್ರಾಂಕ ಶುಲ್ಕ: ಸರ್ಕಾರದ ದರೋಡೆ

ಬೆಂಗಳೂರು: 'ಮುದ್ರಾಂಕ ಶುಲ್ಕದ ಹೆಸರಿನಲ್ಲಿ ರಾಜ್ಯ ಸರ್ಕಾರ ನಾಗರಿಕರ ಹಗಲು ದರೋಡೆ ನಡೆಸಿದೆ' ಎಂದು ಹೈಕೋರ್ಟ್ ಕಿಡಿ ಕಾರಿದೆ. 10

ಬಿಜೆಪಿ: ಕುಟುಂಬ ರಾಜಕಾರಣಕ್ಕೆ ಮಣೆ

ಬೆಂಗಳೂರು: ಕುಟುಂಬ ರಾಜಕಾರಣಕ್ಕೆ ಮಣೆ ಹಾಕುವುದಿಲ್ಲ ಎಂದು ಹೇಳಿಕೊಂಡೇ ಬಂದಿದ್ದ ಬಿಜೆಪಿ ಶುಕ್ರವಾರ ರಾತ್ರಿ ಬಿಡುಗಡೆ ಮಾಡಿರುವ 20 ಕ್ಷೇತ್ರಗಳ ವಿಧಾನಪರಿಷತ್‌ನ ಚುನಾವಣಾ ಅಭ್ಯರ್ಥಿಗಳ ಪಟ್ಟಿಯಲ್ಲಿ ಶಾಸಕ ಜಗದೀಶ ಶೆಟ್ಟರ್ ಅವರ ತಮ್ಮ ಪ್ರದೀಪ್ ಶೆಟ್ಟರ್, ಅಪ್ಪಚ್ಚು ರಂಜನ್ ತಮ್ಮ ಸುಜಾ ಕುಶಾಲಪ್ಪ ಸೇರಿ ಕೆಲವರಿಗೆ ಟಿಕೆಟ್ ನೀಡಿದೆ. 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸ್ವಾಕ್: ಕ್ಯಾನ್ಸರ್ ಜಾಗೃತಿ ಸಮಾವೇಶ

ಬೆಂಗಳೂರು: 'ದೈಹಿಕ ಸ್ಥಿತಿ ಎಷ್ಟರ ಮಟ್ಟಿಗೆ ಸದೃಢವಾಗಿದೆ ಎನ್ನುವುದರ ಮೇಲೆ ನಮ್ಮ ಆರೋಗ್ಯ ಅವಲಂಬಿತವಾಗಿರುತ್ತದೆ' ಎಂದು ಕ್ಯಾನ್ಸರ್ ತಜ್ಞರಾದ ಡಾ. ನಂದಾ ರಜನೀಶ್ ಹೇಳಿದರು.

ಸ್ವಾಕ್ ವತಿಯಿಂದ ನಗರದಲ್ಲಿ ಆಯೋಜಿಸಿದ್ದ ಕ್ಯಾನ್ಸರ್ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, 'ಆರೋಗ್ಯ ಸ್ಥಿತಿ ಉತ್ತಮವಾಗಿರುವುದು ಎಂದರೆ ಯಾವುದೇ ರೋಗವೂ ಇಲ್ಲವೆಂದು ಭಾವಿಸಬೇಕಿಲ್ಲ. ವಯಸ್ಸಾದಂತೆ ದೈಹಿಕ ಆರೋಗ್ಯ ಆಗಾಗ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯ' ಎಂದರು.

'ನಮ್ಮ ದೇಹದಲ್ಲಿ ರೋಗಗಳ ವಿರುದ್ಧ ಎಷ್ಟರ ಮಟ್ಟಿಗೆ ರೋಗ ನಿರೋಧಕ ವ್ಯವಸ್ಥೆ ಇದೆ ಹಾಗೂ ಅದನ್ನು ನಾವು ಎಷ್ಟರ ಮಟ್ಟಿಗೆ ನಿರ್ವಹಿಸಿದ್ದೇವೆ ಎನ್ನುವುದರ ಆಧಾರದ ಮೇಲೆ ಆರೋಗ್ಯ ನಿರ್ಧರಿತವಾಗುತ್ತದೆ' ಎಂದು ಅವರು ಹೇಳಿದರು.

ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವ ಮೊಬೈಲ್ ಆ್ಯಪ್ ಮತ್ತು ಡಾ.ನಂದಾ ರಜನೀಶ್ ರಚಿಸಿರುವ ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಬೆಳಗಾವಿ: ಡಿ.13ರಿಂದ ಅಧಿವೇಶನ

ಬೆಂಗಳೂರು: ಡಿಸೆಂಬರ್ 13ರ ಸೋಮವಾರ ಬೆಳಿಗ್ಗೆ 11ಕ್ಕೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ವಿಧಾನ ಮಂಡಲ ಅಧಿವೇಶನ ಕರೆಯಲು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧಿಸೂಚನೆ ಹೊರಡಿಸಿದ್ದಾರೆ.

ಪ್ರವಾಹ ಮತ್ತು ಕೋವಿಡ್ ಕಾರಣ ಕಳೆದ ಎರಡು ವರ್ಷಗಳಿಂದ ಸುವರ್ಣ ವಿಧಾನಸೌಧದಲ್ಲಿ ಅಧಿವೇಶನ ನಡೆಸಿರಲಿಲ್ಲ. 13ರಿಂದ 24ವರೆಗೆ ಕಲಾಪ ನಡೆಸಲು ಸರ್ಕಾರ ನಿರ್ಧರಿಸಿದ್ದು, 10 ದಿನ ಕಲಾಪ ನಡೆಯಲಿದೆ.

ಕರ್ನಾಟಕ ಸರ್ಕಾರ
ಅಂಕಿತಾಧಿಕಾರಿಗಳ ಕಛೇರಿ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಬಿಬಿಎಂಪಿ ಉತ್ತರ ವಲಯ.
ಸಂಖ್ಯೆ: ಬಿಬಿಎಂಪಿ.ಉ/ಎಫ್.ಎಸ್.ಎಸ್.ಎ/19/2021–22
ಪತ್ರಿಕಾ ಪ್ರಕಟಣೆ
ಈ ಮೂಲಕ ಆಹಾರ ವಹಿವಾಟುದಾರರಿಗೆ ತಿಳಿಸುವುದೇನೆಂದರೆ FoSTac ತರಬೇತಿ ಕಾರ್ಯಕ್ರಮವು ಸಣ್ಣ ಆಹಾರ ಮಾರಾಟಗಾರರು, ಉತ್ಪಾದಕರು, ಆಹಾರ ಸಂಸ್ಕರಣ ಉದ್ಯಮದವರು ಹೀಗೆ ವಿವಿಧ ಎಲ್ಲಾ ಆಹಾರ ಉದ್ಯಮದ ವ್ಯಾಪಾರಸ್ಥರಿಗೆ ಆಹಾರ ಸೇವೆಗಳ ಗುಣಮಟ್ಟದ ಉದ್ದೇಶಗಳನ್ನು ಬಲಪಡಿಸುವ ಸಲುವಾಗಿ FSSAI ಪ್ರಾಧಿಕಾರವು ರೂಪಿಸಿರುವ ಕಾರ್ಯಕ್ರಮವಾಗಿದ್ದು, ಈ ತರಬೇತಿಯನ್ನು ಪ್ರತಿಯೊಬ್ಬ ಆಹಾರ ಉದ್ದಿಮೆದಾರರು ಕಡ್ಡಾಯವಾಗಿ ಪಡೆದುಕೊಂಡು ಪ್ರಮಾಣ ಪತ್ರವನ್ನು ಪಡೆಯಬೇಕಾಗಿರುತ್ತದೆ.
ವಿಶೇಷ ಸೂಚನೆ: ಸದರಿ ತರಬೇತಿಯ ಜೊತೆಗೆ ಎಲ್ಲಾ ಆಹಾರ ವಹಿವಾಟು/ಉದ್ದಿಮೆದಾರರು FBO'S ಎಫ್.ಎಸ್.ಎಸ್.ಎ.ಐ (FSSAI BBMP North) ಪರವಾನಿಗಿ/ನೋಂದಣಿ ಪಡೆದುಕೊಳ್ಳಲು ಕಡ್ಡಾಯವಾಗಿದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ. ಇಲ್ಲದಿದ್ದಲ್ಲಿ ಎಫ್.ಎಸ್.ಎಸ್.ಎ ಕಾಯ್ದೆಯ ಸೆಕ್ಷನ್ 63ರ ಪ್ರಕಾರ 5 ಲಕ್ಷದವರೆಗೆ ದಂಡ ಮತ್ತು 6 ತಿಂಗಳವರೆಗೆ ಕಾರಗೃಹ ಮತ್ತು ಕೋರ್ಟಿನಲ್ಲಿ ಮೊಕದ್ದಮೆ/ದಾವೆ ಹಾಕಲು ಕಾನೂನಿನಲ್ಲಿ ಅವಕಾಶವಿರುತ್ತದೆ.
For Contact : Pankaja. B Mob: 6361118752 — ಸಹಿ/– ಜಿಲ್ಲಾ ಅಂಕಿತ ಅಧಿಕಾರಿಗಳು

BEFORE THE COURT OF CITY CIVIL JUDGE AT BANGALORE
O.S. No. 25170/21
Mr. JAIRUS KISHIONTHA .L S/o G. A. LIGORIOUS, aged about 44 years. R/at No. 293, 1st Floor, 4th Cross, 7th Main Road, HAL 3rd Stage, New Thippsandra, Bangalore-560 075.... **PLAINTIFF**
NIL ...DEFENDANT
PUBLIC NOTICE
The plaintiff has filed the above suit under ORDER VII Rule 1 of the Civil Procedure code seeking the Court to declare Mr. G. A. Ligorious to be dead, who went missing on 10.10.2008. The Plaintiff has also filed a Police Complaint and FIR has been Registered to that effect.
It is hereby informed that anybody having any claim or found this person G. A. Ligorious is alive, it is hereby informed to appear before this Hon'ble Court (CCH-20) on **21.12.2021** at 11 AM and file an objection before this Hon'ble Court.
By order of the Court, Asst. Registrar, City Civil Court, Bangalore.
Mr. Jairus Kishonath
Residing at No. 293,1st Floor 4th Cross, 7th Main Road, HAL 3rd Stage New Thippasandra, Bangalore-560075.

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ದತ್ತಿ ಇಲಾಖೆ
ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ
ಎಸ್.ಎಸ್.ಘಾಟಿ, ದೊಡ್ಡಬಳ್ಳಾಪುರ ತಾಲ್ಲೂಕು–561203, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂ: 080–29550091. ಇ–ಮೇಲ್: shrighatisubrahmanyatempleeo@gmail.com
ಎಸ್‌ಜಿಎಸ್/ಡಿವಿಎಸ್/ಸಿಆರ್ 50/2021–22 — 18–11–2021
ಪತ್ರಿಕಾ ಪ್ರಕಟಣೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಆಗಮಿಸುವ ವಾಹನಗಳ ಮೇಲೆ ದಿನಾಂಕ: 1–12–2021 ರಿಂದ 31–1–2022 ರವರೆಗೆ ಶುಲ್ಕ ವಸೂಲಿ ಮಾಡುವ ಹಕ್ಕಿನ ಬಹಿರಂಗ ಹರಾಜುನ್ನು ದಿನಾಂಕ: 26–11–2021ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ದೇವಾಲಯದ ಕಲ್ಯಾಣ ಮಂಟಪದಲ್ಲಿ ನಡೆಸಲಾಗುವುದು. ಆಸಕ್ತಿಯುಳ್ಳವರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ದೇವಾಲಯದ ಕಚೇರಿಯನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯನಿರ್ವಾಹಕ ಅಧಿಕಾರಿ,
ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ, ಎಸ್.ಎಸ್.ಘಾಟಿ.

ನೈಋತ್ಯ ರೈಲ್ವೆ
E-Tender Notice No. 20 UBL 2021-22, Dated: 16.11.2021
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ವಿವರ	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಬಳ್ಳಾರಿ ರೈಲು ನಿಲ್ದಾಣದಲ್ಲಿ ಪಿಎಫ್–1 ಮತ್ತು ಪಿಎಫ್–2/3 ನಲ್ಲಿ ತಲಾ ಎರಡು ಎಸ್ಕಲೇಟರ್ ಮತ್ತು ಎರಡು ಲಿಫ್ಟ್‌ಗಳನ್ನು ಒದಗಿಸುವುದು.(ಎಂಜಿನಿಯರಿಂಗ್ ಕಾಮಗಾರಿ)	Rs. 97,52,043/-
2	ಹುಬ್ಬಳ್ಳಿ ವಿಭಾಗ: ಗಂಗಾವತಿ–ಕಾರಟಗಿ ವಿಭಾಗ: ಉಪ ಕಾಮಗಾರಿ–I: ಗಂಗಾವತಿ ಮತ್ತು ಕಾರಟಗಿ ವಿಭಾಗದಲ್ಲಿ ಶ್ರೀರಾಮನಗರ ನಿಲ್ದಾಣಕ್ಕೆ ಅಪ್ರೋಚ್ ರಸ್ತೆ ಮತ್ತು ವಿವಿಧ ಸ್ಥಳಗಳಲ್ಲಿ ಆರ್‌ಯುಬಿಗಳನ್ನು ಒದಗಿಸುವುದು. ಉಪ ಕಾಮಗಾರಿ–II: ಕಾರಟಗಿಯಲ್ಲಿ ಪ್ಲಾಟ್ ಫಾರ್ಮ್ ನಲ್ಲಿ ಮಹಿಳೆಯರ ಮತ್ತು ಪುರುಷರ ಶೌಚಾಲಯಗಳನ್ನು ಒದಗಿಸುವುದು ಮತ್ತು ಸಿದ್ದಾಪುರ ಮತ್ತು ಕಾರಟಗಿಯಲ್ಲಿ ಎಎಸ್‌ಎಂ ವಿಶ್ರಾಂತಿ ಕೊಠಡಿಗೆ ಅಟ್ಯಾಚಡ್ ಶೌಚಾಲಯಗಳನ್ನು ಒದಗಿಸುವುದು.	Rs. 49,09,994/-
3	ಹುಬ್ಬಳ್ಳಿ ವಿಭಾಗ: ಉಪ ಕಾಮಗಾರಿ–I: ಧಾರವಾಡ–ತರಬೇತಿ ಕೇಂದ್ರದಲ್ಲಿ ತರಬೇತಿ ಸೌಲಭ್ಯಗಳ ವರ್ಧನೆ–ಸಂಪೂರ್ಣ ರಚನಾತ್ಮಕ ಮತ್ತು ವಾಸ್ತುಶಿಲ್ಪ ವಿನ್ಯಾಸ ತಯಾರಿ, ಸಲ್ಲಿಸುವುದು ಮತ್ತು ರೈಲ್ವೆಯಿಂದ ಅನುಮೋದಿಸಲಾದ (ಕಟ್ಟಡ ಮತ್ತು ಎಫ್‌ಒಬಿ) ಗಳಿಗೆ ಜಿಎಡಿ ಪ್ರಕಾರ ಬೀದಿ/ಆರ್‌ಸಿಸಿ ಕಟ್ಟಡಗಳು, ಗ್ಯಾಂಟ್ರಿ ವ್ಯವಸ್ಥೆ, ಅಡಿಪಾಯ ಇತ್ಯಾದಿಗಳಿಗಾಗಿ ವರ್ಕಿಂಗ್ ಡ್ರಾಯಿಂಗ್‌ಗಳು, ವಿವರವಾದ ರಚನಾತ್ಮಕ ರೇಖಾಚಿತ್ರ ಮತ್ತು ಕಂಪ್ಲೀಷನ್ ರೇಖಾಚಿತ್ರಗಳಿಗೆ ಅನುಮೋದನೆ ಪಡೆಯುವುದು. ಉಪ ಕಾಮಗಾರಿ–II: ಗದಗದಲ್ಲಿ ಪ್ರಸ್ತಾವಿತ ಹೊಸ ಆರ್‌ಪಿಎಫ್ ಬ್ಯಾರಕ್ ನಿರ್ಮಾಣಕ್ಕೆ ರೇಖಾಚಿತ್ರಗಳ ವಿನ್ಯಾಸ ಮತ್ತು ತಯಾರಿಕೆ ಅಂದರೆ ಜಿಎಡಿ, ಸ್ಟ್ರಕ್ಚರಲ್, ಆರ್ಕಿಟೆಕ್ಚರಲ್ ಇತ್ಯಾದಿಗಳಿಗೆ ಸಲಹೆ ಒದಗಿಸುವುದು (16 ಹಾಸಿಗೆಗಳು).	Rs. 5,24,495/-
4	ಹುಬ್ಬಳ್ಳಿ ವಿಭಾಗ: ಉಪ ಕಾಮಗಾರಿ–I: ಲೋಂಡಾ–ಮಿರಜ್ ವಿಭಾಗದಲ್ಲಿ ಪಿಚಿಂಗ್, ಫ್ಲೋರಿಂಗ್, ವಿಂಗ್ ಗೋಡೆ ದುರಸ್ತಿ ಮುಂತಾದ ಜಲಮಾರ್ಗ ಸೇತುವೆಗಳ ರಕ್ಷಣೆ ಕಾಮಗಾರಿಗಳಿಗೆ ಸುಧಾರಣೆ. ಉಪ ಕಾಮಗಾರಿ–II: ಅಳ್ನಾವರ ಜಂಕ್ಷನ್–ಲೋಂಡಾ ವಿಭಾಗದಲ್ಲಿ ಪಿಚಿಂಗ್, ಫ್ಲೋರಿಂಗ್, ವಿಂಗ್ ಗೋಡೆ ದುರಸ್ತಿ, ಇತ್ಯಾದಿ ಜಲಮಾರ್ಗ ಸೇತುವೆಗಳ ರಕ್ಷಣೆ ಕಾಮಗಾರಿಗಳಿಗೆ ಸುಧಾರಣೆ.	Rs. 4,38,80,843/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14–12–2021, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವಿಭಾಗೀಯ ರೈಲ್ವೆ ವ್ಯವಸ್ಥಾಪಕರು/ಕಾಮಗಾರಿಗಳು ಹುಬ್ಬಳ್ಳಿ
PUB/293/AAV/PRB/SWR/2021-22
S.W.Railways | SWRRLY | SWRRLY

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.
ಸಂಖ್ಯೆ: ಕಗೃಮಂ/ಆಡಳಿತ/ವಾ.ವಿ/141/2021–22 — ದಿನಾಂಕ: 18.11.2021
ವಾಹನಗಳ ಬಹಿರಂಗ ಹರಾಜಿನ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿಗೆ ಸೇರಿದ ಈ ಕೆಳಕಂಡ ವಾಹನಗಳನ್ನು ಹೇಗಿದೆಯೋ ಹಾಗೆಯೇ ದಿನಾಂಕ: 22.12.2021 ರಂದು ಬೆಳಿಗ್ಗೆ 11:00 ಗಂಟೆಗೆ ಮಂಡಳಿಯ ಕೇಂದ್ರ ಕಛೇರಿಯ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು.

ಕ್ರ.ಸಂ.	ವಾಹನ ಸಂಖ್ಯೆ	ವಾಹನದ ಮಾದರಿ	ತಿಂಗಳು/ವರ್ಷ(ಮಾಡೆಲ್)
1	KA01-MA-8150	Ambassador 1800 E3	05/2005
2	KA01-Z-6414	Ford Icon 1.3	06/2003
3	KA01-MA-6349	Lancer GLI LX	03/2005

ಎಲ್ಲಾ ವಾಹನದ ಇಂಧನ: Petrol
1) ಮೇಲಿನ ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ರೂ. 20,000/– ಗಳ ಠೇವಣಿಯನ್ನು ಹರಾಜು ಪ್ರಾರಂಭವಾಗುವ ಮುನ್ನ ಜಮಾ ಮಾಡಿ ರಶೀದಿಯನ್ನು ಪಡೆಯತಕ್ಕದ್ದು, ಟೆಂಡರ್‌ದಾರರು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕಾಗಿದೆ. 2) ಅತೀ ಹೆಚ್ಚಿನ ಬಿಡ್ಡುದಾರರು ಬಿಡ್ಡಿನ ಮೊತ್ತದ ಶೇಕಡ 25ರಷ್ಟು ಹಣನ್ನು ಸ್ಥಳದಲ್ಲಿಯೇ ಪಾವತಿಸತಕ್ಕದ್ದು, ಉಳಿದ ಶೇಕಡ 75ರಷ್ಟು ಮೊತ್ತವನ್ನು ಹರಾಜು ಅಂಗೀಕಾರದ ಪತ್ರ ನೀಡಿದ 07 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್ಡುದಾರರು ಪಾವತಿಸಿರುವ ಶೇಕಡ 25ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 3) ವಾಹನಗಳ ತೆರಿಗೆ ಜೀವಾವಧಿ, LTT. 4) ಬಿಡ್ಡನ್ನು ಅಂಗೀಕರಿಸುವ/ತಿರಸ್ಕರಿಸುವ ಅಧಿಕಾರವನ್ನು ಗೃಹ ಆಯುಕ್ತರವರಿಗೆ ಕಾಯ್ದಿರಿಸಲಾಗಿದೆ. 5) ಹೆಚ್ಚುವರಿ ಮಾಹಿತಿಗಾಗಿ ಮೇಲ್ಕಂಡ ವಿಳಾಸದ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. 6) ಅತಿ ಹೆಚ್ಚಿನ ಬಿಡ್ಡುದಾರರು ಬಿಡ್ಡಿನ ಮೊತ್ತದ ಜೊತೆ ಸೇಲ್ಸ್ ಟ್ಯಾಕ್ಸ್‌ನ್ನು ಪಾವತಿಸಬೇಕು.
ವಾಸಾಸಂಇ/ಬೆಂ.ನ./ಜಿಎ/2174/2021–22 — ಸಹಿ/– ಗೃಹ ಆಯುಕ್ತರು, ಕಗೃಮಂ, ಬೆಂಗಳೂರು
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೆ.ಆರ್.ಮಾರುಕಟ್ಟೆ ಬಳಿ ಒಳಚರಂಡಿ ಕಾಮಗಾರಿಗಾಗಿ ರಸ್ತೆ ಅಗೆಯಲಾಗಿದ್ದು, ಕಿರಿದಾದ ರಸ್ತೆಯಲ್ಲೇ ಪಾದಚಾರಿಗಳು ಸಾಗುತ್ತಿರುವ ದೃಶ್ಯ ಕಂಡುಬಂತು (ಎಡಚಿತ್ರ), ವಿಕ್ಟೋರಿಯಾ ಆಸ್ಪತ್ರೆ ಕಡೆಯಿಂದ ಮಾರುಕಟ್ಟೆ ಪ್ರವೇಶಿಸುವ ರಸ್ತೆಯಲ್ಲಿ ವಾಹನಗಳು ನಿಂತಿರುವುದು –ಪ್ರಜಾವಾಣಿ ಚಿತ್ರಗಳು

ಕಿರಿದಾಗಿರುವ ರಸ್ತೆ: ವಾಹನಗಳ ಪರಿವೆಯೇ ಇಲ್ಲದೆ ರಸ್ತೆಯಲ್ಲಿ ಓಡಾಡುವ ನಾಗರಿಕರು

ಮುಗಿಯದ ಕಾಮಗಾರಿ: ತಪ್ಪದ ಕಿರಿಕಿರಿ

• ಜಿ.ಶಿವಕುಮಾರ

ಬೆಂಗಳೂರು: ಕಿರಿದಾದ ರಸ್ತೆ, ಅದರ ಇಕ್ಕೆಲಗಳಲ್ಲೇ ನಿಂತಿರುವ ಹಣ್ಣು, ತರಕಾರಿ ತುಂಬಿದ ಗಾಡಿಗಳು. ಅಲ್ಲಲ್ಲಿ ಬಿದ್ದಿರುವ ಮಾರುದ್ದದ ಗುಂಡಿಗಳು. ಅವುಗಳಲ್ಲಿ ಸಂಗ್ರಹವಾಗಿರುವ ಮಳೆ ನೀರು. ಆ ಹಾದಿಯಲ್ಲಿ ಸಾಗಲು ಹರಸಾಹಸಪಡುತ್ತಿರುವ ವಾಹನ ಸವಾರರು...

ನಗರದ ಕೇಂದ್ರ ಸ್ಥಾನದಲ್ಲಿರುವ ಕೆ.ಆರ್.ಮಾರುಕಟ್ಟೆಯನ್ನೊಮ್ಮೆ ಸುತ್ತು ಹಾಕಿದರೆ ಕಾಣುವ ದೃಶ್ಯಗಳಿವು.

ಕಲಾಸಿಪಾಳ್ಯ, ಚಾಮರಾಜಪೇಟೆ, ವಿ.ವಿ.ಪುರ, ರಾಮಕೃಷ್ಣ ಆಶ್ರಮ, ಹನುಮಂತನಗರ, ಶ್ರೀನಿವಾಸ ನಗರ, ಕತ್ರಿಗುಪ್ಪೆ, ಬ್ಯಾಟರಾಯನಪುರ, ಸ್ಯಾಟಲೈಟ್ ಬಸ್ ನಿಲ್ದಾಣ, ಬನಶಂಕರಿ, ವಿಜಯನಗರ, ಬಾಪೂಜಿನಗರ, ದೀಪಾಂಜಲಿನಗರ, ಮೈಸೂರು ರಸ್ತೆ, ಕೆಂಗೇರಿ... ಹೀಗೆ ನಗರದ ನಾನಾ ಸ್ಥಳಗಳಿಂದ ಅಗತ್ಯ ವಸ್ತುಗಳ ಖರೀದಿ ಸೇರಿದಂತೆ ಅನೇಕ ಕಾರ್ಯಗಳಿಗಾಗಿ ನಿತ್ಯವೂ ಸಾವಿರಾರು ಜನ ಕೃಷ್ಣರಾಜ ಮಾರುಕಟ್ಟೆಗೆ ಬರುತ್ತಾರೆ. ಹೀಗಾಗಿ ಮಾರುಕಟ್ಟೆಯಿಂದ ಈ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ವಾಹನಗಳಿಂದ ಗಿಜಿಗುಡುತ್ತಿರುತ್ತವೆ.

ಬೆಳಿಗ್ಗೆ, ಮಧ್ಯಾಹ್ನ ಹಾಗೂ ಸಂಜೆಯ ಸಮಯದಲ್ಲಿ ಈ ರಸ್ತೆಗಳಲ್ಲಿ ಸಾಗುವುದೇ ಸವಾಲು. ಸಾಲುಗಟ್ಟಿ ನಿಲ್ಲುವ ವಾಹನಗಳು, ಮಂದಗತಿಯಲ್ಲಿ ಚಲಿಸುವುದರಿಂದ ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ಖರೀದಿಗೆ ಬರುವ ಜನ ಸಮಯಕ್ಕೆ ಸರಿಯಾಗಿ ಶಾಲೆ, ಕಚೇರಿ ಹಾಗೂ ಮನೆಗೆ ತಲುಪಲಾಗದೆ ಪರಿತಪಿಸುವಂತಾಗಿದೆ. ವಿಕ್ಟೋರಿಯಾ, ವಾಣಿ ವಿಲಾಸ ಹಾಗೂ ಮಿಂಟೊ ಆಸ್ಪತ್ರೆಗಳು ಮಾರುಕಟ್ಟೆಗೆ ಹೊಂದಿಕೊಂಡಂತೆಯೇ ಇವೆ. ಸಂಚಾರ ದಟ್ಟಣೆಯಿಂದಾಗಿ ರೋಗಿಗಳನ್ನು ತುರ್ತು ಚಿಕಿತ್ಸೆಗಾಗಿ ಈ ಆಸ್ಪತ್ರೆಗಳಿಗೆ ಸಾಗಿಸುವುದೂ ಸವಾಲಾಗಿ ಪರಿಣಮಿಸಿದೆ.

ಸ್ಮಾರ್ಟ್‌ಸಿಟಿ ಕಾಮಗಾರಿ ಹಿನ್ನೆಲೆಯಲ್ಲಿ ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ಒಂದು ಬದಿಯನ್ನು ಅಗೆದು ಹಾಗೇ ಬಿಡಲಾಗಿದೆ. ಹೀಗಾಗಿ ಕಾರ್ಪೊರೇಷನ್ ವೃತ್ತ ಹಾಗೂ ಜೆ.ಸಿ.ರಸ್ತೆ ಮೂಲಕ ಮಾರುಕಟ್ಟೆ ಪ್ರವೇಶಿಸುವ ವಾಹನ ಸವಾರರು ಉಸಿರು ಬಿಗಿ ಹಿಡಿದೇ ಸಾಗಬೇಕಿದೆ. ಮಾರುಕಟ್ಟೆಯಿಂದ ಮೈಸೂರು ರಸ್ತೆ ಹಾಗೂ ಸಿಸಿಬಿ ಕಚೇರಿಯೆಡೆ ಹೋಗುವವರು ಗುಂಡಿಗಳ ನಡುವೆ ಬಂಡಿ ಚಲಾಯಿಸಲು ಪರದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಅನೇಕರು ಆಯತಪ್ಪಿ ಬಿದ್ದು ಗಾಯಗೊಂಡಿರುವ ನಿದರ್ಶನಗಳೂ ಸಾಕಷ್ಟಿವೆ.

'ಕೋವಿಡ್ ಸಮಯದಲ್ಲಿ ರಸ್ತೆಗಳನ್ನು ಅಗೆಯಲಾಗಿತ್ತು. ಒಂದೂವರೆ ವರ್ಷವಾಗುತ್ತಾ ಬಂದರೂ ಕಾಮಗಾರಿ ಮುಗಿದಿಲ್ಲ. ಪಾದಚಾರಿ ಮಾರ್ಗವೂ ಪರಿಪೂರ್ಣಗೊಂಡಿಲ್ಲ. ಹೀಗಾಗಿ ಜನ ಕಿರಿದಾದ ರಸ್ತೆಯಲ್ಲೇ ನಡೆದುಕೊಂಡು ಹೋಗುವುದು ಸಾಮಾನ್ಯವಾಗಿದೆ. ಅದರಿಂದ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ' ಎಂದು ಅಂಗಡಿ ಮಾಲೀಕ ಅಲಿ ಹೇಳಿದರು.

'20 ವರ್ಷಗಳಿಂದ ಅಂಗಡಿ ನಡೆಸುತ್ತಿದ್ದೇನೆ. ನಾನು ಅಂಗಡಿ ಆರಂಭಿಸಿದ್ದಾಗ ಮೇಲ್ಸೇತುವೆಯೇ ಇರಲಿಲ್ಲ. ಆಗ ವಾಹನಗಳು ಕಡಿಮೆ ಇದ್ದಿದ್ದರಿಂದ ದಟ್ಟಣೆಯೂ ಏರ್ಪಡುತ್ತಿರಲಿಲ್ಲ. ಈಗ ವಾಹನಗಳು ಹೆಚ್ಚಾಗಿವೆ. ಆಗಾಗ ರಸ್ತೆ ಸೇರಿ ಇತರ ಕಾಮಗಾರಿಗಳೂ ನಡೆಯುತ್ತಿರುತ್ತವೆ. ಹೀಗಾಗಿ ದಟ್ಟಣೆ ಉಂಟಾಗುತ್ತಿದೆ' ಎಂದೂ ತಿಳಿಸಿದರು.

ಮೇಲ್ಸೇತುವೆ ಇದ್ದರೂ ತಗ್ಗದ ದಟ್ಟಣೆ

ಕಾರ್ಪೊರೇಷನ್ ವೃತ್ತ ಹಾಗೂ ಜೆ.ಸಿ.ರಸ್ತೆಯಿಂದ ಮೈಸೂರು ರಸ್ತೆಗೆ ಸಂಪರ್ಕ ಕಲ್ಪಿಸಲು ಮಾರುಕಟ್ಟೆಯ ಬಳಿ ಮೇಲ್ಸೇತುವೆ ನಿರ್ಮಿಸಲಾಗಿದೆ. ಹೀಗಿದ್ದರೂ ಸಂಚಾರ ದಟ್ಟಣೆ ನಿಯಂತ್ರಿಸುವುದು ಸವಾಲಾಗಿ ಪರಿಣಮಿಸಿದೆ.

'ರಸ್ತೆ ಕಾಮಗಾರಿ ನಡೆಯುತ್ತಿರುವುದರಿಂದ ಗೂಡ್‌ಶೆಡ್ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಹೀಗಾಗಿ ಮೈಸೂರು ರಸ್ತೆ ಕಡೆಯಿಂದ ಮಾರುಕಟ್ಟೆ, ರವೀಂದ್ರ ಕಲಾಕ್ಷೇತ್ರ, ಟೌನ್ ಹಾಲ್, ಮೆಜೆಸ್ಟಿಕ್ ಹಾಗೂ ಎಂ.ಜಿ. ರಸ್ತೆಗೆ ಬರುವವರು ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆಯನ್ನೇ ಆಶ್ರಯಿಸಬೇಕಾಗಿದೆ. ಇದರಿಂದಾಗಿ ಹಿಂದೆಂದಿಗಿಂತಲೂ ಹೆಚ್ಚು ವಾಹನ ದಟ್ಟಣೆ ಏರ್ಪಡುತ್ತಿದೆ' ಎಂದು ಸಂಚಾರ ಪೊಲೀಸ್ ಸಿಬ್ಬಂದಿಯೊಬ್ಬರು ತಿಳಿಸಿದರು.

ರಸ್ತೆಯಲ್ಲೇ ಬಿಎಂಟಿಸಿ ಬಸ್‌ಗಳ ನಿಲುಗಡೆ

ದಿನೇಶ್

'ಬಿಎಂಟಿಸಿ ಹಾಗೂ ಖಾಸಗಿ ಬಸ್‌ಗಳನ್ನು ರಸ್ತೆಯಲ್ಲೇ ನಿಲುಗಡೆ ಮಾಡುತ್ತಾರೆ. ಸಂಚಾರ ದಟ್ಟಣೆಗೆ ಇದು ಪ್ರಮುಖ ಕಾರಣ' ಎಂದು ಕಲಾಸಿಪಾಳ್ಯದ ಕೋಟೆ ಬೀದಿ ನಿವಾಸಿ ದಿನೇಶ್ ಹೇಳಿದರು.

'ಸಂಚಾರ ಪೊಲೀಸರು ಧ್ವನಿವರ್ಧಕದ ಮೂಲಕ ಕೂಗಿ ಹೇಳಿದರೂ ಬಸ್‌ಗಳು ಕದಲುವುದಿಲ್ಲ. ಕೆಲವರು ಪಾದಚಾರಿ ಮಾರ್ಗದಲ್ಲೇ ಗಾಡಿಗಳನ್ನು ನಿಲ್ಲಿಸಿ ವ್ಯಾಪಾರ ಮಾಡುತ್ತಿರುತ್ತಾರೆ. ಹೀಗಾಗಿ ಪಾದಚಾರಿಗಳು ವಾಹನಗಳ ಪರಿವೆಯೇ ಇಲ್ಲದೆ ರಸ್ತೆಯಲ್ಲಿ ಓಡಾಡುತ್ತಿರುತ್ತಾರೆ. ಇದರಿಂದಾಗಿ ವಾಹನಗಳ ಸಂಚಾರ ಅಸ್ತವ್ಯಸ್ತಗೊಳ್ಳುತ್ತದೆ. ಅಪಘಾತಗಳಾಗುವ ಅಪಾಯವೂ ಇದೆ' ಎಂದು ತಿಳಿಸಿದರು.

ಅಲ್ಲಲ್ಲಿ ರಸ್ತೆಗಳನ್ನು ಅಗೆಯಲಾಗಿದೆ. ಮಾರುದ್ದದವರೆಗೆ ಗುಂಡಿಗಳೂ ಬಿದ್ದಿವೆ. ಅವುಗಳನ್ನು ಮುಚ್ಚುವ ಕೆಲಸ ಆಗಿಲ್ಲ. ಈ ಹಾದಿಯಲ್ಲಿ ಸಂಚರಿಸುವುದೇ ಕಷ್ಟ.
ಅಶೋಕ್, ಸ್ಥಳೀಯ

ವಿಸ್ತಾರವಾದ ರಸ್ತೆಗಳಿದ್ದರೆ ಯಾವ ಸಮಸ್ಯೆಯೂ ಇರುವುದಿಲ್ಲ. ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸುತ್ತಿರುವುದು ಸ್ವಾಗತಾರ್ಹ. ಅದನ್ನು ನಿಗದಿತ ಸಮಯದಲ್ಲೇ ಪೂರ್ಣಗೊಳ್ಳಬೇಕು.
ಅಲಿ, ಅಂಗಡಿ ಮಾಲೀಕ

ಪ್ರಯಾಣ ಪ್ರಯಾಸ

ಮಳೆ: ತುಟ್ಟಿಯಾದ ತರಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರಂತರ ಮಳೆಯಿಂದಾಗಿ ಹೊಲದಲ್ಲೇ ತರಕಾರಿಗಳು ಕೊಳೆಯುತ್ತಿವೆ. ಇತ್ತ ಮಾರುಕಟ್ಟೆಯಲ್ಲಿ ತರಕಾರಿಯೇ ಇಲ್ಲದೆ ದರ ಗಣನೀಯವಾಗಿ ಏರಿದೆ. ಬಹುತೇಕ ತರಕಾರಿ ದರಗಳು ಕೆ.ಜಿಗೆ ₹50ರ ಗಡಿ ದಾಟಿವೆ.

ಕೆ.ಆರ್.ಮಾರುಕಟ್ಟೆಯಲ್ಲಿ ತರಕಾರಿ ದರಗಳು ಕಳೆದ ವಾರಕ್ಕಿಂತ ತುಸು ಹೆಚ್ಚಾಗಿವೆ. ನಗರದ ವಿವಿಧೆಡೆ ಟೊಮೆಟೊ, ಕ್ಯಾರೆಟ್ ಸೇರಿ ಹಲವು ತರಕಾರಿಗಳು ಕೆ.ಜಿಗೆ ₹80ರವರೆಗೆ ಮಾರಾಟ ಆಗುತ್ತಿವೆ.

ಬೆಳ್ಳುಳ್ಳಿ, ಶುಂಠಿ, ಬೀನ್ಸ್, ಬದನೆ, ಬೆಂಡೆಕಾಯಿ ದರಗಳು ವಾರದಿಂದ ನಿರಂತರವಾಗಿ ಏರಿಕೆ ಕಂಡಿದ್ದು, ಈರುಳ್ಳಿ, ಹೂವು ಕೋಸು, ಬೀಟ್‌ರೂಟ್, ಮೂಲಂಗಿ ಸೇರಿದಂತೆ ಹಲವು ತರಕಾರಿಗಳು ತಲಾ ಕೆ.ಜಿಗೆ ₹50ರಂತೆ ಶುಕ್ರವಾರ ಮಾರಾಟವಾದವು.

'ಸಗಟು ಮಾರುಕಟ್ಟೆಗಳಲ್ಲೂ ದರಗಳು ಏರಿವೆ. ಈ ಪರಿಸ್ಥಿತಿಯಲ್ಲಿ ದರ ಹೆಚ್ಚಳ ಅವರಿಗೂ ಅನಿವಾರ್ಯ. ಇದೇ ರೀತಿ ಮಳೆ ಮುಂದುವರಿದರೆ, ಮುಂದಿನ ವಾರವೂ ಬೆಲೆ ಮತ್ತಷ್ಟು ಏರಬಹುದು' ಎನ್ನುತ್ತಾರೆ ದಾಸನಪುರ ಎಪಿಎಂಸಿ ತರಕಾರಿ ಸಗಟು ವ್ಯಾಪಾರಿ ಕುಮಾರ್.

'ಸಗಟು ಧಾರಣೆ ವಾರದಿಂದ ಏರಿಳಿತ ಆಗುತ್ತಿದೆ. ಸದ್ಯ ಸಗಟು ದರವೇ ಕೆ.ಜಿಗೆ ₹50 ಇದೆ. ಚಿಲ್ಲರೆ ಮಾರುಕಟ್ಟೆಗಳಲ್ಲಿ ಇದಕ್ಕಿಂತ ಹೆಚ್ಚಿನ ದರವೇ ಇರುತ್ತದೆ. ಮಳೆ ಬಿಡುವು ನೀಡಿದರೆ ಮಾತ್ರ ತರಕಾರಿಗಳು ಅಗ್ಗವಾಗಬಹುದು' ಎಂದು ಹೇಳಿದರು.

ಕೆ.ಆರ್.ಮಾರುಕಟ್ಟೆಯ ವರ್ತಕ ಹನುಮಂತ್, 'ಮಳೆ ಸುರಿಯುತ್ತಿರುವುದರಿಂದ ತರಕಾರಿ ದರಗಳು ಏರಿವೆ. ಗುಣಮಟ್ಟದ ತರಕಾರಿಯ ಅಭಾವ ಸೃಷ್ಟಿಯಾಗಿರುವುದರಿಂದ ಬೆಲೆಗಳು ಹೆಚ್ಚಾಗಿವೆ' ಎಂದು ತಿಳಿಸಿದರು.

'ತಳ್ಳುಗಾಡಿಗಳಲ್ಲಿ ತರಕಾರಿ ದರ ಕೇಳಿ ವಿಚಾರಿಸಿದಾಗ ಆಘಾತವಾಯಿತು. ಕೆ.ಆರ್.ಮಾರುಕಟ್ಟೆಯಲ್ಲಿ ಖರೀದಿಸಲು ಬಂದೆ. ಇಲ್ಲೂ ದರಗಳು ಹೆಚ್ಚಿವೆ. ಮನೆಯ ಸಮೀಪದ ಮಳಿಗೆಗಳಿಗಿಂತ ದರಗಳು ಸ್ವಲ್ಪ ಕಡಿಮೆ ಇವೆ' ಎಂದು ಚಾಮರಾಜಪೇಟೆ ನಿವಾಸಿ ಎನ್. ಸುಶೀಲಾ ಹೇಳಿದರು.

'ಮೊದಲು ₹100ಕ್ಕೆ ತರಹೇವಾರಿ ತರಕಾರಿ ಕೊಂಡೊಯ್ಯುತ್ತಿದ್ದೆವು. ಈಗ ಪ್ರತಿ ತರಕಾರಿ ದರ ₹50ರಿಂದ ₹80 ರವರೆಗೆ ಇದೆ' ಎಂದು ವಿಷಾದಿಸಿದರು.

ಸೊಪ್ಪಿನ ದರಗಳೂ ಏರಿಕೆಯಾಗಿವೆ. ಪ್ರತಿ ಕಟ್ಟಿಗೆ ₹20ಕ್ಕಿಂತ ಹೆಚ್ಚಿನ ದರಗಳಲ್ಲಿ ಮಾರಾಟ ಆಗುತ್ತಿವೆ. ಹಣ್ಣಿನ ದರಗಳು ಸ್ಥಿರವಾಗಿವೆ.

ದರಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ತರಕಾರಿ	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಬೆಳ್ಳುಳ್ಳಿ	100	132
ಕ್ಯಾರೆಟ್	80	100
ಬದನೆ	80	59
ಶುಂಠಿ	70	78
ಟೊಮೆಟೊ	70	93
ಬೀನ್ಸ್	60	68
ಬೆಂಡೆಕಾಯಿ	60	76
ಈರುಳ್ಳಿ	50	53
ಹೂಕೋಸು	50	54
ಬೀಟ್ ರೂಟ್	50	51
ಮೂಲಂಗಿ	50	62
ಆಲೂಗಡ್ಡೆ	40	42
ಮೆಣಸಿನ ಕಾಯಿ	40	48
ಎಲೆಕೋಸು	30	35

ಸೊಪ್ಪು	ಚಿಲ್ಲರೆ (ಕಟ್ಟಿಗೆ)	ಹಾಪ್‌ಕಾಮ್ಸ್ (ಕೆ.ಜಿ.ಗೆ)
ಮೆಂತ್ಯೆ	15	135
ಕೊತ್ತಂಬರಿ	20	56
ಸಬ್ಬಸಿಗೆ	20	80
ಪಾಲಕ್	25	100
ದಂಟು	30	72

ಹಣ್ಣು	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ದಾಳಿಂಬೆ	200	238
ಸೇಬು	120	140
ಮೂಸಂಬಿ	60	64
ಕಿತ್ತಳೆ	50	62
ದ್ರಾಕ್ಷಿ	50	54
ಸೀಬೆ	50	54
ಸಪೋಟ	40	42
ಸೀತಾಫಲ	40	51
ಅನಾನಸ್	40	43
ಏಲಕ್ಕಿ ಬಾಳೆ	50	49

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,
ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104. ದೂರವಾಣಿ: 080–23300497–41159606, 23359600. Email: jscbinfo@jscbl.com
ಸ್ಥಿರಾಸ್ತಿಗಳ ಬಹಿರಂಗ ಹರಾಜು/ಮಾರಾಟ
ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಬ್ಯಾಂಕಿನ ಮಾಲೀಕತ್ವದಲ್ಲಿರುವ ಈ ಕೆಳಕಂಡ ಖಾಲಿ ನಿವೇಶನಗಳನ್ನು "ಎಲ್ಲಿ ಹೇಗಿದೆಯೋ ಹಾಗೆಯೇ" ಮತ್ತು ಏನಿದಿಯೋ ಹಾಗಿನ ಆಧಾರದ" ಮೇಲೆ ಹರಾಜು ನಡೆಸಿ ಮಾರಾಟ ಮಾಡಲಾಗುವುದು.

ಹರಾಜಿನ/ಮಾರಾಟ ದಿನಾಂಕ ವೇಳೆ ಮತ್ತು ಸ್ಥಳ	ಸ್ಥಿರ ಸ್ವತ್ತುಗಳ ವಿವರ	ಕಾಂಪೌಂಡ್‌ನ ಸೂಕ್ತ ಭದ್ರತೆಯಲ್ಲಿರುವ ಖಾಲಿ ನಿವೇಶನಗಳ ಒಟ್ಟು ಅಳತೆ	ಕನಿಷ್ಠ ಮೀಸಲು ಬೆಲೆ ಮತ್ತು ಮುಂಗಡ ಠೇವಣಿ (ಇ.ಎಂ.ಡಿ)
ದಿನಾಂಕ: 03.12.2021ರ ಶುಕ್ರವಾರ, ಬೆಳಿಗ್ಗೆ 11:30 ಗಂಟೆಗೆ ಸ್ಥಳ: ಸ್ಥಿರಾಸ್ತಿಯ ಸ್ಥಳ, ನಾಗರಭಾವಿ, ಬೆಂಗಳೂರು	Eastern portion of the property bearing site no. 1, 2, 3, 4 & 5 having municipal khatha no. 58/105/179/99/1,2,3,4,5/2 which is formed out of sy.no.134, earlier sy.no.17/9 previously sy.no.17, Nagarabhavi Village, Yeshwanthpura Hobli, Nagarabhavi Ward No.129, measuring East to West:(73+84)/2, North to South:(91+79.10)/2, Total measuring: 6877.00 sq.ft. & bounded on East by : BDA Property, West by : Western portion of the site no.1,2,3,4 & 5, North by : Vinayaka HBCS layout, South by : 40Ft Road.	ಒಟ್ಟು 6877.00 ಚದರ ಅಡಿಗಳು	ರೂ.6,00,00,000/– (ರೂ ಆರು ಕೋಟಿ ಮಾತ್ರ) ರೂ.60,00,000/– (ಮೀಸಲು ಬೆಲೆಯ ಶೇ.10) (ರೂ ಅರವತ್ತು ಲಕ್ಷ ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು:
1. ಹರಾಜಿನಲ್ಲಿ ಭಾಗವಹಿಸುವ ಆಸಕ್ತರು ಮೀಸಲು ಬೆಲೆಯ ಶೇಕಡ 10% ರಷ್ಟು ಇ.ಎಂ.ಡಿ. ಮೊತ್ತವನ್ನು ಡಿ.ಡಿ/ಪೇ ಆರ್ಡರ್ ಮುಖಾಂತರ **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ ಶಾಖೆ, ಬೆಂಗಳೂರು**. ಇವರ ಹೆಸರಿಗೆ 02/12/2021, ಸಂಜೆ 5:30ರ ಒಳಗೆ ಅಥವಾ ಮೇಲೆ ತಿಳಿಸಿರುವ ಸ್ಥಿರಾಸ್ತಿಯ ಹರಾಜಿನ ಮೊದಲು ಪಾವತಿಸಿ ರಸೀದಿ ಮತ್ತು ಟೆಂಡರ್ ಫಾರಂಅನ್ನು ಪಡೆಯುವುದು ಜೊತೆಗೆ ಕೆವೈಸಿ ದಾಖಲೆಗಳು ಮತ್ತು ಇತ್ತೀಚಿನ ಭಾವಚಿತ್ರ ಸಲ್ಲಿಸುವುದು, ವಿಜಯಿ ಬಿಡ್ಡುದಾರರು ಹರಾಜಿನ ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂಗಡವಾಗಿ ಕೊಟ್ಟ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಮುಂಗಡ ಠೇವಣಿಯನ್ನು ಪಾವತಿಸಿದ ಬಿಡ್ಡುದಾರರು ದಿನಾಂಕ:03/12/2021, ಶುಕ್ರವಾರ, ಬೆಳಿಗ್ಗೆ 11:30 ಗಂಟೆಗೆ, ಸ್ಥಿರಾಸ್ತಿಯ ಸ್ಥಳದಲ್ಲಿ ಬಹಿರಂಗ ಹರಾಜಿನ ಮೂಲಕ ಬಿಡ್ ಮೊತ್ತವನ್ನು ಕರೆಯಬಹುದು. ಹೆಚ್ಚಿನ ಮೊತ್ತದ ಬಿಡ್‌ಅನ್ನು ಕೂಗಿದ ಬಿಡ್ಡುದಾರರು ಯಶಸ್ವಿ ಬಿಡ್ಡುದಾರರಾಗುತ್ತಾರೆ.
3. ಬಿಡ್ಡಿನಲ್ಲಿ ಯಶಸ್ವಿಯಾಗದ ಬಿಡ್ಡುದಾರರಿಗೆ ಇ.ಎಂ.ಡಿ. ಹಣವನ್ನು ತಕ್ಷಣವೇ ಮರುಪಾವತಿಸಲಾಗುವುದು. ಸ್ಥಿರ ಸ್ವತ್ತನ್ನು ಯಾವುದೇ ಕಾರಣಕ್ಕೂ ಮೀಸಲು ಬೆಲೆಗಿಂತ ಕಡಿಮೆ ಮೌಲ್ಯಕ್ಕೆ ಮಾರಾಟ ಮಾಡಲಾಗುವುದಿಲ್ಲ.
4. ವಿಜಯಿ ಬಿಡ್ಡುದಾರರು ಹರಾಜಿನ ಮೊಬಲಿಗಿನ ಶೇ.25 ರಷ್ಟು (ಮುಂಗಡವಾಗಿ ಪಾವತಿಸಿದ ಹಣವನ್ನು ಸೇರಿ) ಮೊತ್ತವನ್ನು ಹರಾಜಿನ ದಿನವೇ ಪಾವತಿಸತಕ್ಕದ್ದು,ಉಳಿದ ಹಣವನ್ನು 30 ದಿನಗಳ ಒಳಗಾಗಿ ಪಾವತಿಸಬೇಕು, ಆ ಹಣವನ್ನು ಸ್ವೀಕರಿಸಿದ ಮತ್ತು ಕೆವೈಸಿ ದಾಖಲೆಗಳ ಮೂಲ ಪ್ರತಿಗಳನ್ನು (ಫೋಟೋ ಐಡಿ ಮತ್ತು ವಿಳಾಸದ ದಾಖಲೆ) ಪರಿಶೀಲಿಸಿದ ನಂತರ ಮಾರಾಟ ದೃಢೀಕರಣ ಪತ್ರವನ್ನು ನೀಡಲಾಗುವುದು.
5. ವಿಜಯಿಯಾದ ಬಿಡ್ಡುದಾರರು ಈ ಪ್ರಕಟಣೆಯ ನಿಯಮಗಳನ್ನು ಪಾಲಿಸದಿದ್ದರೆ ಮತ್ತು ಯಾವುದೇ ರೀತಿಯಲ್ಲಾದರು ತಪ್ಪುಗಳನ್ನು ಮಾಡಿದರೆ ಅವರು ಪಾವತಿಸಿದ ಹಣವನ್ನು ಬ್ಯಾಂಕ್ ಯಾವುದೇ ಸೂಚನೆ ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಹಾಗೂ ಮತ್ತೆ ಹರಾಜು ಮಾಡಲಾಗುತ್ತದೆ.
6. ಬ್ಯಾಂಕ್ ಹರಾಜನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ, ಮುಂದೂಡುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ.
7. ಅಧಿಕೃತ ಬಿಡ್ಡುದಾರರು ಹೊರತು ಜಿ.ಪಿ.ಎ. ಹೋಲ್ಡರ್, ಏಜೆಂಟರು ಅಥವಾ ಇತರೆ ಯಾವುದೇ ವ್ಯಕ್ತಿಗಳು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ .
8. ಸ್ಥಿರ ಸತ್ತು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಮಾರಾಟ ಮಾಡಲಾಗುವುದು.

ಬಿಡ್ಡ್‌ದಾರರು ಟೆಂಡರ್‌ನ ಹೆಚ್ಚಿನ ಮಾಹಿತಿಗಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ., ನಂ 14, 'ರಜತ ಭವನ', 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104. ದೂರವಾಣಿ: 080–23300497, 41159606, 23359600, 9845022879, Email: jscbinfo@jscbl.com, ರವರನ್ನು ಸಂಪರ್ಕಿಸತಕ್ಕದ್ದು.
ದಿನಾಂಕ:19-11-2021
ಸ್ಥಳ: ಬೆಂಗಳೂರು
ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ವಿಜಯನಗರ, ಬೆಂಗಳೂರು–560 104

ನಟ ಪುನೀತ್ ಪರಿಕಲ್ಪನೆಯಲ್ಲಿ ಫಲಪುಷ್ಪ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ನಡೆಯಲಿರುವ ಈ ಬಾರಿಯ ಫಲಪುಷ್ಪ ಪ್ರದರ್ಶನವನ್ನು ನಟರಾದ ಡಾ.ರಾಜ್‌ಕುಮಾರ್ ಹಾಗೂ ಇತ್ತೀಚೆಗೆ ಅಗಲಿದ ಪುನೀತ್ ರಾಜ್‌ಕುಮಾರ್ ಅವರ ನೆನಪಾರ್ಥ ಆಯೋಜಿಸಲು ತೋಟಗಾರಿಕೆ ಇಲಾಖೆ ಹಾಗೂ ಮೈಸೂರು ಉದ್ಯಾನ ಕಲಾಸಂಘ ನಿರ್ಧರಿಸಿವೆ.

ಜನವರಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನದಲ್ಲಿ ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿರುವ ಇಬ್ಬರೂ ನಟರಿಗೆ ಪುಷ್ಪಗಳ ಮೂಲಕ ಗೌರವ ಸಲ್ಲಿಸಲು ಲಾಲ್‌ಬಾಗ್‌ನಲ್ಲಿ ಎಲ್ಲ ಸಿದ್ಧತೆಗಳು ಭರದಿಂದ ಸಾಗಿವೆ.

ಮೂಲಗಳ ಪ್ರಕಾರ ಲಾಲ್‌ಬಾಗ್ ಉದ್ಯಾನದ ಗಾಜಿನ ಮನೆಯಲ್ಲಿ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರ ಹೂವಿನ ಪ್ರತಿಕೃತಿಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ವಿಶೇಷವಾದ ತರಹೇವಾರಿ ಅಲಂಕಾರಿಕ ಪುಷ್ಪಗಳನ್ನು ಬಳಕೆ ಮಾಡಲಾಗುವುದು ಎಂದೂ ಹೇಳಲಾಗಿದೆ.

'ಕನ್ನಡ ಚಿತ್ರರಂಗದ ಮೇರು ನಟರಾದ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರ ಪರಿಕಲ್ಪನೆಯಡಿ ಫಲಪುಷ್ಪ ಪ್ರದರ್ಶನ ಆಯೋಜಿಸಲು ನಿರ್ಧರಿಸಲಾಗಿದೆ. ಪ್ರದರ್ಶನದ ವಿನ್ಯಾಸಗಳು, ದಿನಾಂಕ ನಿಗದಿಯನ್ನು ಶೀಘ್ರದಲ್ಲೇ ತೀರ್ಮಾನಿಸಿ ಅಂತಿಮಗೊಳಿಸಲಾಗುವುದು' ಎಂದು ತೋಟಗಾರಿಕೆ ಸಚಿವ ಮುನಿರತ್ನ ಅವರು ತಿಳಿಸಿದ್ದಾರೆ.

21ರಂದು ಪುನೀತ್‌ಗೆ ರಂಗನಮನ

ಪುನೀತ್

ಬೆಂಗಳೂರು: ಸಾಹಿತಿ ಮತ್ತು ಕಲಾವಿದರ ವೇದಿಕೆಯು ರಂಗ ವಿಜಯ ಸಂಘಟನೆಯ ಸಹಯೋಗದಲ್ಲಿ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ರಂಗನಮನ ಸಲ್ಲಿಸಲು ನಿರ್ಧರಿಸಿದೆ. ಇದಕ್ಕಾಗಿ 'ನಿನ್ನಂಥೋರ್ ಯಾರೂ ಇಲ್ವಲ್ಲೋ ಈ ಲೋಕದಾ ಮ್ಯಾಲೆ' ಎಂಬ ಕಾರ್ಯಕ್ರಮ ಹಮ್ಮಿಕೊಂಡಿದೆ.

'ಇದೇ 21ರ ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಇಂಪು ಸಂಗೀತ ಸಂಸ್ಥೆಯವರು ರಂಗ ಗೀತೆ ಹಾಗೂ ನೆನಪಿನ ಹಾಡುಗಳನ್ನು ಪ್ರಸ್ತುತ ಪಡಿಸಲಿದ್ದಾರೆ. ನಟ ರಾಘವೇಂದ್ರ ರಾಜ್‌ಕುಮಾರ್ ಭಾಗವಹಿಸಲಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

ತಂದೆಗೆ ಮಗನನ್ನು ನೋಡುವ ಕಾತುರ

ತಾಯಿಗೆ ಬುದ್ಧಿ ಹೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಾಹ ವಿಚ್ಛೇದನದ ಬಳಿಕ 16 ವರ್ಷದ ತನ್ನ ಮಗನನ್ನು ಭೇಟಿ ಮಾಡುವ ಇರಾದೆ ವ್ಯಕ್ತಪಡಿಸಿದ್ದ ತಂದೆಯ ಬಯಕೆಯನ್ನು ನಿರಾಕರಿಸಿದ ತಾಯಿಗೆ, ಬುದ್ಧಿವಾದ ಹೇಳಿರುವ ಹೈಕೋರ್ಟ್, 'ನೀವು ವಿಚ್ಛೇದನ ಪಡೆದಿರಬಹುದು. ಆದರೆ ಆ ಮಗು ನಿಮ್ಮಿಬ್ಬರ ಸಂಯೋಗದಿಂದಲೇ ಹುಟ್ಟಿದ್ದು ತಾನೆ..? ಯಾಕೆ ತಡೆಯುತ್ತೀರಿ..? ನೋಡಲು ಬಿಡಿ, ಈಗಿನ ಮಕ್ಕಳು ಕೂರಿಸಿಕೊಂಡು ನಿಮಗೇ ಪಾಠ ಹೇಳುವಷ್ಟು ಜಾಣರಿರುತ್ತವೆ' ಎಂದು ಕುಟುಕಿದೆ.

'ಚೆನ್ನೈನಲ್ಲಿ ನೆಲೆಸಿರುವ ವಿಚ್ಛೇದಿತ ಪತಿ ತನ್ನ ಹದಿನಾರು ವರ್ಷದ ಮಗನನ್ನು ಭೇಟಿ ಮಾಡಲು ವಿಚ್ಛೇದಿತ ಪತ್ನಿಗೆ ನಿರ್ದೇಶಿಸಬೇಕು' ಎಂದು ಕೋರಿ ಸಲ್ಲಿಸಿದ್ದ ಎಂಎಫ್‌ಎ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ತಂದೆಯ ಪರ ವಕೀಲ ಕೆ.ಎಸ್.ಭೀಮಯ್ಯ, 'ಮಗುವನ್ನು ನೋಡಲು ತಾಯಿ ಬಿಡುತ್ತಿಲ್ಲ' ಎಂದು ಆಕ್ಷೇಪಿಸಿದರು.

ಇದಕ್ಕೆ ತಾಯಿಯ ಪರ ವಕೀಲರು, 'ಮಗುವಿಗೆ 16 ವರ್ಷ. ಈ ವರ್ಷ ಎಸ್ಸೆಸ್ಸೆಲ್ಸಿ ಓದುತ್ತಿದ್ದಾನೆ. ಸಿಬಿಎಸ್ಸಿ ಮಧ್ಯಂತರ ಪರೀಕ್ಷೆಗಳು ಇದೇ ತಿಂಗಳ ಕೊನೆಯ ವಾರದಿಂದ ಆರಂಭವಾಗಲಿವೆ. ಈ ಹಂತದಲ್ಲಿ ಅವನನ್ನು ತಂದೆಯ ಬಳಿ ಬಿಟ್ಟರೆ ಅವರ ಮಾನಸಿಕ ಸಂತುಲತೆಯಲ್ಲಿ ವ್ಯತ್ಯಾಸವಾಗಿ ಅದು ಅಭ್ಯಾಸದ ಮೇಲೆ ಪರಿಣಾಮ ಬೀರಬಹುದು' ಎಂದು ಕಳವಳ ವ್ಯಕ್ತಪಡಿಸಿದರು.

> **ಈ ಗಂಡಸರ ಸ್ವಭಾವವೇ ಅಷ್ಟು ಬಿಡ್ರೀ. ವಿಚ್ಛೇದನ ಆಗುತ್ತಿದ್ದಂತೆ ಮತ್ತೊಂದು ಮದುವೆಯಾಗಿಬಿಡ್ತಾರೆ...!**
> **ನ್ಯಾಯಮೂರ್ತಿ ಬಿ.ವೀರಪ್ಪ**

ಇದನ್ನು ಒಪ್ಪದ ನ್ಯಾಯಪೀಠ, 'ಅಯ್ಯೋ ನೀವು ಅಂದುಕೊಳ್ಳುತ್ತಿರುವ ರೀತಿ ಏನೂ ಆಗುವುದಿಲ್ಲ. ಈಗಿನ ಕಾಲದ ಮಕ್ಕಳು ಸಾಕಷ್ಟು ಚುರುಕು ಮತ್ತು ಪ್ರಬುದ್ಧರಿರುತ್ತವೆ. ಚಳಿಗಾಲ ಮತ್ತು ಬೇಸಿಗೆಕಾಲದ ರಜೆಯಲ್ಲಿ ಅರ್ಧ ಭಾಗ ತಂದೆಯ ಬಳಿ ಇರಲು ಆದೇಶಿಸುತ್ತೇನೆ ಬಿಡಿ' ಎಂದರು.

ಇದಕ್ಕೆ ಆಕ್ಷೇಪಿಸಿದ ತಾಯಿಯ ಪರ ವಕೀಲರು, 'ಸ್ವಾಮಿ, ದಯವಿಟ್ಟು ಆ ರೀತಿ ಆದೇಶಿಸಬೇಡಿ. ಅವರು ಮತ್ತೊಂದು ಮದುವೆಯಾಗಿದ್ದಾರೆ. ಹೊಸ ಹೆಂಡತಿಗೂ ಒಂದು ಗಂಡು ಮಗುವಿದೆ' ಎಂದರು.

ನ್ಯಾಯಮೂರ್ತಿಗಳು, 'ಇದೇ 24ಕ್ಕೆ ಮಗುವನ್ನು ಕರೆಯಿಸಿ. ಅವನನ್ನು ಛೇಂಬರ್‌ನಲ್ಲೇ ಕೂರಿಸಿಕೊಂಡು, ಅಪ್ಪನನ್ನು ಭೇಟಿ ಮಾಡಲು ಇಚ್ಛೆಯಿದೆಯೊ ಇಲ್ಲವೊ ಎಂಬುದನ್ನು ನಾನೇ ಕೇಳಿ ತೀರ್ಮಾನಿಸುತ್ತೇನೆ' ಎಂದು ವಿಚಾರಣೆ ಮುಂದೂಡಿದರು.

ಹುಂಡೈ: ನೀರು ಉಳಿತಾಯ ಅಭಿಯಾನ

ಬೆಂಗಳೂರು: ಹುಂಡೈ ಮೋಟರ್ ಇಂಡಿಯಾ ಲಿಮಿಟೆಡ್ ಕಂಪನಿಯು ನವೆಂಬರ್ 22ರಿಂದ ಡಿಸೆಂಬರ್ 6ರವರೆಗೆ ನೀರು ಉಳಿತಾಯ ಮಾಡುವ ಅಭಿಯಾನವೊಂದನ್ನು ನಡೆಸಲಿದೆ. ಇದರ ಅಡಿಯಲ್ಲಿ ಕಂಪನಿಯು, ತನ್ನ ಗ್ರಾಹಕರು ಸರ್ವಿಸಿಂಗ್‌ಗೆ ಬಂದಾಗ ಅವರು ಕಾರನ್ನು ಡ್ರೈವಾಶ್ ಮಾಡಿಸಲು ಪ್ರೋತ್ಸಾಹ ನೀಡಲಿದೆ.

'ಈ ಅಭಿಯಾನದ ಮೂಲಕ ನಾವು ನಮ್ಮ ಗ್ರಾಹಕರಿಗೆ ನೀರನ್ನು ಬಳಸದೆಯೇ ಕಾರು ತೊಳೆಸುವಂತೆ ಪ್ರೇರಣೆ ನೀಡಲಿದ್ದೇವೆ' ಎಂದು ಕಂಪನಿಯ ಮಾರಾಟ, ಮಾರುಕಟ್ಟೆ ಮತ್ತು ಸೇವಾ ವಿಭಾಗದ ನಿರ್ದೇಶಕ ತರುಣ್ ಗರ್ಗ್ ಅವರು ತಿಳಿಸಿದ್ದಾರೆ.

ಈ ಅಭಿಯಾನದಲ್ಲಿ ಪಾಲ್ಗೊಳ್ಳುವ, ನೂರು ಅದೃಷ್ಟಶಾಲಿ ವಿಜೇತರಿಗೆ ಕಂಪನಿಯು ₹ 1,000 ಮೌಲ್ಯದ ಅಮೆಜಾನ್ ವೋಚರ್ ನೀಡಲಿದೆ ಎಂದು ಪ್ರಕಟಣೆ ತಿಳಿಸಿದೆ.

SBI ಭಾರತೀಯ ಸ್ಟೇಟ್ ಬ್ಯಾಂಕ್

ಸ್ಥಳೀಯ ಪ್ರಧಾನ ಕಛೇರಿ ನಂ.65, ಸಂತ ಮಾರ್ಕ್‌ರ ರಸ್ತೆ, ಬೆಂಗಳೂರು – 560001

ಸ್ಟಾಕ್ ಮತ್ತು ರಿಸೀವಬಲ್ ಲೆಕ್ಕ ಪರಿಶೋಧಕರ ಎಂಪಾನೆಲ್ಮೆಂಟ್

ಕರ್ನಾಟಕ ರಾಜ್ಯ ಒಳಗೊಂಡಿರುವ ಬೆಂಗಳೂರು ವೃತ್ತದಲ್ಲಿ ಸ್ಟಾಕ್ ಮತ್ತು ರಿಸೀವಬಲ್ ಲೆಕ್ಕ ಪರಿಶೋಧಕರ ಹೆಸರುಗಳನ್ನು ಎಂಪಾನೆಲ್ ಮಾಡುವ ಸಲುವಾಗಿ ಕನಿಷ್ಠ 5 ವರ್ಷಗಳ ಅನುಭವ ಹೊಂದಿರುವ ಚಾರ್ಟರ್ಡ್ ಅಕೌಂಟೆಂಟ್/ ಕಾಸ್ಟ್ ಅಕೌಂಟೆಂಟ್ ಗಳ ಕಂಪನಿಗಳು/ ಸಂಸ್ಥೆಗಳು/ ಸೀಮಿತ ಹೊಣೆಗಾರಿಕೆ ಪಾಲುಗಾರಿಕೆ (LLP) ಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ, ಅರ್ಹತೆ ಮಾನದಂಡಗಳು ಮತ್ತು ಇತರೆ ವಿವರಗಳಿಗಾಗಿ, ದಯವಿಟ್ಟು www.sbi.co.in ಅನ್ನು ಲಾಗ್ ಆನ್ ಮಾಡಿ 'procurement news' ಅಡಿಯಲ್ಲಿ ವೀಕ್ಷಿಸಿ. ಸರಿಯಾಗಿ ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಮೊಹರುಮಾಡಲಾದ ಲಕೋಟೆಯ ಮೇಲೆ "ಸ್ಟಾಕ್ ಮತ್ತು ರಿಸೀವಬಲ್ ಲೆಕ್ಕ ಪರಿಶೋಧಕರ ಎಂಪಾನೆಲ್ಮೆಂಟ್ ಗಾಗಿ ಅರ್ಜಿ" ಎಂದು ನಮೂದಿಸಿ, ನಮ್ಮ ಕಚೇರಿಗೆ 10.12.2021 ರಂದು ಅಥವಾ ಅದರೊಳಗಾಗಿ ತಲುಪಿಸಬೇಕು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು ಮತ್ತು ಸಿ.ಸಿ.ಒ.

ನಾಡದೇವಿಗೆ ಗೀತ ನಮನ: 10 ಮಂದಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ'ಯು 'ನಾಡದೇವಿಗೆ ಗೀತ ನಮನ' ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡಿದ್ದ 'ಕನ್ನಡ ಹಾಡಿನ ವಿಡಿಯೊ ಕಳುಹಿಸಿ ಬಹುಮಾನ ಗೆಲ್ಲಿ' ಸ್ಪರ್ಧೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, 10 ಮಂದಿ ಬಹುಮಾನ ಪಡೆದಿದ್ದಾರೆ.

ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ ಸಹಕಾರದೊಂದಿಗೆ ಆಯ್ಕೆ ಮಾಡಲಾಗಿರುವ ಬಹುಮಾನಿತ ಗೀತೆಗಳನ್ನು ಶನಿವಾರ ಸಂಜೆ 6 ಗಂಟೆಗೆ 'ಪ್ರಜಾವಾಣಿ' ಫೇಸ್‌ಬುಕ್ ಪುಟದಲ್ಲಿ (fb.com/prajavani.net) ಪ್ರಸಾರ ಮಾಡಲಾಗುತ್ತದೆ. ಸಂಧ್ಯಾ ಭಟ್ ಅವರು 'ಪ್ರೀಮಿಯರ್ ಶೋ' ನಿರೂಪಿಸಲಿದ್ದಾರೆ.

ಪ್ರಶಸ್ತಿ ವಿಜೇತರು

ಬಹುಮಾನಿತ ಹಾಡು	ಗಾಯಕರು
ನಯನ ಮನೋಹರ	ಕೀರ್ತನಾ
ಹಚ್ಚೇವು ಕನ್ನಡದ ದೀಪ	ಇಂದಿರಾ
ಕನ್ನಡವೆಂದರೆ	ಸುಶ್ಮಿತಾ
ಪೂಜಿಸಲೆಂದೇ	ನಿಧಿ ಸುಬ್ರಹ್ಮಣ್ಯ, ಕೆನಡಾ
ಕನ್ನಡ ನಾಡಿನ	ಲಾವಣ್ಯಗೋಪಾಲ್, ಅಮೆರಿಕ
ಜೋಗದ ಸಿರಿ	ದೀಪ್ತಿ ಭಟ್
ಜನ್ಮ ನೀಡುತ್ತಾಳೆ	ವಿಷ್ಣು
ಕರ್ನಾಟಕ ಬರೀ ನಾಡಲ್ಲ	ನಾದಶ್ರೀ
ಕನ್ನಡಮ್ಮನ ದೇವಾಲಯ	ಮರಿಯಪ್ಪ ಭಜಂತ್ರಿ
ಜೀವವಿಂದು ಏನೋ ಒಂದು	ರಶ್ಮಿ ಮಲ್ಲೇಸರ

ರೈಲು ಪ್ರಯಾಣಿಕರಿಗೆ ಸಿದ್ಧ ಆಹಾರ ಪೂರೈಕೆ ಸೇವೆಗೆ ಚಾಲನೆ

ನವದೆಹಲಿ (ಪಿಟಿಐ): ರೈಲು ಪ್ರಯಾಣಿಕರಿಗೆ ಬೇಯಿಸಿದ ಆಹಾರ ಪೂರೈಸುವ ಸೇವೆ ಪುನರಾರಂಭಿಸಬೇಕು ಎಂದು ರೈಲ್ವೆ ಮಂಡಳಿ ಆದೇಶಿಸಿದೆ. ಕೋವಿಡ್ ಪರಿಸ್ಥಿತಿ ಹಿನ್ನೆಲೆಯಲ್ಲಿ ಈ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು.

ಮಂಡಳಿಯು ಈ ಸಂಬಂಧ ಐಆರ್‌ಸಿಟಿಸಿಗೆ ಶುಕ್ರವಾರ ಪತ್ರ ಬರೆದಿದೆ. ಪ್ರಯಾಣಿಕರಿಗೆ ಸಿದ್ಧ ಆಹಾರವನ್ನು ಪೂರೈಸುವ ಸೇವೆಯೂ ಮುಂದುವರಿಯಲಿದೆ ಎಂದೂ ರೈಲ್ವೆ ಮಂಡಳಿ ಹೇಳಿದೆ.

ಸಾಮಾನ್ಯ ರೈಲು ಸೇವೆ ಆರಂಭವಾಗಿರುವುದು, ಪ್ರಯಾಣಿಕರ ಅಗತ್ಯತೆ ಮತ್ತು ಕೋವಿಡ್ ನಿರ್ಬಂಧಗಳನ್ನು ಸಡಿಲಿಸಿರುವ ಕಾರಣ ರೈಲ್ವೆ ಸಚಿವಾಲಯವೂ ಸಿದ್ಧ ಆಹಾರ ಪೂರೈಸುವ ಸೇವೆಗೆ ಚಾಲನೆ ನೀಡಲು ನಿರ್ಧರಿಸಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಮೂರು ದಿನ ನಡೆದ 24ನೇ ಬೆಂಗಳೂರು ತಂತ್ರಜ್ಞಾನ ಶೃಂಗ ಮುಕ್ತಾಯ

‘ಸಿಲಿಕಾನ್ ವ್ಯಾಲಿ ಬ್ರಿಡ್ಜ್ ರಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರತಿಭಾವಂತ ಉದ್ಯೋಗಿಗಳ ಕೊರತೆ ಎದುರಿಸುತ್ತಿರುವ ಅಮೆರಿಕದ ಸಿಲಿಕಾನ್ ವ್ಯಾಲಿ ನವೋದ್ಯಮಗಳಿಗೆ ಇಲ್ಲಿಂದಲೇ ಕೆಲಸ ನಿರ್ವಹಿಸಲು ಸಾಧ್ಯವಾಗುವಂತೆ ‘ನವೋದ್ಯಮ ಸಿಲಿಕ್ಯಾನ್ ವ್ಯಾಲಿ ಬ್ರಿಡ್ಜ್’ ರಚನೆ ಮಾಡಲಾಗುವುದು’ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಡಾ.ಸಿ.ಎನ್.ಅಶ್ವತ್ಥ-ನಾರಾಯಣ ಪ್ರಕಟಿಸಿದರು.

ಅಮೆರಿಕದಲ್ಲಿರುವ ನವೋದ್ಯಮಗಳಿಗೆ ಪ್ರತಿಭಾನ್ವಿತರು ಇಲ್ಲಿಂದಲೇ ಕೆಲಸ ಮಾಡುವುದಷ್ಟೇ ಅಲ್ಲದೇ, ಆ ಕಂಪನಿಗಳಲ್ಲಿ ಷೇರು ಸಹ ಪಡೆಯುವ ವ್ಯವಸ್ಥೆ ರೂಪಿಸಲು ಎಲ್ಲ ಪ್ರಯತ್ನ ನಡೆದಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಬೆಂಗಳೂರಿನ ಆಚೆಗೂ ನವೋದ್ಯಮಗಳಿಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ‘ಬಿಯಾಂಡ್ ಸ್ಟಾರ್ಟ್‌ಅಪ್ ಗ್ರಿಡ್’ ಸ್ಥಾಪಿಸಲಾಗುವುದು. ಹುಬ್ಬಳ್ಳಿ, ಮೈಸೂರು, ಮಂಗಳೂರು ಕ್ಲಸ್ಟರ್‌ಗಳಲ್ಲಿ ನವೋದ್ಯಮಗಳ ಸ್ಥಾಪನೆಗೆ ಒತ್ತು ನೀಡಲಾಗಿದ್ದು, ಬೇಕಿರುವ ಪ್ರೋತ್ಸಾಹಧನ, ಮೂಲಸೌಕರ್ಯ ಕಲ್ಪಿಸಲಾಗುತ್ತಿದೆ ಎಂದು ವಿವರಿಸಿದರು.

ಫಿನ್‌ಟೆಕ್ ಬ್ಯಾಕ್ ಆಫೀಸ್: ಫಿನ್‌ಟೆಕ್ ಕಂಪನಿಗಳು, ಅದರಲ್ಲೂ ನವೋದ್ಯಮಗಳು ಹೆಚ್ಚು ಬೆಳೆಯುತ್ತಿದ್ದು, ಫಿನ್‌ಟೆಕ್ ಕಾರ್ಯಪಡೆ ರಚಿಸಲಾಗಿದೆ. ಮಂಗಳೂರಿನಲ್ಲಿ ಫಿನ್‌ಟೆಕ್ ಉತ್ಕೃಷ್ಟತಾ ಕೇಂದ್ರ ತೆರೆದು ಅಲ್ಲಿ, ಫಿನ್‌ಟೆಕ್ ಬ್ಯಾಕ್ ಆಫೀಸ್ ತೆರೆಯಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಕಾಲೇಜುಗಳ ದತ್ತು: ‘ಕಾಲೇಜುಗಳನ್ನು ದತ್ತು ಪಡೆದುಕೊಂಡು ಅಲ್ಲಿಯೇ ತರಬೇತಿ ನೀಡಿ, ತಮಗೆ ಬೇಕಾದ ಮಾನವ ಸಂಪನ್ಮೂಲ ಪಡೆದುಕೊಳ್ಳಲು ಕಂಪನಿಗಳಿಗೆ ಅವಕಾಶ ನೀಡಲಾಗಿದೆ. ಸಾಧ್ಯವಾದರೆ ಕೆಲವೊಂದು ಕಂಪನಿಗಳನ್ನೇ ಸಂಶೋಧನಾ ಕೇಂದ್ರಗಳನ್ನಾಗಿ ಪರಿಗಣಿಸುವ ಬಗ್ಗೆಯೂ ಪ್ರಸ್ತಾಪ ಇರಿಸಲಾಗಿದ್ದು, ಈ ನಿಟ್ಟಿನಲ್ಲಿ ಮಾತುಕತೆ ನಡೆಯುತ್ತಿದೆ’ ಎಂದರು.

₹5 ಸಾವಿರ ಕೋಟಿ ಬಂಡವಾಳ

‘ಎಚ್‌ಸಿಎಲ್, ಅಪ್ಲೈಡ್ ಮೆಟೀರಿಯಲ್, ರಾಕಾನ್ ಮತ್ತು ಚಿಂಟ್ ಕಂಪನಿಗಳು ರಾಜ್ಯದಲ್ಲಿ ಒಟ್ಟು ₹5 ಸಾವಿರ ಕೋಟಿಗೂ ಅಧಿಕ ಬಂಡವಾಳ ಹೂಡಲು ಮುಂದೆ ಬಂದಿವೆ. ಈ ಹೂಡಿಕೆಯಿಂದಾಗಿ ರಾಜ್ಯದಲ್ಲಿ 15 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿ ಆಗಲಿದೆ’ ಎಂದು ಸಿ.ಎನ್. ಅಶ್ವತ್ಥ-ನಾರಾಯಣ ಹೇಳಿದರು. ‘ರಾಜ್ಯದಲ್ಲಿ ಈ ಕಂಪನಿಗಳ ಹೂಡಿಕೆಯಿಂದಾಗಿ ಸೆಮಿಕಂಡಕ್ಟರ್, ಎಲೆಕ್ಟ್ರಾನಿಕ್, ಸೌರ ಕೋಶಗಳು, ವಾಷಿಂಗ್ ಮಷಿನ್ ಮತ್ತು ಹವಾ ನಿಯಂತ್ರಕಗಳಿಗೆ ಅಳವಡಿಸುವ ಮೋಟಾರುಗಳ ಉತ್ಪಾದನೆ ಸಾಧ್ಯವಾಗಲಿದೆ’ ಎಂದರು.

‘ಎಷ್ಟು ರೈತರಿಗೆ ಡಾಕ್ಟರೇಟ್ ಕೊಟ್ಟಿವೆ’

ಬೆಂಗಳೂರು: ‘ಯಶಸ್ವಿ ಸಾಮಾಜಿಕ ಉದ್ದಿಮೆ ಕಟ್ಟಬೇಕಾದರೆ ಆ ಉದ್ದಿಮೆ ಯಾರನ್ನು ಒಳಗೊಂಡಿರಬೇಕು ಎಂಬ ಸ್ಪಷ್ಟ ಕಲ್ಪನೆ ಇನ್ನೂ ನಮ್ಮಲ್ಲಿ ಮೂಡಬೇಕಿದೆ’ ಎಂದು ಸೆಲ್ಕೋ ಫೌಂಡೇಷನ್ ಸಂಸ್ಥಾಪಕ ಡಾ. ಹರೀಶ್ ಹಂದೆ ಅಭಿಪ್ರಾಯಪಟ್ಟರು. ಬೆಂಗಳೂರು ತಂತ್ರಜ್ಞಾನ ಶೃಂಗ-2021ರ ಮೂರನೇ ದಿನವಾದ ಶುಕ್ರವಾರ ನಡೆದ ‘ಸಾಮಾಜಿಕ ಉದ್ಯಮಶೀಲತೆ ಮೂಲಕ ಸಬಲೀಕರಣ ಮತ್ತು ಒಳಗೊಳ್ಳುವಿಕೆಯ ಪ್ರಸ್ತುತ ಸ್ಥಿತಿ ಮತ್ತು ಅವಕಾಶಗಳು’ ಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

‘ದೇಶದ ಎಷ್ಟು ಕೃಷಿ ವಿಶ್ವವಿದ್ಯಾಲಯಗಳು ರೈತರಿಗೆ ಗೌರವ ಡಾಕ್ಟರೇಟ್ ಕೊಟ್ಟಿವೆ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗುತ್ತದೆ. ಇಂತಹ ಪ್ರಶ್ನೆಗಳನ್ನು ಎತ್ತುವ ಮೂಲಕ ಯಾವುದೇ ಕೆಲಸ, ಕ್ಷೇತ್ರ ಅಥವಾ ಉದ್ದಿಮೆ ಯಾರನ್ನು ಒಳಗೊಳ್ಳಬೇಕೆಂಬ ಸ್ಪಷ್ಟ ಕಲ್ಪನೆ ಸಾಧ್ಯವಾಗಲಿದೆ’ ಎಂದರು.

‘ನವೋದ್ಯಮಗಳಿಗೆ ಸೂಕ್ತ ಹಣಕಾಸು ನೆರವು ದೊರೆಯಲು ಪಾರದರ್ಶಕತೆ ಎಷ್ಟು ಮುಖ್ಯವೋ ಉದ್ದೇಶಿತ ಗುರಿ ಸಾಧಿಸಲು ಸೂಕ್ತ ಹೂಡಿಕೆದಾರರೂ ಕೂಡ ಅಷ್ಟೇ ಮುಖ್ಯ’ ಎಂದು ಕ್ರೆಡಿಟ್ ಅಕ್ಸೆಸ್ ಗ್ರಾಮೀಣ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಉದಯಕುಮಾರ್ ಹೆಬ್ಬಾರ್ ತಿಳಿಸಿದರು.

ಪ್ರಮುಖ ಅಂಶಗಳು

48 ದೇಶಗಳು ಜಿಐಎ ಪಾಲುದಾರಿಕೆ	1,253 ನಿಯೋಗಗಳು
3 ಸಚಿವರ ಮಟ್ಟದ ನಿಯೋಗಗಳು	8 ಒಪ್ಪಂದ ಘೋಷಣೆ

‘ಇ.ವಿ ವಲಯದ ಸಮಸ್ಯೆ ನಿವಾರಣೆ ಆದ್ಯತೆಯಾಗಬೇಕು’

ಬೆಂಗಳೂರು: ‘ವಿದ್ಯುತ್ ಚಾಲಿತ ವಾಹನಗಳೇ (ಇ.ವಿ.) ಭವಿಷ್ಯದ ಆಯ್ಕೆಯಾಗಿದ್ದು, ಅದಕ್ಕೆ ಬೇಕಿರುವ ಹಾರ್ಡ್‌ವೇರ್ ಪೂರೈಕೆ ಸಮಸ್ಯೆ ಬಗೆಹರಿಸಿಕೊಳ್ಳಲು ಒತ್ತು ನೀಡುವ ಅಗತ್ಯವಿದೆ’ ಎಂದು ಮೆಹೆರ್ ಎನರ್ಜೀಸ್ ವೆಂಚರ್ಸ್ ಕಂಪನಿಯ ಸಿಇಒ ಮುಸ್ತಫಾ ವಾಜಿದ್ ಅಭಿಪ್ರಾಯಪಟ್ಟರು.

ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ಶುಕ್ರವಾರ ವರ್ಚುಯಲ್ ಆಗಿ ನಡೆದ ‘ವಿದ್ಯುತ್ ಚಾಲಿತ ವಾಹನ ಕ್ಷೇತ್ರದಲ್ಲಿ ಉದ್ಯಮಿಗಳಿಗೆ ಇರುವ ಅವಕಾಶಗಳು’ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಜನರ ಭಾವನೆಗಳು ಕೂಡ ವಿದ್ಯುತ್ ಚಾಲಿತ ವಾಹನಗಳ ಪರವಾಗಿದೆ. 2030ರ ವೇಳೆಗೆ ದೇಶದಲ್ಲಿ ಈ ವಲಯದ ವಹಿವಾಟು 150 ಶತಕೋಟಿ ಡಾಲರ್‌ಗೆ ತಲುಪುವ ಸಾಧ್ಯತೆ ಇದೆ. ಮಾಹಿತಿ ತಂತ್ರಜ್ಞಾನದ ನಗರವಾಗಿರುವ ಬೆಂಗಳೂರು ಈ ಕ್ಷೇತ್ರದಲ್ಲಿ ಜಾಗತಿಕ ಮಟ್ಟದ ತಾಣವಾಗುವ ಉಜ್ವಲ ಅವಕಾಶವಿದೆ’ ಎಂದು ಹೇಳಿದರು.

ಸಮರ್ಥ ಪರಿಸರ ಸ್ನೇಹಿ ಜಲಜನಕ ನೀತಿ ರೂಪಿಸಿರುವಂತೆಯೇ ಇ.ವಿಗೆ ಬೇಕಿರುವ ಹಾರ್ಡ್‌ವೇರ್ ಸಮಸ್ಯೆ ನಿವಾರಣೆಯನ್ನು ಆದ್ಯತೆ ವಿಷಯವಾಗಿ ಪರಿಗಣಿಸಬೇಕು ಎಂದು ತಿಳಿಸಿದರು.

> **ಇ.ವಿ.ವಾಹನಗಳ ಚಾರ್ಜಿಂಗ್ ಕಷ್ಟವಿದೆ. ಜನರು ಪೆಟ್ರೋಲನ್ನು ಹೇಗೆ ಕ್ಷಣಾರ್ಧದಲ್ಲಿ ತುಂಬಿಸಿಕೊಂಡು ಹೋಗುತ್ತಾರೋ ಹಾಗೆ ಇ.ವಿ. ಚಾರ್ಜಿಂಗ್ ಕೂಡ ಸುಲಭವಾಗಬೇಕು.**
> **ಅರುಣ್ ವಿನಾಯಕ್,** ಸಹಸಂಸ್ಥಾಪಕ, ಎಕ್ಸ್ಪೋನೆಂಟ್ ಎನರ್ಜಿ

> **ಹತ್ತು ವರ್ಷಗಳ ಹಿಂದೆ ವಿದ್ಯುತ್‌ಚಾಲಿತ ವಾಹನವೆಂದರೆ ಜನ ಅದನ್ನು ಬೊಂಬೆ ಎಂದುಕೊಂಡಿದ್ದರು. ಹೆಚ್ಚಿನ ಜನ ಈಗ ಇ.ವಿ.ಗಳ ಕಡೆಗೇ ಬರುತ್ತಿದ್ದಾರೆ.**
> **ತರುಣ್ ಮೆಹ್ತಾ,** ಸಂಸ್ಥಾಪಕ. ಏಥರ್ ಎನರ್ಜಿ

ಬೌನ್ಸ್ ಕಂಪನಿಯ ಸ್ಥಾಪಕ ವಿವೇಕಾನಂದ ಹಲ್ಲೇಕೆರೆ ಮಾತನಾಡಿ, ‘ಇನ್ನು ಕೆಲವೇ ವರ್ಷಗಳಲ್ಲಿ 20 ದಶಲಕ್ಷ ವಿದ್ಯುತ್‌ಚಾಲಿತ ವಾಹನಗಳು ರಸ್ತೆಯ ಮೇಲಿರಲಿವೆ. ಪರಿಸರ ಸ್ನೇಹಿ ಮತ್ತು ಹೆಚ್ಚು ಖರ್ಚಿಲ್ಲದ ಸಂಚಾರದ ವಾಹನಗಳನ್ನು ಜನ ಸಹಜವಾಗಿಯೇ ಆಯ್ಕೆ ಮಾಡಿಕೊಳ್ಳುತ್ತಾರೆ’ ಎಂದರು.

ಚರಾ ಟೆಕ್ನಾಲಜೀಸ್ ಸಂಸ್ಥಾಪಕ ಭಕ್ತಕೇಶವಾಚಾರ್, ‘ನಮ್ಮ ವ್ಯವಸ್ಥೆಯಲ್ಲಿ ದೋಷಗಳಿವೆ. ಮುಖ್ಯವಾಗಿ ಇಂಧನ ಕ್ಷೇತ್ರದಲ್ಲಿ ಸುಧಾರಣೆ ಆಗಬೇಕು.’ ಎಂದರು.

ಬಿಟಿಎಸ್2021ರಲ್ಲಿ ಡಬ್ಲ್ಯುಇಎಫ್ ಸಂಸ್ಥಾಪಕ ಕ್ಲಾಸ್ ಸ್ವಾಬ್

ಕೃಷಿ ಕ್ಷೇತ್ರಕ್ಕೆ ಕೃತಕ ಬುದ್ಧಿಮತ್ತೆ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೃಷಿ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಕೆಯಾದರೆ ಪ್ರಬಲ ಆರ್ಥಿಕ ಶಕ್ತಿಯಾಗಿ ಬೆಳೆಯುವ ನಿಚ್ಚಳ ಅವಕಾಶಗಳಿವೆ’ ಎಂದು ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ಸಂಸ್ಥಾಪಕ ಪ್ರೊ.ಕ್ಲಾಸ್ ಶ್ವಾಬ್ ಅಭಿಪ್ರಾಯಪಟ್ಟರು.

ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ಶುಕ್ರವಾರ ನಡೆದ ಗೋಷ್ಠಿಯಲ್ಲಿ ವರ್ಚುಯಲ್ ಆಗಿ ಪಾಲ್ಗೊಂಡಿದ್ದ ಅವರು, ‘ದೇಶವು ಇಡೀ ಜಗತ್ತಿಗೆ ಬೇಕಾದ ತಂತ್ರಜ್ಞಾನ ಮತ್ತು ಆರ್ಥಿಕ ಕಾರ್ಯಸೂಚಿಯನ್ನು ರೂಪಿಸಲು ಸಮರ್ಥವಾಗಿದೆ’ ಎಂದರು.

‘ಜಗತ್ತಿನಲ್ಲಿ ಈಗ ನಾಲ್ಕನೇ ಕೈಗಾರಿಕಾ ಕ್ರಾಂತಿ ನಡೆಯುತ್ತಿದೆ. ಇದರಲ್ಲಿ ವೇಗದಿಂದ ಕೆಲಸ ಮಾಡುವ ಅಂತರ್ಜಾಲ ಲಭ್ಯತೆ ಮಹತ್ತರ ಪಾತ್ರ ವಹಿಸಲಿದೆ. ಆದರೆ, ಭಾರತದಲ್ಲಿ ಈಗಲೂ ಶೇ 50ರಷ್ಟು ಜನರಿಗೆ ಸರಿಯಾದ ಅಂತರ್ಜಾಲ ಸೌಲಭ್ಯ ಸಿಗುತ್ತಿಲ್ಲ. ಈ ಡಿಜಿಟಲ್ ಅಂತರ ಪರಿಹರಿಸುವುದಕ್ಕೆ ಆದ್ಯತೆ ಕೊಡಬೇಕು’ ಎಂದು ಅವರು ಹೇಳಿದರು.

‘ವಿಶ್ವ ಆರ್ಥಿಕ ವೇದಿಕೆಯು ಪ್ರಮುಖ ತಂತ್ರಜ್ಞಾನಗಳನ್ನೂ ದೂರ ಸಂಪರ್ಕ ಕಂಪನಿಗಳನ್ನೂ ಪರಸ್ಪರ ಹತ್ತಿರಕ್ಕೆ ತರುವುದಕ್ಕೆ ಒತ್ತು ನೀಡಿದೆ. ಈಗ ನಡೆಯುತ್ತಿರುವ ಕೈಗಾರಿಕಾ ಕ್ರಾಂತಿಯಿಂದಾಗಿ 2025ರ ಹೊತ್ತಿಗೆ 35 ದಶಲಕ್ಷ ಉದ್ಯೋಗಗಳು ಜಾಗತಿಕವಾಗಿ ಸೃಷ್ಟಿಯಾಗಲಿವೆ. ಈ ಸದವಕಾಶವನ್ನು ಭಾರತ ಕೈಚೆಲ್ಲಬಾರದು’ ಎಂದು ಪ್ರೊ. ಶ್ವಾಬ್ ನುಡಿದರು.

ಕೈಗಾರಿಕೆಗಳ ಉತ್ಪಾದನಾ ವಿಧಾನದಲ್ಲಿ ಕೂಡ ‘ಹಸಿರು ಕ್ರಾಂತಿ’ ಆಗಬೇಕಾಗಿದ್ದು, ಶೂನ್ಯ ಇಂಗಾಲದ ಗುರಿ ಅಳವಡಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ನಿರ್ಣಾಯಕ ಆವಿಷ್ಕಾರಗಳು ಆಗಬೇಕಾದ ತುರ್ತಿದೆ ಎಂದರು.

‘ಕೋವಿಡ್ ಸಾಂಕ್ರಾಮಿಕವು ಜಗತ್ತಿನ ದಿಕ್ಕಿದೆಸೆಯನ್ನೇ ಬದಲಿಸಿದ್ದು, ಭಾರತವು ಆರ್ಥಿಕ ಶಕ್ತಿಯಾಗಿ ಉಳಿಯಬೇಕಾದರೆ ದೇಶದ ಯುವಜನರಿಗೆ ಕೌಶಲಗಳನ್ನು ಸಮರೋಪಾದಿಯಲ್ಲಿ ಒದಗಿಸಿ, ಎಲ್ಲರನ್ನೂ ಉದ್ಯೋಗಕ್ಕೆ ಅರ್ಹರನ್ನಾಗಿ ಮಾಡಬೇಕು’ ಎಂದು ಮೈಕ್ರೋಸಾಫ್ಟ್ ಇಂಡಿಯಾದ ಅನಂತ್ ಮಹೇಶ್ವರಿ ಹೇಳಿದರು.

ಮುಂದಿನ ದಿನಗಳನ್ನು ಕ್ಲೌಡ್, ಡೇಟಾ ಮತ್ತು ಕೃತಕ ಬುದ್ಧಿಮತ್ತೆ, ಹೈಬ್ರಿಡ್ ಕಾರ್ಯವಿಧಾನ ಮತ್ತು ವಿಶ್ವಾಸಾರ್ಹ ತಂತ್ರಜ್ಞಾನಗಳೇ ಆವರಿಸಲಿವೆ ಎಂದರು.

ಲೇಖಕ ಚೇತನ್ ಭಗತ್ ಮಾತನಾಡಿ, ‘ನಮ್ಮ ಭಾಷೆಗಳು, ಹಬ್ಬಗಳು, ಆಹಾರ ಕ್ರಮಗಳು, ಸಂಸ್ಕೃತಿ, ಧರ್ಮ ನಮಗೆ ಬೇಕೆನ್ನುವುದು ನಿಜ. ಆದರೆ, ಕೃಷಿ ಕ್ಷೇತ್ರದ ಬೆಳವಣಿಗೆ, ಆರ್ಥಿಕತೆ, ವಾಣಿಜ್ಯ ವಹಿವಾಟು, ತಂತ್ರಜ್ಞಾನ ಮುಂತಾದವು ದೇಶದ ಬೆಳವಣಿಗೆಗೆ ಬೇಕೇಬೇಕು. ಇವೆರಡನ್ನೂ ಒಂದಕ್ಕೊಂದು ಬೆರೆಸಬಾರದು’ ಎಂದರು.

ಸವಾಲು ಎದುರಿಸಿ ಉದ್ಯಮ ಕಟ್ಟಿದ ಸಾಧಕಿಯರು!

ಬೆಂಗಳೂರು: ಉದ್ದಿಮೆಗಳನ್ನು ಸ್ಥಾಪಿಸುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದ್ದರೂ, ಶೇಕಡವಾರು ಮಹಿಳಾ ಉದ್ದಿಮೆದಾರರ ಸಂಖ್ಯೆ ಆಶಾದಾಯಕವಾಗಿಲ್ಲ ಎಂದು ಕ್ವೊಯಾ ಕ್ಯಾಪಿಟಲ್ ಇಂಡಿಯಾ ಮುಖ್ಯ ಸಾರ್ವಜನಿಕ ನೀತಿ ಅಧಿಕಾರಿ ಶ್ವೇತಾ ರಾಜ್ಪಾಲ್ ಕೊಹ್ಲಿ ಅಭಿಪ್ರಾಯಪಟ್ಟರು.

ಬೆಂಗಳೂರು ತಂತ್ರಜ್ಞಾನ ಶೃಂಗ-2021ರ ಕೊನೆಯ ದಿನವಾದ ಶುಕ್ರವಾರ ನಡೆದ ‘ಯಶಸ್ವಿ ಮಹಿಳಾ ಸಂಸ್ಥಾಪಕ ಉದ್ದಿಮೆದಾರರೊಂದಿಗೆ ಕಂಪನಿಗಳನ್ನು ಕಟ್ಟಿದ ಅನುಭವ’ ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಭಾರತದ ಸಾಮಾಜಿಕ ಸಂದರ್ಭದಲ್ಲಿ ಕುಟುಂಬದ ಎಲ್ಲ ಸದಸ್ಯರೂ ಒಂದಲ್ಲ ಒಂದು ಹಂತದಲ್ಲಿ ಹೆಣ್ಣು ಮಕ್ಕಳ ವಿಷಯದಲ್ಲಿ ಮೂಗು ತೂರಿಸುವುದು ಸಹಜ. ಇಂತಹ ಸನ್ನಿವೇಶಗಳನ್ನು ಜಾಣತನದಿಂದ ನಿವಾರಿಸಿಕೊಳ್ಳುವ ಸವಾಲಿದ್ದರೂ, ಲಭ್ಯವಿರುವ ತಜ್ಞತೆ ಮತ್ತು ತಾಂತ್ರಿಕ ಅವಕಾಶಗಳನ್ನು ಬಳಸಿಕೊಂಡು ಉದ್ದಿಮೆ ಸ್ಥಾಪಿಸಲು ಸೂಕ್ತ ವಾತಾವರಣವಿದೆ’ ಎಂದರು.

ಗೋಷ್ಠಿಯಲ್ಲಿ ಭಾಗವಹಿಸಿದ್ದ ಎಲ್ಲರದೂ ಒಂದೊಂದು ರೀತಿಯ ಸಾಹಸಗಾಥೆ. ಎಳೆಯ ಮಕ್ಕಳಿಗೆ ಸಮಯ ಕೊಡಬೇಕಾದ, ಅಪಘಾತಕ್ಕೀಡಾದ ಗಂಡನನ್ನು ನೋಡಿಕೊಳ್ಳಬೇಕಾದ, ಗರ್ಭಿಣಿಯಾಗಿದ್ದಾಗಲೇ ಹಣಕಾಸಿನ ನೆರವಿಗಾಗಿ ವಿಪರೀತ ಓಡಾಡಬೇಕಾಗಿ ಬಂದಿದ್ದರ ಜತೆಗೆ ಇತರ ಕೌಟುಂಬಿಕ ಅಗತ್ಯಗಳನ್ನು ನಿರ್ವಹಣೆ ಮಾಡುತ್ತಲೇ ತಮ್ಮ ಕಂಪನಿಗಳನ್ನು ಕಟ್ಟಿ ನಿಲ್ಲಿಸಿದ್ದರ ಬಗ್ಗೆ ಮಹಿಳಾ ಉದ್ಯಮಿಗಳು ಹೇಳಿಕೊಂಡರು.

ಫ್ಯಾಬ್ ಅಲಿ ಆ್ಯಂಡ್ ಇಂಡಿಯಾದ ಸಿಇಒ ಶಿವಾನಿ ಪೊತ್ದಾರ್, ನುಶೌರಾ ಸಂಸ್ಥಾಪಕಿ ಮತ್ತು ನಿರ್ದೇಶಕಿ ತನುಶ್ರೀ ಜೈನ್, ಬೇಸಿನ್‌ನ ಸಂಸ್ಥಾಪಕಿ ಹೆನಾ ಮೆಹ್ತಾ ಅವರು ತಮ್ಮ ಸಾಹಗಾಥೆಗಳನ್ನು ತೆರೆದಿಟ್ಟರು.

ಮಾಜಿ ಸದಸ್ಯ ಆತ್ಮಹತ್ಯೆ; ಎಂಟು ಮಂದಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಪಾಲಿಕೆಯ ಮಾಜಿ ಸದಸ್ಯರೂ ಆಗಿದ್ದ ಬಿಜೆಪಿ ಮುಖಂಡ ಎಂ.ಬಿ. ಶಿವಪ್ಪ (58) ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಸಂಬಂಧ, ಅವರ ಪತ್ನಿಯು ಚಂದ್ರಾ ಲೇಔಟ್ ಠಾಣೆಗೆ ದೂರು ನೀಡಿದ್ದಾರೆ.


ಎಂ.ಬಿ. ಶಿವಪ್ಪ

'ಅತ್ತಿಗುಪ್ಪೆಯ ಬಿಸಿಸಿ ಲೇಔಟ್‌ನಲ್ಲಿರುವ ಮನೆಯಲ್ಲಿ ಶಿವಪ್ಪ ಅವರು ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದರು. ‘ಪತಿ ಆತ್ಮಹತ್ಯೆಗೆ ಎಂಟು ಮಂದಿ ಪ್ರಚೋದನೆ ನೀಡಿದ್ದಾರೆ’ ಎಂದು ಆರೋಪಿಸಿ ಪತ್ನಿ ದೂರು ನೀಡಿದ್ದು, ಅದರನ್ವಯ ಕಾನೂನು ಕ್ರಮ ಕೈಗೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಗಳಾದ ವಿ. ಧನಂಜಯಗೌಡ, ಬಿ. ಅರುಣ್‌ಕುಮಾರ್, ಅಶೋಕ ಕುಮಾರ್, ಸುಮನ್ ಸೇನಾ ಕೋಟ್ಯಾನ್, ವೆಂಕಟ ರಮಣ ರೆಡ್ಡಿ, ಕಾಶಿನಾಥ್, ಮನೀಸ್ ಚಂದಕ್, ಗೋವಿಂದರಾಜು ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಅವರೆಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ’ ಎಂದೂ ತಿಳಿಸಿವೆ.

ವ್ಯವಹಾರದಲ್ಲಿ ಮೋಸ, ಬೆದರಿಕೆ: ‘ಶಿವಪ್ಪ ಅವರು 2005ರಲ್ಲಿ ಅತ್ತಿಗುಪ್ಪೆ ವಾರ್ಡ್‌ನಿಂದ ಪಾಲಿಕೆ ಚುನಾವಣೆಗೆ ಸ್ಪರ್ಧಿಸಿ ಗೆದ್ದಿದ್ದರು. ಅವರ ಆತ್ಮಹತ್ಯೆ ಹಲವು ಅನುಮಾನಗಳಿಗೆ ಕಾರಣವಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರಿಯಲ್ ಎಸ್ಟೇಟ್‌ನಲ್ಲಿ ಹಣ ಹೂಡಿಕೆ ಮಾಡುವಂತೆ ಆರೋಪಿಗಳು ಹೇಳಿದ್ದರು. ಅದನ್ನು ಶಿವಪ್ಪ ನಂಬಿದ್ದರು. ಅದನ್ನು ಬಂಡವಾಳ ಮಾಡಿಕೊಂಡ ಆರೋಪಿಗಳು, ಶಿವಪ್ಪ ಅವರ ಆಸ್ತಿಯನ್ನು ಮೋಸದಿಂದ ತಮ್ಮದಾಗಿಸಿಕೊಂಡಿದ್ದರು. ಇದನ್ನು ಪ್ರಶ್ನಿಸಿದ್ದಕ್ಕೆ ಶಿವಪ್ಪ ಹಾಗೂ ಅವರ ಮಗನ ವಿರುದ್ಧವೇ ಪ್ರಕರಣ ದಾಖಲಿಸಿದ್ದರು ಎನ್ನಲಾಗಿದೆ’.

‘₹ 4 ಕೋಟಿ ನೀಡುವಂತೆ ಬೇಡಿಕೆ ಇರಿಸಿದ್ದ ಆರೋಪಿಗಳು, ಹಣ ಕೊಡದಿದ್ದರೆ ಕುಟುಂಬದ ಮರ್ಯಾದೆ ತೆಗೆಯುವುದಾಗಿ, ಮಗನನ್ನು ಜೀವಂತ ಬಿಡುವುದಿಲ್ಲವೆಂದು ಬೆದರಿಸಿದ್ದರು. ಆತ್ಮಹತ್ಯೆ ಮಾಡಿಕೊಳ್ಳುವಂತೆ ಶಿವಪ್ಪ ಅವರಿಗೆ ಪ್ರಚೋದನೆ ನೀಡಿದ್ದರೆಂಬ ವಿಷಯವನ್ನೂ ದೂರಿನಲ್ಲಿ ಉಲ್ಲೇಖಿಸಲಾಗಿದೆ’ ಎಂದೂ ಮೂಲಗಳು ಹೇಳಿವೆ.

ನಕಲಿ ಕಾಗದ ಮಾರಾಟ ಜಾಲ ಪತ್ತೆ • ಐವರನ್ನು ಬಂಧಿಸಿದ ಎಸ್‌ಐಟಿ

₹ 63.57 ಲಕ್ಷ ಮುಖಬೆಲೆಯ ಛಾಪಾ ಕಾಗದ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಛಾಪಾ ಕಾಗದಗಳನ್ನು ತಯಾರಿಸಿ ಮಾರುತ್ತಿದ್ದ ಜಾಲವನ್ನು ಭೇದಿಸಿರುವ ಪೂರ್ವ ವಿಭಾಗದ ವಿಶೇಷ ತನಿಖಾ ತಂಡ (ಎಸ್‌ಐಟಿ), ಮಹಿಳೆ ಸೇರಿ ಐವರು ಆರೋಪಿಗಳನ್ನು ಬಂಧಿಸಿದೆ. ₹ 63.57 ಲಕ್ಷ ಮುಖಬೆಲೆಯ ನಕಲಿ ಛಾಪಾ ಕಾಗದಗಳನ್ನು ಜಪ್ತಿ ಮಾಡಿದೆ.

‘ನಕಲಿ ಛಾಪಾ ಕಾಗದ ಹಾಗೂ ಫ್ರಾಂಕಿಂಗ್ ಮಾಡದಿರುವ ಛಾಪಾ ಕಾಗದಗಳನ್ನು ಮಾರಾಟ ಮಾಡುತ್ತಿದ್ದ ಸಂಗತಿ ಅರ್ಜಿಯೊಂದರ ವಿಚಾರಣೆ ವೇಳೆ ಹೈಕೋರ್ಟ್ ಗಮನಕ್ಕೆ ಬಂದಿತ್ತು. ಹೈಕೋರ್ಟ್ ನೀಡಿದ್ದ ನಿರ್ದೇಶನದನ್ವಯ ಹಲಸೂರು ಗೇಟ್ ಹಾಗೂ ಎಚ್‌ಎಎಲ್ ಠಾಣೆಗಳಲ್ಲಿ ಮೂರು ಪ್ರಕರಣಗಳು ದಾಖಲಾಗಿದ್ದವು. ಪ್ರಕರಣ ಭೇದಿಸಲು ಪೂರ್ವ ವಿಭಾಗದ ಪೊಲೀಸರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿತ್ತು’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು.

‘ಎಸ್‌ಬಿಐ ಕಾಟನ್‌ಪೇಟೆ ಶಾಖೆ ಹೆಸರಿನ ಚಿಕ್ಕ ರೌಂಡ್ ಸೀಲ್, ರಬ್ಬರ್ ಸೀಲ್‌ಗಳು, ಸ್ಕ್ರೀನ್ ಪ್ರೀಟಿಂಗ್ ಯಂತ್ರ, ಭಾರತ ಸರ್ಕಾರ ಹೆಸರಿನ ಮುದ್ರೆಗಳು, 233 ಖಾಲಿ ಹಾಳೆಗಳನ್ನು ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿದರು.

ಆರೋಪಿಗಳಿಂದ ಜಪ್ತಿ ಮಾಡಲಾದ ನಕಲಿ ಛಾಪಾ ಕಾಗದಗಳನ್ನು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಪತ್ರಿಕಾಗೋಷ್ಠಿಯಲ್ಲಿ ಸುದ್ದಿಗಾರರಿಗೆ ತೋರಿಸಿದರು – ಪ್ರಜಾವಾಣಿ ಚಿತ್ರ



ಆರೋಪಿಗಳಿಂದ ಜಪ್ತಿ ಮಾಡಲಾದ ನಕಲಿ ಛಾಪಾ ಕಾಗದಗಳು

ಖರೀದಿ ಸೋಗಿನಲ್ಲಿ ಕಾರ್ಯಾಚರಣೆ: ‘ನಕಲಿ ಛಾಪಾ ಕಾಗದಗಳನ್ನು ನ್ಯಾಯಾಲಯದ ಆವರಣದಲ್ಲಿ 2005ರಿಂದಲೇ ಮಾರಲಾಗುತ್ತಿದ್ದ ಮಾಹಿತಿ ಇದೆ. ಹಳೇ ವರ್ಷದ ಛಾಪಾ ಕಾಗದಗಳು ಬೇಕೆಂದು ಹೇಳಿ ಗ್ರಾಹಕರ ಸೋಗಿನಲ್ಲಿ ಪೊಲೀಸ್ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದರು. ಹಣ ಪಡೆದಿದ್ದ ಆರೋಪಿ, ಕಾಗದ ನೀಡಿದ್ದ. ಕಾಗದ ಪರಿಶೀಲಿಸಿದಾಗ ನಕಲಿ ಎಂಬುದು ತಿಳಿಯಿತು’

‘ಪರಿಚಯಸ್ಥರಿಗೆ ₹ 3,000ರಿಂದ ₹ 5,000ರವರೆಗೆ ಹಾಗೂ ಅಪರಿಚಿತರಿಗೆ ₹ 5,000ರಿಂದ ₹10,000ರವರೆಗೆ ಛಾಪಾ ಕಾಗದಗಳನ್ನು ಮಾರುತ್ತಿದ್ದರು. ಕಾಗದದ ಮೇಲೆ ನಕಲಿ ಎಂಬೋಜಿಂಗ್ ಹಾಗೂ ಫ್ರಾಂಕಿಂಗ್ ಬಳಸುತ್ತಿದ್ದರು. ಮೈಸೂರು ಅರಸರ ಆಳ್ವಿಕೆ ಕಾಲದ ಛಾಪಾ ಕಾಗದಗಳನ್ನೂ ಆರೋಪಿಗಳು ಸೃಷ್ಟಿಸಿ ಮಾರಿದ್ದರು. ಸಿವಿಲ್ ವ್ಯಾಜ್ಯಗಳಲ್ಲಿ ಜಮೀನು ಕಬಳಿಸಿರುವ ಹಾಗೂ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿರುವ ಮಾಹಿತಿಯೂ ಇದೆ’ ಎಂದರು.

‘ಪೂರ್ವ ವಿಭಾಗದ ಡಿಸಿಪಿ ಶರಣಪ್ಪ ಹಾಗೂ ಎಸಿಪಿ ನಿಂಗಪ್ಪ ಸಕ್ರಿ ನೇತೃತ್ವದ ತಂಡಗಳು, ನಾಲ್ಕು ಕಡೆ ಇತ್ತೀಚೆಗೆ ದಾಳಿ ಮಾಡಿದ್ದವು. ಅಲ್ಲೆಲ್ಲ ಛಾಪಾ ಕಾಗದಗಳು ಹಾಗೂ ಅವುಗಳ ತಯಾರಿಕೆಗೆ ಬಳಸುವ ವಸ್ತುಗಳು ಸಿಕ್ಕಿವೆ’ ಎಂದು ಕಮಲ್ ಪಂತ್ ಹೇಳಿದರು.

ಬಂಧಿತರು

ವಿವೇಕನಗರದ ಹುಸೇನ್ ಮೋದಿ ಬಾಬು (58), ಬಾಪೂಜಿನಗರದ ಸೀಮಾ ಅಲಿಯಾಸ್ ಶಾವರ್ (45), ಶಾಮಣ್ಣ ನಗರದ ನಯಾಜ್ ಅಹಮ್ಮದ್ (45), ವಿಜಯನಗರದ ಶಬ್ಬೀರ್ ಅಹಮದ್ (38) ಹಾಗೂ ಬಸವೇಶ್ವರನಗರದ ಸಿ.ಎಸ್. ಹರೀಶ್ (55) ಬಂಧಿತರು.

ಇಂದಿರಾಗಾಂಧಿ ಭಾವಚಿತ್ರಕ್ಕೆ ಬಸವರಾಜ ಬೊಮ್ಮಾಯಿ ಪುಷ್ಪ ನಮನ ಸಲ್ಲಿಸಿದರು.

‘ಅಹಿಂಸೆ, ಮಾತುಕತೆ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗ’

ಬೆಂಗಳೂರು: ‘ಯಾವುದೇ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಸಮಸ್ಯೆಗಳನ್ನು ಅಹಿಂಸೆಯ ಮಾರ್ಗವನ್ನು ಬಿಡದೇ ಮಾತುಕತೆಯ ಮೂಲಕವೇ ಬಗೆಹರಿಸಿಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಷ್ಟ್ರೀಯ ಏಕತಾ ದಿನಾಚರಣೆ ಅಂಗವಾಗಿ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ಭಾವಚಿತ್ರಕ್ಕೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

‘ಭಾರತ ಹಲವು ಭಾಷೆಗಳು, ಸಂಸ್ಕೃತಿಗಳಿಂದ ಕೂಡಿರುವ ದೇಶ. ಒಗ್ಗಟ್ಟಾಗಿ, ಒಕ್ಕೂಟವಾಗಿ, ಸ್ವತಂತ್ರವಾಗಿ 75 ವರ್ಷಗಳ ಕಾಲ ಪ್ರಜಾಪ್ರಭುತ್ವವನ್ನು ಉಳಿಸಿಕೊಂಡು ಬಂದಿರುವುದು ಬಹಳ ದೊಡ್ಡ ಸಾಧನೆ. ನಾವು ನಂಬಿರುವ ಸತ್ಯ ಮತ್ತು ಅಹಿಂಸೆ ಮುಂದುವರಿಯಬೇಕು’ ಎಂದರು.

ಇಂದಿರಾಗಾಂಧಿ ಅವರ ಜನ್ಮದಿನದ ಅಂಗವಾಗಿ ಕೆಪಿಸಿಸಿ ವತಿಯಿಂದ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ಅವರು ಇಂದಿರಾಗಾಂಧಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಕಾಂಗ್ರೆಸ್ ಮುಖಂಡ ಕೆ.ಎಚ್.ಮುನಿಯಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಈಶ್ವರ ಖಂಡ್ರೆ ಹಾಗೂ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಹಾಗೂ ಇತರರು ಇದ್ದರು.

‘ಸಂಕಷ್ಟದಲ್ಲಿ ಜನ: ಶಂಖ ಊದುತ್ತಿರುವ ಬಿಜೆಪಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಹಾಮಳೆಯಿಂದ ಜನರು ಸಂಕಷ್ಟದಲ್ಲಿರುವಾಗ ಬಿಜೆಪಿ ಮುಖಂಡರು ಜನ ಸ್ವರಾಜ್ ಯಾತ್ರೆ ಹೆಸರಿನಲ್ಲಿ ಶಂಖ ಊದಿಕೊಂಡು ತಿರುಗುತ್ತಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿಯವರು ಎಂಥದ್ದೋ ಶಂಖ ಊದೋಕೆ ಹೋಗಿದ್ದಾರೆ. ಶಂಖ ಊದಿದರೆ ಜನರಿಗೆ ಸ್ವರಾಜ್ಯ ಬರುತ್ತಾ? ಯಾರ ಸ್ವರಾಜ್ಯಕ್ಕಾಗಿ ಈ ಯಾತ್ರೆ’ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಮಳೆಯಿಂದ ಏಳು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿ ಸಂಭವಿಸಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಫಿ ತೋಟಗಳು ಹಾಳಾಗಿವೆ. ಹಲವು ಜಿಲ್ಲೆಗಳಲ್ಲಿ ಭತ್ತದ ಬೆಳೆ ನೀರಿನಲ್ಲಿ ಮುಳುಗಿದೆ. ಜನರಿಗೆ ಪರಿಹಾರ ಒದಗಿಸಲು ತ್ವರಿತವಾಗಿ ಕೆಲಸ ಮಾಡಬೇಕಿದ್ದ ಸಚಿವರು ಶಂಖ ಊದಿಕೊಂಡು ಹೋದರೆ ಹೇಗೆ ಎಂದರು.

ಗೋವುಗಳ ಸಂರಕ್ಷಣೆಗೆ ಎಲ್ಲ ಕಡೆ ಗೋಶಾಲೆಗಳನ್ನು ತೆರೆಯುವುದಾಗಿ ಘೋಷಿಸಿತ್ತು. ಈಗ ₹ 25 ಕೋಟಿ ಒದಗಿಸುವುದಾಗಿ ಹೇಳುತ್ತಿದ್ದಾರೆ. ಗೋಶಾಲೆಗಳಿಗೆ ಅನುದಾನ ನೀಡುವುದಕ್ಕೂ ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಮೇವಿನ ಕೊರತೆ ಉಂಟಾಗಿದೆ ಎಂದರು.

‘ಕಾಂಗ್ರೆಸ್ ಬಿಜೆಪಿಯ ಸಿ ಟೀಂ’

‘ಮಂಡ್ಯ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ದಿನೇಶ್ ಗೂಳಿಗೌಡರಿಗೆ ಟಿಕೆಟ್ ನೀಡಿದೆ. ಇವರು ಹಿಂದೆ ಕಾಂಗ್ರೆಸ್‌ನ ಒಬ್ಬ ಸಚಿವರಿಗೆ ಸಹಾಯಕರಾಗಿದ್ದರು. ನಂತರ ಬಿಜೆಪಿಯ ಸಚಿವರ ಸಹಾಯಕರಾಗಿದ್ದರು. ಈಗ ಅವರನ್ನು ಕರೆದು ಕಾಂಗ್ರೆಸ್ ಟಿಕೆಟ್ ನೀಡಲಾಗಿದೆ. ಕಾಂಗ್ರೆಸ್ ಪಕ್ಷ ಬಿಜೆಪಿ ಸಿ ಟೀಂ ಆಗಿದೆಯೆ ಎಂಬುದನ್ನು ಅವರೇ ಹೇಳಬೇಕು’ ಎಂದು ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಆರರಿಂದ ಎಂಟು ಕ್ಷೇತ್ರಗಳಲ್ಲಿ ಜೆಡಿಎಸ್ ಸ್ಪರ್ಧಿಸಲಿದೆ. ಅಭ್ಯರ್ಥಿಗಳ ಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗುವುದು ಎಂದರು.

‘ಮಂಡಿಯೂರಿದ ಕೇಂದ್ರ: ಡಿಕೆಶಿ

ನವದೆಹಲಿ: ‘ರೈತ ವಿರೋಧಿ ಕಾಯ್ದೆ ವಿರೋಧಿಸಿ ಚಳಿ, ಮಳೆ, ಬಿಸಿಲೆನ್ನದೆ ಬೀದಿಗಿಳಿದು ಸುದೀರ್ಘ ಹೋರಾಟವನ್ನು ರೈತರ ನಡೆಸುತ್ತಿದ್ದು, ಅನ್ನದಾತರ ಮುಂದೆ ಕೊನೆಗೂ ಕೇಂದ್ರ ಸರ್ಕಾರ ಮಂಡಿಯೂರಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಅಧಿಕಾರ, ಪೊಲೀಸ್ ಬಲ ಬಳಸಿದ್ದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹೋರಾಟ ಹತ್ತಿಕ್ಕಲು ಮುಂದಾಗಿತ್ತು. ಇದಕ್ಕೆ ಬಗ್ಗದ ರೈತರು ದೇಶದ ಭವಿಷ್ಯದ ರಕ್ಷಣೆಗೆ ಬದ್ಧವಾಗಿ ನಿಂತರು. ಬಿಜೆಪಿ ನಾಯಕರಿಗೆ ಕೊನೆಗಾದರೂ ಜ್ಞಾನೋದಯವಾಗಿದೆ ಎಂದರು.

‘ಭವಿಷ್ಯದಲ್ಲೂ ರೈತರ ಬೆಂಬಲಕ್ಕೆ ಕಾಂಗ್ರೆಸ್’

ನವದೆಹಲಿ (ಪಿಟಿಐ): ಕೃಷಿ ಕಾಯ್ದೆಗಳಿಗೆ ಸಂಬಂಧಿಸಿ ‘ಚಾರಿತ್ರಿಕ ವಿಜಯ’ ಸಾಧಿಸಿದ ರೈತರಿಗೆ ಅಭಿನಂದನೆ ಸಲ್ಲಿಸಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಶುಕ್ರವಾರ ಪತ್ರಬರೆದಿದ್ದಾರೆ. ‘ಭವಿಷ್ಯದಲ್ಲಿಯೂ ಪಕ್ಷವು ರೈತರ ಬೆಂಬಲಕ್ಕೆ ನಿಲ್ಲಲಿದೆ’ ಎಂದು ಭರವಸೆ ನೀಡಿದ್ದಾರೆ.

‘ರೈತರು ತಮ್ಮದೇ ಭೂಮಿಯಲ್ಲಿ ಜೀತದಾಳುವಾಗಿಸಲು ಮತ್ತೆ ಯಾವುದೇ ಸಂಚು ನಡೆಸುವ ಧೈರ್ಯ ತೋರಬಾರದು. ಬದಲಿಗೆ 2022ರ ವೇಳೆಗೆ ಕೃಷಿಕರ ಆದಾಯ ದುಪ್ಪಟ್ಟುಗೊಳಿಸುವ ಭರವಸೆ ಈಡೇರಿಸಲು ಆದ್ಯತೆ ನೀಡಬೇಕು’ ಎಂದು ಪ್ರಧಾನಿಗೆ ಒತ್ತಾಯಿಸಿದ್ದಾರೆ.

ಶಾಸಕ ಅರವಿಂದ ಲಿಂಬಾವಳಿ ಹಾಗೂ ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ ಅವರು ವಿಶ್ವವಿದ್ಯಾಲಯದ ಸಿಬ್ಬಂದಿಗಾಗಿ ನಿರ್ಮಿಸಲಾಗುತ್ತಿರುವ ವಸತಿ ಸಮುಚ್ಚಯದ ಭೂಮಿ ಪೂಜೆ ನೆರವೇರಿಸಿದರು

ಸಿಎಂಆರ್: ಸಂಸ್ಥಾಪಕರ ದಿನಾಚರಣೆ

ಬೆಂಗಳೂರು: ‘ಸಿ.ಎಂ.ಆರ್.ಸಮೂಹ ಶಿಕ್ಷಣ ಸಂಸ್ಥೆಯು ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿದೆ. ದೇಶ, ವಿದೇಶದ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ವೇದಿಕೆ ಕಲ್ಪಿಸಿದೆ’ ಎಂದು ಶಾಸಕ ಅರವಿಂದ ಲಿಂಬಾವಳಿ ತಿಳಿಸಿದರು.

ಸಿ.ಎಂ.ಆರ್.ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗಾಗಿ ನಿರ್ಮಿಸಲಾಗಿರುವ ಕ್ಯಾಂಟೀನ್ ಉದ್ಘಾಟಿಸಿ ಮಾತನಾಡಿದರು.

ವಿಶ್ವವಿದ್ಯಾಲಯದ ಸಿಬ್ಬಂದಿಗಾಗಿ ನಿರ್ಮಿಸಲಾಗುತ್ತಿರುವ ವಸತಿ ಸಮುಚ್ಚಯಕ್ಕೆ ಭೂಮಿ ಪೂಜೆ ಕೂಡ ಮಾಡಲಾಯಿತು. ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದ 265 ಸಿಬ್ಬಂದಿಗೆ ಕಾರ್ಯಕ್ರಮದಲ್ಲಿ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರಾಜ್ಯಸಭಾ ಸದಸ್ಯ ಹಾಗೂ ಸಿ.ಎಂ.ಆರ್.ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ.ರಾಮಮೂರ್ತಿ, ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಜಾರಿಗೊಳಿಸಲು ಶಿಕ್ಷಣ ಸಂಸ್ಥೆ ಬದ್ಧವಾಗಿದೆ. ಆ ಮೂಲಕ ವಿದ್ಯಾರ್ಥಿಗಳಿಗೆ ಕೌಶಲಯುಕ್ತ ಶಿಕ್ಷಣ ನೀಡಲಾಗುತ್ತದೆ. ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯ ಸುರಕ್ಷತೆ ಹಾಗೂ ಹಿತಾಸಕ್ತಿ ರಕ್ಷಿಸಲೂ ಸಂಸ್ಥೆ ಒತ್ತು ನೀಡಲಿದೆ’ ಎಂದು ಹೇಳಿದರು.

ಕಸಾಪ ನಗರ ಜಿಲ್ಲೆ: 42 ಮತಗಟ್ಟೆಯಲ್ಲಿ ಮತದಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಇದೇ ಭಾನುವಾರ ಚುನಾವಣೆ ನಡೆಯಲಿದ್ದು, ಮತದಾನಕ್ಕೆ 42 ಮತಗಟ್ಟೆಗಳನ್ನು ಗುರುತಿಸಲಾಗಿದೆ.

ಈ ಬಾರಿ 36,491 ಮಂದಿ ಮತದಾನದ ಅರ್ಹತೆ ಹೊಂದಿದ್ದಾರೆ. ರಾಜ್ಯದಲ್ಲಿಯೇ ಗರಿಷ್ಠ ಮತದಾರರನ್ನು ಬೆಂಗಳೂರು ನಗರ ಜಿಲ್ಲಾ ಘಟಕ ಹೊಂದಿದೆ. ಇದೇ ಮೊದಲ ಬಾರಿಗೆ 28 ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದೆ. ಬೆಳಿಗ್ಗೆ 8ರಿಂದ ಸಂಜೆ 4 ಗಂಟೆಯವರೆಗೆ ಮತದಾನಕ್ಕೆ ಅವಕಾಶ ನೀಡಲಾಗಿದೆ. ಗೋವಿಂದರಾಜನಗರ ವಿಧಾನ ಸಭೆ ಕ್ಷೇತ್ರದಲ್ಲಿ ಗರಿಷ್ಠ (2,552) ಮತದಾರರು ಇದ್ದಾರೆ. ಯಶವಂತಪುರ, ರಾಜಾಜಿನಗರ, ಪದ್ಮನಾಭನಗರ ಹಾಗೂ ಜಯನಗರ ವಿಧಾನಸಭೆ ಕ್ಷೇತ್ರಗಳು 2 ಸಾವಿರಕ್ಕೂ ಅಧಿಕ ಮತದಾರರನ್ನು ಹೊಂದಿವೆ. ಪುಲಕೇಶಿನಗರದಲ್ಲಿ ಅತೀ ಕಡಿಮೆ (120) ಮತದಾರರು ಇದ್ದಾರೆ.

‘ಸಾರ್ವಜನಿಕ ಆಡಳಿತ’ ಸ್ನಾತಕೋತ್ತರ ಪದವಿ ಮಾಡಿದವರಿಗೂ ಅವಕಾಶ

ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಹುದ್ದೆ

ವರದಿ ಫಲಶ್ರುತಿ

ಬೆಂಗಳೂರು: ರಾಜ್ಯಶಾಸ್ತ್ರ ವಿಷಯದ ಸ್ನಾತಕೋತ್ತರ ಪದವಿಗೆ ಸಾರ್ವಜನಿಕ ಆಡಳಿತ ವಿಷಯದ ಸ್ನಾತಕೋತ್ತರ ಪದವಿ ತತ್ಸಮಾನ ಎಂದು ಪರಿಗಣಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಇದರಿಂದ, ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ರಾಜ್ಯಶಾಸ್ತ್ರ ವಿಷಯದ 98 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸಾರ್ವಜನಿಕ ಆಡಳಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಅರ್ಹತಾ ಪರೀಕ್ಷೆ (ನೆಟ್, ಕೆ-ಸೆಟ್) ಪಾಸಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಈ 98 ಹುದ್ದೆಗಳೂ ಸೇರಿ ಒಟ್ಟು 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅರ್ಜಿ ಆಹ್ವಾನಿಸಿದೆ.

ಸಾರ್ವಜನಿಕ ಆಡಳಿತ ವಿಷಯದ ಸ್ನಾತಕೋತ್ತರ ಪದವಿಗೆ ರಾಜ್ಯಶಾಸ್ತ್ರ ವಿಷಯದ ಸ್ನಾತಕೋತ್ತರ ಪದವಿ ತತ್ಸಮಾನ ಎಂದು ಈ ಹಿಂದೆಯೇ ಪರಿಗಣಿಸಿದ್ದ ರಾಜ್ಯ ಸರ್ಕಾರ, ರಾಜ್ಯಶಾಸ್ತ್ರ ವಿಷಯ ಓದಿದವರಿಗೆ ಸಾರ್ವಜನಿಕ ಆಡಳಿತ ವಿಷಯ ಸಹಾಯಕ ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಿತ್ತು. ಆದರೆ, ರಾಜ್ಯಶಾಸ್ತ್ರ ವಿಷಯಕ್ಕೆ ಸಾರ್ವಜನಿಕ ಆಡಳಿತ ವಿಷಯ ತತ್ಸಮಾನ ಎಂದು ಪರಿಗಣಿಸದ ಕಾರಣ, ರಾಜ್ಯಶಾಸ್ತ್ರ ವಿಷಯ ಹುದ್ದೆಗಳಿಗೆ ಸಾರ್ವಜನಿಕ ಆಡಳಿತ ವಿಷಯ ಓದಿದವರಿಗೆ ಅರ್ಜಿ ಸಲ್ಲಿಸಲು ಅವಕಾಶ ನಿರಾಕರಿಸಿತ್ತು.

ಈ ‘ತಾರತಮ್ಯ’ ನೀತಿಯಿಂದಾಗಿ ಸಾವಿರಾರು ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಅವಕಾಶದಿಂದ ವಂಚಿತರಾಗಿರುವ ಬಗ್ಗೆ ಇದೇ ನ. 4ರಂದು ‘ಪ್ರಜಾವಾಣಿ’ಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಈ ವರದಿಯ ಬಳಿಕ ಎಚ್ಚೆತ್ತುಕೊಂಡ ಉನ್ನತ ಶಿಕ್ಷಣ ಪರಿಷತ್ತಿನ ತಜ್ಞರ ಸಮಿತಿ, ರಾಜ್ಯಶಾಸ್ತ್ರ ವಿಷಯದ ಸ್ನಾತಕೋತ್ತರ ಪದವಿಗೆ ಸಾರ್ವಜನಿಕ ಆಡಳಿತ ವಿಷಯದ ಸ್ನಾತಕೋತ್ತರ ಪದವಿಯನ್ನು ತತ್ಸಮಾನ ಎಂದು ಪರಿಗಣಿಸಿದೆ. ಅದರಂತೆ ಉನ್ನತ ಶಿಕ್ಷಣ ಇಲಾಖೆ ಈ ಸಂಬಂಧ ಗೆಜೆಟ್ ಪ್ರಕಟಣೆ ಹೊರಡಿಸಿದೆ. ಅಲ್ಲದೆ, ಇನ್ನೂ ಕೆಲವು ವಿಷಯಗಳನ್ನು ತತ್ಸಮಾನ ವಿಷಯಗಳು ಎಂದು ಪರಿಗಣಿಸಿ ಸಮಿತಿ ಶಿಫಾರಸು ಮಾಡಿದೆ. ಅವರು ಆಯಾ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರು ಎಂದು ಗೆಜೆಟ್‌ನಲ್ಲಿ ತಿಳಿಸಲಾಗಿದೆ.

ಸಹಾಯಕ ಪ್ರಾಧ್ಯಾಪಕ ಹುದ್ದೆ	ಪರಿಗಣಿಸಿದ ತತ್ಸಮಾನ ವಿಷಯ
ರಾಜ್ಯಶಾಸ್ತ್ರ	ಎಂ.ಎ (ಸಾರ್ವಜನಿಕ ಆಡಳಿತ), ಎಂ.ಎ (ಇಂಟರ್‌ನ್ಯಾಷನಲ್ ರಿಲೇಷನ್ಸ್)
ಕಂಪ್ಯೂಟರ್ ವಿಜ್ಞಾನ	ಎಂ.ಇ, ಎಂ.ಟೆಕ್ (ಸಾಫ್ಟ್‌ವೇರ್ ಟೆಕ್ನಾಲಜಿ, ಎಂಜಿನಿಯರಿಂಗ್), ಎಂ.ಟೆಕ್ (ಕಂಪ್ಯೂಟರ್ ನೆಟ್‌ವರ್ಕ್ ಎಂಜಿನಿಯರಿಂಗ್)
ರಸಾಯನ ವಿಜ್ಞಾನ	ಎಂ.ಎಸ್ಸಿ 5 ವರ್ಷದ ಇಂಟೆಗ್ರೇಟೆಡ್ ರಸಾಯನವಿಜ್ಞಾನ
ಭೌತ ವಿಜ್ಞಾನ	ಎಂ.ಎಸ್ಸಿ 5 ವರ್ಷದ ಇಂಟೆಗ್ರೇಟೆಡ್ ಭೌತವಿಜ್ಞಾನ
ಎಲೆಕ್ಟ್ರಾನಿಕ್ಸ್	ಎಂ.ಟೆಕ್ (ಎಲೆಕ್ಟ್ರಾನಿಕ್ಸ್/ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ಸ್/ ಡಿಜಿಟಲ್ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ಸ್/ ಡಿಜಿಟಲ್ ಕಮ್ಯುನಿಕೇಷನ್ ಆ್ಯಂಡ್ ನೆಟವರ್ಕ್/ ಕಮ್ಯುನಿಕೇಷನ್ ಸಿಸ್ಟಂ)
ಸಸ್ಯವಿಜ್ಞಾನ	ಎಂ.ಎಸ್ಸಿ ಅನ್ವಯಿಕ ಸಸ್ಯವಿಜ್ಞಾನ
ಪ್ರಾಣಿವಿಜ್ಞಾನ	ಎಂ.ಎಸ್ಸಿ ಅನ್ವಯಿಕ ಪ್ರಾಣಿವಿಜ್ಞಾನ
ಅರ್ಥಶಾಸ್ತ್ರ	ಎಂ.ಎ ಅನ್ವಯಿಕ ಅರ್ಥಶಾಸ್ತ್ರ, ಎಂ.ಎಸ್ಸಿ (ಅಗ್ರಿಕಲ್ಚರಲ್ ಎಕನಾಮಿಕ್ಸ್)

ಕೋಡಿಗೇಹಳ್ಳಿ ಕೆಳ ಸೇತುವೆಯಲ್ಲಿ ಹರಿಯುತ್ತಿದ್ದ ನೀರಿನಲ್ಲೇ ಸೈಕಲ್ ಓಡಿಸಲು ಹೋಗಿ ಬಾಲಕನೊಬ್ಬ ಆಯತಪ್ಪಿ ಬಿದ್ದಿದ್ದ (ಚಿತ್ರ:1) ಟಿ.ದಾಸರಹಳ್ಳಿ ಬಳಿಯ ಮಲ್ಲಸಂದ್ರ ಕೆರೆಯ ಕೋಡಿ ಒಡೆದು ನೀರು ಹೊರಬಂದಿದ್ದ ಜಾಗವನ್ನು ಬಿಬಿಎಂಪಿ ಅಧಿಕಾರಿಗಳು ಪರಿಶೀಲಿಸಿದರು (ಚಿತ್ರ:2) ಯಲಹಂಕದ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಸಮುಚ್ಚಯದ ಪಾರ್ಕಿಂಗ್ ಜಾಗದಲ್ಲಿ ನೀರು ತುಂಬಿಕೊಂಡಿತ್ತು (ಚಿತ್ರ:3) ರಾಮಮೂರ್ತಿನಗರದ ಅಕ್ಷಯನಗರದಲ್ಲಿ ಧರೆಗುರುಳಿರುವ ಮರ ಹಾಗೂ ವಿದ್ಯುತ್ ಕಂಬ (ಚಿತ್ರ:4) –ಪ್ರಜಾವಾಣಿ ಚಿತ್ರಗಳು

ನಗರದಲ್ಲಿ ರಾತ್ರಿಯಿಡೀ ಮಳೆ ● ಉರುಳಿಬಿದ್ದ ಮರಗಳು ● ಕೆರೆ ಕೋಡಿ ಬಿದ್ದ ಸ್ಥಳಕ್ಕೆ ಬಿಬಿಎಂಪಿ ಅಧಿಕಾರಿಗಳು, ಶಾಸಕ ಭೇಟಿ

ಕೋಡಿ ಒಡೆದ ಮಲ್ಲಸಂದ್ರ ಕೆರೆ: ಮನೆಗಳಿಗೆ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲ ದಿನಗಳಿಂದ ವರುಣನ ಆರ್ಭಟ ಜೋರಾಗಿದ್ದು, ಬಹುತೇಕ ಕಡೆ ಗುರುವಾರ ರಾತ್ರಿಯಿಡೀ ಧಾರಾಕಾರವಾಗಿ ಮಳೆ ಸುರಿಯಿತು. ಮಲ್ಲಸಂದ್ರ ಕೆರೆಯ ಕೋಡಿ ಒಡೆದಿದ್ದರಿಂದ, ಅಕ್ಕ-ಪಕ್ಕದ ಮನೆಗಳಿಗೆ ನೀರು ನುಗ್ಗಿತು.

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿರುವುದರಿಂದ ರಾಜ್ಯದಲ್ಲೂ ಹಲವು ದಿನಗಳಿಂದ ಉತ್ತಮ ಮಳೆ ಸುರಿಯುತ್ತಿದೆ. ರಾಜಧಾನಿಯಲ್ಲಿ ಬಿಸಿಲು ಕಣ್ಮರೆಯಾಗಿದೆ.

ಗುರುವಾರ ಬೆಳಿಗ್ಗೆಯಿಂದಲೇ ಬಿಡುವು ನೀಡದೇ ಮಳೆ ಸುರಿಯಿತು. ರಾತ್ರಿಯೂ ಮಳೆ ಆರ್ಭಟ ಜೋರಾಗಿತ್ತು. ಶುಕ್ರವಾರ ನಸುಕಿನವರೆಗೂ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಹಲವೆಡೆ ಹಾನಿ ಸಂಭವಿಸಿದೆ.

ಟಿ. ದಾಸರಹಳ್ಳಿ ಬಳಿಯ ಮಲ್ಲಸಂದ್ರ ಕೆರೆಯಲ್ಲಿ ನಿಗದಿಗಿಂತ ಹೆಚ್ಚಿನ ಪ್ರಮಾಣದಲ್ಲಿ ನೀರು ಸಂಗ್ರಹವಾಗಿದ್ದರಿಂದ, ಶುಕ್ರವಾರ ನಸುಕಿನ 3.30ರ ಸುಮಾರಿಗೆ ಕೋಡಿ ಒಡೆಯಿತು. ನೀರು ಹರಿದುಹೋಗಲು ಸೂಕ್ತ ಕಾಲುವೆ ವ್ಯವಸ್ಥೆ ಇಲ್ಲದಿದ್ದರಿಂದ, ಅದೇ ನೀರು ಕೆರೆಯ ಅಕ್ಕ- ಪಕ್ಕದ ಐದು ಮನೆಗಳಿಗೆ ನುಗ್ಗಿತ್ತು.

‘ಪ್ರತಿ ಮನೆಯಲ್ಲೂ ಮೂರು ಅಡಿಯಷ್ಟು ನೀರು ನಿಂತಿತ್ತು. ನಿದ್ದೆಗೆ ಜಾರಿದ್ದ ನಿವಾಸಿಗಳು, ತಂಪಿನ ಅನುಭವವಾಗಿ ಎಚ್ಚರಗೊಂಡಿದ್ದರು. ನೀರು ನೋಡಿ ಗಾಬರಿಗೊಂಡು, ಚೀರಾಡಲಾರಂಭಿಸಿದ್ದರು’ ಎಂದು ಸ್ಥಳೀಯ ನಿವಾಸಿಯೊಬ್ಬರು ಹೇಳಿದರು.

‘ಕೆರೆಗೆ ಹೊಂದಿಕೊಂಡಿರುವ ರಸ್ತೆಗಳು ಹಾಗೂ ಉಪ ರಸ್ತೆಗಳಲ್ಲೂ ನೀರು ಧಾರಾಕಾರವಾಗಿ ಹರಿದು ಹೋಯಿತು. ಒಳಚರಂಡಿ ಮೂಲಕವೂ ನೀರು ಮನೆಯೊಳಗೆ ನುಗ್ಗಿತ್ತು. ನೀರಿನ ಸಂಪುಗಳು ಸಹ ತುಂಬಿ ಹರಿದವು. ಎಲೆಕ್ಟ್ರಾನಿಕ್ ವಸ್ತುಗಳು, ಪೀಠೋಪಕರಣಗಳು ಹಾಗೂ ಕೆಲ ದ್ವಿಚಕ್ರ ವಾಹನಗಳು ನೀರಿನಲ್ಲಿ ತೇಲಿ ಹೋದವು. ನೀರಿನ ಜೊತೆಯಲ್ಲಿ ತ್ಯಾಜ್ಯ ಸಹ ಮನೆಯೊಳಗೆ ಹೋಗಿದ್ದರಿಂದ ದುರ್ನಾತ ಬರುತ್ತಿತ್ತು’ ಎಂದೂ ಅವರು ತಿಳಿಸಿದರು.

‘ನಿರಂತರವಾಗಿ ನೀರು ಹರಿದಿದ್ದರಿಂದ ಒಳ ಚರಂಡಿ ವ್ಯವಸ್ಥೆಯೇ ಹಾಳಾಗಿದೆ. ರಸ್ತೆ ಹಾಗೂ ಕಾಲುವೆಗಳ ಕಾಂಕ್ರೀಟ್ ಕಿತ್ತು ಹೋಗಿದೆ. ರಸ್ತೆ ಪೊಳ್ಳಾಗಿದ್ದು, ದೊಡ್ಡ ಗಾತ್ರದ ಗುಂಡಿಗಳು ಬಿದ್ದಿವೆ. ರಸ್ತೆಯಲ್ಲಿ ಸಂಚರಿಸಲು ಭಯವಾಗುತ್ತಿದೆ’ ಎಂದೂ ನಿವಾಸಿ ಹೇಳಿದರು.

ಬಿಬಿಎಂಪಿ ಅಧಿಕಾರಿಗಳ ಭೇಟಿ: ಮಲ್ಲಸಂದ್ರ ಕೆರೆ ಕೋಡಿ ಬಿದ್ದ ಸ್ಥಳಕ್ಕೆ ಬಿಬಿಎಂಪಿ ಅಧಿಕಾರಿಗಳು ಹಾಗೂ ಸ್ಥಳೀಯ ಶಾಸಕ ಆರ್. ಮಂಜುನಾಥ್ ಭೇಟಿ ನೀಡಿ ಪರಿಶೀಲಿಸಿದರು.

‘ಕೆರೆಗೆ ಹೊಂದಿಕೊಂಡಿರುವ ಜಾಗದಲ್ಲಿ ‘ಡಿಆರ್‌ಎಲ್‌ಎಸ್ ಪ್ಯಾಲೇಸ್’ ಕಲ್ಯಾಣ ಮಂಟಪದ ಕಾಂಪೌಂಡ್ ಇದೆ. ಕೆರೆ ಕೋಡಿ ಒಡೆದರೆ, ನೀರು ಹರಿದು ಹೋಗಲು ನೈಸರ್ಗಿಕ ಕಾಲುವೆ ಇತ್ತು. ಅದೇ ಕಾಲುವೆ ಮೂಲಕ ನೀರು ರಾಜಕಾಲುವೆ ಸೇರುತ್ತಿತ್ತು. ಆದರೆ, ಕಾಂಪೌಂಡ್ ನಿರ್ಮಿಸಿ ಕಾಲುವೆಯ ದಿಕ್ಕು ತಪ್ಪಿಸಲಾಗಿದೆ. ಇದೇ ಕಾರಣಕ್ಕೆ ಕೆರೆಯ ನೀರು, ಕಾಂಪೌಂಡ್ ಜಾಗದಲ್ಲಿ ಹರಿದು ಮನೆಗಳಿಗೆ ನುಗ್ಗಿದೆ. ಕಾಂಪೌಂಡ್ ಸಹಿತ ಕುಸಿದು ಬಿದ್ದಿದೆ’ ಎಂದು ಬಿಬಿಎಂಪಿ ಜಂಟಿ ಆಯುಕ್ತ ನರಸಿಂಹ ಮೂರ್ತಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಲ್ಯಾಣ ಮಂಟಪದವರು, ತಮ್ಮ ಜಾಗದ ಕೊನೆಯಲ್ಲಿ ಕಾಂಪೌಂಡ್ ನಿರ್ಮಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಕೆರೆ ನೀರು ಹರಿದುಹೋಗುವುದು ನೈಸರ್ಗಿಕ ಪ್ರಕ್ರಿಯೆ. ಇದಕ್ಕೆ ಯಾರೂಬ್ಬರೂ ಅಡ್ಡಿಪಡಿಸಬಾರದು. ಕೆರೆ ನೀರು ಸರಾಗವಾಗಿ ಹರಿದು ಹೋಗಲು ಸದ್ಯಕ್ಕೆ ತಾತ್ಕಾಲಿಕ ಕಾಲುವೆ ನಿರ್ಮಿಸಲಾಗಿದೆ. ಕೆರೆ ಜಾಗವನ್ನು ಸರ್ವೆ ಮಾಡಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದೂ ಹೇಳಿದರು.

ಹಲಸೂರಿನ ಲಿಡೋ ಮಾಲ್ ಬಳಿಯ ಮಿಲ್ಕ್ ಮ್ಯಾನ್ ಸ್ಟ್ರೀಟ್‌ನಲ್ಲಿದ್ದ ಕಟ್ಟಡ ಕುಸಿದಿರುವುದು – ಪ್ರಜಾವಾಣಿ ಚಿತ್ರ / ಎಸ್.ಕೆ. ದಿನೇಶ್

‘14.20 ಸೆಂ.ಮೀ ಮಳೆ ದಾಖಲು’

‘ಮಹದೇವಪುರ ವಲಯದ ಹಗದೂರು ಸುತ್ತಮುತ್ತ ಗುರುವಾರ ಬೆಳಿಗ್ಗೆಯಿಂದ ಶುಕ್ರವಾರ ನಸುಕಿನವರೆಗೆ 14.20 ಸೆಂ.ಮೀ ಮಳೆಯಾಗಿದ್ದು, ಇದು ನಗರದ ಅತ್ಯಧಿಕ ಮಳೆ ಪ್ರಮಾಣವಾಗಿದೆ’ ಎಂದು ಬಿಬಿಎಂಪಿ ತಿಳಿಸಿದೆ.

‘ವರ್ತೂರು ಹಾಗೂ ದೊಡ್ಡನೆಕ್ಕುಂದಿ ಭಾಗದಲ್ಲಿ 10.40 ಸೆಂ.ಮೀ, ಎಚ್‌ಎಎಲ್ ಏರ್‌ಪೋರ್ಟ್‌ನಲ್ಲಿ 9.75 ಸೆಂ.ಮೀ ಮಳೆ ಸುರಿದಿದೆ’ ಎಂದೂ ಹೇಳಿದೆ.

ಮಳೆಗೆ ಬಿದ್ದ ಮನೆ

ದಾಬಸ್ ಪೇಟೆ: ಗುರುವಾರ ರಾತ್ರಿ ಸುರಿದ ಜೋರು ಮಳೆಯಿಂದ ಸೋಂಪುರ ಹೋಬಳಿಯ ಇಮಚೇನಹಳ್ಳಿ ಪಾಳ್ಯ ಗ್ರಾಮದ ಸಿದ್ದಯ್ಯ ಅವರ ಮನೆ ಚಾವಣಿ ಕುಸಿದಿದೆ.

ಇದೇ ಮನೆಯಲ್ಲಿ ಸಿದ್ದಯ್ಯ ಅವರ ಹೆಂಡತಿ ಮತ್ತು ಮಗ ವಾಸಿಸುತ್ತಿದ್ದರು. ‘ರಾತ್ರಿ ಮಲಗಿದ್ದ ಸಮಯದಲ್ಲಿ ಒಂದು ಬದಿಯ ಗೋಡೆ ಮತ್ತು ಚಾವಣಿ ಕುಸಿಯಿತು. ಆಗ ಎಚ್ಚರಗೊಂಡು ಮೂವರು ಮನೆಯಿಂದ ಹೊರಬಂದೆವು’ ಎಂದು ಸಿದ್ದಯ್ಯ ತಿಳಿಸಿದರು. ಬೇರೆ ಮನೆ ಇಲ್ಲದ್ದರಿಂದ ಸದ್ಯಕ್ಕೆ ಜೀವ ಭಯದಲ್ಲಿ ಅದೇ ಮನೆಯಲ್ಲಿ ಇರಬೇಕು ಎಂದು ಅಳಲು ತೋಡಿಕೊಂಡರು ಸಿದ್ದಯ್ಯ.

ಹೊಳೆಯಂತಾದ ರಸ್ತೆಗಳು

ಧಾರಾಕಾರ ಮಳೆಯಿಂದಾಗಿ ನಗರದ ಬಹುತೇಕ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ಆರ್.ಟಿ.ನಗರ ಹಾಗೂ ಟ್ರಿನಿಟಿ ವೃತ್ತದಲ್ಲಿ ತಲಾ ಒಂದೊಂದು ಮರಗಳು ಬಿದ್ದಿದ್ದವು.

ಛಲವಾದಿಪಾಳ್ಯದ 4ನೇ ಅಡ್ಡರಸ್ತೆಯಲ್ಲಿ ನೀರು ಧಾರಾಕಾರವಾಗಿ ಹರಿದು, ಅಕ್ಕ-ಪಕ್ಕದ ಮನೆಗಳಿಗೂ ನುಗ್ಗಿತ್ತು. ಒಂದು ಅಡಿಯಷ್ಟು ನೀರು ನಿಂತಿತ್ತು. ನಿವಾಸಿಗಳು, ನೀರು ಹೊರಹಾಕುವುದರಲ್ಲೇ ರಾತ್ರಿ ಕಳೆದರು.

ನಂದಿನಿ ಲೇಔಟ್‌ನ ಕಂಠೀರವ ನಗರದಲ್ಲಿ ಮನೆಯೊಂದರ ಗೋಡೆ ಕುಸಿತು ಬಿದ್ದಿತ್ತು.

ಮಹದೇವಪುರ ವಲಯದಲ್ಲೂ ಉತ್ತಮ ಮಳೆಯಾಗಿದೆ. ಬಸವಪುರ ಮುಖ್ಯರಸ್ತೆಯ 9ನೇ ಅಡ್ಡರಸ್ತೆ, ಸೀಗೇಹಳ್ಳಿ ವೃತ್ತ, ಹೊರಮಾವು ಸಾಯಿಬಾಬಾ ದೇವಸ್ಥಾನ, ಟಿ.ಸಿ.ಪಾಳ್ಯ ಮುಖ್ಯ ರಸ್ತೆಯಿಂದ ಅಯ್ಯಪ್ಪ ವೃತ್ತ, ನ್ಯೂ ಹಾರಿಜನ್ ಕಾಲೇಜು ರಸ್ತೆ, ಕಗ್ಗದಾಸಪುರದ ವಿಜ್ಞಾನನಗರ, ಅನ್ನಸಂದ್ರಪಾಳ್ಯದ ಅಪೇಕ್ಷಾ ಆಸ್ಪತ್ರೆ ರಸ್ತೆ, ಬೆಳ್ಳಂದೂರಿನ ಮಾರುತಿ ಗಾರ್ಡನ್ ರಸ್ತೆಯಲ್ಲಿ ನೀರು ಹೊಳೆಯಂತೆ ಹರಿಯಿತು.

ಯಲಹಂಕ ವಲಯ ವ್ಯಾಪ್ತಿಯ ತಿಂಡ್ಲು ಮುಖ್ಯರಸ್ತೆಯ ವಿಎಂಎಸ್ ಗಾರ್ಡನ್, ನಂಜಪ್ಪ ವೃತ್ತ, ಹೆಬ್ಬಾಳ ಮಾರಪ್ಪನಪಾಳ್ಯದ ಸೈನಿಕ ಶಾಲೆ, ಸಾರಾಯಿ ಪಾಳ್ಯದ 4ನೇ ಅಡ್ಡರಸ್ತೆಯಲ್ಲೂ ನೀರು ಧಾರಾಕಾರವಾಗಿ ಹರಿಯಿತು. ವಿದ್ಯಾರಣ್ಯಪುರದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಪಾರ್ಕಿಂಗ್ ಜಾಗಕ್ಕೂ ನೀರು ನುಗ್ಗಿತ್ತು. ನೀರಿನಲ್ಲೇ ವಾಹನಗಳು ಮುಳುಗಿದ್ದವು.

ಬೊಮ್ಮನಹಳ್ಳಿ ವಲಯದಲ್ಲೂ ಹೆಚ್ಚು ಮಳೆ ಆಗಿದೆ. ಅನುಗ್ರಹ ಲೇಔಟ್‌ನ 3ನೇ ಅಡ್ಡರಸ್ತೆ, ಕುಡ್ಲು ಸೋಮೇಶ್ವರ ದೇವಸ್ಥಾನ ಬಳಿಯ 2ನೇ ಅಡ್ಡರಸ್ತೆ, ಲೇಕ್ ವ್ಹೀವ್ ಸಿಟಿ, ಜನಾರ್ದನ್ ಬೇಕರಿ ರಸ್ತೆ ಹಾಗೂ ಸುತ್ತಮುತ್ತ ಪ್ರದೇಶಗಳ ರಸ್ತೆಗಳಲ್ಲಿ ನೀರು ಹರಿಯಿತು. ಅಕ್ಕ-ಪಕ್ಕದ ಮನೆಗಳಿಗೂ ನೀರು ನುಗ್ಗಿದ್ದ ಘಟನೆಗಳು ವರದಿಯಾಗಿವೆ.

ಯಲಹಂಕದ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೂ ನೀರು ನುಗ್ಗಿತ್ತು. ಪಾರ್ಕಿಂಗ್ ಜಾಗ ಹಾಗೂ ಮೈದಾನ ಪ್ರದೇಶದಲ್ಲಿ ಮೂರು ಅಡಿಯಷ್ಟು ನೀರು ನಿಂತಿದ್ದು, ಅದರಲ್ಲೇ ನಿವಾಸಿಗಳು ಸಂಚರಿಸಿದರು.

ಬೆಂಗಳೂರಿನಲ್ಲಿ ಸುರಿದ ಮಳೆ ಪ್ರಮಾಣ

(ನ.18ರ ರಾತ್ರಿ 8 ಗಂಟೆಯಿಂದ ನ. 19ರ ಬೆಳಿಗ್ಗೆ 8 ಗಂಟೆಯವರೆಗೆ)



ಸಾಧಾರಣ ಮಳೆ (1.56 ಸೆಂ.ಮೀ–6.44 ಸೆಂ.ಮೀ)

- ಬ್ಯಾಟರಾಯನಪುರ
- ಕೊಡಿಗೇಹಳ್ಳಿ
- ದೊಡ್ಡಬೊಮ್ಮಸಂದ್ರ
- ಎಚ್‌ಎಂಟಿ ವಾರ್ಡ್
- ಪೀಣ್ಯ ಕೈಗಾರಿಕಾ ಪ್ರದೇಶ
- ಹೇರೋಹಳ್ಳಿ
- ರಾಜಾಜಿನಗರ
- ಅಗ್ರಹಾರ ದಾಸರಹಳ್ಳಿ
- ಕಾಟನ್‌ಪೇಟೆ
- ನಾಗರಬಾವಿ
- ಚಾಮರಾಜಪೇಟೆ
- ಜ್ಞಾನಭಾರತಿ
- ನಾಯಂಡನಹಳ್ಳಿ
- ರಾಜರಾಜೇಶ್ವರಿನಗರ
- ಕೋರಮಂಗಲ
- ವನ್ನಾರಪೇಟೆ
- ಸಾರಕ್ಕಿ
- ಹೆಮ್ಮಿಗೆಪುರ
- ಅಂಜನಾಪುರ
- ಬೇಗೂರು
- ಸಿಂಗಸಂದ್ರ
- ಬಿಟಿಎಂ ಲೇಔಟ್
- ಹೊರಮಾವು
- ಬೆನ್ನಿಗಾನಹಳ್ಳಿ

ಜೋರು ಮಳೆ (6.45 ಸೆಂ.ಮೀ–11.55 ಸೆಂ.ಮೀ)

- ಕೆಂಗೇರಿ
- ಅಟ್ಟೂರು
- ಯಲಹಂಕ
- ಜಕ್ಕೂರು
- ಬಾಣಸವಾಡಿ
- ಪುಲಿಕೇಶಿನಗರ
- ಎಚ್‌ಎಎಲ್ ಏರ್‌ಪೋರ್ಟ್
- ಗೊಟ್ಟಿಗೆರೆ
- ವಿದ್ಯಾಪೀಠ

ಕುಸಿಯಿತು 58 ವರ್ಷದ ಕಟ್ಟಡ

ನಿರಂತರ ಮಳೆಯಿಂದ ಶಿಥಿಲಗೊಂಡ 58 ವರ್ಷ ಹಳೇ ಕಟ್ಟಡ ಕುಸಿದು ಬಿದ್ದಿದ್ದು, ಸ್ಥಳಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಭೇಟಿ ನೀಡಿ ಪರಿಶೀಲಿಸಿದರು.

ಹಲಸೂರಿನ ಲಿಡೊ ಮಾಲ್ ಬಳಿಯ ಮಿಲ್ಕ್ ಮ್ಯಾನ್ ಸ್ಟ್ರೀಟ್‌ನಲ್ಲಿದ್ದ ಕಟ್ಟಡದ ಮಣ್ಣು, ಗುರುವಾರ ಬೆಳಿಗ್ಗೆ ಕ್ರಮೇಣ ಕುಸಿಯಲಾರಂಭಿಸಿತ್ತು. ಅದನ್ನು ಗಮನಿಸಿದ್ದ ಮಾಲೀಕ ಶಂಕರ್ ಕುಟುಂಬ, ಕಟ್ಟಡದ ಹಿಂಭಾಗದಲ್ಲಿದ್ದ ಮತ್ತೊಂದು ಮನೆಯಲ್ಲಿ ವಾಸವಿದ್ದರು. ಗುರುವಾರ ರಾತ್ರಿ ಇಡೀ ಕಟ್ಟಡ ಕುಸಿದು ಬಿದ್ದಿದೆ.

ಮನೆಯಲ್ಲಿದ್ದ ಆಹಾರ ಪದಾರ್ಥಗಳು, ಎಲೆಕ್ಟ್ರಾನಿಕ್ ವಸ್ತುಗಳು ಹಾಗೂ ಪೀಠೋಪಕರಣಗಳು ಅವಶೇಷಗಳಡಿ ಸಿಲುಕಿದ್ದವು. ಕಟ್ಟಡದ ಪಕ್ಕದಲ್ಲಿ ನಿಲ್ಲಿಸಿದ್ದ ಮೂರು ದ್ವಿಚಕ್ರ ವಾಹನಗಳು ಜಖಂಗೊಂಡಿವೆ. ಕುಸಿದ ಕಟ್ಟಡದ ಅಕ್ಕ- ಪಕ್ಕದ ಎರಡು ಮನೆಗಳಿಗೂ ಹಾನಿ ಆಗಿದೆ. ಆ ಮನೆಗಳೂ ಕುಸಿಯುವ ಹಂತದಲ್ಲಿದ್ದು, ಅವುಗಳ ತೆರವಿಗೆ ಗೌರವ್ ಗುಪ್ತ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಗೌರವ್ ಗುಪ್ತ, ‘ಮಣ್ಣು ಹಾಗೂ ಇಟ್ಟಿಗೆಯಿಂದ ಕಟ್ಟಡ ನಿರ್ಮಿಸಲಾಗಿತ್ತು. ನೆಲ ಮಹಡಿ ಮತ್ತು ಮೊದಲ ಮಹಡಿ ಹೊಂದಿದ್ದ ಕಟ್ಟಡ ಕುಸಿಯುವ ಬಗ್ಗೆ ಈ ಹಿಂದೆಯೇ ಎಚ್ಚರಿಕೆ ನೀಡಿ ಮಾಲೀಕರಿಗೆ ನೋಟಿಸ್ ನೀಡಲಾಗಿತ್ತು’ ಎಂದರು.

ಚೊಕ್ಕಸಂದ್ರದಲ್ಲೂ ಮನೆಯ ಚಾವಣಿ ಕಿತ್ತು ಬಿದ್ದು ಹಾನಿಯಾಗಿರುವುದು ವರದಿಯಾಗಿದೆ.

ವಿದ್ಯಾರ್ಥಿನಿಯರ ಮೇಲೆ ಹಲ್ಲೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಶನಿವಾರಸಂತೆ (ಕೊಡಗು): ಇಲ್ಲಿನ ಸೆಕ್ರೇಡ್ ಹಾರ್ಟ್ ವಿದ್ಯಾಸಂಸ್ಥೆಯ ಪಿಯು ಕಾಲೇಜಿಗೆ ಹೋಗಿ ವಾಪಸ್ ಬರುತ್ತಿದ್ದ ಇಬ್ಬರು ವಿದ್ಯಾರ್ಥಿನಿಯರ ಮೇಲೆ ಪುಂಡರ ಗುಂಪೊಂದು ಹಲ್ಲೆ ನಡೆಸಿದ್ದು, ಆರೋಪಿಗಳಾದ ಕೌಶಿಕ್ ಹಾಗೂ ಪ್ರಜ್ವಲ್‌ರನ್ನು ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ. ಪರಿಸ್ಥಿತಿ ಸೂಕ್ಷ್ಮವಾಗಿದ್ದು, ಆಯ ಕಟ್ಟಿನ ಪ್ರದೇಶದಲ್ಲಿ ಪೊಲೀಸ್ ಬಂದೋಬಸ್ತ್ ಹೆಚ್ಚಿಸಲಾಗಿದೆ.

‘ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ಬಸ್‌ಗಾಗಿ ಕಾಯುತ್ತಿದ್ದ ಅನ್ವ ರಿಯಾಜ್ ಹಾಗೂ ಜುಲೈಕಾ ನಾಫಿಯಾ ಅವರ ಮೇಲೆ ಹಲ್ಲೆ ನಡೆದಿದೆ’ ಎಂದು ಆರೋಪಿಸಿ, ಪೋಷಕರಾದ ಕೊಡ್ಲಿಪೇಟೆಯ ಎಂ.ಎಸ್. ರಿಯಾಜ್ ಪಾಶ, ಬ್ಯಾಡಗೊಟ್ಟದ ಅಬೂಬಕ್ಕರ್ ಶನಿವಾರಸಂತೆ ಠಾಣೆಗೆ ದೂರು ನೀಡಿದ್ದಾರೆ. ‘ಮದನ್ ಮತ್ತು ತನ್ಮಯ್ ಸೇರಿದಂತೆ 30ರಿಂದ 40 ಮಂದಿಯ ಗುಂಪು ಹಲ್ಲೆ ನಡೆಸಿದೆ’ ಎಂದು ಆರೋಪಿಸಿದ್ದಾರೆ.

‘ಆರೋಪಿಗಳುಹಲ್ಲೆ ವಿಡಿಯೊ ವೈರಲ್ ಮಾಡುವುದಾಗಿ ಬೆದರಿಕೆ ಒಡ್ಡಿದ್ದಾರೆ ಮಾಸ್ಕ್ ಮತ್ತು ಬುರ್ಕಾ ಹರಿದು ಹಾಕಿದ್ದಾರೆ’ ಎಂದು ಆರೋಪಿಸಿದ್ದಾರೆ.

ಬಿಡಿಎ: ನೂರಾರು ಕೋಟಿ ಅಕ್ರಮ ಪತ್ತೆ

ಒಂದನೇ ಪುಟದಿಂದ...

ಪ್ರಾಧಿಕಾರದಿಂದ ನಗರದ ವಿವಿಧೆಡೆ ನಿರ್ಮಿಸಿರುವ ಬಡಾವಣೆಗಳಲ್ಲಿ ಅರ್ಹತೆ ಇಲ್ಲದಿದ್ದರೂ ಕೆಲವರಿಗೆ ನಾಗರಿಕ ಮೂಲಸೌಲಭ್ಯಕ್ಕೆ ಕಾಯ್ದಿರಿಸಿದ ನಿವೇಶನಗಳನ್ನು ಹಂಚಿಕೆ ಮಾಡಿರುವುದು ಕಂಡುಬಂದಿದೆ. ಕೆಲವು ಖಾಸಗಿ ಸಂಘಗಳ ಪದಾಧಿಕಾರಿಗಳ ಜತೆ ಶಾಮೀಲಾಗಿರುವ ಬಿಡಿಎ ಅಧಿಕಾರಿಗಳು ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಿರುವುದು ಕಂಡುಬಂದಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಕೆಲವು ಪ್ರಕರಣಗಳಲ್ಲಿ ಒಂದೇ ನಿವೇಶನವನ್ನು ಇಬ್ಬರಿಗೆ ಹಂಚಿಕೆ ಮಾಡಿ ಆದೇಶ ಹೊರಡಿಸಿರುವುದು ಪತ್ತೆಯಾಗಿದೆ. ಅನರ್ಹರಿಗೆ ಬಿಡಿಎ ನಿವೇಶನಗಳನ್ನು ಹಂಚಿಕೆ ಮಾಡಿರುವುದು, ಫಲಾನುಭವಿಗಳು ಪಾವತಿಸಿದ ಹಣವನ್ನು ಪ್ರಾಧಿಕಾರದ ಬ್ಯಾಂಕ್ ಖಾತೆಗೆ ವರ್ಗಾಯಿಸದೇ ದುರ್ಬಳಕೆ ಮಾಡಿಕೊಂಡಿರುವುದಕ್ಕೆ ಸಾಕ್ಷ್ಯಗಳು ಲಭ್ಯವಾಗಿವೆ ಎಂದು ಮೂಲಗಳು ತಿಳಿಸಿವೆ.

‘ಶೋಧನೆಯ ವೇಳೆ ಹಲವು ಕಡತಗಳನ್ನು ವಶಕ್ಕೆ ಪಡೆಯಲಾಗಿದೆ. ನೂರಾರು ಕೋಟಿ ರೂಪಾಯಿ ಮೊತ್ತದ ಅವ್ಯವಹಾರ ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ದಾಖಲಾತಿ ಮತ್ತು ಮಾಹಿತಿಗಳ ಸಂಗ್ರಹ ಮುಂದುವರಿದಿದೆ’ ಎಂದು ಎಸಿಬಿ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕಚೇರಿಗಳ ಬಾಗಿಲಿಗೆ ಮೊಹರು: ಎಸಿಬಿ ಬೆಂಗಳೂರು ನಗರ ಎಸ್‌ಪಿ ಜಿ.ಎಚ್. ಯತೀಶ್ ಚಂದ್ರ, ಆಡಳಿತ ವಿಭಾಗದ ಎಸ್‌ಪಿ ಅಬ್ದುಲ್ ಅಹದ್ ಮತ್ತು ಕೇಂದ್ರ ಸ್ಥಾನದ ಎಸ್‌ಪಿ ಉಮಾ ಪ್ರಶಾಂತ್ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದರು. ಐವರು ಡಿವೈಎಸ್‌ಪಿಗಳು, 12 ಇನ್‌ಸ್ಪೆಕ್ಟರ್‌ಗಳು ಮತ್ತು 50ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ದಾಳಿಯ ಸಂದರ್ಭದಲ್ಲಿ ಬಿಡಿಎ ಕಚೇರಿಯ ಎಲ್ಲ ಪ್ರವೇಶ ದ್ವಾರಗಳನ್ನು ಮುಚ್ಚಲಾಗಿತ್ತು. ಸಾರ್ವಜನಿಕರನ್ನು ತಪಾಸಣೆ ನಡೆಸಿ ಹೊರಕ್ಕೆ ಬಿಡಲಾಯಿತು. ಶೋಧ ಇನ್ನೂ ಪೂರ್ಣಗೊಂಡಿಲ್ಲ. ದಾಳಿ ಮಾಡಲಾದ ಎಲ್ಲ ಕಚೇರಿಗಳ ಬಾಗಿಲಿಗೆ ಶುಕ್ರವಾರ ರಾತ್ರಿ ಮೊಹರು ಮಾಡಲಾಗಿದೆ. ಶನಿವಾರ ಬೆಳಿಗ್ಗೆ ಮೊಹರು ತೆರೆದು ಮತ್ತೆ ಶೋಧ ಮುಂದುವರಿಸಲಾಗುವುದು ಎಂದು ತನಿಖಾ ಸಂಸ್ಥೆಯ ಮೂಲಗಳು ಹೇಳಿವೆ.

ಬಿಡಿಎ ಕಚೇರಿ ಆವರಣದಲ್ಲಿ ನಿಲುಗಡೆ ಮಾಡಿದ್ದ ಕಾರೊಂದರಲ್ಲಿದ್ದ ಚೆಕ್ ಪುಸ್ತಕಗಳನ್ನು ಎಸಿಬಿ ಅಧಿಕಾರಿಗಳು ಪರಿಶೀಲಿಸುತ್ತಿರುವುದು – ಪ್ರಜಾವಾಣಿ ಚಿತ್ರ

ಅಕ್ರಮವಾಗಿ 34 ನಿವೇಶನ ಹಂಚಿಕೆ

ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ ಹೋಬಳಿಯ ಕೆ. ನಾರಾಯಣಪುರ ಗ್ರಾಮದಲ್ಲಿ ಟ್ರಿನಿಟಿ ವಿಲೇಜ್ ಫ್ಲ್ಯಾಟ್ ಓನರ್ಸ್ ಅಸೋಸಿಯೇಷನ್ ಸದಸ್ಯರಿಗೆ ಅರ್ಹತೆ ಇಲ್ಲದಿದ್ದರೂ ಅಕ್ರಮವಾಗಿ 34 ನಿವೇಶನಗಳನ್ನು ಬಿಡಿಎ ಹಂಚಿಕೆ ಮಾಡಿರುವುದನ್ನು ಎಸಿಬಿ ಪತ್ತೆಮಾಡಿದೆ.

‘ಬಿಡಿಎ ಅಧಿಕಾರಿಗಳು ಮತ್ತು ಸಂಘದ ಸದಸ್ಯರು ಶಾಮೀಲಾಗಿ ಅಕ್ರಮ ನಡೆಸಿರುವುದಕ್ಕೆ ದಾಖಲೆಗಳು ಲಭ್ಯವಾಗಿವೆ. ಇದರಿಂದ ಬಿಡಿಎಗೆ ಹತ್ತಾರು ಕೋಟಿ ರೂಪಾಯಿ ನಷ್ಟವಾಗಿದೆ. ಒಂದೇ ನಿವೇಶನವನ್ನು ಇಬ್ಬರಿಗೆ ಹಂಚಿಕೆ ಮಾಡಿ, ಅಕ್ರಮ ಎಸಗಿರುವ ಹಲವು ಪ್ರಕರಣಗಳ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಶಿಥಿಲಗೊಂಡ ಕಟ್ಟಡ: ಜೆ.ಜೆ ನಗರ ಠಾಣೆ ಸ್ಥಳಾಂತರ

ಬೆಂಗಳೂರು: ನಿರಂತರ ಮಳೆಯಿಂದಾಗಿ ಜಗಜೀವನ್‌ರಾಮ್ (ಜೆ.ಜೆ) ನಗರ ಠಾಣೆ ಕಟ್ಟಡ ಶಿಥಿಲಗೊಂಡಿದ್ದು, ಕುಸಿದು ಬೀಳುವ ಆತಂಕ ಶುರುವಾಗಿದೆ. ಇದೇ ಕಾರಣಕ್ಕೆ ಠಾಣೆಯನ್ನು ಹೊಸ ಕಟ್ಟಡಕ್ಕೆ ಶುಕ್ರವಾರ ಸ್ಥಳಾಂತರಿಸಲಾಗಿದೆ.

‘ಹಳೇ ಕಟ್ಟಡದಲ್ಲಿ ಠಾಣೆ ಇತ್ತು. ಮಳೆಯಿಂದಾಗಿ ಕಟ್ಟಡದ ಕೆಲವೆಡೆ ಸೋರಲಾರಂಭಿಸಿದೆ. ಮುಂಜಾಗ್ರತಾ ಕ್ರಮವಾಗಿ ಠಾಣೆಯನ್ನು ಸಂಗಮ್ ವೃತ್ತದಲ್ಲಿರುವ ಬಿಬಿಎಂಪಿ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಹೊಸ ಕಟ್ಟಡದಲ್ಲಿ ಶುಕ್ರವಾರದಿಂದಲೇ ಸಿಬ್ಬಂದಿ ಕೆಲಸ ಆರಂಭಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಮಳೆ ಹಾನಿ: ₹130 ಕೋಟಿ ಪರಿಹಾರ

ಒಂದನೇ ಪುಟದಿಂದ...

ಮಳೆ ಮಧ್ಯದಲ್ಲಿ ಒಂದೆರಡು ದಿನ ಬಿಡುವು ಕೊಟ್ಟು ಮತ್ತೆ ನ.24 ರಿಂದ ಆರಂಭವಾಗುತ್ತದೆ. ತಿಂಗಳ ಕೊನೆಯವರೆಗೂ ಮಳೆಯಾಗುವ ಸಾಧ್ಯತೆ ಇರುವುದರಿಂದ ಯಾವುದೇ ಪರಿಸ್ಥಿತಿ ಎದುರಿಸಲು ಅಧಿಕಾರಿಗಳು ಸನ್ನದ್ಧರಾಗಿರಬೇಕು ಎಂದೂ ಸೂಚನೆ ನೀಡಿದರು.

ತಮಿಳುನಾಡು, ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿರುವ ಜಿಲ್ಲೆಗಳು, ಕರಾವಳಿ ಮತ್ತು ಉತ್ತರ ಕರ್ನಾಟಕದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದರು.

ಸಭೆಯಲ್ಲಿ ವಸತಿ ಸಚಿವ ವಿ.ಸೋಮಣ್ಣ, ತೋಟಗಾರಿಕಾ ಸಚಿವ ಮುನಿರತ್ನ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್ ಇದ್ದರು.

ಹಾನಿ ವೀಕ್ಷಣೆಗೆ ಚುನಾವಣೆ ಅಡ್ಡಿ

‘ಮಳೆಯಿಂದ ಹಾನಿಗೀಡಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಲು ಚುನಾವಣಾ ಆಯೋಗ ಬಿಡುತ್ತಿಲ್ಲ ಎಂದು ಸಚಿವ ಆರ್.ಅಶೋಕ ಅವರು ಸಭೆಯ ಗಮನಕ್ಕೆ ತಂದರು’ ಎಂದು ಮೂಲಗಳು ಹೇಳಿವೆ.

‘ಎಲ್ಲಿಗೂ ಹೋಗಲು ಅವಕಾಶ ನೀಡುತ್ತಿಲ್ಲ. ಇದರಿಂದ ವಾಸ್ತವ ಸ್ಥಿತಿಯ ಮಾಹಿತಿ ಪಡೆಯಲು ಸಾಧ್ಯವಾಗುತ್ತಿಲ್ಲ. ಹಾಸನಕ್ಕೆ ಹೋದಾಗ ಹಾನಿ ಪ್ರದೇಶದ ಭೇಟಿಗೆ ಮತ್ತು ಸಭೆ ನಡೆಸಲು ಅವಕಾಶವಿಲ್ಲ ಎಂದು ಜಿಲ್ಲಾಧಿಕಾರಿ ಹೇಳಿದರು. ನೈಸರ್ಗಿಕ ವಿಕೋಪದ ಸಂದರ್ಭದಲ್ಲಿ ಹಾನಿಗೀಡಾದ ಪ್ರದೇಶಕ್ಕೆ ಹೋಗದಿದ್ದರೆ ಹೇಗೆ ಎಂದು ಅವರು ಸಭೆಯಲ್ಲಿ ಪ್ರಶ್ನಿಸಿದರು’ ಎಂದು ಮೂಲಗಳು ತಿಳಿಸಿವೆ.

> **ಭತ್ತ, ಜೋಳ ಸೇರಿದಂತೆ ವಿವಿಧ ಬೆಳೆಗಳ ಹಾನಿಯ ಬಗ್ಗೆ ಪ್ರಾಥಮಿಕ ಮಾಹಿತಿ ಇದ್ದು, ಸಮೀಕ್ಷೆಯ ನಂತರ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು**
> **ಬಸವರಾಜ ಬೊಮ್ಮಾಯಿ**
> ಮುಖ್ಯಮಂತ್ರಿ

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನೆಲದ ಅಡಿಯಲ್ಲಿ ಕಾಮಗಾರಿ ಮತ್ತು ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ನ.20ರಂದು ವಿವಿಧ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಕರಿವೋಬನಹಳ್ಳಿ, ಸುಪ್ರಭಾತ ನಗರ, ಪೈಪ್‌ಲೈನ್ ರೋಡ್, ವಿಜಯ ನಗರ, ಮಾರೇನಹಳ್ಳಿ, ಗೋವಿಂದರಾಜ ನಗರ, ಚಂದ್ರಾಲೇಔಟ್, ವಿನಾಯಕ ನಗರ, ಲಕ್ಷ್ಮಣ ನಗರ, ಸಂಜೀವಿನಿ ನಗರ, ಹೆಗ್ಗನಹಳ್ಳಿ, ಸುಂಕದಕಟ್ಟೆ, ವೃಷಭಾವತಿ ನಗರ, ನರಸಾಪುರ, ಈರಣ್ಣಪಾಳ್ಯ, ಪಾಪರೆಡ್ಡಿಪಾಳ್ಯ, ಜಯಲಕ್ಷ್ಮಿಲೇಔಟ್, ಪ್ರಶಾಂತ ನಗರ, ಅಮರಜ್ಯೋತಿ ನಗರ, ಪಂಚಶೀಲನಗರ, ಮೂಡಲಪಾಳ್ಯ, ಎಸ್‌ವಿಜಿ ನಗರ ಸುತ್ತಮುತ್ತ ಪ್ರದೇಶಗಳು

ಕೋವಿಡ್: 17 ಜಿಲ್ಲೆಗಳಲ್ಲಿ 50ರೊಳಗೆ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳು ಮತ್ತಷ್ಟು ಇಳಿಕೆಕಂಡಿದ್ದು, 17 ಜಿಲ್ಲೆಗಳಲ್ಲಿ 50ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸೋಂಕಿತರಿದ್ದಾರೆ.

ಒಂದು ದಿನದ ಅವಧಿಯಲ್ಲಿ 89 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 242 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 144 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಸೋಂಕಿತರ ಒಟ್ಟು ಸಂಖ್ಯೆ 29.93 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7,258ಕ್ಕೆ ಇಳಿಕೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕೋಮು ದ್ವೇಷದ ಅಪರಾಧಗಳ ಕುರಿತು ವರದಿ ಪ್ರಕಟ

ಪರ್ಯಾಯ ಆಡಳಿತ ಬೇಡ: ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರಕ್ಕೆ ಪರ್ಯಾಯವಾಗಿ ಯಾವುದೇ ರೀತಿಯ ಸಮಾನಾಂತರ ಆಡಳಿತ ನಡೆಯಲು ಅವಕಾಶ ಕಲ್ಪಿಸಬಾರದು ಮತ್ತು ಕೋಮು ಹಿಂಸಾಚಾರಗಳಲ್ಲಿ ತೊಡಗಿರುವ ಎಲ್ಲ ಹಿಂದೂ ಸಂಘಟನೆಗಳ ಕಾರ್ಯಕರ್ತರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು’ ಎಂದು ವಿವಿಧ ಸಂಘಟನೆಗಳು ಒತ್ತಾಯಿಸಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಜನವರಿಯಿಂದ ಸೆಪ್ಟೆಂಬರ್‌ವರೆಗೆ ನಡೆದ ಕೋಮು ದ್ವೇಷದ ಅಪರಾಧಗಳ ಕುರಿತು ವರದಿ ಪ್ರಕಟಿಸಿರುವ ಈ ಸಂಘಟನೆಗಳು ರಾಜ್ಯ ಸರ್ಕಾರಕ್ಕೆ ಈ ಒತ್ತಾಯ ಮಾಡಿವೆ.

‘ಮತೀಯ ಗೂಂಡಾಗಿರಿಯಿಂದ ದ್ವೇಷ ಅಪರಾಧಗಳವರೆಗೆ: ಅಂಬೇಡ್ಕರ್ ಅವರ ಭ್ರಾತೃತ್ವದ ಕನಸಿನ ಮೇಲೆ ದಾಳಿ’ ಶೀರ್ಷಿಕೆ ಅಡಿಯಲ್ಲಿ ಪ್ರಕಟಿಸಲಾದ ಈ ವರದಿಯನ್ನು ಶುಕ್ರವಾರ ಬಿಡುಗಡೆ ಮಾಡಲಾಯಿತು.

ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್(ಪಿಯುಸಿಎಲ್), ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟಿಸ್ (ಎಐಎಲ್‌ಎಜೆ), ಎಲ್ ಇಂಡಿಯಾ ಪೀಪಲ್ಸ್ ಫೋರಂ (ಎಐಪಿಎಫ್) ಮತ್ತು ಗೌರಿಲಂಕೇಶ್ ನ್ಯೂಸ್ ಡಾಟ್ ಕಾಮ್ ಈ ವರದಿ ಪ್ರಕಟಿಸಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಕೋಮು ಗಲಭೆಗಳ ಬಗ್ಗೆ ವರದಿಯಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮತೀಯ ಗೂಂಡಾಗಿರಿಯನ್ನು ಬಹಿರಂಗವಾಗಿ ಸಮರ್ಥಿಸಿ ಹೇಳಿಕೆ ನೀಡಿದ್ದನ್ನು ಸಹ ಉಲ್ಲೇಖಿಸಲಾಗಿದೆ.

‘ಅಂತರ್ಜಾತಿ ಅಥವಾ ಅಂತರ ಧರ್ಮಿಯರ ದಂಪತಿಗಳಿಗೆ ಯಾರಿಂದಲೂ ಕಿರುಕುಳ, ಬೆದರಿಕೆಗಳು ಅಥವಾ ಹಿಂಸಾಚಾರದ ಕೃತ್ಯಗಳಿಗೆ ಒಳಗಾಗದಂತೆ ಕ್ರಮಗಳನ್ನು ಕೈಗೊಳ್ಳಬೇಕು. ಇಂತಹ ಯಾವುದೇ ದುಷ್ಕೃತ್ಯಗಳನ್ನು ಕೈಗೊಳ್ಳುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಮತೀಯ ಗೂಂಡಾಗಿರಿಯ ಎಲ್ಲ ಪ್ರಕರಣಗಳಲ್ಲಿ ತಕ್ಷಣವೇ ಎಫ್‌ಐಆರ್ ದಾಖಲಿಸಬೇಕು’ ಎಂದು ಒತ್ತಾಯಿಸಲಾಗಿದೆ.

ವರದಿ ಬಿಡುಗಡೆ ಕಾರ್ಯಕ್ರಮದಲ್ಲಿ ಅಖಿಲ ಭಾರತ ವಿದ್ಯಾರ್ಥಿಗಳ ಸಂಘಟನೆಯ (ಎಐಎಸ್‌ಎ) ಆರಾತ್ರಿಕ, ಮಾರ್ಟಿನ್ ಕೃಷ್ಣ, ಯುವಶಕ್ತಿ ಸಂಘಟನೆಯ ಎಂ. ಯಾಸಿನ್, ಮಾನವ ಹಕ್ಕುಗಳ ಕಾರ್ಯಕರ್ತ ಸುನಿಲ್ ಮೋಹನ್, ಪತ್ರಕರ್ತ ಎನ್.ಎ.ಎಂ.ಇಸ್ಮಾಯಿಲ್ ಮತ್ತು ಮಾನವ ಹಕ್ಕುಗಳ ಕಾರ್ಯಕರ್ತೆ ಬೃಂದಾ ಅಡಿಗೆ ಇದ್ದರು – ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಉನ್ನತ ಶಿಕ್ಷಣದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನುಷ್ಠಾನ ಕುರಿತು ಚರ್ಚೆ: ಭಾಗವಹಿಸುವವರು– ಅಲಹಾಬಾದ್ ಐಐಟಿ ನಿರ್ದೇಶಕ ಪಿ.ನಾಗಭೂಷಣ್, ತುಮಕೂರು ವಿಶ್ವವಿದ್ಯಾಲಯದ ಕುಲಪತಿ ವೈ.ಎಸ್. ಸಿದ್ದೇಗೌಡ, ಬಿಎನ್‌ಎಂಐಟಿ ಮುಖ್ಯಸ್ಥ ನಾರಾಯಣ ರಾವ್ ಆರ್.ಮಾನೆ, ಹೆಚ್ಚುವರಿ ನಿರ್ದೇಶಕ ಎಸ್.ವೈ.ಕುಲಕರ್ಣಿ, ಆಯೋಜನೆ ಮತ್ತು ಸ್ಥಳ–ಮಾತೃಶ್ರೀ ಸುಶೀಲಾದೇವಿ ಆರ್. ಮಾನೆ ಸಭಾಂಗಣ, ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಎನ್‌ಎಂಐಟಿ), ಬನಶಂಕರಿ 3ನೇ ಹಂತ, ಬೆಳಿಗ್ಗೆ 10

ಎಂಬಿಎ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ: ಅತಿಥಿಗಳು– ಎಸ್.ರಮೇಶ್, ಕೆ.ಎಂ.ನಾಗರಾಜ್, ಆಯೋಜನೆ ಮತ್ತು ಸ್ಥಳ–ಕಮ್ಯುನಿಟಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಭಾಂಗಣ, ಜಯನಗರ 2ನೇ ಬ್ಲಾಕ್, ಬೆಳಿಗ್ಗೆ 10

ಮನೆಯಂಗಳದಲ್ಲಿ ಮಾತುಕತೆ: ಹರೇಕಳ ಹಾಜಬ್ಬ, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ– ನಯನ ಸಭಾಂಗಣ, ಕನ್ನಡ ಭವನ, ಸಂಜೆ 4

ಹುಣ್ಣಿಮೆ ಹಾಡು–150: ಸೃಷ್ಟಿ ನಿರಂತರ ತಂಡದಿಂದ ಪುನೀತ್ ರಾಜ್‌ಕುಮಾರ್ ಸ್ಮರಣೆ ಹಾಗೂ ಡಾ.ರಾಜ್ ನಮನ, ಆಯೋಜನೆ ಮತ್ತು ಸ್ಥಳ–ಕಾಡುಮಲ್ಲೇಶ್ವರ ಗೆಳೆಯರ ಬಳಗ, ಬಯಲು ರಂಗಮಂದಿರ, ಮಲ್ಲೇಶ್ವರ, ಸಂಜೆ 6

ಕಾಫಿ ಶಂಕರ್ ಅವರಿಂದ ‘ಕಾಫಿಟೂನ್ಸ್’ ವ್ಯಂಗ್ಯಚಿತ್ರಗಳ ಪ್ರದರ್ಶನ: ಆಯೋಜನೆ–ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಸ್ಥಳ–ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಎಂ.ಜಿ.ರಸ್ತೆ ಹತ್ತಿರ, ಬೆಳಿಗ್ಗೆ 10ರಿಂದ ಸಂಜೆ 6 (ಡಿ.4ರವರೆಗೆ ಪ್ರದರ್ಶನ ಇರಲಿದೆ)

ಗಂಗಾವತರಣ ಯಕ್ಷಗಾನ ಪ್ರದರ್ಶನ: ಅತಿಥಿಗಳು–ಪಿ.ಸದಾನಂದ ಮಯ್ಯ, ಜನಾರ್ಧನ ಹಂದೆ, ಸಚ್ಚಿದಾನಂದ ಮೂರ್ತಿ, ರಾಧಾಕೃಷ್ಣ ಉರಾಳ, ಆಯೋಜನೆ–ಕಲಾ ಕದಂಬ ಆರ್ಟ್ ಸೆಂಟರ್, ಸ್ಥಳ–ಮನೋರಂಜಿನಿ ಸಭಾಂಗಣ, ಸಿದ್ಧಿಗಣಪತಿ ದೇವಾಲಯ, ಚಿಕ್ಕಲ್ಲಸಂದ್ರ, ಸಂಜೆ 5.30

ಪ್ರಜಾವಾಣಿ

ಹೋರಾಟದ ಹಾಡು - ಪಾಡು

1. ಕಾರ್ಪೊರೇಟ್ ಹೂಡಿಕೆಗಾಗಿ ಸುಗ್ರೀವಾಜ್ಞೆಗಳು

ದೇಶದ ಕೃಷಿ ಕ್ಷೇತ್ರದಲ್ಲಿ ವ್ಯಾಪಕ ಸುಧಾರಣೆ ತರುವುದಾಗಿ ಘೋಷಿಸಿದ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು, ಈ ಬದಲಾವಣೆಗಳಿಗಾಗಿ 2020ರ ಜೂನ್‌ನಲ್ಲಿ ಮೂರು ಸುಗ್ರೀವಾಜ್ಞೆಗಳನ್ನು ಜಾರಿಗೆ ತಂದಿತು.

ಈ ಸುಗ್ರೀವಾಜ್ಞೆಗಳು ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಮಾರುಕಟ್ಟೆಯ ಹೊರಗೂ ಮಾರಾಟ ಮಾಡಲು ಅವಕಾಶ ಮಾಡಿಕೊಟ್ಟವು. ಎಪಿಎಂಸಿಯ ಹೊರಗೆ ಮಾರಾಟ ಮಾಡುವ ಕೃಷಿ ಉತ್ಪನ್ನದ ಬೆಲೆಯ ಮೇಲೆ ಸರ್ಕಾರಕ್ಕೆ ಯಾವುದೇ ನಿಯಂತ್ರಣವಿರುವುದಿಲ್ಲ. ಜತೆಗೆ ಕೃಷಿ ಉತ್ಪನ್ನಗಳಿಗೆ ನೀಡಲಾಗುತ್ತಿದ್ದ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಸಂಬಂಧಿಸಿದಂತೆ ಈ ಮೂರೂ ಸುಗ್ರೀವಾಜ್ಞೆಗಳಲ್ಲಿ ಒಂದು ಉಲ್ಲೇಖವೂ ಇರಲಿಲ್ಲ ಎಂಬುದು ರೈತರ ಕಳವಳವಾಗಿತ್ತು.

ಈ ಸುಗ್ರೀವಾಜ್ಞೆಗಳು ಕೃಷಿಯಲ್ಲಿ ಕಾರ್ಪೊರೇಟ್ ಕಂಪನಿಗಳ ಹೂಡಿಕೆಗೂ ಅವಕಾಶ ಮಾಡಿಕೊಟ್ಟಿತು. ಸಣ್ಣ ರೈತರಿಂದಲೂ ಕೃಷಿ ಜಮೀನು ಭೋಗ್ಯಕ್ಕೆ ಪಡೆದು, ಕೃಷಿ ನಡೆಸುವುದಕ್ಕೆ ಇದು ಅವಕಾಶ ಮಾಡಿಕೊಟ್ಟಿತು. ಇದು ದೇಶದ ಕೃಷಿ ಕ್ಷೇತ್ರದ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಸರ್ಕಾರವು ಹೇಳಿತ್ತು. 2020ರ ಸೆಪ್ಟೆಂಬರ್‌ನಲ್ಲಿ ನಡೆದ ಸಂಸತ್ ಅಧಿವೇಶನದಲ್ಲಿ ಈ ಮೂರೂ ಸುಗ್ರೀವಾಜ್ಞೆಗಳಿಗೆ ಸಂಸತ್ತಿನ ಉಭಯ ಸದನಗಳ ಅನುಮೋದನೆ ಪಡೆಯಲಾಯಿತು. ರಾಷ್ಟ್ರಪತಿಗಳ ಅಂಕಿತವನ್ನೂ ಪಡೆಯಲಾಯಿತು. ಸುಗ್ರೀವಾಜ್ಞೆಗಳು ಕಾಯ್ದೆಗಳಾದವು.

2. ಹೋರಾಟವಾದ ರೈತರ ಕಳವಳ

ಈ ಕೃಷಿ ಕಾಯ್ದೆಗಳಲ್ಲಿ ಎಂಎಸ್‌ಪಿಯ ಉಲ್ಲೇಖವಿಲ್ಲದಿರುವ ಬಗ್ಗೆ ರೈತರು, ರೈತ ಸಂಘಟನೆಗಳು ಕಳವಳ ವ್ಯಕ್ತಪಡಿಸಿದ್ದವು. ಸರ್ಕಾರವು ಕೃಷಿ ಉತ್ಪನ್ನಗಳನ್ನು ಎಂಎಸ್‌ಪಿಯಲ್ಲಿ ಖರೀದಿಸುತ್ತದೆಯೋ ಇಲ್ಲವೋ ಎಂದು ರೈತರು ಅನುಮಾನ ವ್ಯಕ್ತಪಡಿಸಿದ್ದರು. ಎಪಿಎಂಸಿಯ ಹೊರಗೆ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವಲ್ಲಿ ಇರುವ ತೊಡಕುಗಳ ಬಗ್ಗೆಯೂ ಪ್ರಶ್ನೆಗಳು ಎದ್ದವು.

ಆದರೆ ಸರ್ಕಾರವು ಇವೆಲ್ಲವನ್ನೂ ಸ್ಪಷ್ಟಪಡಿಸುವ ಬದಲು, ಮತ್ತಷ್ಟು ಗೊಂದಲಗಳನ್ನು ಸೃಷ್ಟಿಸಿತು. 'ಎಂಎಸ್‌ಪಿಯನ್ನು ವಾಪಸ್ ಪಡೆದಿಲ್ಲ. ಎಂಎಸ್‌ಪಿ ದರದಲ್ಲೇ ಎಪಿಎಂಸಿಗಳಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸಲಾಗುತ್ತದೆ. ಆದರೆ ಎಪಿಎಂಸಿಯ ಹೊರಗೆ ಎಂಎಸ್‌ಪಿಗಿಂತಲೂ ಹೆಚ್ಚಿನ ದರದಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸಲಾಗುತ್ತಿದೆ. ಹೀಗಿದ್ದಾಗ, ಎಂಎಸ್‌ಪಿ ದರದಲ್ಲಿ ಯಾರು ಮಾರಾಟ ಮಾಡುತ್ತಾರೆ?' ಎಂದು ಕೃಷಿ ಸಚಿವಾಲಯವು ಹೇಳಿತು. ಆದರೆ ಸರ್ಕಾರವು ತನ್ನ ಪ್ರತಿಪಾದನೆಗೆ ಪೂರಕವಾಗಿ ಯಾವುದೇ ರೀತಿಯ ಪುರಾವೆಗಳನ್ನು ಒದಗಿಸಲಿಲ್ಲ.

ಎಂಎಸ್‌ಪಿ ಪದ್ಧತಿಯನ್ನು ಮುಂದುವರಿಸಲಾಗುತ್ತದೆ ಎಂದು ಸರ್ಕಾರವು ಹೇಳುತ್ತಿದ್ದರೂ, ಅದನ್ನು ಲಿಖಿತ ರೂಪದಲ್ಲಿ ದೃಢೀಕರಿಸಿರಲಿಲ್ಲ. ಇದು ರೈತರ ಆತಂಕವನ್ನು ಹೆಚ್ಚಿಸಿತು. ಹೀಗಾಗಿ ಈ ಮೂರೂ ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕು ಎಂದು ರೈತ ಸಂಘಟನೆಗಳು ಒತ್ತಾಯಿಸಿದವು. ಸರ್ಕಾರವು ಈ ಕಾಯ್ದೆಗಳನ್ನು ರದ್ದುಪಡಿಸಲು ಸುತರಾಂ ಒಪ್ಪಲಿಲ್ಲ. ಬದಲಿಗೆ ಕಾಯ್ದೆಗಳಲ್ಲಿ ಬದಲಾವಣೆ ತರುವುದಾಗಿ ಹೇಳಿತು. ರೈತರು ಕಾಯ್ದೆಗಳ ರದ್ದತಿಗೆ ಒತ್ತಾಯಿಸಿ ಪ್ರತಿಭಟನೆಗೆ ಇಳಿದರು.

3. ದೆಹಲಿ ಚಲೋಗೆ ಹಲವು ಅಡ್ಡಿಗಳು

ಕೃಷಿ ಕಾಯ್ದೆಗಳ ರದ್ದತಿಗೆ ಒತ್ತಾಯಿಸಿ ಪಂಜಾಬ್ ಮತ್ತು ಹರಿಯಾಣದ 450 ರೈತ ಸಂಘಟನೆಗಳು ಒಟ್ಟಾಗಿ ದೆಹಲಿ ಚಲೋ ಪ್ರತಿಭಟನಾ ಮೆರವಣಿಗೆ ನಡೆಸಲು ಯೋಜನೆ ಹಾಕಿಕೊಂಡವು. ಇದಕ್ಕಾಗಿ ಕಿಸಾನ್ ಸಂಯುಕ್ತ ಮೋರ್ಚಾ ಎಂಬ ಒಕ್ಕೂಟವನ್ನು ರಚಿಸಿಕೊಳ್ಳಲಾಯಿತು. 2020ರ ನವೆಂಬರ್ 25ರಂದು ಪಂಜಾಬ್‌ನಿಂದ ಹೊರಟು, 26ರಂದು ಹರಿಯಾಣ ತಲುಪುವುದು ರೈತರ ಯೋಜನೆಯಾಗಿತ್ತು. ನಂತರ 27ರಂದು ದೆಹಲಿಯ ರಾಮಲೀಲಾ ಮೈದಾನ ತಲುಪಿ, ಅಲ್ಲಿ ಹರತಾಳ ನಡೆಸಲು ಕಿಸಾನ್ ಸಂಯುಕ್ತ ಮೋರ್ಚಾ ಸಿದ್ಧತೆ ಮಾಡಿಕೊಂಡಿತು.

2020ರ ನವೆಂಬರ್ 26ರಂದು ಹರಿಯಾಣ ಗಡಿಯಲ್ಲಿನ ಸೇತುವೆ ಮೇಲೆ ಪೊಲೀಸರು ಹಾಕಿದ್ದ ತಡೆಗಳನ್ನು ಬಿಸಾಡಿ ಮುನ್ನುಗ್ಗಿದ ರೈತರು

ಯೋಜನೆ ಪ್ರಕಾರವೇ ಪಂಜಾಬ್ ರೈತರು ನವೆಂಬರ್ 25ರಂದು ದೆಹಲಿ ಚಲೋ ಪ್ರತಿಭಟನಾ ಮೆರವಣಿಗೆ ಆರಂಭಿಸಿದರು. ನವೆಂಬರ್ 25ರ ತಡರಾತ್ರಿ 12ರ ವೇಳೆಗೆ ಹರಿಯಾಣ ಗಡಿ ಪ್ರವೇಶಿಸಿದರು. ಆದರೆ ರೈತರು ಹರಿಯಾಣವನ್ನು ಪ್ರವೇಶಿಸದಂತೆ ಅಲ್ಲಿನ ಬಿಜೆಪಿ ಸರ್ಕಾರವು ಎಲ್ಲಾ ಸ್ವರೂಪದ ಪ್ರಯತ್ನಗಳನ್ನೂ ಮಾಡಿತು. ಅಂಬಾಲದ ಬಳಿ ಗಡಿ ಪ್ರವೇಶಕ್ಕೂ ಮುನ್ನ ಇದ್ದ ಸೇತುವೆಯನ್ನು ಹರಿಯಾಣ ಪೊಲೀಸರು ಬಂದ್ ಮಾಡಿದರು. ಮೆರವಣಿಗೆ ಮುಂದುವರಿಸಲು ಯತ್ನಿಸಿದ ರೈತರ ಮೇಲೆ ಲಾಠಿ ಪ್ರಯೋಗಿಸಿದರು. ಮೈಕೊರೆಯುವ ಚಳಿಯಲ್ಲಿ ರೈತರ ಮೇಲೆ ಜಲಫಿರಂಗಿ ಪ್ರಯೋಗಿಸಿದರು. ಇದ್ಯಾವುದನ್ನೂ ಲೆಕ್ಕಿಸದೆ ರೈತರು ಮುಂದುವರಿದರು. ಬ್ಯಾರಿಕೇಡ್‌ಗಳನ್ನು ಕಿತ್ತು, ನದಿಗೆ ಎಸೆದು ಸೇತುವೆಯನ್ನು ದಾಟಿದರು.

ಹರಿಯಾಣ ಸರ್ಕಾರವು ದೆಹಲಿಯ ಹೆದ್ದಾರಿಗಳ ಉದ್ದಕ್ಕೂ ತಡೆಗಳನ್ನು ನಿರ್ಮಿಸಿತು. ಹೆದ್ದಾರಿಗಳಲ್ಲಿ ಅಡ್ಡವಾಗಿ ಕಂದಕ ತೋಡಲಾಯಿತು, ದೊಡ್ಡ ಟಿಪ್ಪರ್‌ಗಳನ್ನು ನಿಲ್ಲಿಸಲಾಯಿತು. ರೈತರು ತಮ್ಮ ಟ್ರ್ಯಾಕ್ಟರ್ ಮತ್ತು ಜೆಸಿಬಿಗಳನ್ನು ಬಳಸಿಕೊಂಡು ಈ ತಡೆಗಳನ್ನು ತೆಗೆದುಹಾಕಿದರು. ನವೆಂಬರ್ 27ರ ವೇಳೆಗೆ ರೈತರು ದೆಹಲಿ ಗಡಿ ತಲುಪಿದರು.

4. ಸಿಂಘು–ಟಿಕ್ರಿ ಗಡಿಯಲ್ಲಿ ತಡೆ

ಹರಿಯಾಣದಿಂದ ದೆಹಲಿ ಪ್ರವೇಶಕ್ಕೆ ಅವಕಾಶವಿದ್ದ ಸಿಂಘು ಗಡಿ ಮತ್ತು ಟಿಕ್ರಿ ಗಡಿಯಲ್ಲಿ ದೆಹಲಿ ಪೊಲೀಸರು ಹೆದ್ದಾರಿಗಳನ್ನು ಬಂದ್ ಮಾಡಿದರು. ಈ ಹೆದ್ದಾರಿಗಳಿಗೆ ಅಡ್ಡವಾಗಿ ಟ್ರಕ್, ಟಿಪ್ಪರ್‌ಗಳನ್ನು ನಿಲ್ಲಿಸಲಾಯಿತು. ಖಾಲಿ ಕಂಟೇನರ್‌ಗಳನ್ನು ಇಡಲಾಯಿತು. ಪ್ರಿಕಾಸ್ಟ್ ಕಾಂಕ್ರೀಟ್ ಗೋಡೆಗಳನ್ನು ತಂದಿಡಲಾಯಿತು. ರೈತರು ದೆಹಲಿ ಪ್ರವೇಶಿಸುವುದನ್ನು ತಡೆಯಲಾಯಿತು.

ಉತ್ತರಪ್ರದೇಶ–ದೆಹಲಿಯ ಗಾಜಿಪುರ ಗಡಿಯಲ್ಲಿ ರೈತರನ್ನು ತಡೆಯಲು ದೆಹಲಿ ಪೊಲೀಸರು ಭಾರಿ ತಡೆಗಳನ್ನು ನಿರ್ಮಿಸಿದ್ದರು

ಕಾಯ್ದೆಗಳು ರದ್ದಾಗುವವರೆಗೂ ದೆಹಲಿಯ ರಾಮಲೀಲಾ ಮೈದಾನದಲ್ಲಿ ಪ್ರತಿಭಟನೆ ನಡೆಸಲು ಸಿದ್ಧರಾಗಿ ಬಂದಿದ್ದ ರೈತರು ಸಿಂಘು ಮತ್ತು ಟಿಕ್ರಿ ಗಡಿಗಳಲ್ಲೇ ಬಿಡಾರ ಹೂಡಿದರು. ಎತ್ತಿನಗಾಡಿ, ಟ್ರ್ಯಾಕ್ಟರ್‌ಗಳಲ್ಲೇ ಬಿಡಾರ ರೂಪಿಸಿಕೊಂಡರು. ತಾವು ತಂದಿದ್ದ ದವಸ ಧಾನ್ಯಗಳಲ್ಲೇ ಅಡುಗೆ ಮಾಡಿಕೊಂಡು ಸಾಮೂಹಿಕವಾಗಿ ಊಟ ಮಾಡಿದರು. ಪ್ರತಿಭಟನೆಗೆ ಬಂದು ಸೇರುವ ರೈತರ ಸಂಖ್ಯೆ ದಿನೇ ದಿನೇ ಹೆಚ್ಚಾಯಿತು.

ರೈತರನ್ನು ತಡೆಯುವುದಕ್ಕಾಗಿ ಕೇಂದ್ರ ಸರ್ಕಾರವು ಈ ಗಡಿಗಳಲ್ಲಿ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ, ಗಡಿ ಭದ್ರತಾ ಪಡೆ, ಕೇಂದ್ರೀಯ ಮೀಸಲು ಪೊಲೀಸ್ ಪಡೆಗಳಂತಹ ಅರೆಸೇನಾ ಪಡೆಗಳನ್ನು ನಿಯೋಜಿಸಿತು. ಗಡಿಗಳನ್ನು ಮುಳ್ಳುಬೇಲಿಗಳಿಂದ ಮುಚ್ಚಲಾಯಿತು. ರಸ್ತೆಗಳಿಗೆ ಕಬ್ಬಿಣದ ಮೊಳೆಗಳನ್ನು ಅಳವಡಿಸಲಾಯಿತು. ಹೀಗಾಗಿ ರೈತರು ಈ ಗಡಿಗಳಲ್ಲೇ ಪ್ರತಿಭಟನೆ ಮುಂದುವರಿಸಿದರು. ಮತ್ತೊಂದೆಡೆ ಉತ್ತರ ಪ್ರದೇಶ, ಉತ್ತರಾಖಂಡದ ರೈತರು ದೆಹಲಿ ಚಲೋ ಪ್ರತಿಭಟನೆ ಆರಂಭಿಸಿದರು. ಡಿಸೆಂಬರ್ ಮೊದಲ ವಾರದ ವೇಳೆಗೆ ದೆಹಲಿ–ಉತ್ತರಪ್ರದೇಶದ ಗಡಿ ಪಟ್ಟಣವಾದ ಗಾಜಿಪುರ ತಲುಪಿದರು. ಅಲ್ಲಿ ರೈತರನ್ನು ತಡೆಯಲಾಯಿತು. ಗಾಜಿಪುರದಲ್ಲೂ ರೈತರ ಪ್ರತಿಭಟನೆ ಮುಂದುವರಿಯಿತು.

ಜನವರಿ 26ರಂದು ದೆಹಲಿಯಲ್ಲಿ ನಡೆದ ಟ್ರ್ಯಾಕ್ಟರ್ ರ‍್ಯಾಲಿಯಲ್ಲಿ ಭಾಗಿಯಾಗಿದ್ದ ರೈತಸಮೂಹ

ಪಟ್ಟುಬಿಡದ ರೈತರ ದಿಟ್ಟ ಹೋರಾಟ

ಮೂರು ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟಕ್ಕೆ ಒಂದು ವರ್ಷ ತುಂಬಲು ವಾರವಷ್ಟೇ ಬಾಕಿ ಇದೆ. ಈಗ, ಈ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದ್ದಾರೆ. ವರ್ಷದ ಪ್ರತಿಭಟನೆಯ ಆಗು–ಹೋಗುಗಳತ್ತ ಒಂದು ನೋಟ ಇಲ್ಲಿದೆ. ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಧಾನಿ ಹೇಳಿದ್ದರೂ, ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಸೂದೆ ಮಂಡಿಸಿ ಕಾಯ್ದೆ ಹಿಂದಕ್ಕೆ ಪಡೆಯುವವರೆಗೂ ಹೋರಾಟ ಮುಂದುವರಿಯಲಿದೆ ಎಂದು ರೈತ ಮುಖಂಡರು ಹೇಳಿದ್ದಾರೆ

5. ಮಾತುಕತೆ ವಿಫಲ

'ರೈತರು ಪ್ರತಿಭಟನೆಯನ್ನು ಬಿಟ್ಟು ವಾಪಸಾದರೆ ಮಾತ್ರವೇ ಮಾತುಕತೆಗೆ ಸಿದ್ಧ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 2020ರ ಡಿಸೆಂಬರ್ 3ರಂದು ಘೋಷಿಸಿದರು. ಕೃಷಿ ಕಾಯ್ದೆಗಳನ್ನು ರದ್ದುಪಡಿಸದ ಹೊರತು ನಾವು ಪ್ರತಿಭಟನೆ ಕೈಬಿಡುವುದಿಲ್ಲ ಎಂದು ತಮ್ಮ ಬೇಡಿಕೆಗೆ ಬದ್ಧವಾದರು.

ಡಿಸೆಂಬರ್ 3ರಂದು ರೈತರು ಮತ್ತು ಕೇಂದ್ರ ಸರ್ಕಾರದ ನಡುವೆ ಮೊದಲ ಸುತ್ತಿನ ಮಾತುಕತೆ ನಡೆಯಿತು. ಮಾತುಕತೆ ವಿಫಲವಾಯಿತು. ನಂತರ ನಡೆದ 11 ಸುತ್ತಿನ ಮಾತುಕತೆಗಳೂ ವಿಫಲವಾದವು. ಕಾಯ್ದೆ ರದ್ದುಪಡಿಸುವುದಿಲ್ಲ ಎಂದು ಸರ್ಕಾರ ಹೇಳಿತು. ರೈತರು ಕಾಯ್ದೆ ರದ್ದುಪಡಿಸಲೇಬೇಕು ಎಂದು ಪಟ್ಟು ಹಿಡಿದರು. ತಮ್ಮ ಬೇಡಿಕೆಗೆ ಸರ್ಕಾರ ಮಣಿಯದೇ ಇದ್ದಾಗ ರೈತರು ದೇಶದಾದ್ಯಂತ ಭಾರತ್ ಬಂದ್‌ಗೆ ಕರೆ ನೀಡಿದರು.



ಡಿಸೆಂಬರ್ 8ರಂದು ನಡೆದ ಭಾರತ್ ಬಂದ್‌ಗೆ ದೇಶದಾದ್ಯಂತ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ದೊಡ್ಡ ಮಟ್ಟದ ಬಂದ್ ನಡೆಯಿತು. ಬಿಜೆಪಿ ಮತ್ತು ಮಿತ್ರಪಕ್ಷಗಳ ಸರ್ಕಾರವಿದ್ದ ಉತ್ತರ ಪ್ರದೇಶ, ಕರ್ನಾಟಕ ಮತ್ತು ಬಿಹಾರದಲ್ಲೂ ರೈತರು ರಸ್ತೆಗಿಳಿದು ಪ್ರತಿಭಟನೆ ನಡೆಸಿದರು.

6. ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ

ಈ ಕಾಯ್ದೆಗಳ ವಿರುದ್ಧ 2020ರ ಡಿಸೆಂಬರ್ 2ನೇ ವಾರದಲ್ಲಿ ಕಿಸಾನ್ ಸಂಯುಕ್ತ ಮೋರ್ಚಾ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತು. ಕಾಯ್ದೆಗಳನ್ನು ರದ್ದುಪಡಿಸಲು ನಿರ್ದೇಶನ ನೀಡುವಂತೆ ಕೋರಲಾಯಿತು. ರೈತರ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿತು. ಪ್ರತಿಭಟನೆ ವೇಳೆ ರೈತರನ್ನು ಪೊಲೀಸರು ನಡೆಸಿಕೊಂಡ ಬಗ್ಗೆ ಸುಪ್ರೀಂ ಕೋರ್ಟ್ ಸರ್ಕಾರಗಳನ್ನು ತರಾಟೆಗೆ ತೆಗೆದುಕೊಂಡಿತು. ಈ ಕಾಯ್ದೆಗಳ ಪರಿಶೀಲನೆಗೆ ತಜ್ಞರ ಸಮಿತಿಯನ್ನು ರಚಿಸಿತು.

7. ಜನವರಿ 26ರ ಅವಘಡ

ಕಾಯ್ದೆಗಳ ರದ್ದತಿಗೆ ಆಗ್ರಹಿಸಿ ರೈತ ಸಂಘಟನೆಗಳು ಜನವರಿ 26ರ ಗಣರಾಜ್ಯೋತ್ಸವದ ದಿನ ದೆಹಲಿಯಲ್ಲಿ ಟ್ರ್ಯಾಕ್ಟರ್ ಪರೇಡ್ ನಡೆಸಲು ಕರೆ ನೀಡಿದವು. ಪೂರ್ವ ನಿಗದಿಯಂತೆ ಎಲ್ಲೆಡೆಯಿಂದ ರೈತರು ಟ್ರ್ಯಾಕ್ಟರ್‌ಗಳಲ್ಲಿ ದೆಹಲಿಯತ್ತ ಬಂದರು. ಕೆಂಪುಕೋಟೆಯಲ್ಲಿ ಸರ್ಕಾರದ ಕಾರ್ಯಕ್ರಮ ಮುಗಿದ ನಂತರ ರೈತರು ದೆಹಲಿ ಪ್ರವೇಶಕ್ಕೆ ಅವಕಾಶ ನೀಡಲಾಯಿತು.

ಜನವರಿ 26ರಂದು ಕೆಂಪುಕೋಟೆಯ ಮೇಲಿದ್ದ ತ್ರಿವರ್ಣಧ್ವಜವನ್ನು ಇಳಿಸಿ, ಅನ್ಯಧ್ವಜಗಳನ್ನು ಹಾರಿಸಿದ್ದ ಪ್ರತಿಭಟನಕಾರರು

ರೈತರ ಗುಂಪೊಂದು ಕೆಂಪುಕೋಟೆಗೆ ಮುತ್ತಿಗೆ ಹಾಕಿ, ಅಲ್ಲಿದ್ದ ರಾಷ್ಟ್ರಧ್ವಜವನ್ನು ಕೆಳಗೆ ಇಳಿಸಿತು. ಸಿಖ್ ಧಾರ್ಮಿಕ ಸಂಘಟನೆಯೊಂದರ ಧ್ವಜವನ್ನು ಹಾರಿಸಿತು. ಈ ವೇಳೆ ಪೊಲೀಸರು ಮತ್ತು ರೈತರ ಮಧ್ಯೆ ಸಂಘರ್ಷ ನಡೆದು ಹಲವರು ಗಾಯಗೊಂಡರು. ದೆಹಲಿ ಪ್ರವೇಶದ ವೇಳೆ ಟ್ರ್ಯಾಕ್ಟರ್ ಒಂದು ಮಗುಚಿಬಿದ್ದು, ಒಬ್ಬ ರೈತ ಮೃತಪಡಬೇಕಾಯಿತು. ಈ ಘಟನೆಗಳು ರೈತರ ಹೋರಾಟದಲ್ಲಿ ದೊಡ್ಡ ಹಿನ್ನಡೆಗೆ ಕಾರಣವಾಯಿತು. ಎರಡು ತಿಂಗಳು ಅಹಿಂಸಾ ರೂಪದಲ್ಲಿ ನಡೆದಿದ್ದ ಪ್ರತಿಭಟನೆ, ಜನವರಿ 26ರಂದು ಹಿಂಸಾಚಾರಕ್ಕೆ ಕಾರಣವಾಗಿತ್ತು. ಇದು ರೈತರಲ್ಲಿನ ಆತ್ಮಸ್ಥೈರ್ಯವನ್ನು ಕುಗ್ಗಿಸಿತು. ದೇಶದಾದ್ಯಂತ ರೈತರಿಗೆ ಬೆಂಬಲ ನೀಡಿದ್ದವರು, ಆ ಬಗ್ಗೆ ಯೋಚಿಸುವಂತಾಯಿತು. ಕೆಂಪುಕೋಟೆಯ ಮೇಲೆ ಹಾರಿಸಲಾದ ಧ್ವಜವು ಖಲಿಸ್ತಾನ್ ಹೋರಾಟಗಾರರ ಧ್ವಜ ಎಂದು ಸರ್ಕಾರವು ಹೇಳಿತು. 'ರೈತರ ಮಧ್ಯೆ ಭಯೋತ್ಪಾದಕರು ಸೇರಿಕೊಂಡಿದ್ದಾರೆ. ಪ್ರತಿಭಟನೆ ನಡೆಸುತ್ತಿರುವವರು ರೈತರಲ್ಲ, ಉಗ್ರರು' ಎಂದು ಕೇಂದ್ರ ಸರ್ಕಾರ ಘೋಷಿಸಿತು. ಬಿಜೆಪಿ ನಾಯಕರೂ ಇದನ್ನೇ ಪುನರುಚ್ಚರಿಸಿದರು.

8. ಹೋರಾಟದ ಮರುಹುಟ್ಟು

ಜನವರಿ 26ರ ಘಟನೆಗಳ ನಂತರ ರೈತರ ಪ್ರತಿಭಟನೆಗೆ ಇದ್ದ ಬೆಂಬಲ ಕಡಿಮೆಯಾಯಿತು. ಸಾವಿರಾರು ರೈತರು ದೆಹಲಿ ಗಡಿಗಳಿಂದ ತಮ್ಮ ಗ್ರಾಮಗಳಿಗೆ ಮರಳಾರಂಭಿಸಿದರು. ರೈತರ ಹೋರಾಟ ಕೊನೆಯಾಯಿತು ಎಂದೇ ವಿಶ್ಲೇಷಿಸಲಾಯಿತು. ಆದರೆ ಉತ್ತರ ಪ್ರದೇಶದ ಭಾರತೀಯ ಕಿಸಾನ್ ಯೂನಿಯನ್‌ನ (ಬಿಕೆಯು) ನಾಯಕ ರಾಕೇಶ್ ಟಿಕಾಯತ್ ಅವರು ರೈತರ ಎದುರು ಕಣ್ಣೀರಿಟ್ಟು, ಪ್ರತಿಭಟನೆ ಮುಂದುವರಿಸಬೇಕಾದ ಅಗತ್ಯವನ್ನು ಮನವರಿಕೆ ಮಾಡಿದರು. ಆನಂತರ ರೈತರ ಹೋರಾಟವು ಮರುಹುಟ್ಟು ಪಡೆಯಿತು. ರೈತರು ಮತ್ತೆ ಪ್ರತಿಭಟನೆಗೆ ಮರಳಿದರು.

ಈ ಹೋರಾಟದ ಅಗತ್ಯವನ್ನು ಮನಗಾಣಿಸಲು ರೈತ ಸಂಘಟನೆಗಳು ಪಂಜಾಬ್, ಹರಿಯಾಣ, ಉತ್ತರ ಪ್ರದೇಶದ ಹಲವೆಡೆ ರೈತ ಮಹಾಪಂಚಾಯಿತಿಗಳನ್ನು ಆಯೋಜಿಸಿದವು. ಇದಕ್ಕೆ ನಿರೀಕ್ಷೆಗಿಂತಲೂ ಹೆಚ್ಚು ಬೆಂಬಲ ವ್ಯಕ್ತವಾಯಿತು. ಈ ಕೃಷಿ ಕಾಯ್ದೆಗಳು ಮತ್ತು ಕೇಂದ್ರ ಸರ್ಕಾರದ ವಿರುದ್ಧ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ರೈತ ಸಂಘಟನೆಗಳು ಪ್ರಚಾರ ಮಾಡಿದವು. ಹರಿಯಾಣದಲ್ಲಿ ರೈತ ಮಹಾಪಂಚಾಯಿತಿ ನಡೆಸಿದ ರೈತರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಯಿತು. ಆದರೆ ರೈತ ಸಂಘಟನೆಗಳು ಮತ್ತೆ ಹೋರಾಟವನ್ನು ಕೈಬಿಡಲಿಲ್ಲ.

359 ದಿನ ರೈತರು ಪ್ರತಿಭಟನೆ ಆರಂಭಿಸಿ ಕಳೆದಿರುವ ದಿನಗಳ ಸಂಖ್ಯೆ	**750** ಪ್ರತಿಭಟನೆ ಆರಂಭವಾದಾಗಿನಿಂದ ಮೃತಪಟ್ಟ ಪ್ರತಿಭಟನನಿರತ ರೈತರ ಸಂಖ್ಯೆ

ಮಾಹಿತಿ: ಕಿಸಾನ್ ಸಂಯುಕ್ತ ಮೋರ್ಚಾ, ಭಾರತೀಯ ಕಿಸಾನ್ ಯೂನಿಯನ್

9. ಜಾಗತಿಕ ಮಟ್ಟಕ್ಕೆ ಒಯ್ದ ಟೂಲ್‌ಕಿಟ್

'ಟೂಲ್‌ಕಿಟ್' ವಿವಾದದಿಂದಾಗಿ ರೈತರ ಪ್ರತಿಭಟನೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯಿತು.

ರೈತರ ಪ್ರತಿಭಟನೆ ಹತ್ತಿಕ್ಕಲು ಭಾರತ ಸರ್ಕಾರ ದೆಹಲಿಯ ಸುತ್ತಲಿನ ಪ್ರದೇಶಗಳಲ್ಲಿ ಇಂಟರ್‌ನೆಟ್ ಕಡಿತಗೊಳಿಸಿದ್ದ ಕುರಿತು ಸಿಎನ್‌ಎನ್ ಸುದ್ದಿವಾಹಿನಿಯು ವರದಿ ಮಾಡಿತ್ತು. ಪರಿಸರಪರ ಕಾರ್ಯಕರ್ತೆ ಗ್ರೇಟಾ ಥನ್‌ಬರ್ಗ್ ಈ ವರದಿಯನ್ನು 2021ರ ಫೆ.3ರಂದು ಟ್ವೀಟ್ ಮಾಡಿದ್ದರು. 'ಭಾರತದ ರೈತರ ಪ್ರತಿಭಟನೆ ಜೊತೆ ನಾವು ನಿಲ್ಲುತ್ತೇವೆ' ಎಂದು ಹ್ಯಾಷ್‌ಟ್ಯಾಗ್ ನೀಡಿದ್ದರು. ಅದೇ ಹ್ಯಾಷ್‌ಟ್ಯಾಗ್ ಜೊತೆ ಮತ್ತೊಂದು ಟ್ವೀಟ್ ಮಾಡಿದ್ದರು. ಆದರೆ ಅದನ್ನು ಕೂಡಲೇ ಅಳಿಸಲಾಗಿತ್ತು. ಅಳಿಸಲಾದ ಟ್ವೀಟ್ ಅನ್ನು 'ಟೂಲ್‌ಕಿಟ್' ಎನ್ನಲಾಗಿದೆ.

ಟೂಲ್‌ಕಿಟ್‌ನಲ್ಲಿ ಏನಿದೆ?: ಭಾರತದ ರೈತರ ಜತೆ ಚರ್ಚೆ ನಡೆಸದೇ ನೂತನ ಕೃಷಿ ಕಾಯ್ದೆಗಳನ್ನು ಜಾರಿಗೆ ತರಲಾಗಿದೆ. ಇವು ರೈತರನ್ನು ಕಾರ್ಪೊರೇಟ್ ಕಂಪನಿಗಳ ನಿಯಂತ್ರಣಕ್ಕೆ ಸಿಲುಕಿಸುತ್ತವೆ. ಇವುಗಳ ವಿರುದ್ಧ ಹೋರಾಡುತ್ತಿರುವ ರೈತರಿಗೆ ಬೆಂಬಲ ಸೂಚಿಸಿ. ಫೆಬ್ರುವರಿ 13/14ರಂದು ಡಿಜಿಟಲ್ ಸ್ಟ್ರೈಕ್ ನಡೆಸಿ. ಸಾಮಾಜಿಕ ಜಾಲತಾಣಗಳಲ್ಲಿ #FarmersProtest #StandWithFarmers ಹ್ಯಾಷ್‌ಟ್ಯಾಗ್ ಬಳಸಿ, ಪೋಸ್ಟ್ ಮಾಡಿ. ಭಾರತದ ರಾಯಭಾರ ಕಚೇರಿಗಳ ಎದುರು ಪ್ರತಿಭಟನೆ ನಡೆಸಿ. ಫೆಬ್ರುವರಿ 13/14ಕ್ಕೂ ಮೊದಲೂ ಪ್ರತಿಭಟನೆ ನಡೆಸಿ. #AskIndiaWhy ಹ್ಯಾಷ್‌ಟ್ಯಾಗ್‌ನಲ್ಲಿ ಟ್ವೀಟ್ ಮಾಡಿ. ಟ್ವೀಟ್‌ನಲ್ಲಿ ಭಾರತದ ಪ್ರಧಾನಿ ಮತ್ತು ಕೃಷಿ ಸಚಿವರನ್ನು ಟ್ಯಾಗ್ ಮಾಡಿ ಎಂದು ಈ ಟೂಲ್‌ಕಿಟ್‌ನಲ್ಲಿ ಕರೆ ನೀಡಲಾಗಿದೆ.

ದೇಶದ್ರೋಹದ ಮೊಕದ್ದಮೆ: 2021ರ ಫೆ.4ರಂದು ದೆಹಲಿ ಪೊಲೀಸರು 'ಟೂಲ್‌ಕಿಟ್' ರಚಿಸಿರುವವರ (ಎಫ್‌ಐಆರ್‌ನಲ್ಲಿ ಯಾರನ್ನೂ ಹೆಸರಿಸಿಲ್ಲ) ವಿರುದ್ಧ ಕ್ರಿಮಿನಲ್ ಸಂಚು ಮತ್ತು ದೇಶದ್ರೋಹದ ಮೊಕದ್ದಮೆ ದಾಖಲಿಸಿದರು. ಭಾರತ ಸರ್ಕಾರದ ವಿರುದ್ಧ ಸಂಚು ನಡೆಸಲಾಗಿದೆ. ಜ.26ರಂದು ದೆಹಲಿಯಲ್ಲಿ ನಡೆದ ಹಿಂಸಾಚಾರಗಳು ಟೂಲ್‌ಕಿಟ್‌ನಲ್ಲಿ ನೀಡಿದ್ದ ಕಾರ್ಯಯೋಜನೆ ಮಾದರಿಯಲ್ಲೇ ನಡೆದಿವೆ ಎಂದು ದೆಹಲಿಯ ಅಪರಾಧ ತಡೆ ವಿಭಾಗದ ಪೊಲೀಸರು ಹೇಳಿದ್ದರು.

ಖ್ಯಾತ ಗಾಯಕಿ ರಿಯಾನಾ, ಸಾಮಾಜಿಕ ಕಾರ್ಯಕರ್ತೆ ಮೀನಾ ಹ್ಯಾರಿಸ್, ಕೆನಡ ಅಧ್ಯಕ್ಷ ಜಸ್ಟಿನ್ ಟ್ರೂಡೊ, ಅಮೆರಿಕದ ನಟ ಜಾನ್ ಕ್ಯೂಸಕ್ ಸೇರಿ ಜಗತ್ತಿನ ಹಲವಾರು ಪ್ರಭಾವಿಗಳು ಭಾರತದ ರೈತರ ಪ್ರತಿಭಟನೆಯನ್ನು ಬೆಂಬಲಿಸಿದರು.

ದಿಶಾ ರವಿ ಬಂಧನ: ಬೆಂಗಳೂರಿನ ಬಿಬಿಎ ವಿದ್ಯಾರ್ಥಿನಿ, ಪರಿಸರ ಕಾರ್ಯಕರ್ತೆ ದಿಶಾ ರವಿ ಅವರನ್ನು 2021ರ ಫೆ.13ರಂದು ದೆಹಲಿ ಪೊಲೀಸರು ಬಂಧಿಸಿದ್ದರು. ಪೊಲೀಸರ ಪ್ರಕಾರ, ಟೂಲ್‌ಕಿಟ್‌ಅನ್ನು ರಚಿಸಿದ್ದವರಲ್ಲಿ ದಿಶಾ ರವಿ ಕೂಡಾ ಒಬ್ಬರು. ಅದೇ ತಿಂಗಳು ಫೆ.23 ದಿಶಾ ಅವರಿಗೆ ಸೆಷನ್ಸ್ ಕೋರ್ಟ್‌ನಿಂದ ಜಾಮೀನು ದೊರಕಿತು. ದಿಶಾ ಬಂಧನದ ವಿರುದ್ಧವೂ ಆಕ್ರೋಶ ವ್ಯಕ್ತವಾಗಿತ್ತು.

ದಿಶಾ ರವಿ

ಭಾರತೀಯ ಸೆಲೆಬ್ರಿಟಿಗಳ ಪ್ರತಿಕ್ರಿಯೆ: ರೈತರ ಪ್ರತಿಭಟನೆ 'ಭಾರತದ ಆಂತರಿಕ ವಿಷಯ' ಇದನ್ನು ನಾವೇ ಬಗೆಹರಿಸಿಕೊಳ್ಳುತ್ತೇವೆ ಎಂಬರ್ಥದ ಟ್ವೀಟ್‌ಗಳನ್ನು ಭಾರತದ ಖ್ಯಾತನಾಮರಲ್ಲಿ ಕೆಲವರು ಮಾಡಿದ್ದರು. ಈ ಟ್ವೀಟ್‌ಗಳ ವಸ್ತು ಮತ್ತು ಬಳಕೆಯಾದ ಪದಗಳು ಒಂದೇ ರೀತಿ ಇದ್ದು, ಸರ್ಕಾರವೇ ಖ್ಯಾತನಾಮರಿಂದ ಟ್ವೀಟ್ ಮಾಡಿಸಿದೆ ಎಂದು ವಿಪಕ್ಷಗಳು ಟೀಕಿಸಿದ್ದವು.

10. 'ಹೆದ್ದಾರಿ ತಡೆ ಸರಿಯಲ್ಲ'

ದೆಹಲಿಯ ಗಡಿಗಳಲ್ಲಿ ರೈತರು ಪ್ರತಿಭಟನೆ ನಡೆಸುತ್ತಿರುವ ಕಾರಣ ತೊಂದರೆಯಾಗುತ್ತಿದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಯಿತು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ರೈತರ ಪ್ರತಿಭಟನೆಯಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಅಧ್ಯಯನ ನಡೆಸಿ, ವರದಿ ನೀಡಿ ಎಂದು ಕೇಂದ್ರ, ದೆಹಲಿ, ಹರಿಯಾಣ, ಪಂಜಾಬ್ ಮತ್ತು ಉತ್ತರ ಪ್ರದೇಶ ಸರ್ಕಾರಗಳಿಗೆ ನೋಟಿಸ್ ಜಾರಿ ಮಾಡಿತು. ಪ್ರತಿಭಟನೆಯಿಂದ ಆಗುತ್ತಿರುವ ಆರ್ಥಿಕ ತೊಂದರೆ, ಸಾಮಾಜಿಕ ಸಮಸ್ಯೆಗಳು, ಜನರ ಓಡಾಟಕ್ಕೆ ಆಗುತ್ತಿರುವ ತೊಂದರೆಗಳ ಬಗ್ಗೆ ಅಧ್ಯಯನ ನಡೆಸಿ ಎಂದು ಆಯೋಗವು ಸೂಚಿಸಿತ್ತು.

ರೈತರು ಹೆದ್ದಾರಿಗಳನ್ನು ಬಂದ್ ಮಾಡಿದ್ದಾರೆ ಎಂದು ಕೆಲವರು ಅರ್ಜಿ ಸಲ್ಲಿಸಿದರು. ಆದರೆ ಹೆದ್ದಾರಿ ಬಂದ್ ಮಾಡಿರುವುದು ರೈತರಲ್ಲ, ಪೊಲೀಸರು ಎಂಬುದನ್ನು ರೈತ ಸಂಘಟನೆಗಳು ನ್ಯಾಯಾಲಯಗಳಿಗೆ ಮನವರಿಕೆ ಮಾಡಿಕೊಟ್ಟವು.

ಲಖಿಂಪುರ ಖೇರಿ ರೈತರ ಹತ್ಯೆ

ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ಇದೇ ಅಕ್ಟೋಬರ್ 3ರಂದು ನಡೆದ ಪ್ರತಿಭಟನೆ ಮತ್ತು ಆನಂತರ ರೈತರ ಮೇಲೆ ಎಸ್‌ಯುವಿ ಹರಿಸಿ ನಾಲ್ವರನ್ನು ಕೊಂದ ಘಟನೆ ಬಹುದೊಡ್ಡ ಸುದ್ದಿಯಾಯಿತು.

ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಸ್ವಕ್ಷೇತ್ರದ ಪಟ್ಟಣವಾದ ಲಖಿಂಪುರ ಖೇರಿಯಲ್ಲಿ ಅಕ್ಟೋಬರ್ 3ರಂದು ಬಿಜೆಪಿಯ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿತ್ತು. ಅಜಯ್ ಮಿಶ್ರಾ ಅವರು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದರು. ಈ ಕಾರ್ಯಕ್ರಮದ ವೇಳೆ ಕಪ್ಪು ಬಾವುಟ ಪ್ರದರ್ಶಿಸುವುದಾಗಿ ರೈತರು ಹೇಳಿದ್ದರು. 'ನಮಗೆ ಅಡ್ಡಿಪಡಿಸಿದರೆ ತಕ್ಕಶಾಸ್ತಿ ಮಾಡುತ್ತೇನೆ' ಎಂದು ಸಚಿವ ಅಜಯ್ ಮಿಶ್ರಾ ಬೆದರಿಕೆ ಹಾಕಿದ್ದರು.

ಪೂರ್ವನಿಗದಿಯಂತೆ ಅಕ್ಟೋಬರ್ 3ರಂದು ಬಿಜೆಪಿಯ ಕಾರ್ಯಕ್ರಮ ನಡೆಯಿತು, ರೈತರು ಕಪ್ಪುಬಾವುಟವನ್ನೂ ಪ್ರದರ್ಶಿಸಿದರು. ರೈತರನ್ನು ಹೀಯಾಳಿಸಿ ಅಜಯ್ ಮಿಶ್ರಾ ಅವರು ಹೊರಟರು. ಪ್ರತಿಭಟನೆಯಿಂದ ರೈತರೂ ವಾಪಸಾಗುತ್ತಿದ್ದರು. ಅಜಯ್ ಮಿಶ್ರಾ ಅವರ ಮಾಲೀಕತ್ವದ ಒಂದು

ಹಿಂಬದಿಯಿಂದ ರೈತರ ಮೇಲೆ ನುಗ್ಗಿದ ಎಸ್‌ಯುವಿ (ವಿಡಿಯೊ ಸ್ಕ್ರೀನ್‌ಗ್ರ್ಯಾಬ್)

ಎಸ್‌ಯುವಿ ಹಿಂಬದಿಯಿಂದ ರೈತರ ಮೇಲೆ ನುಗ್ಗಿತು. ಆ ಕೃತ್ಯದಲ್ಲಿ ನಾಲ್ವರು ರೈತರು ಮೃತರಾದರು. ನಂತರ ಕೆರಳಿದ ರೈತರು ಅಜಯ್ ಮಿಶ್ರಾ ಅವರ ಎರಡು ಎಸ್‌ಯುವಿಗಳನ್ನು ಉರುಳಿಸಿ ಬೆಂಕಿ ಹಚ್ಚಿದರು. ನಂತರ ನಡೆದ ಹಿಂಸಾಚಾರದಲ್ಲಿ ನಾಲ್ವರು ಮೃತಪಟ್ಟರು.

ರೈತರ ಮೇಲೆ ನುಗ್ಗಿದ ಎಸ್‌ಯುವಿಯಲ್ಲಿ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರಿದ್ದರು. ರೈತರ ಮೇಲೆ ಅವರೇ ಎಸ್‌ಯುವಿ ನುಗ್ಗಿಸಿದ್ದು ಮತ್ತು ಗುಂಡು ಹಾರಿಸಿ ರೈತರನ್ನು ಕೊಂದರು ಎಂದು ಆಶಿಶ್ ಮಿಶ್ರಾ ವಿರುದ್ಧ ಎಫ್‌ಐಆರ್ ದಾಖಲಾಯಿತು. ರೈತರ ವಿರುದ್ಧವೂ ಎಫ್‌ಐಆರ್ ದಾಖಲಾಯಿತು. ಆಶಿಶ್ ಮಿಶ್ರಾ ತಲೆಮರೆಸಿಕೊಂಡರು. ಬಿಜೆಪಿ ಸರ್ಕಾರವು ಸಚಿವರ ಮಗನನ್ನು ರಕ್ಷಿಸುತ್ತಿದೆ ಎಂದು ರೈತ ಸಂಘಟನೆಗಳು ಮತ್ತು ವಿರೋಧ ಪಕ್ಷಗಳು ಆರೋಪಿಸಿದವು.

ನಂತರ ಆಶಿಶ್ ಮಿಶ್ರಾನನ್ನು ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಘಟನೆಯ ತನಿಖೆಗೆ ಉತ್ತರ ಪ್ರದೇಶ ಸರ್ಕಾರ ಎಸ್‌ಐಟಿ ರಚಿಸಿತು. ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಯಿತು. ತನಿಖೆಯಲ್ಲಿ ಈವರೆಗೆ ಆಗಿರುವ ಪ್ರಗತಿಯ ಬಗ್ಗೆ ಸುಪ್ರೀಂ ಕೋರ್ಟ್, ಉತ್ತರ ಪ್ರದೇಶ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು. ಆರೋಪಿಯನ್ನು ರಕ್ಷಿಸಲು ಅನುಕೂಲವಾಗುವಂತೆ ಸಾಕ್ಷ್ಯ ಸಂಗ್ರಹಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿತು. ಪಂಜಾಬ್–ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಾಕೇಶ್ ಕುಮಾರ್ ಜೈನ್ ಮೇಲ್ವಿಚಾರಣೆಯಲ್ಲಿ ಎಸ್‌ಐಟಿ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಆದೇಶಿಸಿದೆ.

ಆಧಾರ: ಪಿಟಿಐ, ಚಿತ್ರಗಳು: ಪಿಟಿಐ, ಎಎಫ್‌ಪಿ, ರಾಯಿಟರ್ಸ್

ಅಭಿಪ್ರಾಯಗಳು

ಪ್ರಧಾನಿ ಮೋದಿ ಸದಾ ದೇಶದ ಒಳಿತು ಮತ್ತು ಜನರ ಭಾವನೆ ಎರಡಕ್ಕೂ ಬೆಲೆ ಕೊಡುತ್ತಾರೆ. ದೇಶದ ರೈತರ ಭಾವನೆಗಳನ್ನು ಗಮನದಲ್ಲಿರಿಸಿಕೊಂಡು ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಇದು ಅವರ ಉದಾತ್ತತೆಯನ್ನು ತೋರುತ್ತದೆ

ನರೇಂದ್ರ ಸಿಂಗ್ ತೋಮರ್, ಕೇಂದ್ರ ಕೃಷಿ ಸಚಿವ



ಸ್ವಾತಂತ್ರ್ಯ ಹೋರಾಟಗಾರರ ರೀತಿಯಲ್ಲಿ ರೈತರು ಹೋರಾಡಿ ಗೆದ್ದರು. ರೈತರ ಧೈರ್ಯದ ಮುಂದೆ ಜಲಫಿರಂಗಿಯ ನೀರು ಬತ್ತಿಹೋಯಿತು, ಸರ್ಕಾರದ ಲಾಠಿಗಳು ಮುರಿದವು. ಆದರೆ, ಸರ್ಕಾರಕ್ಕೆ ರೈತರ ಆತ್ಮವಿಶ್ವಾಸ ಮತ್ತು ದೃಢತೆಯನ್ನು ಮುರಿಯಲು ಸಾಧ್ಯವಾಗಲಿಲ್ಲ

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ಪಟ್ಟುಬಿಡದೇ ಹೋರಾಟ ನಡೆಸಿದ ಮತ್ತು ಬಿಜೆಪಿ ತೋರಿದ ಕ್ರೌರ್ಯಕ್ಕೆ ಹೆದರದ ಪ್ರತಿಯೊಬ್ಬ ರೈತನಿಗೂ ಅಭಿನಂದನೆಗಳು. ಈ ಹೋರಾಟದಲ್ಲಿ ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಎಲ್ಲರಿಗೂ ನನ್ನ ಸಂತಾಪಗಳು

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಪ್ರಜಾಪ್ರಭುತ್ವ ಮಾದರಿಯ ಪ್ರತಿಭಟನೆಗಳು ಸಾಧಿಸಲಾಗದ್ದನ್ನು ಮುಂಬರಲಿರುವ ಚುನಾವಣೆಯ ಭಯ ಸಾಧಿಸಿದೆ. ಮೂರು ಕೃಷಿ ಕಾನೂನುಗಳನ್ನು ಹಿಂಪಡೆವ ನಿರ್ಧಾರವು ಪ್ರಧಾನಿಯ ಹೃದಯದಿಂದ ಬಂದದ್ದಲ್ಲ, ಅದು ಚುನಾವಣೆಯ ಭಯದಿಂದ ಬಂದದ್ದು

ಪಿ. ಚಿದಂಬರಂ, ಕಾಂಗ್ರೆಸ್ ನಾಯಕ

ರಾಜ್ಯದಲ್ಲಿ ಪ್ರತಿಭಟನೆ

ಬೆಂಗಳೂರು: ಕೃಷಿ ಕಾಯ್ದೆಗಳನ್ನು ವಿರೋಧಿಸಿ ರಾಜ್ಯದಲ್ಲಿಯೂ ಬಂದ್, ಪ್ರತಿಭಟನೆ, ರ‍್ಯಾಲಿಗಳು, ರಸ್ತೆ ತಡೆ, ಮಹಾಪಂಚಾಯಿತಿಗಳು ರಾಜ್ಯದಾದ್ಯಂತ ನಡೆದಿವೆ. ರೈತ ಸಂಘಟನೆಗಳು ಈ ಹೋರಾಟದ ಮುಂಚೂಣಿಯಲ್ಲಿದ್ದವು. ಕೇಂದ್ರ ಸರ್ಕಾರದ ವಿರುದ್ಧ ನಡೆದ ಹೋರಾಟದ ಪ್ರಮುಖ ಘಟನಾವಳಿಗಳ ಸಂಕ್ಷಿಪ್ತ ನೋಟ ಇಲ್ಲಿದೆ.

2020

- **ಸೆಪ್ಟೆಂಬರ್ 21:** ಸಂಯುಕ್ತ ಕಿಸಾನ್ ಮೋರ್ಚಾದ ಸಂಚಾಲನಾ ಸಮಿತಿ ಸದಸ್ಯ ಯೋಗೇಂದ್ರ ಯಾದವ್ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ರ‍್ಯಾಲಿ
- **ಅಕ್ಟೋಬರ್ 28:** ಭಾರತ ಬಂದ್ ಅಂಗವಾಗಿ ಕರ್ನಾಟಕದಲ್ಲೂ ಹಲವೆಡೆ ರಸ್ತೆ ತಡೆ. ಬೆಂಗಳೂರಲ್ಲಿ ಟೌನ್ ಹಾಲ್‌ನಿಂದ ಬೃಹತ್ ಮೆರವಣಿಗೆ
- **ನವೆಂಬರ್ 16:** ಬೆಂಗಳೂರಿನ ಮೌರ್ಯ ಹೋಟೆಲ್ ಗಾಂಧಿ ಪ್ರತಿಮೆ ಬಳಿ 15 ದಿನಗಳ ನಿರಂತರ ಸತ್ಯಾಗ್ರಹ
- **ಡಿಸೆಂಬರ್ 10:** ವಿವಿಧ ಸಂಘಟನೆಗಳಿಂದ ರಾಜಭವನ ಚಲೋ. ಮೆರವಣಿಗೆಯಲ್ಲಿ ಸುಮಾರು 5000 ಜನ ಭಾಗಿ

2021

- **ಜನವರಿ 26:** ಟ್ರ್ಯಾಕ್ಟರ್‌ಗಳ ಪರೇಡ್: ಗಣರಾಜ್ಯೋತ್ಸವ ದಿನ ಬೆಂಗಳೂರಿನಲ್ಲಿ ರಾರಾಜಿಸಿದ ಕೆಂಪು–ನೀಲಿ ಬಾವುಟಗಳು ಹಾಗೂ ಹಸಿರು ಶಾಲುಗಳು. ಹುಬ್ಬಳ್ಳಿ–ಧಾರವಾಡ, ಹಾವೇರಿ, ವಿಜಯಪುರ ಸೇರಿದಂತೆ ರಾಜ್ಯದ ಹಲವೆಡೆ ಕಾಂಗ್ರೆಸ್, ಎಡಪಕ್ಷ, ರೈತಸಂಘಟನೆಗಳಿಂದ ಟ್ರ್ಯಾಕ್ಟರ್ ರ‍್ಯಾಲಿ
- **ಫೆಬ್ರುವರಿ 6:** ದಾವಣಗೆರೆ, ಚಿತ್ರದುರ್ಗ ಸೇರಿದಂತೆ ರಾಜ್ಯದ ಹಲವೆಡೆ ಹೆದ್ದಾರಿ ತಡೆ
- **ಫೆಬ್ರುವರಿ 22ರಿಂದ ಮಾರ್ಚ್ 1ರವರೆಗೆ** ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣದ ವಿವಿಧ ಜನಪರ ಸಂಘಟನೆಗಳ ಕಾರ್ಯಕರ್ತರಿಂದ ದೆಹಲಿಯ ಗಡಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗಿ
- **ಮಾರ್ಚ್ 20:** ಶಿವಮೊಗ್ಗದ ಸೈನ್ಸ್ ಮೈದಾನದಲ್ಲಿ ರೈತ ಮಹಾ ಪಂಚಾಯಿತಿ. ರಾಕೇಶ್ ಟಿಕಾಯಿತ್ ಭಾಗಿ
- **ಮಾರ್ಚ್ 21:** ಹಾವೇರಿಯಲ್ಲಿ 'ರೈತ ಮಹಾ ಪಂಚಾಯಿತಿ'
- **ಮಾರ್ಚ್ 22:** ಸಂಯುಕ್ತ ಹೋರಾಟ ಕರ್ನಾಟಕ ವತಿಯಿಂದ ಬೆಂಗಳೂರಿನಲ್ಲಿ 'ವಿಧಾನಸೌಧ ಚಲೋ'. ಸ್ವಾತಂತ್ರ್ಯ ಉದ್ಯಾನದ ಬಳಿ ಸಾವಿರಾರು ರೈತರು
- **ಮಾರ್ಚ್ 24:** ಪ್ರಚೋದನಕಾರಿ ಭಾಷಣ ಆರೋಪ: ರಾಷ್ಟ್ರೀಯ ಸಂಯುಕ್ತ ಕಿಸಾನ್ ಮೋರ್ಚಾದ ಅಧ್ಯಕ್ಷ ರಾಕೇಶ್ ಟಿಕಾಯತ್ ವಿರುದ್ಧ ಹಾವೇರಿ ಹಾಗೂ ಶಿವಮೊಗ್ಗದ ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು
- **ಮಾರ್ಚ್ 26 ಭಾರತ್ ಬಂದ್:** ರೈತ ಸಂಘ ಮತ್ತು ಹಸಿರು ಸೇನೆ ಕಾರ್ಯಕರ್ತರಿಂದ ಪ್ರತಿಭಟನೆ, ರಸ್ತೆ ತಡೆ
- **ಮಾರ್ಚ್ 31:** ಕೃಷಿ ಕಾಯ್ದೆಗಳ ವಿರುದ್ಧ ಬೆಳಗಾವಿಯಲ್ಲಿ ಅಖಿಲ ಭಾರತ ಸಂಯುಕ್ತ ಕಿಸಾನ್ ಮೋರ್ಚಾದಿಂದ 'ರೈತ ಮಹಾಪಂಚಾಯಿತಿ'
- **ಜೂನ್ 26:** ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ರಾಜಭವನ ಚಲೋ. ರೈತ ಮುಖಂಡರ ಬಂಧನ, ಬಿಡುಗಡೆ
- **ಜುಲೈ 21:** ನವದೆಹಲಿಯ ಗಾಜಿಪುರ ಗಡಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕದ ರೈತರು ಭಾಗಿ
- **ನವೆಂಬರ್ 26:** ಚಳವಳಿಗೆ ಒಂದು ವರ್ಷ. ಹಲವೆಡೆ ಹೆದ್ದಾರಿ ಬಂದ್. ಜಾನುವಾರುಗಳ ಸಮೇತ ಪ್ರತಿಭಟನೆ
- **ಸೆ.27:** ಸಂಯುಕ್ತ ಕಿಸಾನ್ ಮೋರ್ಚಾ ವತಿಯಿಂದ ಕರೆ ನೀಡಿದ್ದ 'ಭಾರತ್ ಬಂದ್'ಗೆ ಹಲವು ಸಂಘಟನೆಗಳ ನೈತಿಕ ಬೆಂಬಲ. ರಾಜ್ಯದಾದ್ಯಂತ ಬೃಹತ್ ಪ್ರತಿಭಟನಾ ರ‍್ಯಾಲಿ

ಮೆರವಣಿಗೆ ಹೊರಟಿದ್ದಾರೆ... ಬೆಳಗಾವಿಯಲ್ಲಿ ರೈತ ಮಹಾಪಂಚಾಯಿತಿ ಅಂಗವಾಗಿ ರಾಣಿ ಚನ್ನಮ್ಮ ವೃತ್ತದಿಂದ ಸಿಪಿಇಡಿ ಕಾಲೇಜು ಮೈದಾನದವರೆಗೆ ಇತ್ತೀಚೆಗೆ ನಡೆದ ಮೆರವಣಿಗೆಯಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು (ಸಂಗ್ರಹ ಚಿತ್ರ)

'ರೈತರ ಬೇಡಿಕೆಗೆ ಸ್ಪಂದಿಸಿದ ಪ್ರಧಾನಿ'

ಬೆಂಗಳೂರು: ರೈತರ ಬೇಡಿಕೆಗಳಿಗೆ ಅನುಗುಣವಾಗಿಯೇ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೂರು ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆದಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಸುಧಾರಿಸಲು ಕಾಯ್ದೆಗಳನ್ನು ಜಾರಿ ಮಾಡಲಾಗಿತ್ತು. ಇದಕ್ಕೆ ರೈತರಲ್ಲಿ ಒಂದು ವರ್ಗ ವಿರೋಧಿಸಿತ್ತು. ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಕಾರಣಕ್ಕೆ ಹಿಂದಕ್ಕೆ ಪಡೆಯಲಾಗಿದೆ ಎಂದು ಹೇಳುವುದು ಸರಿಯಲ್ಲ ಎಂದು ಅವರು ಸುದ್ದಿಗಾರರಿಗೆ ಹೇಳಿದರು.

'ಯಾವುದೇ ಕಾನೂನನ್ನು ರೂಪಿಸುವಲ್ಲಿ ಅದರ ಬಗ್ಗೆ ಪರ– ವಿರೋಧ ವಾದಗಳು ಸಹಜ. ಪ್ರಜಾಪ್ರಭುತ್ವದಲ್ಲಿ ಸರ್ಕಾರಗಳು ನ್ಯಾಯ ಸಮ್ಮತವಾಗಿ ನಡೆದುಕೊಳ್ಳಬೇಕು ಎನ್ನುವುದನ್ನು ಪ್ರಧಾನಿಯವರು ನಿರೂಪಿಸಿದ್ದಾರೆ' ಎಂದರು. ಈ ಹೋರಾಟ ರೈತರದು. ಇದರಲ್ಲಿ ಯಾವುದೇ ರಾಜಕೀಯ ಪಕ್ಷಗಳನ್ನು ತೊಡಗಿಸಿರಲಿಲ್ಲ ಮತ್ತು ವೇದಿಕೆ ಹಂಚಿಕೊಳ್ಳಲು ಅವಕಾಶ ನೀಡಿರಲಿಲ್ಲ. ಆದ್ದರಿಂದ, ಕಾಂಗ್ರೆಸ್ ಪಕ್ಷ ಅದು ತನ್ನ ಜಯ ಎಂದು ಭಾವಿಸುವುದು ಹಾಸ್ಯಾಸ್ಪದ ಎಂದರು.

ಹಲವು ಧಾರೆಗಳು ಒಗ್ಗೂಡಿದ ಐತಿಹಾಸಿಕ ಘಟನೆ • ರಾಜ್ಯದ ಉದ್ದಗಲಕ್ಕೂ ಸಾವಿರಾರು ಹಳ್ಳಿಗಳಲ್ಲಿ ಜಾಗೃತಿ ಸಭೆ, ಜಾಥಾ

ರೈತರಿಗೆ ಬೆಂಬಲ: ಕರ್ನಾಟಕದ್ದೇ ಮುನ್ನುಡಿ

• ಕೆ.ನರಸಿಂಹಮೂರ್ತಿ

ಮೈಸೂರು: ಕೃಷಿ ತಿದ್ದುಪಡಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯಲ್ಲಿ ಮುಷ್ಕರ ಹಮ್ಮಿಕೊಂಡಿದ್ದ ರೈತರಿಗೆ ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲಿಗೆ ಬೆಂಬಲ ನೀಡಿದ್ದು ಕರ್ನಾಟಕ. ಈ ಬೆಂಬಲ ನೀಡುವ ಸಲುವಾಗಿಯೇ, ಭಿನ್ನ ಧಾರೆಗಳಲ್ಲಿ ಹರಿಯುತ್ತಿದ್ದ ಸಂಘಟನೆಗಳೆಲ್ಲವೂ ಒಂದಾಗಿದ್ದು ಇನ್ನೊಂದು ವಿಶೇಷ. ಹೋರಾಟದ ಕಿಚ್ಚು ಇನ್ನಿತರೆ ರಾಜ್ಯಗಳಿಗೂ ಹಬ್ಬಲು ಇದು ದಾರಿ ಮಾಡಿದ್ದು ಐತಿಹಾಸಿಕ ಘಟನೆ. ರೈತ ಚಳವಳಿ ರಾಷ್ಟ್ರೀಯ ಹೋರಾಟವಾಗಲು, 2021 ಆಂದೋಲನದ ವರ್ಷವಾಗಲು ಕೂಡ ರಾಜ್ಯ ಮುನ್ನುಡಿ ಬರೆಯಿತು.

ದೆಹಲಿ ರೈತರ ಮುಷ್ಕರವನ್ನು ಬೆಂಬಲಿಸಿ ಬಸವ ಕಲ್ಯಾಣದಿಂದ ಬಳ್ಳಾರಿವರೆಗೆ ನಡೆದಿದ್ದ ಪಾದಯಾತ್ರೆಯುದ್ದಕ್ಕೂ ಸಂಗ್ರಹಿಸಿದ ಮಣ್ಣಿನೊಂದಿಗೆ ಮುಖಂಡರು. (ಸಂಗ್ರಹ ಚಿತ್ರ)

ರೈತ ಸಂಘಗಳು, ಕೃಷಿ ಕೂಲಿಕಾರರ ಸಂಘ, ದಲಿತ ಸಂಘರ್ಷ ಸಮಿತಿಯ ಆರು ಬಣಗಳು, ಕಾರ್ಮಿಕ ಸಂಘಟನೆಗಳು, ಮಹಿಳಾ ಸಂಘಟನೆಗಳು, ವಿದ್ಯಾರ್ಥಿ–ಯುವಜನ ಸಂಘಟನೆಗಳು, ಎಡಪಂಥೀಯ ರೈತ ಸಂಘಟನೆಗಳು, ಜನಾಂದೋಲನ ಮಹಾ ಮೈತ್ರಿ, ಕರ್ನಾಟಕ ಜನಶಕ್ತಿ, ಐಕ್ಯ ಹೋರಾಟ– ಕರ್ನಾಟಕ, ಸ್ವರಾಜ್ ಇಂಡಿಯಾ, ಕಾಂಗ್ರೆಸ್, ಜೆಡಿಎಸ್, ಎಡಪಕ್ಷಗಳೆಲ್ಲವೂ ಒಗ್ಗಟ್ಟಾಗಿ 'ಸಂಯುಕ್ತ ಹೋರಾಟ–ಕರ್ನಾಟಕ'ದ ಮೂಲಕ ರೈತರಿಗೆ ಬೆಂಬಲ ನೀಡಿದವು. ರಾಜ್ಯದ ಉದ್ದಗಲಕ್ಕೂ ಸಾವಿರಾರು ಹಳ್ಳಿಗಳಲ್ಲಿ ಜಾಗೃತಿ ಸಭೆ, ಪಾದಯಾತ್ರೆ, ಜಾಥಾ, ಹೆದ್ದಾರಿ ತಡೆ, ಬಂದ್, ಕೇಂದ್ರ ಸರ್ಕಾರಿ ಕಚೇರಿಗಳ ಮುಂದೆ ಪ್ರತಿಭಟನೆ, ಟ್ರ್ಯಾಕ್ಟರ್ ರ‍್ಯಾಲಿಗಳು ನಡೆದಿದ್ದವು. ಕ್ರಾಂತಿಗೀತೆಗಳು ಮೊಳಗಿದ್ದವು.

ಸಂಘಟನೆಗಳ ಮುಖಂಡರು ತಮ್ಮೂರಿನಿಂದ ದೆಹಲಿಗೆ ತೆರಳಿ ಅಲ್ಲಿನ ಚಳಿಯಲ್ಲಿ ನಡುಗುತ್ತಲೇ ರೈತರೊಂದಿಗೆ ದಿನಗಟ್ಟಲೆ ಇದ್ದು ಬೆಂಬಲ ಸೂಚಿಸಿದರು. ವಾಪಸು ಬಂದು ಕಾರ್ಯಕರ್ತರಲ್ಲಿ ಇನ್ನಷ್ಟು ಹೋರಾಟದ ಕಿಚ್ಚು ತುಂಬಿದರು.

ಜೊತೆಗೆ, ದೆಹಲಿಯಲ್ಲಿ ಮುಷ್ಕರದ ನೇತೃತ್ವ ವಹಿಸಿದ್ದ ರಾಷ್ಟ್ರೀಯ ಸಂಯುಕ್ತ ಕಿಸಾನ್ ಮೋರ್ಚಾದ ಅಧ್ಯಕ್ಷ ರಾಕೇಶ್ ಟಿಕಾಯತ್, ಡಾ.ದರ್ಶನ್ ಪಾಲ್, ಯುದ್ಧವೀರ್ ಸಿಂಗ್, ಯೋಗೇಂದ್ರ ಯಾದವ್ ಸೇರಿದಂತೆ ಹಲವು ಮುಖಂಡರನ್ನೂ ರಾಜ್ಯಕ್ಕೆ ಕರೆ ತಂದರು.

ಶಿವಮೊಗ್ಗ, ಹಾವೇರಿ, ಬೆಳಗಾವಿಯಲ್ಲಿ ಮಾರ್ಚ್‌ನಲ್ಲಿ ರೈತ ಸಂಘ– ಹಸಿರು ಸೇನೆ, ಮೋರ್ಚಾ ಮತ್ತು 'ಐಕ್ಯ ಹೋರಾಟ' ವೇದಿಕೆಯ ಆಶ್ರಯದಲ್ಲಿ ನಡೆದಿದ್ದ 'ರೈತ ಮಹಾ ಪಂಚಾಯತ್' ರೈತರಲ್ಲಿ ಗಡಿ ರೇಖೆಗಳ ಮೀರಿದ ಐಕ್ಯತೆಯ ಭಾವನೆಯನ್ನು ಮೂಡಿಸಿತ್ತು. ಪ್ರಚೋದನಕಾರಿ ಭಾಷಣಗಳನ್ನು ಮಾಡಿದ ಕಾರಣಕ್ಕೆ ಮುಖಂಡರ ವಿರುದ್ಧ ಸ್ಥಳೀಯ ಠಾಣೆಗಳಲ್ಲಿ ಪ್ರಕರಣಗಳು ದಾಖಲಾದವು. ಅದಕ್ಕೆ ಬೆದರದೆ, ಹಲವು ಜಿಲ್ಲೆಗಳ ಸಾವಿರಾರು ಮಂದಿ ಸ್ವಯಂಸ್ಫೂರ್ತಿಯಿಂದ ದೆಹಲಿಗೆ ತೆರಳಿ ಹೋರಾಟಗಾರರಿಗೆ ಬೆಂಬಲ ಸೂಚಿಸಿದರು. ರೈತ ಸಂಘ ಸುಮಾರು 10 ಲಕ್ಷ ಜಾಗೃತಿ ಕರಪತ್ರಗಳನ್ನು ಹಂಚಿತ್ತು.

ಚುಕ್ಕಿ ನಂಜುಂಡಸ್ವಾಮಿ, ಕೆ.ಟಿ. ಗಂಗಾಧರ್, ನೂರ್ ಶ್ರೀಧರ್, ಶೋಭಾ ಸುಂದರೇಶ್, ಕೋಡಿಹಳ್ಳಿ ಚಂದ್ರಶೇಖರ್, ಬಡಗಲಪುರ ನಾಗೇಂದ್ರ, ನಾಗರಾಜ್ ಸಿರಿಮನೆ, ಕಡಿದಾಳು ಶಾಮಣ್ಣ, ಎಚ್.ಆರ್. ಬಸವರಾಜಪ್ಪ, ಪ್ರಕಾಶ್ ಕಮ್ಮರಡಿ, ಲೇಖಕ ಸ.ರಘುನಾಥ, ಚಾಗನೂರು ಮಲ್ಲಿಕಾರ್ಜುನ ರೆಡ್ಡಿ, ಯಶವಂತ್, ಶಿವಕುಮಾರ್ ಸೇರಿದಂತೆ ಹತ್ತಾರು ಮುಖಂಡರು ರಾಜ್ಯದಲ್ಲಿ ಮುಷ್ಕರಕ್ಕೆ ಬೆಂಬಲ ಎಂಬ ಮಹಾ ಘಟನೆಯನ್ನು ಸಮರ್ಥವಾಗಿ ರೂಪಿಸಿದರು.

ರಾಜ್ಯದಲ್ಲಿ ಎನ್.ಡಿ.ಸುಂದರೇಶ್ ಮತ್ತು ಪ್ರೊ.ಎಂ.ನಂಜುಂಡಸ್ವಾಮಿ ರೂಪಿಸಿದ ರೈತ ಚಳವಳಿಯ ಆತ್ಮಾವಲೋಕನಕ್ಕೂ ರೈತರ ಮುಷ್ಕರ ಗಟ್ಟಿ ನೆಲೆ ಒದಗಿಸಿದ್ದನ್ನು ಮರೆಯುವಂತಿಲ್ಲ.

ದೆಹಲಿಯಲ್ಲಿ ರೈತರ ಮುಷ್ಕರ ಶುರುವಾಗುವ ಮುಂಚೆಯೇ, ರಾಜ್ಯದಲ್ಲಿ ಭೂ ಸುಧಾರಣೆ ಕಾಯಿದೆ, ಎಪಿಎಂಸಿ ತಿದ್ದುಪಡಿ ಕಾಯಿದೆ, ವಿದ್ಯುಚ್ಛಕ್ತಿ ಖಾಸಗೀಕರಣ ತಿದ್ದುಪಡಿ ಕಾಯಿದೆ ವಿರೋಧಿಸಿ ಹಲವು ಸಂಘಟನೆಗಳು 'ಐಕ್ಯ ಹೋರಾಟ– ಕರ್ನಾಟಕ'ದ ಹೆಸರಿನಲ್ಲಿ 2020ರ ಸೆಪ್ಟೆಂಬರ್‌ನಲ್ಲೇ ಹೋರಾಟವನ್ನು ಆರಂಭಿಸಿದ್ದವು.

ನವೆಂಬರ್‌ನಲ್ಲಿ ದೆಹಲಿ ಮುಷ್ಕರ ಶುರುವಾಗುವ ಹೊತ್ತಿಗೆ ಸಂಯುಕ್ತ ಹೋರಾಟ ವೇದಿಕೆ ಅಡಿಯಲ್ಲೇ ಹೋರಾಟ ಮುಂದುವರಿಸುವ ಪ್ರಯತ್ನಗಳೂ ಶುರುವಾದವು. ಈ ಪ್ರಕ್ರಿಯೆಯಲ್ಲಿ ಏರ್ಪಟ್ಟ ಗೊಂದಲದಿಂದಾಗಿ ಕೆಲವರು ಹೊರಗುಳಿದರು. ಆದರೆ, ಹೋರಾಟಕ್ಕೇನೂ ತೊಂದರೆ ಆಗಲಿಲ್ಲ.

ಮಾರ್ಚ್ ನಂತರ ಕರ್ನಾಟಕದಲ್ಲಿ ಕೋವಿಡ್ ಎರಡನೇ ಅಲೆ ಶುರುವಾದ ಬಳಿಕ ಹೋರಾಟದ ಕಿಚ್ಚು ಕೊಂಚ ತಣ್ಣಗಾಗಿತ್ತು. ಎರಡನೇ ಅಲೆ ಮುಗಿದ ಬಳಿಕ, ಕೇಂದ್ರದೊಂದಿಗೆ ರಾಜ್ಯ ಸರ್ಕಾರವನ್ನೂ ಗುರಿಯಾಗಿಸಿ ಹೋರಾಟವನ್ನು ಶುರು ಮಾಡಬೇಕು ಎಂಬ ಸಿದ್ಧತೆ ನಡೆಸುವ ಹೊತ್ತಿಗೆ ಪ್ರಧಾನಿ ಮೂರು ಕಾಯ್ದೆಗಳನ್ನು ವಾಪಸು ಪಡೆಯುವ ಘೋಷಣೆ ಮಾಡಿದ್ದಾರೆ. ಆದರೆ, ರಾಜ್ಯದಲ್ಲಿ ತಿದ್ದುಪಡಿ ಕಾಯ್ದೆಗಳ ಕುರಿತು ಸರ್ಕಾರದ ನಿಲುವೇನು ಎಂಬುದನ್ನು ಸ್ಪಷ್ಟಪಡಿಸದಿದ್ದರೆ ಮತ್ತೆ ಹೋರಾಟ ನಡೆಸಲು ಮುಖಂಡರು ವೇದಿಕೆ ಸಜ್ಜುಗೊಳಿಸುತ್ತಿದ್ದಾರೆ.

ರೈತ ಸ್ಮಾರಕಕ್ಕೆ ಕರ್ನಾಟಕದ ಮಣ್ಣು!

ದೆಹಲಿಯ ಮೂರು ಗಡಿಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ರೈತ ಸ್ಮಾರಕಗಳಿಗೆ ಕರ್ನಾಟಕದ ರೈತ ಹೋರಾಟಗಳ ನೆನಪಿನ ಮಣ್ಣು ಕೂಡ ಸೇರ್ಪಡೆಯಾಗಿದೆ.

ರೈತರ ಮುಷ್ಕರವನ್ನು ಬೆಂಬಲಿಸಿ ರೈತ ಸಂಘ, ಚಾಗನೂರು–ಸಿರಿವಾರ ಭೂ ಸಂರಕ್ಷಣಾ ಹೋರಾಟ ಸಮಿತಿಯ ನೇತೃತ್ವದಲ್ಲಿ ಮಾರ್ಚ್ 5ರಿಂದ 23ರವರೆಗೆ ಬಸವ ಕಲ್ಯಾಣದಿಂದ ಬಳ್ಳಾರಿವರೆಗೆ ನಡೆಸಿದ್ದ ರೈತರ ಪಾದಯಾತ್ರೆಯ ಸಂದರ್ಭದಲ್ಲಿ 26 ಗ್ರಾಮಗಳ ಹೊಲಗಳಿಂದ ಮಣ್ಣನ್ನು ಸಂಗ್ರಹಿಸಲಾಗಿತ್ತು. ಲೇಖಕ ಸ.ರಘುನಾಥ ಪ್ರತಿ ಗ್ರಾಮದಿಂದಲೂ ಒಂದು ಹಿಡಿ ಮಣ್ಣನ್ನು ಸಂಗ್ರಹಿಸಿದ್ದರು. ಅದನ್ನು ಬಿ.ಆರ್.ಪಾಟೀಲರ ಮೂಲಕ ದೆಹಲಿಗೆ ರವಾನಿಸಲಾಗಿತ್ತು.

ಹೋರಾಟಗಾರರಿಗೆ ಚಿಕಿತ್ಸೆ ನೀಡಿದ್ದ ಬಳ್ಳಾರಿ ವೈದ್ಯ

ಮೈಸೂರು: ಎಂಟು ದಿನಗಳ ಕಾಲ ದೆಹಲಿಯ ಸಿಂಘು ಗಡಿಯಲ್ಲಿ ರೈತರ ಮುಷ್ಕರದ ಪ್ರಮುಖ ವೇದಿಕೆಯ ಹಿಂಭಾಗದ ಟೆಂಟ್‌ನಲ್ಲಿ ಕುಳಿತು ಬಳ್ಳಾರಿಯ ವೈದ್ಯ ಡಾ.ಎನ್.ಪ್ರಮೋದ್ ಸಾವಿರಾರು ಹೋರಾಟಗಾರರಿಗೆ ಆರೋಗ್ಯ ಸೇವೆ ನೀಡಿದ್ದರು.

ಪ್ರಮೋದ್

ಎಐಡಿಎಸ್‌ಓ ಅಖಿಲ ಭಾರತ ಉಪಾಧ್ಯಕ್ಷ ಹಾಗೂ ಎಸ್‌ಯುಸಿಐಸಿ ಬಳ್ಳಾರಿ ಜಿಲ್ಲಾ ಸಮಿತಿ ಸದಸ್ಯರಾಗಿರುವ ಡಾ.ಪ್ರಮೋದ್, ರೈತರಿಗೆ ಬೆಂಬಲವಾಗಿ ನಿಂತಿರುವ ಮೆಡಿಕಲ್ ಸರ್ವಿಸ್ ಸೆಂಟರ್‌ನಿಂದ ಫೆ.27ರಂದು ಕರೆ ಬಂದ ಮಾರನೇ ದಿನವೇ ದೆಹಲಿಯಲ್ಲಿದ್ದರು. ಅವರು ವೈದ್ಯ ವೃತ್ತಿಯನ್ನು ಅವಲಂಬಿಸದೆ, ಪಕ್ಷ ಮತ್ತು ವಿದ್ಯಾರ್ಥಿ ಸಂಘಟನೆಗೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ.

ಮುಷ್ಕರದ ಸ್ಥಳಕ್ಕೆ ತೆರಳಲು ಪೊಲೀಸರೂ ಬಿಡದ ಕಾರಣ ಅಡ್ಡದಾರಿಯಲ್ಲಿ 3 ಕಿಮೀ ಅವರು ನಡೆದೇ ಹೋಗಿದ್ದರು. ಮಾರ್ಚ್ 3ರಂದು ವಾಪಸು ಬರುವಾಗಲೂ ಕಷ್ಟವಾಗಿತ್ತು. ಆ ಮಾರ್ಗದಲ್ಲಿ ಜನ ಬರಬಾರದು ಮತ್ತು ಹೋಗಬಾರದು ಎಂಬ ಕಾರಣಕ್ಕೆ 10 ಅಡಿಯ ಹಳ್ಳವನ್ನು ತೋಡಲಾಗಿತ್ತು.

'ಆಗ ಹೆಮ್ಮೆಪಟ್ಟಿದ್ದೆ. ಐತಿಹಾಸಿಕ ಹೋರಾಟದ ಭಾಗವಾಗಿದ್ದಕ್ಕೆ ಈಗ ಇನ್ನಷ್ಟು ಹೆಮ್ಮೆಯಾಗುತ್ತಿದೆ' ಎಂದು ಡಾ.ಪ್ರಮೋದ್ ಪ್ರತಿಕ್ರಿಯಿಸಿದರು.

'ಪ್ರತಿಷ್ಠೆಯಾಗಿ ತೆಗೆದುಕೊಳ್ಳದೆ ಐತಿಹಾಸಿಕ ನಿರ್ಧಾರ'

ಹುಬ್ಬಳ್ಳಿ: ಕೇಂದ್ರ ಸರ್ಕಾರ ಯಾವುದೇ ಒಣ ಪ್ರತಿಷ್ಠೆಯಾಗಿ ತೆಗೆದುಕೊಳ್ಳದೆ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಲು ನಿರ್ಧರಿಸಿ ರೈತರ ಭಾವನೆಗಳಿಗೆ ಬೆಲೆ ನೀಡಿದೆ. ಇದು ಪ್ರಧಾನಿ ನರೇಂದ್ರ ಮೋದಿ ಅವರ ಐತಿಹಾಸಿಕ ತೀರ್ಮಾನ ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 'ಚುನಾವಣೆ ಕಾರಣದಿಂದ ಕೇಂದ್ರ ಈ ನಿರ್ಧಾರ ಕೈಗೊಂಡಿಲ್ಲ. ಕಾಯ್ದೆಯಲ್ಲಿ ಲೋಪದೋಷಗಳೂ ಇರಲಿಲ್ಲ. ಆದರೆ, ರೈತರ ಹಿತದೃಷ್ಟಿಯಿಂದ ರದ್ದು ಮಾಡಿದೆ. ವಿಳಂಬವಾದರೂ ರೈತರಿಗೆ ಸ್ಪಂದಿಸಿದೆ' ಎಂದರು. ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಭುಗಳ ಮಾತೇ ಅಂತಿಮ. ಕಾಯ್ದೆಗಳನ್ನು ವಾಪಸ್ ಪಡೆಯುವ ಮೂಲಕ ಪ್ರಧಾನಿ ಮೋದಿ ಅವರು ಪ್ರಭುಗಳ ಮಾತಿಗೆ ಬೆಲೆ ನೀಡಿದ್ದಾರೆ' ಎಂದರು.

ನೈತಿಕ ಬೆಂಬಲ ನೀಡಿದ ಯುವ ಸಂಘಟನೆ

ರೈತರಿಗೆ ಕನ್ನಡಿಗನ ನೆರವು

ಪ್ರಜಾವಾಣಿ ವಾರ್ತೆ

ನವದೆಹಲಿ: ಹೆಚ್ಚು ಕಡಿಮೆ ಸತತ ಒಂದು ವರ್ಷದಿಂದ ದೆಹಲಿಯ ಗಡಿಗಳಲ್ಲಿ ನಡೆದಿರುವ ರೈತರ ಹೋರಾಟಕ್ಕೆ ಮೊದಲ ದಿನದಿಂದಲೇ ನೈತಿಕ ಬೆಂಬಲ ಘೋಷಿಸಿ, ಅವರಿಗೆ ನೆರವಾಗಿ ನಿಂತವರಲ್ಲಿ ಕನ್ನಡಿಗರೊಬ್ಬರಿದ್ದಾರೆ.

ತಮ್ಮ ಸಂಘಟನೆಯ ಹೆಸರು ಹೇಳಿಕೊಳ್ಳದೆ, ಬ್ಯಾನರ್ ಬಳಸದೆ, ರೈತ ಹೋರಾಟಗಾರರ 'ಹೊಟ್ಟೆ–ನೆತ್ತಿ'ಯ ಚಿಂತೆ ಮಾಡಿದ್ದು ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ, ಭದ್ರಾವತಿ ಮೂಲದ ಬಿ.ವಿ. ಶ್ರೀನಿವಾಸ್.

ದೆಹಲಿಯ ಮೂರೂ ಗಡಿಗಳಲ್ಲಿ ಪ್ರತಿಭಟನಾನಿರತ ಸಾವಿರಾರು ರೈತರಿಗೆ, ನಿತ್ಯವೂ ಅವರ ಭೇಟಿಗೆ ಬರುತ್ತಿದ್ದ ರೈತ ಸಂಘಟನೆಗಳ ಸದಸ್ಯರಿಗೆ ಊಟ, ತಿಂಡಿ, ವೈದ್ಯಕೀಯ ನೆರವು, ಗಂಟೆಗೆ 2,200 ರೊಟ್ಟಿ ಸಿದ್ಧಪಡಿಸುವ ಯಂತ್ರ, ವಸತಿಗೆ ಟೆಂಟ್, ಫ್ಯಾನ್, ಕಂಬಳಿ, ಸ್ವೆಟರ್ ಮತ್ತಿತರ ಅಗತ್ಯ ವಸ್ತುಗಳನ್ನು ಪೂರೈಸಿದವರಲ್ಲಿ ಇವರ ಸಂಘಟನೆ ಪ್ರಮುಖ ಪಾತ್ರ ವಹಿಸಿದೆ.

ಕೃಷಿ ಕಾಯ್ದೆ ವಿರೋಧಿಸಿ ದೆಹಲಿ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರಿಗೆ ಅಡುಗೆ ಸಿದ್ಧಪಡಿಸುತ್ತಿರುವ ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ –(ಸಂಗ್ರಹ ಚಿತ್ರ)

'ರೈತರಿಗೆ ಬೆಂಬಲವಾಗಿ ನಿಲ್ಲಬೇಕೆಂಬ ನಿರ್ಧಾರಕ್ಕೆ ಸಂಘಟನೆಯ ಬಹುತೇಕ ಯುವಪಡೆ ಒಪ್ಪಿಗೆ ಸೂಚಿಸಿದ್ದೇ ತಡ, ಮೊದಲ ದಿನದಿಂದಲೇ ಗಡಿಗಳಿಗೆ ಧುಮುಕಿದೆವು. ರಾಜಕೀಯೇತರ ಸಂಘಟನೆಗಳಿಗೆ ಮಾತ್ರ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಅವಕಾಶ ಇದ್ದುದರಿಂದ ನಾವು ಹೊರಗಿನಿಂದಲೇ ಈ ಮೂಲಕ ಬೆಂಬಲ ನೀಡಿದೆವು' ಎಂದು ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮದು ರಾಜಕೀಯ ಸಂಘಟನೆ ಎಂಬುದು ಪ್ರತಿಭಟನಾಕಾರರಿಗೆ ಮೂರು ತಿಂಗಳ ನಂತರವಷ್ಟೇ ಗೊತ್ತಾಯಿತು. ನಾವು ಹೋರಾಟದಲ್ಲಿ ರಾಜಕೀಯ ಬೆರೆಸುವ ಮನಸ್ಸು ಮಾಡದಿದ್ದುದೂ ಅದಕ್ಕೆ ಕಾರಣ. ಯಾವುದೇ ನಿರೀಕ್ಷೆ ಇಟ್ಟುಕೊಳ್ಳದ ನಮ್ಮ ಸೇವೆಯನ್ನು ಮುಂದುವರಿಸಲೂ ರೈತರು ಅನುವು ಮಾಡಿಕೊಟ್ಟರು' ಎಂದೂ ಅವರು ಹೇಳಿದರು.

ಕಾಯ್ದೆ ವಿರುದ್ಧ ಹೋರಾಟಕ್ಕಿಳಿದ ರೈತರನ್ನು 'ಖಲಿಸ್ತಾನ್ ಬೆಂಬಲಿಗರು', 'ಕಮ್ಯುನಿಸ್ಟರು', 'ಕಾಂಗ್ರೆಸ್ಸಿನವರು', 'ದೇಶದ್ರೋಹಿಗಳು' ಎಂದು ದೂಷಿಸಿದವರೇ ಕೊನೆಗೆ ಸೋತರು. ಕಾಯ್ದೆ ರದ್ದತಿಯ ನಿರ್ಧಾರವು 'ಸಂವಿಧಾನ'ಕ್ಕೆ, ಮಹಾತ್ಮ ಗಾಂಧೀಜಿ ಸಾರಿದ 'ಶಾಂತಿ ಮಂತ್ರ'ಕ್ಕೆ ದೊರೆತ ಗೆಲುವು ಎಂಬುದು ಸಮಾಧಾನದ ಸಂಗತಿ ಎಂದ ಅವರು, 770 ಜನ ರೈತರು ಹೋರಾಟದಲ್ಲಿ ಹುತಾತ್ಮರಾಗಿದ್ದಾರೆ. ಅವರ ಹೆಸರು ಚಿರಸ್ಥಾಯಿಯಾಗಬೇಕಿದೆ. ಹುತಾತ್ಮ ರೈತರ ಸ್ಮಾರಕ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಮುಂದಾಗಬೇಕಿದೆ ಎಂದೂ ಅವರು ಆಗ್ರಹಿಸಿದರು.

ಗುಪ್ತದಳದ ಮಾಹಿತಿ ಕಾರಣ: ಕಾಂಗ್ರೆಸ್

ಬೆಂಗಳೂರು: 'ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ತೀವ್ರ ಮುಖಭಂಗ ಅನುಭವಿಸಲಿದೆ ಎಂಬ ಗುಪ್ತದಳದ ವರದಿಯೇ ಪ್ರಧಾನಿ ನರೇಂದ್ರ ಮೋದಿ ಕೃಷಿ ಸಂಬಂಧಿ ಮೂರು ಕಾಯ್ದೆಗಳನ್ನು ಹಿಂಪಡೆಯುವ ನಿರ್ಧಾರ ಪ್ರಕಟಿಸಲು ಕಾರಣ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಸಿದ್ದರಾಮಯ್ಯ

'ಹಲವು ರಾಜ್ಯಗಳಲ್ಲಿ ಚುನಾವಣೆಯ ಅಗ್ನಿಪರೀಕ್ಷೆ ಎದುರಾಗುತ್ತಿದೆ. ಈ ಸಂದರ್ಭದಲ್ಲಿ ಹಿನ್ನಡೆಯಾಗಬಹುದು ಎಂಬ ವರದಿಗಳು ಮೋದಿ ಅವರನ್ನು ತಲುಪಿವೆ. ಚುನಾವಣೆಗಳು ಮುಗಿಯುವವರೆಗೆ ತಾತ್ಕಾಲಿಕವಾಗಿ ಕಾಯ್ದೆಗಳನ್ನು ಹಿಂಪಡೆದಿದ್ದಾರೆ' ಎಂದು ತಿಳಿಸಿದ್ದಾರೆ.

ಕೇಂದ್ರ ಬಿಜೆಪಿ ಸರ್ಕಾರದ ಪ್ರತಿ ನೀತಿ ಮತ್ತು ಕಾರ್ಯಕ್ರಮಗಳು ರೈತ ವಿರೋಧಿಯಾದುವು. ಬಿಜೆಪಿ ವಿರುದ್ಧದ ಹೋರಾಟ ಮುಂದುವರಿಯಲಿದೆ ಎಂದಿದ್ದಾರೆ.

ಹೋರಾಟಕ್ಕೆ ಕನ್ನಡಿಗರ ಸಾಥ್

ನವದೆಹಲಿ: ರೈತರ ಹೋರಾಟದಲ್ಲಿ ಕರ್ನಾಟಕದ ರೈತಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡು ಬೆಂಬಲಿಸಿದ್ದರು. ರಾಜ್ಯದ ಹಲವು ರೈತಪರ ಸಂಘಟನೆಗಳ ಮುಖಂಡರು ದೆಹಲಿಗೆ ಧಾವಿಸಿದ್ದರು.

ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತಸಂಘ, ರಾಜ್ಯ ರೈತಸಂಘ ಮತ್ತು ಹಸಿರುಸೇನೆ, ರೈತ ಸಂಘಟನೆಗಳ ಒಕ್ಕೂಟ ಮತ್ತು ಕಬ್ಬು ಬೆಳೆಗಾರರ ಸಂಘಗಳ ಸದಸ್ಯರು ಸಂಯುಕ್ತ ಕಿಸಾನ್ ಮೋರ್ಚಾದೊಂದಿಗೆ ಕೈಜೋಡಿಸಿ ದೆಹಲಿ ಗಡಿ ಕಾಯ್ದರು.

ಚುಕ್ಕಿ ನಂಜುಂಡಸ್ವಾಮಿ, ಕೆ.ಟಿ. ಗಂಗಾಧರ್, ವಿದ್ಯಾ ಸಾಗರ್, ಮಂಜು ಕಿರಣ್, ನಳಿನಿ, ಮತ್ತಿತರರು ರಾಜ್ಯದ ರೈತರಿಗಾಗಿ ಪ್ರತ್ಯೇಕ ಟೆಂಟ್ ಹಾಕಿ ಹತ್ತಾರು ದಿನಗಳ ಕಾಲ ಸರದಿಯಲ್ಲಿ ಪ್ರತಿಭಟನೆ ನಡೆಸಿದರು. ಕುರಬೂರು ಶಾಂತಕುಮಾರ್, ಕೋಡಿಹಳ್ಳಿ ಚಂದ್ರಶೇಖರ್, ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಾಗರಾಜ ಕಲ್ಕುಟುಗ

ಕಿಸಾನ್ ಸಂಸತ್ ಕಾರ್ಯಕ್ರಮದ ಬಳಿಕ ರೈತರು, ಉತ್ತರ ಪ್ರದೇಶದ ಮುಜಫ್ಫರ್ ನಗರದಲ್ಲಿ ನಡೆದ ಮಹಾ ಪಂಚಾಯತ್ ಸಭೆಗಳಲ್ಲಿ ಕನ್ನಡದಲ್ಲೇ ಮಾತನಾಡಿದ್ದರು.

ಬಾಗಲಕೋಟೆ ಜಿಲ್ಲೆಯ ನಾಗರಾಜ ಕಲ್ಕುಟುಗ ಎನ್ನುವ ಯುವಕ ಕಾಲ್ನಡಿಗೆಯಲ್ಲೇ ದೆಹಲಿ ತಲುಪಿದರು.

ಫೆಬ್ರುವರಿಯಲ್ಲಿ ಮಹದೇಶ್ವರ ಬೆಟ್ಟದಿಂದ ಹೊರಟು ಅಂದಾಜು 5,100 ಕಿ.ಮೀ. ಸಂಚರಿಸಿದರು. ಪೂರ್ವನಿಗದಿಯಂತೆ ಇದೇ 21ಕ್ಕೆ ಗಾಜಿಪುರ ತಲುಪಲಿದ್ದ ನಾಗರಾಜ್, ಪ್ರಧಾನಿಯವರ ಘೋಷಣೆ ನಂತರ ವಾಹನವೇರಿ ದೆಹಲಿ ಗಡಿಯಲ್ಲಿನ ಪ್ರತಿಭಟನಾಕಾರರನ್ನು ಭೇಟಿ ಮಾಡಿದರು.

'ರೈತರ ಪಾದಮುಟ್ಟಿ ಕ್ಷಮೆ ಕೇಳಿ'

ಗದಗ: 'ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆದು ಕೇಂದ್ರ ಸರ್ಕಾರ ಪಶ್ಚಾತ್ತಾಪದ ಮೊದಲ ಹೆಜ್ಜೆ ಇಟ್ಟಿದೆ. ಅನ್ನದಾತರನ್ನು ದೇಶದ್ರೋಹಿಗಳು, ಭಯೋತ್ಪಾದಕರು ಎಂದು ಕರೆದಿದ್ದಕ್ಕೆ ಬಿಜೆಪಿ ನಾಯಕರು ರೈತರ ಪಾದ ಮುಟ್ಟಿ ಕ್ಷಮೆ ಕೇಳಬೇಕು' ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಎಚ್.ಕೆ.ಪಾಟೀಲ ಆಗ್ರಹಿಸಿದ್ದಾರೆ. ಶುಕ್ರವಾರ ನವದೆಹಲಿಯಿಂದ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಕೇಂದ್ರ ಸರ್ಕಾರ ರೈತ ವಿರೋಧಿ ಕರಾಳ ಕಾನೂನುಗಳನ್ನು ಹಿಂಪಡೆದಿರುವುದರಿಂದ ಸಹಜವಾಗಿ ರೈತಾಪಿ ಸಮುದಾಯಕ್ಕೆ ಸಮಾಧಾನ ತರಿಸಿದೆ. ಅದರ ಜತೆಗೆ, ಈ ಹೋರಾಟದಲ್ಲಿ ಹುತಾತ್ಮರಾದ ರೈತರ ಕುಟುಂಬಗಳಿಗೆ ತಕ್ಷಣವೇ ಪರಿಹಾರ ಕೊಡಬೇಕು. ಕೃಷಿಕರನ್ನು ನಕಲಿ ರೈತರು ಎಂದು ಲೇವಡಿ ಮಾಡಿದ್ದಕ್ಕೆ ಕ್ಷಮೆ ಯಾಚಿಸಬೇಕು' ಎಂದು ಹೇಳಿದ್ದಾರೆ.

ಹೋರಾಟದ ಗೆಲುವಿಗೆ ರೈತ ಮುಖಂಡರ ಸಂಭ್ರಮ

ಇದು ಚಾರಿತ್ರಿಕ ರೈತ ಹೋರಾಟಕ್ಕೆ ಸಂದ ಜಯ. ಕರ್ನಾಟಕದಲ್ಲಿ ಈಗಾಗಲೇ ಎಪಿಎಂಸಿ ಹಾಗೂ ಭೂಸುಧಾರಣೆ ಕಾಯ್ದೆಗಳಿಗೆ ತಿದ್ದುಪಡಿ ತಂದು ಜಾರಿಗೊಳಿಸಿರುವುದರಿಂದ ಈ ಎರಡೂ ಕಾಯ್ದೆಗಳನ್ನು ಹಿಂದಕ್ಕೆ ಪಡೆದಾಗಲೇ ರಾಜ್ಯದ ರೈತರಿಗೆ ನಿಜವಾಗಿಯೂ ನ್ಯಾಯ ಸಿಕ್ಕಂತಾಗಲಿದೆ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ, ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ



ಪಂಜಾಬ್, ಉತ್ತರ ಪ್ರದೇಶದ ಚುನಾವಣೆ ಕಾರಣಕ್ಕಾಗಿ ಮಣಿದಿರುವ ಕೇಂದ್ರ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವುದಾಗಿ ಹೇಳಿದೆ. ಇದರಿಂದಾಗಿ ರೈತರು ಹಾಗೂ ಕೃಷಿ ಕ್ಷೇತ್ರ ಅಪಾಯದಿಂದ ಪಾರಾದಂತಾಗಿದೆ.

ಚಾಮರಸ ಮಾಲಿಪಾಟೀಲ, ಸ್ವರಾಜ್ ಇಂಡಿಯಾ ಪಾರ್ಟಿ ರಾಜ್ಯ ಘಟಕದ ಅಧ್ಯಕ್ಷ

ಕೃಷಿ ಕಾಯ್ದೆ ಕುರಿತ ನಮ್ಮ ಗೆಲುವನ್ನು ಆಸ್ವಾದಿಸುತ್ತೇವೆ. ಜೊತೆಗೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಮಾನ್ಯತೆ ನೀಡಬೇಕು ಹಾಗೂ ವಿದ್ಯುತ್ ಖಾಸಗೀಕರಣ ಮಸೂದೆಯನ್ನೂ ಹಿಂದಕ್ಕೆ ಪಡೆಯಬೇಕು. ರಾಜ್ಯದಲ್ಲಿ ಎಪಿಎಂಸಿ ಬಲಪಡಿಸಬೇಕು. ಭೂಸುಧಾರಣಾ ಕಾಯ್ದೆಯಲ್ಲಿನ ನ್ಯೂನತೆ ಸರಿಪಡಿಸಬೇಕು.

ಸಿರಿಮನೆ ನಾಗರಾಜ್, ಹೋರಾಟಗಾರ

ಬೆಂಬಲ ಬೆಲೆಗೆ ಕಾನೂನಿನ ಮಾನ್ಯತೆ ಸಿಕ್ಕಾಗಲೇ ಇಡೀ ದೇಶದ ರೈತರಿಗೆ ನ್ಯಾಯ ಸಿಗಲು ಸಾಧ್ಯ. ಈ ನಿಟ್ಟಿನಲ್ಲಿ ಮುಂದಿನ ಹೋರಾಟ ರೂಪಿಸಬೇಕಾಗಿದೆ. ಎಪಿಎಂಸಿ ರೈತರ ಜೀವಾಳವಾಗಿದೆ. ರಾಜ್ಯದಲ್ಲಿ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನೂ ಹಿಂದಕ್ಕೆ ಪಡೆಯುವಂತಾಗಬೇಕು.

ವಿ. ಗಾಯತ್ರಿ, ನಮ್ಮೂರ ಭೂಮಿ ನಮಗಿರಲಿ ಆಂದೋಲನದ ಸಂಚಾಲಕಿ

ಇದು ಚುನಾವಣೆ ಸೋಲನ್ನು ತಪ್ಪಿಸಿಕೊಳ್ಳಲು ಮಾಡಿರುವ ರಾಜಕೀಯ ತಂತ್ರವಾಗಿರಬಹುದು. ಈ ಸರ್ಕಾರದ ಬಗ್ಗೆ ನಮಗೆ ಅನುಮಾನವಿದೆ. ಈ ಹೋರಾಟವನ್ನು ಮುಂದೆ ಹೇಗೆ ತೆಗೆದುಕೊಂಡು ಹೋಗಬೇಕು ಎಂಬ ಬಗ್ಗೆ ಸದ್ಯದಲ್ಲೇ ತೀರ್ಮಾನಿಸುತ್ತೇವೆ.

ಬಡಗಲಪುರ ನಾಗೇಂದ್ರ, ರಾಜ್ಯ ರೈತ ಸಂಘದ ಅಧ್ಯಕ್ಷ



ಇದು ರೈತರ ತಾಳ್ಮೆಗೆ ದೊರೆತ ವಿಜಯ. ಮೋದಿ ಸರ್ಕಾರದ ಹಠಮಾರಿ ಧೋರಣೆಯಿಂದ ದೇಶದ ನೂರಾರು ರೈತರು ಪ್ರಾಣತ್ಯಾಗ ಮಾಡಬೇಕಾಯಿತು. ಕೃಷಿ ಕಾಯ್ದೆ ರದ್ದತಿಗೆ ನಡೆದ ಹೋರಾಟದಲ್ಲಿ ಪ್ರಾಣ ಕಳೆದುಕೊಂಡ ರೈತರನ್ನು ಎಂದಿಗೂ ಮರೆಯಲಾಗದು. ಇದು ಹುತಾತ್ಮ ರೈತರ ತ್ಯಾಗದ ಗೆಲುವು.

ಕೆ.ಟಿ.ಗಂಗಾಧರ್, ರೈತ ಮುಖಂಡರು, ಶಿವಮೊಗ್ಗ

ಅನ್ನದಾತನ ಚಾರಿತ್ರಿಕ ಹೋರಾಟ

ಕೇಂದ್ರ ರೂಪಿಸಿದ 3 ಕಾಯ್ದೆಗಳಲ್ಲಿ ಏನಿದೆ

1) ಕೃಷಿ ಉತ್ಪನ್ನಗಳ ವ್ಯಾಪಾರ ಮತ್ತು ಮಾರಾಟ (ಉತ್ತೇಜನ–ಸೌಲಭ್ಯ) ಕಾಯ್ದೆ ಅಥವಾ ಕೃಷಿ ಮಾರುಕಟ್ಟೆ ಕಾಯ್ದೆ

ಕೃಷಿ ಮಾರುಕಟ್ಟೆ ಕಾಯ್ದೆಯು ರೈತರು ಮತ್ತು ವ್ಯಾಪಾರಿಗಳಿಗೆ ಕೃಷಿ ಉತ್ಪನ್ನಗಳ ಮಾರಾಟ ಮತ್ತು ಖರೀದಿಯ ಸ್ವಾತಂತ್ರ್ಯ ನೀಡುತ್ತದೆ.

ರೈತರು ತಾವು ಬೆಳೆದ ಬೆಳೆಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ (ಎಪಿಎಂಸಿ) ಹೊರಗಡೆಯೂ ಮಾರಾಟ ಮಾಡಲು ಅವಕಾಶ ಕಲ್ಪಿಸುತ್ತದೆ. ಅಲ್ಲದೇ ರೈತರ ಜಮೀನಿಗೇ ತೆರಳಿ ಯಾರು ಬೇಕಾದರೂ ರೈತರಿಂದ ನೇರವಾಗಿ ಕೃಷಿ ಉತ್ಪನ್ನಗಳನ್ನು ಖರೀದಿಸಬಹುದು. ಇದರಿಂದಾಗಿ, ಎಪಿಎಂಸಿ ಮಂಡಿಗಳ ಮಧ್ಯವರ್ತಿಗಳು ಹಾಗೂ ರಾಜ್ಯ ಸರ್ಕಾರಗಳು ಕಮಿಷನ್ ಹಾಗೂ ಮಂಡಿ ಶುಲ್ಕ ಕಳೆದುಕೊಳ್ಳುತ್ತವೆ. ಸ್ಪರ್ಧೆಯಿಂದಾಗಿ ರೈತರು ತಮ್ಮ ಬೆಳೆಗಳಿಗೆ ಅತ್ಯುತ್ತಮ ಬೆಲೆಯನ್ನು ಪಡೆಯುತ್ತಾರೆ ಹಾಗೂ ಬೆಳೆಯನ್ನು ಸಾಗಿಸುವ ಖರ್ಚು ಕೂಡ ಉಳಿತಾಯವಾಗಲಿದೆ.

ಎಪಿಎಂಸಿಯಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸಿದರೆ ಸೆಸ್ ವಿಧಿಸಲಾಗುತ್ತದೆ. ಹೊರಗಡೆ ಖರೀದಿಗೂ ಸೆಸ್ ಪಾವತಿಸಬೇಕಿತ್ತು. ಆದರೆ, ಈಗ ವ್ಯಾಪಾರಿಗಳಿಗೆ ಸೆಸ್ ಪಾವತಿಯ ಹೊರೆ ಇಲ್ಲ. ಮಂಡಿಗಳ ಜೊತೆಗೆ, ಫಾರ್ಮ್‌ಗೇಟ್, ಶೈತ್ಯಾಗಾರ, ಗೋದಾಮು, ಸಂಸ್ಕರಣಾ ಘಟಕಗಳಲ್ಲಿ ವ್ಯಾಪಾರ ಮಾಡುವ ಸ್ವಾತಂತ್ರ್ಯ ದೊರೆಯುತ್ತದೆ.

2) ಬೆಲೆ ಖಾತರಿ ಒಪ್ಪಂದ ಮತ್ತು ಕೃಷಿ ಸೇವೆಗಳ (ಸಬಲೀಕರಣ ಮತ್ತು ರಕ್ಷಣೆ) ಕಾಯ್ದೆ

ಬಿತ್ತನೆ ಹಂಗಾಮಿಗೆ ಮುನ್ನವೇ ರೈತರು, ಪೂರ್ವ ನಿರ್ಧರಿತ ಬೆಲೆಯೊಂದಿಗೆ ಖರೀದಿದಾರನ ಜೊತೆಗೆ ಒಪ್ಪಂದ ಮಾಡಿಕೊಳ್ಳಲು ಈ ಕಾಯ್ದೆಯು ಅನುವು ಮಾಡಿಕೊಡುತ್ತದೆ.

ಪೂರ್ವನಿಗದಿತ ಬೆಲೆಯಲ್ಲಿ, ರೈತರು ಕೃಷಿ ಸಂಬಂಧಿತ ಉದ್ಯಮ ನಡೆಸುವ ಕಂಪನಿಗಳು ಅಥವಾ ದೊಡ್ಡ ಪ್ರಮಾಣದ ಚಿಲ್ಲರೆ ವ್ಯಾಪಾರಿಗಳ ಜೊತೆ ಒಪ್ಪಂದ ಮಾಡಿಕೊಳ್ಳಲು ಅವಕಾಶ ಕಲ್ಪಿಸುತ್ತದೆ.

ಹೊಸ ಕಾಯ್ದೆಯು ಸಂಸ್ಕರಣ ಘಟಕಗಳು, ಸಗಟು ವ್ಯಾಪಾರಿಗಳು, ಒಟ್ಟುಗೂಡಿಸುವವರು, ದೊಡ್ಡ ಚಿಲ್ಲರೆ ವ್ಯಾಪಾರಿಗಳು, ರಫ್ತುದಾರರೊಂದಿಗೆ ವಹಿವಾಟು ನಡೆಸಲು ರೈತರಿಗೆ ಅನುವು ಮಾಡುತ್ತದೆ. ಬಿತ್ತನೆಗೆ ಮುನ್ನವೇ ದರದ ಭರವಸೆ ಸಿಗುತ್ತದೆ. ಮಾರುಕಟ್ಟೆ ಬೆಲೆ ಹೆಚ್ಚಾದ ಸಂದರ್ಭದಲ್ಲಿ, ರೈತರು ಕನಿಷ್ಠ ಬೆಂಬಲ ಬೆಲೆಯನ್ನು ಪಡೆಯುತ್ತಾರೆ.

ಇದರಿಂದ ರೈತರು, ಮಾರುಕಟ್ಟೆಯ ಅನಿಶ್ಚಿತತೆಯ ಅಪಾಯಕ್ಕೆ ಈಡಾಗುವುದನ್ನು ತಡೆಯುತ್ತದೆ ಹಾಗೂ ಸಣ್ಣ ಮತ್ತು ಮಧ್ಯಮ ರೈತರಿಗೆ ಅನುಕೂಲ ಮಾಡಿಕೊಡುತ್ತದೆ.

ಆಧುನಿಕ ತಂತ್ರಜ್ಞಾನ, ಉತ್ತಮ ಬೀಜ ಮತ್ತು ಇತರ ಸೌಲಭ್ಯಗಳನ್ನು ಪಡೆಯಲು ರೈತರಿಗೆ ಅನುವು ಮಾಡಿಕೊಡುತ್ತದೆ. ಮಾರುಕಟ್ಟೆ ವೆಚ್ಚ ಕಡಿಮೆ ಮಾಡುವುದರೊಂದಿಗೆ ರೈತರ ಆದಾಯವನ್ನು ಹೆಚ್ಚಿಸುತ್ತದೆ. ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಹೊಸ ತಂತ್ರಜ್ಞಾನಕ್ಕೆ ಉತ್ತೇಜನ ದೊರಕುತ್ತದೆ.

ರೈತರು ಮತ್ತು ಖರೀದಿದಾರರ ನಡುವಿನ ವ್ಯಾಜ್ಯ ಪರಿಹಾರಕ್ಕಾಗಿ ಪರಿಣಾಮಕಾರಿ ವ್ಯವಸ್ಥೆಯನ್ನು ಒದಗಿಸಲಾಗಿದೆ.

3) ಅಗತ್ಯ ವಸ್ತುಗಳ (ತಿದ್ದುಪಡಿ) ಕಾಯ್ದೆ

ಅಗತ್ಯ ವಸ್ತುಗಳ ಪಟ್ಟಿಯಿಂದ ಧಾನ್ಯಗಳು, ಬೇಳೆಕಾಳುಗಳು, ಎಣ್ಣೆಬೀಜಗಳು, ಖಾದ್ಯ ತೈಲಗಳು, ಈರುಳ್ಳಿ ಮತ್ತು ಆಲೂಗೆಡ್ಡೆ ಮುಂತಾದ ವಸ್ತುಗಳನ್ನು ಕೈಬಿಡಲು ಈ ತಿದ್ದುಪಡಿ ಕಾಯ್ದೆಯು ಅವಕಾಶ ಮಾಡಿಕೊಡುತ್ತದೆ.

ಯುದ್ಧ, ಬರಗಾಲ, ಅಸಾಧಾರಣ ಬೆಲೆ ಏರಿಕೆ ಮತ್ತು ನೈಸರ್ಗಿಕ ವಿಪತ್ತಿನಂಥ ಸಂದರ್ಭಗಳನ್ನು ಹೊರತುಪಡಿಸಿ, ಅಂತಹ ವಸ್ತುಗಳ ಸಂಗ್ರಹದ ಮಿತಿ ಮೇಲೆ ಇರುವ ನಿರ್ಬಂಧವನ್ನು ತೆಗೆದುಹಾಕುತ್ತದೆ.

ಇದರೊಂದಿಗೆ, ಕೃಷಿ ಕ್ಷೇತ್ರಕ್ಕೆ ಖಾಸಗಿ ವಲಯ ಹಾಗೂ ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುತ್ತದೆ.

ರೈತರ ಆತಂಕ–ವಿರೋಧ

ಹೊಸ ಕೃಷಿ ಕಾಯ್ದೆಗಳು ಈಗಿರುವ ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆಯನ್ನು ಕಿತ್ತುಹಾಕುತ್ತವೆ. ಎಪಿಎಂಸಿಯಲ್ಲಿನ ಮಂಡಿ ವ್ಯವಸ್ಥೆಯೇ ಹಳ್ಳಹಿಡಿಯುವುದರಿಂದ, ರೈತರು ಬೆಳೆದ ಬೆಳೆಗಳಿಗೆ ಸಮರ್ಪಕ ದರ ಸಿಗುವುದಿಲ್ಲ. ಬರುವ ದಿನಗಳಲ್ಲಿ ಕೃಷಿ ಕ್ಷೇತ್ರದ ಮೇಲೆ ಕಾರ್ಪೊರೇಟ್ ಕಂಪನಿಗಳು ಆಧಿಪತ್ಯ ಸಾಧಿಸಲಿವೆ ಎಂಬುದು ರೈತರ ಆತಂಕವಾಗಿತ್ತು. ಅದೇ ಕಾರಣಕ್ಕಾಗಿ ಈ ಕಾಯ್ದೆಗಳನ್ನು ಹಿಂದೆಗೆದುಕೊಳ್ಳಬೇಕೆಂದು ಆಗ್ರಹಿಸಿ ವರ್ಷದಿಂದ ರೈತರು ಅವಿರತ ಪ್ರತಿಭಟನೆ ನಡೆಸಿದ್ದರು.

ಗಾಜಿಯಾಬಾದ್‌ನಲ್ಲಿ ಶುಕ್ರವಾರ ಜಿಲೇಬಿ ಹಂಚುವ ಮೂಲಕ ರೈತರು ಸಂಭ್ರಮ ಆಚರಿಸಿದರು —ಎಎಫ್‌ಪಿ ಚಿತ್ರ

‘ಮೊದಲ ಪಂದ್ಯದಲ್ಲಿ ಜಯ, ಸರಣಿ ಗೆಲುವಷ್ಟೇ ಬಾಕಿ’

• ಸಿದ್ದಯ್ಯ ಹಿರೇಮಠ

ನವದೆಹಲಿ: ‘ಸರ್ಕಾರ್ ಕೀ ಖಿಲಾಫ್ ಹಮಾರೀ ಲಡಾಯಿ ಜಾರೀ ರಹೇಗಿ. ಪೂರೇ ಜೀತ್ ಕೇ ಬಾದ್ ಹೀ ಜಂಗ್ ಖತ್ಮ್ ಕರೇಂಗೇ’ (ಸರ್ಕಾರದ ವಿರುದ್ಧದ ನಮ್ಮ ಹೋರಾಟ ಮುಂದುವರಿಯಲಿದೆ. ಪೂರ್ಣ ಗೆಲುವು ದೊರೆತ ನಂತರವೇ ಯುದ್ಧ ಮುಗಿಸಲಿದ್ದೇವೆ).

ಮೂರು ಕೃಷಿ ಕಾಯ್ದೆಗಳ ರದ್ದತಿ ಕುರಿತ ಪ್ರಧಾನಿಯವರ ಘೋಷಣೆಗೆ ಸಂಬಂಧಿಸಿದಂತೆ ದೆಹಲಿಯ ಗಡಿಗಳಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸುತ್ತಿರುವ ರೈತ ಹೋರಾಟಗಾರರ ಮೊದಲ ಪ್ರತಿಕ್ರಿಯೆ ಇದು.

ದೆಹಲಿಯಿಂದ ಪಂಜಾಬ್‌ಗೆ ಸಂಪರ್ಕ ಕಲ್ಪಿಸುವ ‘ಸಿಂಘು’ ಗಡಿ, ಉತ್ತರ ಪ್ರದೇಶದ ಭಾಗದ ‘ಗಾಜಿಪುರ’ ಗಡಿ, ರಾಷ್ಟ್ರ ರಾಜಧಾನಿಯೊಂದಿಗೆ ಹರಿಯಾಣವನ್ನು ಸಂಪರ್ಕಿಸುವ ‘ಟಿಕ್ರಿ’ ಗಡಿಗಳಲ್ಲಿ ಗಾಳಿ, ಮಳೆ, ಬಿಸಿಲು, ಚಳಿ ಎನ್ನದೇ ರೈತರು ನಡೆಸುತ್ತಿರುವ ಹೋರಾಟ ಕೆಲವೇ ದಿನಗಳಲ್ಲಿ (ನವೆಂಬರ್ 26) ಒಂದ ವರ್ಷ ಪೂರೈಸಲಿದೆ. ಶುಕ್ರವಾರದ ಘೋಷಣೆ ರೈತರ ಮುಖದಲ್ಲಿ ‘ಮಂದಹಾಸ’ ಮೂಡಿಸಿದ್ದರೂ, ಸಂಪೂರ್ಣ ‘ಸಮಾಧಾನ’ವನ್ನು ತಂದಿಲ್ಲ.

ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರದ ವಿರುದ್ಧದ ಅಸಮಾಧಾನ ಪ್ರತಿ ಪ್ರತಿಭಟನಕಾರನಲ್ಲೂ ಎದ್ದು ಕಾಣುತ್ತಲೇ ಇದೆ. ಹೋರಾಟಗಾರರು ಪರಸ್ಪರ ‘ಸಿಹಿ’ ವಿನಿಮಯ ಮಾಡಿಕೊಂಡು ಸಂಭ್ರಮಿಸಿದರಾದರೂ, ಈ ಗೆಲುವಿಗೆ ಕಾರಣವಾದ ‘ಆಂದೋಲನ’ ತಮ್ಮ ಇತರ ಬೇಡಿಕೆಗಳ ಈಡೇರಿಕೆಗೆ ‘ಮುನ್ನುಡಿ’ಯಾಗಬೇಕು ಎಂಬ ಕೆಚ್ಚು ಅವರಲ್ಲಿ ಕಂಡುಬಂತು.

‘ನಮ್ಮ ಹೋರಾಟಕ್ಕೆ ಗೆಲುವು ಸಿಕ್ಕೇ ಸಿಗುತ್ತದೆ ಎಂಬ ನಿರೀಕ್ಷೆ ಇತ್ತು. ಆದರೆ, ಯಾರೂ ನಿರೀಕ್ಷೆ ಮಾಡದ ಸಮಯದಲ್ಲಿ, ಶುಕ್ರವಾರ ಬೆಳಿಗ್ಗೆ ಪ್ರಧಾನಿಯವರು ಕಾಯ್ದೆ ರದ್ದತಿಯ ಘೋಷಣೆ ಮಾಡಿದ್ದಾರೆ. ಇದು ನಮ್ಮ ಮೊದಲ ಜಯ. ಇನ್ನಷ್ಟು ಗೆಲುವುಗಳು ಬಾಕಿ ಇವೆ’ ಎಂದು ಟಿಕ್ರಿ ಗಡಿಯಲ್ಲಿ ಪ್ರತಿಭಟನೆಯಲ್ಲಿ ತೊಡಗಿರುವ ರೈತ ಮುಖಂಡ ವೀರೇಂದರ್ ಸಿಂಗ್ ಹೂಡಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈಗ ಪ್ರಾರಂಭಿಕ ಗೆಲುವು ದಕ್ಕಿದೆ. ಆದರೂ ನಾವೆಲ್ಲ ಮೈಮರೆಯುವ ಸಮಯವಿದಲ್ಲ. ಹೋರಾಟದಲ್ಲಿ ಭಾಗಿಯಾದ ಲಕ್ಷಲಕ್ಷ ರೈತರ ವಿರುದ್ಧ ಉತ್ತರ ಪ್ರದೇಶ, ಹರಿಯಾಣ ಮತ್ತಿತರ ಕಡೆ ಇಲ್ಲಸಲ್ಲದ ಆರೋಪ ಹೊರಿಸಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಈ ಕಾಯ್ದೆ ರದ್ದುಪಡಿಸಿದ ರೀತಿಯಲ್ಲೇ ಆ ಪ್ರಕರಣಗಳನ್ನೂ ಹಿಂದಕ್ಕೆ ಪಡೆಯಬೇಕು’ ಎಂಬ ಒಕ್ಕೊರಲಿನ ಮನವಿಯೂ ಈ ಗಡಿಗಳಲ್ಲಿ ಠಿಕಾಣಿ ಹೂಡಿರುವ ರೈತ ಸಂಘಟನೆಗಳ ಸದಸ್ಯರದ್ದಾಗಿದೆ.

‘ಪ್ರಧಾನಿಯಾದವರು ಪ್ರಮುಖ ನಿರ್ಧಾರ ಕೈಗೊಳ್ಳುವ ಮೊದಲು ಸಾಧಕ– ಬಾಧಕಗಳ ಬಗ್ಗೆ ಚಿಂತನೆ ನಡೆಸಬೇಕು. ಕಳೆದ ವರ್ಷವೇ ನಮ್ಮ ಬೇಡಿಕೆ ಈಡೇರಿದ್ದರೆ ಪ್ರತಿಭಟನೆಯಲ್ಲಿ ಭಾಗಿಯಾದ 750ಕ್ಕೂ ಹೆಚ್ಚು ರೈತರು ಹುತಾತ್ಮರಾಗುವುದು ತಪ್ಪುತ್ತಿತ್ತು. ಸಂಕಷ್ಟಗಳಲ್ಲಿ ಸಿಲುಕಿ ಒದ್ದಾಡುತ್ತಿರುವ ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡುವುದನ್ನೂ ತಪ್ಪಿಸಬಹುದಿತ್ತು’ ಎಂಬುದೂ ಅವರ ಅನಿಸಿಕೆಯಾಗಿದೆ.

‘ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯ (ಎಂಎಸ್‌ಪಿ) ಖಾತರಿ ದೊರೆಯಬೇಕಿದೆ. ನಮ್ಮ ಹೋರಾಟದ ಮೂಲವಾದ ಈ ಬೇಡಿಕೆ ಈಡೇರುವವರೆಗೆ ವಿರಮಿಸುವ ಮಾತೇ ಇಲ್ಲ. ಕ್ರಿಕೆಟ್ ಭಾಷೆಯಲ್ಲಿ ಹೇಳುವುದಾದರೆ, ಈಗ ಮೊದಲ ಪಂದ್ಯವನ್ನಷ್ಟೇ ನಾವು ಗೆದ್ದಿದ್ದೇವೆ. ಸರಣಿ ಗೆಲ್ಲುವುದು ಬಾಕಿ ಇದೆ. ಗೆದ್ದೇ ತೀರುತ್ತೇವೆ’ ಎಂದು ರೋಷದಿಂದ ಹೇಳಿದವರು ಸಿಂಘು ಗಡಿಯಲ್ಲಿನ ಪ್ರತಿಭಟನೆಯ ನೇತೃತ್ವವಹಿಸಿರುವ ಧೀರಜ್ ಗಾಬಾ.

‘ದೆಹಲಿಯ ವಾಯು ಮಾಲಿನ್ಯಕ್ಕೆ ರೈತರನ್ನೇ ಹೊಣೆ ಮಾಡಲಾಗುತ್ತಿದೆ. ಅವರ ಜಮೀನಿನಲ್ಲಿನ ಕೃಷಿ ತ್ಯಾಜ್ಯ ಸುಡುತ್ತಿರುವುದರಿಂದ ದೆಹಲಿಯ ಆಗಸದಲ್ಲಿ ದಟ್ಟ ಹೊಗೆ ಆವರಿಸುತ್ತಿದೆ ಎಂಬ ಆರೋಪವೂ ಇದೆ. ಕಾರ್ಖಾನೆಗಳು, ವಾಹನಗಳು, ಹೊಗೆ ಉಗುಳುತ್ತಿವೆ. ದೀಪಾವಳಿಯ ವೇಳೆ ಪಟಾಕಿ ಸುಡುವುದರಿಂದ ವಿಷಾನಿಲ ಹೊರಹೊಮ್ಮುತ್ತಿದೆ. ಆದರೂ ಮುಗ್ಧ ರೈತರನ್ನೇ ದೂಷಿಸುವ ಕೆಲಸ ಆಗುತ್ತಿದೆ. ಮಾಲಿನ್ಯ ನಿಯಂತ್ರಣದ ಸಂಬಂಧವೂ ಸೂಕ್ತ ಕಾನೂನು ತಂದು ರೈತರನ್ನು ದೋಷಮುಕ್ತರನ್ನಾಗಿಬೇಕು’ ಎಂದು ಕೋರಿದವರು ಒಂದು ದಿನವೂ ಮನೆಯತ್ತ ತೆರಳದೆ ಸತತವಾಗಿ ಪ್ರತಿಭಟನೆಯ ಭಾಗವಾಗಿರುವ ಗುರುಮೀತ್ ಮಂಗಟ್.

ಈ ಗಡಿಗಳಲ್ಲಿನ ಹೆದ್ದಾರಿಯಲ್ಲಿ ನಿರ್ಮಿಸಲಾಗಿರುವ ಫ್ಲೈ ಓವರ್‌ಗಳ ಕೆಳಗೆ ತಾತ್ಕಾಲಿಕವಾಗಿ ನಿರ್ಮಿಸಲಾಗಿರುವ ಟೆಂಟ್‌ಗಳಲ್ಲಿ ದೆಹಲಿಯ ಬಿಸಿಲು ಮತ್ತು ಚಳಿಯನ್ನು ಲೆಕ್ಕಿಸದೆ, ಹಗಲು– ರಾತ್ರಿ ಕಳೆದಿರುವ ವೃದ್ಧರು, ಮಹಿಳೆಯರು, ಯುವ ರೈತರು ಪ್ರಧಾನಿ ಘೋಷಣೆಯಿಂದ ಪುಳಕಿತರಾಗಿದ್ದಾರೆ. ತಮ್ಮ ಕುಟುಂಬ ಸದಸ್ಯರ ಮುಖ ನೋಡಬೇಕೆಂಬ ಕಾತರ ಅವರಲ್ಲಿದೆ.

ಆದರೂ, ಸಂಪೂರ್ಣ ಗೆಲುವು ಲಭಿಸುವವರೆಗೆ ಪ್ರತಿಭಟನೆ ಮುಂದುವರಿಸಬೇಕೆಂಬ ರೈತ ಮುಖಂಡರ ನಿರ್ಣಯಕ್ಕೆ ಬದ್ಧರಾಗಿ ಇರುವುದಕ್ಕೆಂದೇ ಅದನ್ನು ಅದುಮಿಟ್ಟುಕೊಂಡು ಅಲ್ಲೇ ಇನ್ನಷ್ಟು ದಿನ ತಂಗುವ ನಿರ್ಧಾರಕ್ಕೆ ಬಂದಿದ್ದಾರೆ. ನವೆಂಬರ್ 29ರಂದು ಆರಂಭವಾಗಲಿರುವ ಸಂಸತ್‌ನ ಚಳಿಗಾಲದ ಅಧಿವೇಶನದಲ್ಲಿ, ಕೃಷಿ ಕಾಯ್ದೆಯ ರದ್ದತಿ ಕುರಿತ ನಿರ್ಣಯ ಹೊರಬೀಳುವ ದಿನದವರೆಗೂ ಕಾಯಬೇಕೆಂಬ ಛಲ ಅವರನ್ನು ಅಲ್ಲಿಯೇ ಹಿಡಿದಿಟ್ಟಿದೆ.

ರೈತರ ಕಾನೂನು ಹೋರಾಟಕ್ಕೆ ಕೊನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂರು ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸುವುದರೊಂದಿಗೆ, ಈ ಕಾಯ್ದೆಗಳನ್ನು ಪ್ರಶ್ನಿಸಿ ವಕೀಲರು, ರೈತ ಸಂಘಟನೆಗಳು ಹಾಗೂ ಇತರರು ನ್ಯಾಯಾಲಯಗಳಲ್ಲಿ ಸಲ್ಲಿಸಿದ್ದ ಹಲವು ಅರ್ಜಿಗಳು ಅಪ್ರಸ್ತುತ ಆಗುವ ಸಾಧ್ಯತೆ ಇದೆ.

ಸುಪ್ರೀಂ ಕೋರ್ಟ್ ಈ ಮೂರು ಕಾಯ್ದೆಗಳ ಅನುಷ್ಠಾನಕ್ಕೆ ಜನವರಿ 12ರಂದು ತಡೆಯಾಜ್ಞೆ ನೀಡಿತ್ತು. ಕೋರ್ಟ್‌ನ ಆ ಕ್ರಮಕ್ಕೆ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಮತ್ತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ವಿರೋಧ ವ್ಯಕ್ತಪಡಿಸಿರಲಿಲ್ಲ.

ತಡೆಯಾಜ್ಞೆಯನ್ನು ಕೋರ್ಟ್ ನೀಡಿದ್ದರೂ, ದೆಹಲಿಯ ಗಡಿಗಳಲ್ಲಿ ನಡೆದಿದ್ದ ರೈತರ ಪ್ರತಿಭಟನೆ ಕೊನೆಗೊಳ್ಳಲಿಲ್ಲ. ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವವರೆಗೂ ಪ್ರತಿಭಟನೆ ನಿಲ್ಲಿಸಲಾಗದು ಎಂದು ರೈತರು ಪಟ್ಟುಹಿಡಿದರು. ರೈತರ ಆತಂಕಗಳನ್ನು ಆಲಿಸಲು ಸುಪ್ರೀಂ ಕೋರ್ಟ್ ಒಂದು ಸಮಿತಿಯನ್ನು ರಚಿಸಿತು.

ಆದರೆ, ಕೆಲವು ಸದಸ್ಯರನ್ನು ಈ ಸಮಿತಿಯ ಭಾಗವಾಗಿಸಿದ್ದರ ಬಗ್ಗೆ ರೈತ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದವು. ಸಮಿತಿಯಲ್ಲಿ ಸ್ಥಾನ ಪಡೆದಿರುವ ಕೆಲವರು ಕಾಯ್ದೆಗಳ ಪರವಾಗಿ ಇದ್ದಾರೆ, ಅವುಗಳ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ದೂರಿದ್ದರು. ರೈತ ಸಂಘಟನೆಗಳ ನಡೆಗೆ ಕೋಪ ವ್ಯಕ್ತಪಡಿಸಿದ್ದ ಕೋರ್ಟ್, ಸಮಿತಿಯ ಸದಸ್ಯರು ಹೊಂದಿರುವ ಒಳ್ಳೆಯ ಹೆಸರಿಗೆ ಧಕ್ಕೆ ಬರುವ ರೀತಿಯಲ್ಲಿ ಮಾತನಾಡಬಾರದು ಎಂದು ಹೇಳಿತ್ತು.

‘ಕೆಲವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎಂದಮಾತ್ರಕ್ಕೆ, ಅವರು ಇಂಥವರೇ ಎಂಬ ಹಣೆಪಟ್ಟಿ ಅಂಟಿಸಬಾರದು. ಜನರಿಗೆ ಅವರದ್ದೇ ಆದ ಅಭಿಪ್ರಾಯ ಇರುತ್ತದೆ. ಕೆಲವು ಅತ್ಯುತ್ತಮ ನ್ಯಾಯಮೂರ್ತಿಗಳು ನಿರ್ದಿಷ್ಟ ಅಭಿಪ್ರಾಯ ವ್ಯಕ್ತಪಡಿಸಿದ ನಂತರವೂ ಆ ಅಭಿಪ್ರಾಯಕ್ಕೆ ಭಿನ್ನವಾದ ರೀತಿಯಲ್ಲಿ ತೀರ್ಪು ನೀಡಿದ್ದು ಇದೆ’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಹೇಳಿದ್ದರು.

ರೈತ ಪ್ರತಿನಿಧಿಗಳು ಹಾಗೂ ಇತರ ಹಲವರ ಜೊತೆ ಮಾತುಕತೆ ನಡೆಸಿದ್ದ ಸಮಿತಿಯು ಮಾರ್ಚ್ 19ರಂದು ವರದಿ ಸಲ್ಲಿಸಿದೆ. ಸಮಿತಿಯ ವರದಿಯನ್ನು ಸರ್ಕಾರದ ಜೊತೆ ಹಂಚಿಕೊಂಡು, ಸಮಿತಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಬೇಕು ಎಂದು ಸುಪ್ರೀಂ ಕೋರ್ಟ್ ನೇಮಿಸಿದ್ದ ಸಮಿತಿಯಲ್ಲಿ ಒಬ್ಬರಾದ ಅನಿಲ್ ಘನ್ವತ್ ಅವರು ಸಿಜೆಐಗೆ ಮನವಿ ಮಾಡಿದ್ದರು.

ಈ ನಡುವೆ, ನೊಯಿಡಾದ ಮಹಿಳೆಯೊಬ್ಬರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿ ರಸ್ತೆಯಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆಯಿಂದಾಗಿ ತಮ್ಮ ದೈನಂದಿನ ಪ್ರಯಾಣ ಅವಧಿ ಹೆಚ್ಚಾಗಿದೆ ಎಂದು ದೂರಿದರು. ರೈತರಿಗೆ ಪ್ರತಿಭಟನೆ ನಡೆಸುವ ಹಕ್ಕು ಖಂಡಿತವಾಗಿಯೂ ಇದೆಯಾದರೂ ಅನಿರ್ದಿಷ್ಟ ಅವಧಿಯವರೆಗೆ ರಸ್ತೆಗಳಲ್ಲಿ ಸಂಚಾರಕ್ಕೆ ಅಡ್ಡಿ ಉಂಟುಮಾಡುವಂತಿಲ್ಲ ಎಂದು ಆಗ ಸುಪ್ರೀಂ ಕೋರ್ಟ್ ಹೇಳಿತ್ತು.

ಗೆಲುವಿನ ಸಂಭ್ರಮ...

ಪ್ರಧಾನಿ ನರೇಂದ್ರ ಮೋದಿ ಅವರು ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯುವ ನಿರ್ಧಾರ ಘೋಷಿಸಿದ ಬಳಿಕ ಅಮೃತಸರದಲ್ಲಿ ರೈತರು ಸಂಭ್ರಮಿಸಿದರು —ಎಎಫ್‌ಪಿ ಚಿತ್ರ

ದೊಣ್ಣೆ ಏಟು ತಪ್ಪಿದೆ; ಬಲಪಡಿಸದೇ ಉಳಿಗಾಲವಿಲ್ಲ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ‘ಬೀಸೊ ದೊಣ್ಣೆ ತಪ್ಪಿದರೆ, ನೂರು ವರ್ಷ ಆಯಸ್ಸು’ ಎಂಬ ಗಾದೆ ಮಾತಿದೆ. ಈಗ ಎಪಿಎಂಸಿಗಳಿಗೆ ದೊಣ್ಣೆ ಏಟು ತಪ್ಪಿದೆ. ಆದರೆ. ಅವುಗಳ ಆಯಸ್ಸು ನೂರಾರು ವರ್ಷ ಹೆಚ್ಚಾಗಬೇಕೆಂದರೆ ಅಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿ, ಬಲಪಡಿಸುವ ಕೆಲಸವೂ ಆಗಬೇಕಿದೆ. ಇಲ್ಲದಿದ್ದರೆ, ಎಪಿಎಂಸಿಗಳೂ ಉಳಿಯುವುದಿಲ್ಲ. ಅವುಗಳನ್ನು ನೆಚ್ಚಿಕೊಂಡಿರುವ ರೈತರ ಬಾಳು ಸಂಕಷ್ಟಕ್ಕೆ ಸಿಲುಕಲಿದೆ.

ಹೊಸ ಕಾಯ್ದೆ ಬಂದ ನಂತರ ರಾಜ್ಯದಲ್ಲಿರುವ ಎಪಿಎಂಸಿಗಳ ಪೈಕಿ ಶೇ 55ರಷ್ಟು ಎಪಿಎಂಸಿಗಳ ಆದಾಯ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಶೇ10ಕ್ಕೆ ಕುಸಿದಿದ್ದರೆ, ಶೇ 30 ರಷ್ಟು ಎಪಿಎಂಸಿಗಳ ಆದಾಯ ಶೇ 30ಕ್ಕೆ, ಉಳಿದ ಎಪಿಎಂಸಿಗಳದ್ದು ಅರ್ಧಕ್ಕೆ ಇಳಿದಿತ್ತು. ರಾಜ್ಯದ ಶೇ60ಕ್ಕೂ ಹೆಚ್ಚು ಎಪಿಎಂಸಿಗಳು ನಿರ್ವಹಣಾ ವೆಚ್ಚ, ಭದ್ರತಾ ಖರ್ಚು ನಿಭಾಯಿಸಲು ಪರದಾಡಬೇಕಾದ ಸ್ಥಿತಿ ಎದುರಿಸುತ್ತಿವೆ.

‘ಹೊಸ ಕಾಯ್ದೆ ರದ್ದತಿ ಘೋಷಣೆಯಿಂದ ಎಪಿಎಂಸಿಗಳಿಗೆ ಒಂದಷ್ಟು ಉಸಿರಾಡಲು ಅವಕಾಶ ದೊರೆಯಬಹುದು. ಆದರೆ, ಅಲ್ಲಿರುವ ನ್ಯೂನತೆಗಳನ್ನು ಸರಿಪಡಿಸಬೇಕು. ರೈತರ ಬಲ ಹೆಚ್ಚಿಸುವ ಕೆಲಸ ಆಗಬೇಕು’ ಎನ್ನುತ್ತಾರೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್.

ದಲ್ಲಾಳಿಗಳ ಹಾವಳಿ, ಸೌಲಭ್ಯಗಳ ಕೊರತೆ, ಆನ್‌ಲೈನ್ ಹರಾಜು ಜಾರಿ ವಿಳಂಬ, ಹಳೆಯ ಎಪಿಎಂಸಿ ಕಾಯ್ದೆಯ ಕಟ್ಟುನಿಟ್ಟಿನ ಜಾರಿ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳದಿದ್ದರೆ, ರೈತರು ಸಂಕಷ್ಟ ಪಡುವುದು ತಪ್ಪುವುದಿಲ್ಲ ಎನ್ನುವುದು ರೈತ ಮುಖಂಡರ ಆಗ್ರಹ.

ಮಧ್ಯವರ್ತಿಗಳ ಕಾಟ ತಪ್ಪಿಸಲು ಆನ್‌ಲೈನ್ ಹರಾಜು ಪದ್ಧತಿ ಜಾರಿಗೊಳಿಸಲಾಗಿದೆ. ಮಂಡ್ಯದ ಎಪಿಎಂಸಿಯಲ್ಲಿ ಇಂದಿಗೂ ಬೆಲ್ಲದ ಮಾರಾಟ ಆನ್‌ಲೈನ್‌ನಲ್ಲಿ ನಡೆಯುತ್ತಿಲ್ಲ. ಅದಕ್ಕೆ ಅಲ್ಲಿರುವ ವ್ಯಾಪಾರಸ್ಥರೇ ಅಡ್ಡಿಗಳನ್ನು ಸೃಷ್ಟಿಸುತ್ತಿದ್ದಾರೆ. ಇಂತಹ ಪ್ರಕರಣಗಳು ಹಲವಾರು ಎಪಿಎಂಸಿಗಳಲ್ಲಿವೆ. ಹಾಗಾಗಿ, ರೈತರಿಗೆ ಉತ್ತಮ ಬೆಲೆ ಇಂದಿಗೂ ದೊರೆಯುತ್ತಿಲ್ಲ.

ಹುಬ್ಬಳ್ಳಿಯ ಎಪಿಎಂಸಿ ಮಾರುಕಟ್ಟೆ ಬಿಕೋ ಎನ್ನುತ್ತಿದೆ —ಪ್ರಜಾವಾಣಿ ಚಿತ್ರ

‘ಫಸಲು ಬಂದಾಗ ಕನಿಷ್ಠ ಬೆಂಬಲ ಬೆಲೆಯಡಿ ಹಲವಾರು ಉತ್ಪನ್ನಗಳನ್ನು ಖರೀದಿಸಲಾಗುತ್ತದೆ. ಆದರೆ, ಒಬ್ಬ ರೈತರಿಂದ ಇಂತಿಷ್ಟೇ ಎಂದು ಖರೀದಿಸಲಾಗುತ್ತದೆ. ಉಳಿದ ಉತ್ಪನ್ನವನ್ನು ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾಗುತ್ತದೆ. ಮುಕ್ತ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆಗಿಂತ ಕಡಿಮೆ ಬೆಲೆ ಇದ್ದಾಗ ಸರ್ಕಾರದಿಂದಲೇ ಖರೀದಿಸುವ ಕೆಲಸ ಆಗಬೇಕು ಎನ್ನುತ್ತಾರೆ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ.

ರಾಜ್ಯದ ಕೆಲವು ಎಪಿಎಂಸಿಗಳಲ್ಲಿ ಕ್ಲಿನಿಂಗ್, ಗ್ರೇಡಿಂಗ್, ಪ್ಯಾಕಿಂಗ್ ವ್ಯವಸ್ಥೆ ಇದೆ. ಇದರಿಂದಾಗಿ ಹೆಚ್ಚಿನ ಬೆಲೆ ಪಡೆಯಲು ಸಾಧ್ಯವಾಗುತ್ತದೆ.

> **ಮುಖ್ಯಾಂಶಗಳು**
> - ಎಪಿಎಂಸಿಗಳಲ್ಲಿ ಖಾಲಿ ಹುದ್ದೆ ಭರ್ತಿಯಾಗಲಿ
> - ರೈತರಿಗೆ ಮೋಸ ಮಾಡುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ
> - ಮೂಲಸೌಲಭ್ಯಗಳನ್ನು ಒದಗಿಸಲಿ

ಆದರೆ, ಬಹುತೇಕ ಕಡೆಗಳಲ್ಲಿ ಶೈತ್ಯಾಗಾರಗಳು (ಕೋಲ್ಡ್ ಸ್ಟೋರೇಜ್) ಇಲ್ಲ. ಇದಕ್ಕಾಗಿ ಖಾಸಗಿಯವರನ್ನು ಅವಲಂಬಿಸಬೇಕಾಗಿದೆ. ಬೆಲೆ ಕಡಿಮೆ ಇದ್ದಾಗ ಸಂಗ್ರಹಿಸಿಟ್ಟು, ನಂತರ ಮಾರಾಟಕ್ಕೆ ಅವಕಾಶವಾಗುವಂತೆ ಸೌಲಭ್ಯ ಒದಗಿಸಬೇಕಿದೆ.

‘ಉತ್ಪನ್ನಗಳ ಮಾರಾಟಕ್ಕೆ ರೈತರಿಂದ ಕಮಿಷನ್ ಪಡೆಯಬಾರದು. ವರ್ತಕರಿಂದ ಮಾತ್ರ ಪಡೆಯಬೇಕು ಎಂದಿದೆ. ಆದರೆ, ಅಧಿಕಾರಿಗಳು ಕಟ್ಟುನಿಟ್ಟಿನ ನಿಗಾ ವಹಿಸದೇ ಇರುವುದರಿಂದ ವರ್ತಕರು ರೈತರಿಂದಲೂ ಕಮಿಷನ್ ಪಡೆಯುತ್ತಾರೆ. ಇದನ್ನು ತಪ್ಪಿಸಬೇಕು. ಜೊತೆಗೆ ಉತ್ಪನ್ನ ಮಾರಾಟದ ನಂತರ ಹಣವನ್ನು ದಲ್ಲಾಳಿಗಳು ಪಾವತಿಸಲು ಅವಕಾಶ ನೀಡಲಾಗುತ್ತದೆ. ಇದರಿಂದ ರೈತರಿಗೆ ಸರಿಯಾಗಿ ಹಣ ಸಿಗುವುದಿಲ್ಲ. ಎಪಿಎಂಸಿಗಳ ಮೂಲಕ ರೈತರ ಖಾತೆಗಳಿಗೆ ನೇರವಾಗಿ ಹಣ ಪಾವತಿಯಾಗಬೇಕು ಎನ್ನುವುದು ಶಾಂತಕುಮಾರ್ ಅವರ ಆಗ್ರಹ.

‘ರೈತರ ಉತ್ಪನ್ನ ಉತ್ತಮ ಬೆಲೆಗೆ ಮಾರಾಟವಾಗದಿದ್ದರೆ, ಆ ಉತ್ಪನ್ನವನ್ನು 3 ತಿಂಗಳವರೆಗೆ ಗೋದಾಮುಗಳಲ್ಲಿರಿಸಿಕೊಂಡು ಬಡ್ಡಿ ರಹಿತವಾಗಿ ಉತ್ಪನ್ನದ ಮೌಲ್ಯದ ಶೇ 75ರಷ್ಟು ಹಣವನ್ನು ನೀಡಬೇಕು. ಆಗ ಅವರು ಉತ್ತಮ ಬೆಲೆ ಬಂದಾಗ ಮಾರಾಟ ಮಾಡಲು ಸಾಧ್ಯವಾಗುತ್ತದೆ. ಇದು ಎಪಿಎಂಸಿ ಕಾಯ್ದೆಯಲ್ಲಿದ್ದರೂ, ಜಾರಿಯಾಗುತ್ತಿಲ್ಲ. ಕೂಡಲೇ ಜಾರಿಗೆ ಕ್ರಮ ಕೈಗೊಳ್ಳಬೇಕು’ ಎಂದು ಅವರು ಒತ್ತಾಯಿಸುತ್ತಾರೆ.

‘ಸಣ್ಣ ರೈತರ ಸಂಖ್ಯೆ ಹೆಚ್ಚಿದೆ. ಅವರು ಬೆಳೆಯುವ ಅರ್ಧ, ಒಂದು ಕ್ವಿಂಟಲ್ ಉತ್ಪನ್ನವನ್ನು 20 ರಿಂದ 40 ಕಿ.ಮೀ. ದೂರದ ಎಪಿಎಂಸಿಗಳಿಗೆ ತರಲಾಗುವುದಿಲ್ಲ. ಹಾಗಾಗಿ, ಅವರು ಸ್ಥಳೀಯ ಮಧ್ಯವರ್ತಿಗಳಿಗೆ ಮಾರಾಟ ಮಾಡುತ್ತಾರೆ. ಅಂತಹ ರೈತರಿಗೆ ಮಾರುಕಟ್ಟೆಗೆ ತರಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಬೇಕು’ ಎನ್ನುವುದು ಕಿರೇಸುಗೂರಿನ ರೈತ ಮುಖಂಡ ಗುರು ರಾಯನಗೌಡ್ರ ಒತ್ತಾಯ.

ಎಪಿಎಂಸಿಗಳಲ್ಲಿ ಅರ್ಧದಷ್ಟು ಹುದ್ದೆಗಳು ಖಾಲಿ ಇವೆ. ಅವುಗಳನ್ನು ಭರ್ತಿ ಮಾಡಬೇಕು. ಅವುಗಳ ಅಭಿವೃದ್ಧಿಗೆ ಬೇಕಾದಷ್ಟು ಅನುದಾನ ನೀಡಬೇಕು. ಹೊರಗಡೆ ನಡೆಯುವ ವಹಿವಾಟಿನ ಬೆಲೆ, ಹಣ ಪಾವತಿ ಗಮನಿಸಲು ವಿಶೇಷ ತಂಡಗಳನ್ನು ರಚಿಸಬೇಕು. ರೈತ ಉತ್ಪಾದಕ ಸಂಸ್ಥೆಗಳನ್ನು ಹೆಚ್ಚಿಸುವ ಮೂಲಕ ಅವರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಮೋಸ ಮಾಡುವ ದಲ್ಲಾಳಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಅವಕಾಶ ಮಾಡಿಕೊಡಬೇಕು ಎನ್ನುವುದು ರೈತರ ಆಗ್ರಹ.

ರಾಹುಲ್ ವಿಡಿಯೊ ವೈರಲ್

ನವದೆಹಲಿ (ಪಿಟಿಐ): ‘ನನ್ನ ಮಾತನ್ನು ಬರೆದಿಟ್ಟುಕೊಳ್ಳಿ. ಈ ಕೃಷಿ ಕಾಯ್ದೆಗಳನ್ನು ರದ್ದುಮಾಡುವ ಸ್ಥಿತಿಗೆ ಸರ್ಕಾರವು ಬಂದೇ ಬರುತ್ತದೆ’ ಎಂದು ರಾಹುಲ್ ಗಾಂಧಿ ಅವರು 2021ರ ಜನವರಿ 14ರಂದು ಹೇಳಿದ್ದ ವಿಡಿಯೊ ಈಗ ವೈರಲ್ ಆಗಿದೆ.

ಕೃಷಿ ಕಾಯ್ದೆಗಳ ವಿರುದ್ಧ ರೈತರ ಪ್ರತಿಭಟನೆ ಆರಂಭವಾದಾಗ ರಾಹುಲ್ ಗಾಂಧಿ ಅವರು ಮಾಧ್ಯಮಗೋಷ್ಠಿಯಲ್ಲಿ ಈ ಮಾತು ಹೇಳಿದ್ದರು. ಮಾಧ್ಯಮ ಗೋಷ್ಠಿಯ ವಿಡಿಯೊವನ್ನು ಅವರು ಟ್ವೀಟ್ ಸಹ ಮಾಡಿದ್ದರು.

ಕೃಷಿ ಕಾಯ್ದೆಗಳನ್ನು ರದ್ದುಪಡಿಸುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ ಬೆನ್ನಲ್ಲೇ ಕಾಂಗ್ರೆಸ್ ಕಾರ್ಯಕರ್ತರು ಈ ವಿಡಿಯೊ ಟ್ವೀಟ್ ಅನ್ನು ಮತ್ತೆ ಟ್ವೀಟ್ ಮಾಡಿದ್ದಾರೆ. ಸ್ವತಃ ರಾಹುಲ್ ಗಾಂಧಿ ಅವರೂ ಆ ವಿಡಿಯೊವನ್ನು ಮತ್ತೆ ಟ್ವೀಟ್ ಮಾಡಿದ್ದಾರೆ.

ಇದೇ ಅಕ್ಟೋಬರ್ 29ರಂದು ರಾಹುಲ್, ‘ಈಗ ಕೇವಲ ಬ್ಯಾರಿಕೇಡ್‌ಗಳನ್ನು ತೆಗೆಯಲಾಗಿದೆ. ಈ ಕರಾಳ ಕಾಯ್ದೆಗಳನ್ನು ಶೀಘ್ರವೇ ತೆಗೆದುಹಾಕಲಾಗುತ್ತದೆ’ ಎಂದು ಟ್ವೀಟ್ ಮಾಡಿದ್ದರು. ಆ ಟ್ವೀಟ್ ಅನ್ನು ಸಹ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಮರು ಟ್ವೀಟ್ ಮಾಡಿದ್ದಾರೆ.

ಯಾರು ಏನೆಂದರು?

ಕೃಷಿ ಕಾನೂನುಗಳನ್ನು ಜಾರಿಗೆ ತಂದಿದ್ದಕ್ಕಾಗಿ ಪ್ರಧಾನಿ ಕ್ಷಮೆ ಯಾಚಿಸಿದರು. ಆದರೆ ಹೋರಾಟದಲ್ಲಿ ಮೃತಪಟ್ಟ ಸುಮಾರು 700 ರೈತರ ಕುರಿತು ಏನನ್ನೂ ಹೇಳಲಿಲ್ಲ. ಬಿಜೆಪಿ ತನ್ನ ನೆಲೆ ಕಳೆದುಕೊಳ್ಳುತ್ತಿದೆ ಎಂದು ಇತ್ತೀಚಿನ ಸಮೀಕ್ಷೆಗಳು ತೋರುತ್ತಿವೆ. ಕೃಷಿ ನೀತಿಗಳನ್ನು ಹಿಂಪಡೆಯಲು ಇದೇ ಕಾರಣ

ಪ್ರಿಯಾಂಕಾ ಗಾಂಧಿ ವಾದ್ರಾ
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಸಾಕಷ್ಟು ತಡವಾಯಿತು. ಆದರೆ ನಾನು ಕೇಂದ್ರದ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಸಂಘರ್ಷದಲ್ಲಿ ಮಡಿದ ರೈತರ ಸ್ಮಾರಕ ನಿರ್ಮಿಸಬೇಕು ಮತ್ತು ಎಂಎಸ್‌ಪಿಯನ್ನು ಶಾಸನಬದ್ಧ ಮಾಡಬೇಕು ಎಂದು ನಾನು ಪ್ರಧಾನಿ ಅವರನ್ನು ಆಗ್ರಹಿಸುತ್ತೇನೆ

ಚರಣ್‌ಜಿತ್ ಸಿಂಗ್ ಚನ್ನಿ
ಪಂಜಾಬ್ ಮುಖ್ಯಮಂತ್ರಿ

ಮೋದಿ ಈಗಲೂ ಮೂರು ಕರಾಳ ಕೃಷಿ ಕಾನೂನುಗಳನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಮೃತಪಟ್ಟ ರೈತರ ಕುರಿತು ಅವರು ಪಶ್ಚಾತ್ತಾಪ ವ್ಯಕ್ತಪಡಿಸಿಲ್ಲ. ಈ ಐತಿಹಾಸಿಕ ಹೋರಾಟದಿಂದ ಕಲಿಯಲು ಅವರು ನಿರಾಕರಿಸುತ್ತಿದ್ದಾರೆ. ಸಂಸತ್‌ನಲ್ಲಿ ಕಾಯ್ದೆ ಹಿಂಪಡೆಯುವಾಗ ಎಂಎಸ್‌ಪಿಯನ್ನು ಶಾಸನಬದ್ಧಗೊಳಿಸಬೇಕು

ಸೀತಾರಾಮ್ ಯೆಚೂರಿ,
ಸಿಪಿಎಂ ಪ್ರಧಾನ ಕಾರ್ಯದರ್ಶಿ



ಕೇಂದ್ರಕ್ಕೆ ಪೂರಕವಾಗಿ ರಾಜ್ಯ ಸರ್ಕಾರವೂ ಜಾರಿಗೆ ತಂದ ಎಲ್ಲ ವಿವಾದಾತ್ಮಕ ಕೃಷಿ ಕಾಯ್ದೆಗಳನ್ನೂ ತಕ್ಷಣ ರದ್ದು ಮಾಡಬೇಕು. ಪ್ರಧಾನಿ ಘೋಷಣೆ ಸಂಸತ್‌ನಲ್ಲಿ ಮಂಡನೆಯಾಗಿ ಅಧಿಕೃತವಾಗಿ ರದ್ದಾಗಬೇಕು. ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಕಾನೂನು ಬದ್ಧಗೊಳಿಸಬೇಕು.

ಎಚ್.ಆರ್.ಬಸವರಾಜಪ್ಪ
ಗೌರವಾಧ್ಯಕ್ಷ, ರಾಜ್ಯ ರೈತ ಸಂಘ

ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದಿರುವುದು ಸಾಗತಾರ್ಹ. ಕೇಂದ್ರದಂತೆ ರಾಜ್ಯ ಸರ್ಕಾರ ಕೂಡ ಭೂಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆಯನ್ನೂ ಹಿಂದಕ್ಕೆ ಪಡೆಯಬೇಕು.

ಟಿ.ಯಶವಂತ್
ರಾಜ್ಯ ಪ್ರಾಂತ ರೈತ ಸಂಘದ ಮುಖಂಡ, ಮದ್ದೂರು

ಬಹುಸಂಖ್ಯಾತ ರೈತರ ಶಕ್ತಿಯ ಅರಿವು ಕೇಂದ್ರ ಸರ್ಕಾರಕ್ಕೆ ಆಗಿದ್ದರಿಂದ ಕಾರ್ಪೊರೇಟ್ ಕಂಪನಿಗಳ ಹಿತಾಸಕ್ತಿಗೆ ಪೂರಕವಾಗಿದ್ದ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಲು ಮುಂದಾಗಿದೆ. ರೈತರ ಹೋರಾಟ ರಾಜಕೀಯವಾಗಿ ನಿರ್ನಾಮ ಮಾಡಲಿದೆ ಎಂಬ ಭಯದಿಂದ ಮೋದಿ ಈ ತೀರ್ಮಾನ ಕೈಗೊಂಡಿದ್ದಾರೆ.

ಕೋಡಿಹಳ್ಳಿ ಚಂದ್ರಶೇಖರ್,
ರಾಜ್ಯ ರೈತ ಸಂಘದ ಅಧ್ಯಕ್ಷ

ಗಾಂಧಿ ಮಾರ್ಗದಲ್ಲಿ ನಡೆದಿರುವ ರೈತ ಚಳವಳಿಗೆ ಸಿಕ್ಕ ಜಯ ಇದು ಎಂದುಕೊಂಡರೂ ರೈತರ ಪಾಲಿಗೆ ದೊರೆತ ಭಾಗಶಃ ಜಯವಷ್ಟೇ. ನಮ್ಮ ಮುಂದೆ ಬಹಳಷ್ಟು ವಿಷಯಗಳಿವೆ. ಚಳವಳಿ ಮುಂದುವರಿಸಬೇಕಾಗಿದೆ. ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸಂಸತ್ತಿನಲ್ಲಿ ಪ್ರಕ್ರಿಯೆ ನಡೆಯಬೇಕಷ್ಟೆ. ಅಲ್ಲಿಯವರೆಗೂ ಪ್ರಧಾನಿ ಘೋಷಣೆಯನ್ನು ನಂಬಬೇಕಾಗಿಲ್ಲ.

ಚುಕ್ಕಿ ನಂಜುಂಡಸ್ವಾಮಿ
ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕಾರ್ಯಾಧ್ಯಕ್ಷೆ

ದೇಶದ ಜನ ಚಳವಳಿಗಳಿಗೆ ಸಿಕ್ಕ ಗೆಲುವಿದು. ಮುಖ್ಯವಾಗಿ ವರ್ಷದಿಂದ ಕುಟುಂಬ, ಕೃಷಿ ಬಿಟ್ಟು ಪ್ರತಿಭಟಿಸುತ್ತಿದ್ದ ರೈತರಿಗೆ ಸಿಕ್ಕ ಗೆಲುವಿದು. ಈ ಗೆಲುವಿನಿಂದ ಬಡವ, ಶೋಷಿತರ ಪರ ನಡೆಯುತ್ತಿರುವ ಹೋರಾಟಗಳಿಗೆ ಸ್ಫೂರ್ತಿ ಸಿಕ್ಕಂತಾಗಿದೆ.

ಮಲ್ಲಿಗೆ
ಜನಶಕ್ತಿ, ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ, ಮಂಡ್ಯ

ವರದಿಗೆ ಸೂಚನೆ: ಶೋಭಾ ಕರಂದ್ಲಾಜೆ

ಪ್ರಜಾವಾಣಿ ವಾರ್ತೆ

ಉಡುಪಿ: ‘ರಾಜ್ಯದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಹೆಚ್ಚಿನ ಬೆಳೆ ಹಾನಿ ಸಂಭವಿಸಿದೆ. ಸಮೀಕ್ಷೆ ನಡೆಸಿ ಕೇಂದ್ರಕ್ಕೆ ವರದಿ ಸಲ್ಲಿಸಲು ಸೂಚನೆ ನೀಡಲಾಗಿದೆ’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಉಡುಪಿಯಲ್ಲಿ ಶುಕ್ರವಾರ ಜನಸ್ವರಾಜ್ ಸಮಾವೇಶದಲ್ಲಿ ಭಾಗವಹಿಸಿದ್ದ ಅವರು, ಬೆಳೆ ಹಾನಿ ವಿವರ ನೀಡಲು ಎಲ್ಲ ರಾಜ್ಯಗಳಿಗೆ ಸೂಚಿಸಿದ್ದೇವೆ. ಭತ್ತ, ರಾಗಿ, ಜೋಳ ಬೆಳೆ ಹಾನಿಯಾಗಿದೆ. ಕೃಷಿ ಮೂಲಸೌಕರ್ಯ ನಿಧಿಯಿಂದ ಡ್ರಯರ್ ಖರೀದಿಗೆ ನೆರವು ನೀಡಲಾಗುವುದು ಎಂದರು.

ವಿವಿಧೆಡೆ ಇಂದು ಶಾಲೆಗಳಿಗೆ ರಜೆ

ಬೆಂಗಳೂರು: ನಿರಂತರ ಮಳೆಯಿಂದಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಶನಿವಾರ ಸ್ಥಳೀಯ ಜಿಲ್ಲಾಡಳಿತ ರಜೆ ಘೋಷಿಸಿದೆ.

ಹಾವೇರಿ, ಧಾರವಾಡ, ಚಿತ್ರದುರ್ಗ ಕೊಪ್ಪಳ, ಮೈಸೂರು ಜಿಲ್ಲೆಗಳಲ್ಲಿ ನ.20ರಂದು ಎಲ್ಲ ಶಾಲೆ ಮತ್ತು ಕಾಲೇಜುಗಳಿಗೆ ಆಯಾ ಜಿಲ್ಲಾಡಳಿತಗಳು ಒಂದು ದಿನ ರಜೆ ಘೋಷಿಸಿವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಶಾಲೆಗಳಿಗೆ ಇಡಿಯಾಗಿ ರಜೆ ಘೋಷಣೆ ಮಾಡಿಲ್ಲ. ದುಸ್ಥಿತಿಯಲ್ಲಿರುವ, ನೀರು ನುಗ್ಗುವ ತಗ್ಗು ಪ್ರದೇಶ, ಹಳ್ಳ–ಕೊಳ್ಳ ದಾಟ ಬರಬೇಕಿರುವ ಶಾಲೆಗಳಿಗೆ ರಜೆ ನೀಡಲಾಗಿದೆ. ಉಳಿದಂತೆ ರಜೆ ನೀಡುವ ಹೊಣೆಯನ್ನು ಆಯಾ ಶಾಲಾ ಮುಖ್ಯಶಿಕ್ಷಕರಿಗೆ ನೀಡಲಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಅಂಗನವಾಡಿ ಹಾಗೂ 1ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಶನಿವಾರ ರಜೆ ಘೋಷಿಸಲಾಗಿದೆ.

ಉತ್ತರ ಕರ್ನಾಟಕದ ವಿವಿಧೆಡೆ ಬೆಳೆ ನಷ್ಟ • ಹಾವೇರಿ: 567 ಮನೆಗಳಿಗೆ ಹಾನಿ • ಶಿರಸಿ: 1,840 ಹೆಕ್ಟೇರ್ ಭತ್ತದ ಬೆಳೆ ನಾಶ

ನಿರಂತರ ಮಳೆ: ಬೆಳೆ ನಷ್ಟ, ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಶಿರಸಿ ತಾಲ್ಲೂಕಿನ ಮಂಜುಗುಣಿ ಗ್ರಾಮದಲ್ಲಿ ಬೆಳೆಹಾನಿ ಸಮೀಕ್ಷೆಗೆ ಭೇಟಿ ನೀಡಿದ್ದ ಕೃಷಿ ಇಲಾಖೆ ಅಧಿಕಾರಿಗೆ ರೈತರೊಬ್ಬರು ಮಳೆಯಿಂದ ಹಾಳಾದ ಭತ್ತದ ತೆನೆಗಳನ್ನು ತೋರಿಸಿದರು (ಎಡ ಚಿತ್ರ) ಸತತ ಮಳೆಗೆ ಹೊಸಪೇಟೆ ತಾಲ್ಲೂಕಿನ ರಾಜಪುರದಲ್ಲಿ ಈರುಳ್ಳಿ ಬೆಳೆ ಕೊಳೆತು ಹೋಗಿದೆ –ಪ್ರಜಾವಾಣಿ ಚಿತ್ರಗಳು

ಹುಬ್ಬಳ್ಳಿ: ಧಾರವಾಡ, ಹಾವೇರಿ, ವಿಜಯನಗರ, ಉತ್ತರ ಕನ್ನಡ ಸೇರಿದಂತೆ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ನಿರಂತರ ಸುರಿಯುತ್ತಿರುವ ಮಳೆಯಿಂದಾಗಿ, ಬಹಳಷ್ಟು ಕಡೆಗಳಲ್ಲಿ ಈರುಳ್ಳಿ, ಮೆಣಸಿನಕಾಯಿ, ಭತ್ತದ ಬೆಳೆಗಳಿಗೆ ಹಾನಿಯಾಗಿವೆ.

ಹಾವೇರಿಯಲ್ಲಿ ಒಂದೇ ದಿನ ಜಿಲ್ಲೆಯಾದ್ಯಂತ 567 ಮನೆಗಳು, ವಿಜಯನಗರ ಜಿಲ್ಲೆಯಲ್ಲಿ 65 ಮನೆಗಳಿಗೆ ಹಾನಿಯಾಗಿವೆ. ಹುಬ್ಬಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಒಂಬತ್ತು ಮನೆಗಳು ಭಾಗಶಃ ಕುಸಿದಿದ್ದು, ಒಟ್ಟಾರೆ 1331 ಹೆಕ್ಟೇರ್‌ನಲ್ಲಿ ಬೆಳೆ ಹಾಳಾಗಿದೆ.

‘ಧಾರವಾಡ ಜಿಲ್ಲೆಯಲ್ಲಿ ಮೂರು ದಿನದಿಂದ ಮಳೆಯಾಗುತ್ತಿದ್ದು, ವಾಡಿಕೆಗಿಂತ ಹೆಚ್ಚುವರಿ 16.7ಸೆಂ.ಮೀ. ಮಳೆಯಾಗಿದೆ. ಮಳೆಯಿಂದ 28 ಕಿ.ಮೀ. ರಸ್ತೆ ಹಾಳಾಗಿವೆ. 7,390 ಹೆಕ್ಟೇರ್‌ನಲ್ಲಿ ಕೃಷಿ ಬೆಳೆ, 1,210 ಹೆಕ್ಟೇರ್‌ನಲ್ಲಿ ತೋಟಗಾರಿಕೆ ಬೆಳೆ ಹಾನಿಗೀಡಾಗಿವೆ. ನವೆಂಬರ್‌ನಲ್ಲಿ ಈವರೆಗೆ 22 ಮನೆಗಳಿಗೆ ಸಂಪೂರ್ಣ, 188 ಮನೆಗಳಿಗೆ ಭಾಗಶಃ ಹಾನಿಯಾಗಿದೆ’ ಎಂದು ಜಿಲ್ಲಾಧಿಕಾರಿ ನಿತೇಶ್ ಕೆ.ಪಾಟೀಲ ತಿಳಿಸಿದ್ದಾರೆ.

‘ನ. 23ರವರೆಗೆ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಮಳೆ ಹಾನಿ ತಡೆಗೆ ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಂಡಿದೆ’ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕು ಚೌಡಯ್ಯದಾನಪುರದಲ್ಲಿ ಭತ್ತದ ರಾಶಿಗೆ ನೀರು ನುಗ್ಗಿದೆ. ಅತಿವೃಷ್ಟಿಯಿಂದ 18,665 ಹೆಕ್ಟೇರ್ ಕೃಷಿ ಬೆಳೆ, 230 ಹೆಕ್ಟೇರ್ ತೋಟಗಾರಿಕಾ ಬೆಳೆ ನಾಶವಾಗಿದೆ ಎಂದು ಕೃಷಿ ಇಲಾಖೆ ಅಂದಾಜಿಸಿದೆ. 4,799 ಹೆಕ್ಟೇರ್‌ನಲ್ಲಿ ಭತ್ತದ ಬೆಳೆ ನಾಶವಾಗಿದೆ.

ರಟ್ಟೀಹಳ್ಳಿ ತಾಲ್ಲೂಕಿನ ಹಳ್ಳೂರ ಗ್ರಾಮದಲ್ಲಿ ಮಳೆಯಿಂದ ಹಾನಿಯಾದ ಜಮೀನುಗಳಿಗೆ ಕೃಷಿ ಸಚಿವ ಬಿ.ಸಿ.ಪಾಟೀಲ ಭೇಟಿ ನೀಡಿ ಪರಿಶೀಲಿಸಿದರು. ಎನ್‌ಡಿಆರ್‌ಎಫ್ ಮೂಲಕ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ವಿಜಯನಗರ ಜಿಲ್ಲೆಯ ಹೂವಿನಹಡಗಲಿಯಲ್ಲಿ –24, ಕೂಡ್ಲಿಗಿಯಲ್ಲಿ 17, ಕೊಟ್ಟೂರು–16, ಹಗರಿಬೊಮ್ಮನಹಳ್ಳಿ–5, ಹೊಸಪೇಟೆ ತಾಲ್ಲೂಕಿನಲ್ಲಿ 3 ಮನೆಗಳು ಭಾಗಶಃ ಕುಸಿದಿವೆ. ಯಾವುದೇ ಪ್ರಾಣ ಹಾನಿಯಾಗಿಲ್ಲ.

ಹೊಸಪೇಟೆ ತಾಲ್ಲೂಕಿನ ವಿವಿಧೆಡೆ ಈರುಳ್ಳಿ, ಮೆಣಸಿನಕಾಯಿ ಬೆಳೆ, ಹೂವಿನಹಡಗಲಿಯಲ್ಲಿ 200 ಎಕರೆಗೂ ಹೆಚ್ಚು ಪ್ರದೇಶದಲ್ಲಿನ ಭತ್ತ ನೆಲಕಚ್ಚಿದೆ. ಇನ್ನಷ್ಟೇ ಸಮೀಕ್ಷೆ ನಡೆಯಬೇಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ನಿರಂತರ ಮಳೆ ಮುಂದುವರಿದಿದೆ. ‘ಶಿರಸಿ, ಮುಂಡಗೋಡ, ಹಳಿಯಾಳ ಮತ್ತು ಹೊನ್ನಾವರ ಭಾಗದಲ್ಲಿ ಭತ್ತ ಬೆಳೆಗೆ ಹೆಚ್ಚು ಹಾನಿಯಾಗಿದೆ. 1,840.76 ಹೆಕ್ಟೇರ್ ಪ್ರದೇಶಕ್ಕೆ ನಷ್ಟವಾಗಿದೆ’ ಎಂದು ಕೃಷಿ ಇಲಾಖೆ ಉಪನಿರ್ದೇಶಕ ನಟರಾಜ್ ತಿಳಿಸಿದ್ದಾರೆ.

ಬೆಳಗಾವಿ ನಗರ ಹಾಗೂ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಸಾಧಾರಣ ಮಳೆ ಬಿದ್ದಿದೆ. ಬೆಳಗಾವಿ, ಖಾನಾಪುರ ಹಾಗೂ ಕಿತ್ತೂರು ಭಾಗದಲ್ಲಿ ಭತ್ತದ ಒಕ್ಕಣೆಗೆ ಹಾಗೂ ಕೊಯ್ಲಿಗೆ ತೊಂದರೆಯಾಗಿದೆ. ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿಯಲ್ಲಿ ಜಿಟಿಜಿಟಿ ಮಳೆಯಾಗಿದೆ.

ಗದಗ ಜಿಲ್ಲೆಯಾದ್ಯಂತ ಮಳೆಗೆ ಅಪಾರ ಬೆಳೆ ಹಾನಿಯಾಗಿದೆ. ಕೆಲವೆಡೆ ಮನೆಗಳು ಕುಸಿದು ಬಿದ್ದಿವೆ. ಗದಗ ತಾಲ್ಲೂಕಿನ ಮುಳಗುಂದದಲ್ಲಿ 2 ಮನೆಗಳು ಹಾಗೂ ಮಲ್ಲಸಮುದ್ರ ಗ್ರಾಮದಲ್ಲಿ 1 ಮನೆ ಮಳೆಯಿಂದಾಗಿ ಹಾನಿಗೊಂಡಿದೆ ಎಂದು ಗದಗ ತಹಶೀಲ್ದಾರ್ ಕಿಶನ್ ಕಲಾಲ್ ತಿಳಿಸಿದ್ದಾರೆ.

ಬಳ್ಳಾರಿ: 10 ಸಾವಿರ ಹೆಕ್ಟೇರ್ ಬೆಳೆ ಹಾನಿ

ಅಕಾಲಿಕವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 10 ಸಾವಿರ ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಕೃಷಿ ಇಲಾಖೆ ನಡೆಸಿದ ಪ್ರಾಥಮಿಕ ಸಮೀಕ್ಷೆಯಿಂದ ಖಚಿತವಾಗಿದೆ.

1,550 ಹೆಕ್ಟೇರ್ ಭತ್ತ, 1,200 ಹೆಕ್ಟೇರ್ ಕಡ್ಲೆ ಸೇರಿದಂತೆ 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿದ್ದ ಬೆಳೆ ನಷ್ಟವಾಗಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ. ಮಲ್ಲಿಕಾರ್ಜುನ್ ತಿಳಿಸಿದರು.

ಮೂರು ದಿನದಿಂದ ಸಮೀಕ್ಷೆ ಆರಂಭಿಸಲಾಗಿದೆ. ಸಿರುಗುಪ್ಪ, ಕಂಪ್ಲಿ, ಕುರುಗೋಡು ಮತ್ತು ಬಳ್ಳಾರಿ ತಾಲ್ಲೂಕುಗಳಲ್ಲಿ ಬೆಳೆ ಹಾನಿಯಾಗಿದೆ. ಸಮೀಕ್ಷೆ ಮುಂದುವರಿದಿದ್ದು ಬೆಳೆ ಹಾನಿ ಪ್ರಮಾಣ ಇನ್ನೂ ಹೆಚ್ಚಬಹುದು ಎಂದರು.

ವಿದ್ಯುತ್ ಸ್ಪರ್ಶ ರೈತ ಸಾವು

ಹಾವೇರಿ: ಮಳೆಯಿಂದಾಗಿ ತಮ್ಮ ಜಮೀನಿನಲ್ಲಿ ನೆಲಕ್ಕುರುಳಿದ್ದ ವಿದ್ಯುತ್ ಬೋರ್ಡ್ ಇದ್ದ ತಗಡಿನ ಶೆಡ್ ಸರಿಪಡಿಸಲು ಹೋದ ಹಾವೇರಿ ಜಿಲ್ಲೆಯ ಹಂಸಭಾವಿಯ ಬೆಟಕೇರೂರಿನ ರೈತ ರಮೇಶ ನಾಗಪ್ಪ ಆರೀಕಟ್ಟಿ (37) ಎಂಬುವವರು ವಿದ್ಯುತ್ ಹರಿದು ಶುಕ್ರವಾರ ಮೃತಪಟ್ಟಿದ್ದಾರೆ.

ಸ್ಮಾರಕಗಳು ಭಾಗಶಃ ಮುಳುಗಡೆ

ನಿರಂತರ ಮಳೆಯಿಂದಾಗಿ ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಹೆಚ್ಚಿದೆ. ಹಂಪಿ ಸ್ನಾನಘಟ್ಟ, ಚಕ್ರತೀರ್ಥ, ವಿಜಯನಗರ ಕಾಲದ ಕಾಲು ಸೇತುವೆ, ಪುರಂದರ ಮಂಟಪ ಸ್ಮಾರಕಗಳು ಭಾಗಶಃ ಮುಳುಗಡೆಯಾಗಿವೆ.

1,633 ಅಡಿ ಸಾಮರ್ಥ್ಯದ ತುಂಗಭದ್ರಾ ಜಲಾಶಯ ಪೂರ್ಣ ಭರ್ತಿಯಾಗಿದ್ದು, ನದಿಗೆ ನೀರು ಹರಿಸಲಾಗುತ್ತಿದೆ. ಒಳಹರಿವಿನ ಪ್ರಮಾಣ 50 ಸಾವಿರ ಕ್ಯುಸೆಕ್ ಇದ್ದು, ಅಷ್ಟೇ ಪ್ರಮಾಣದ ನೀರು ನದಿಗೆ ಹರಿಸಲಾಗುತ್ತಿದೆ. 12 ಕ್ರಸ್ಟ್‌ಗೇಟ್‌ಗಳಿಂದ ನೀರು ಹರಿಸಲಾಗುತ್ತಿದೆ. ನದಿ ಪಾತ್ರ ಜನ ಎಚ್ಚರಿಕೆಯಿಂದ ಇರುವಂತೆ ತಿಳಿಸಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	18,694	18,469
ಹಾರಂಗಿ	2,859	2,857.78	1,350	1,600
ಕಬಿನಿ	2284	2,283.86	3,800	3,500
ಹೇಮಾವತಿ	2,922	2,910.08	4,397	2,360
ಲಿಂಗನಮಕ್ಕಿ	1,819	1,813.50	1,864	6,379.09
ಸೂಪಾ (ಮೀ)	564	555.30	701	2,876
ಮಾಣಿ	594.36	586.70	78	134
ತುಂಗಭದ್ರಾ	1,633	1,633	50,000	50,000
ಮಲಪ್ರಭಾ	2079.50	2,076.70	3,397	1,869
ಘಟಪ್ರಭಾ	2,175	2,166.25	-	2,651
ಭದ್ರಾ	186	185.10	4,745	7,164
ಆಲಮಟ್ಟಿ (ಮೀ)	519.60	518.30	-	6,955
ನಾರಾಯಣಪುರ (ಮೀ)	492.25	491.56	5,634	7,016

* ನೆಲಮಟ್ಟದಿಂದ

ಕುಸಿದ ಗೋಡೆ: ದಂಪತಿ ಸೇರಿ ಮೂವರ ಸಾವು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಜಿಲ್ಲೆಯ ನಾಯಕನಹಟ್ಟಿ ಹಾಗೂ ಧರ್ಮಪುರ ಹೋಬಳಿಯಲ್ಲಿ ಮಳೆಯಿಂದ ಮನೆ ಕುಸಿದಿದ್ದು, ದಂಪತಿ ಸಹಿತ ಮೂವರು ಮೃತಪಟ್ಟಿದ್ದಾರೆ.

ನಾಯಕನಹಟ್ಟಿಯ ಟಿ.ಕಂಪ್ಲೇಶಪ್ಪ (46), ತಿಪ್ಪಮ್ಮ (38) ಹಾಗೂ ಧರ್ಮಪುರ ಹೋಬಳಿಯ ಬ್ಯಾಡರಹಳ್ಳಿ ನಿವಾಸಿ ತ್ರಿವೇಣಿ (25) ಮೃತಪಟ್ಟವರು. ಒಬ್ಬರು ಗಾಯಗೊಂಡಿದ್ದು, ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಗುರುವಾರ ರಾತ್ರಿಯಿಂದ ಶುಕ್ರವಾರ ಸಂಜೆಯವರೆಗೆ ನಿರಂತರ ಮಳೆ ಸುರಿದಿದೆ. ನಾಯಕನಹಟ್ಟಿಯ ಅಂಬೇಡ್ಕರ್ ಕಾಲೊನಿಯ ಪಾಳುಬಿದ್ದಿದ್ದ ಶಿಶುವಿಹಾರ ಕಟ್ಟಡದ ಗೋಡೆ ಕಂಪ್ಲೇಶಪ್ಪ ಅವರ ಗುಡಿಸಲಿನ ಮೇಲೆ ಬಿದ್ದು, ಮಲಗಿದ್ದ ದಂಪತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅವರ ಪುತ್ರ ಅರುಣ್‌ಕುಮಾರ್ ಪ್ರಾಣಾಪಾಯದಿಂದ ಪಾರಾಗಿದ್ದು, ಚಿಕಿತ್ಸೆಗೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯ ಅಂಬೇಡ್ಕರ್ ನಗರದಲ್ಲಿ ಶುಕ್ರವಾರ ಶಿಶುವಿಹಾರದ ಗೋಡೆ ಗುಡಿಸಲಿನ ಮೇಲೆ ಬಿದ್ದಿರುವುದು –ಪ್ರಜಾವಾಣಿ ಚಿತ್ರ

ಧರ್ಮಪುರ ಸಮೀಪದ ಬ್ಯಾಡರಹಳ್ಳಿಯಲ್ಲಿ ಕೃಷ್ಣಮೂರ್ತಿ ಅವರ ಮನೆಯ ಗೋಡೆ ಕುಸಿದು ಅವರ ಪತ್ನಿ ತ್ರಿವೇಣಿ ಮೃತಪಟ್ಟಿದ್ದಾರೆ.

104 ಮನೆಗಳಿಗೆ ಹಾನಿ: ಮಳೆಯಿಂದಾಗಿ ಚಿತ್ರದುರ್ಗ ತಾಲ್ಲೂಕಿನಲ್ಲಿ 19 ಮನೆಗಳು, ಚಳ್ಳಕೆರೆ 40, ಹಿರಿಯೂರು 28, ಹೊಳಲ್ಕೆರೆ 1, ಹೊಸದುರ್ಗ 10 ಹಾಗೂ ಮೊಳಕಾಲ್ಮುರು ತಾಲ್ಲೂಕಿನಲ್ಲಿ 6 ಮನೆಗಳಿಗೆ ಹಾನಿಯಾಗಿದೆ. ಹಲವೆಡೆ ಶಾಲಾ ಕಟ್ಟಡಗಳು ಕುಸಿದಿವೆ.

ಮೆಕ್ಕೆಜೋಳ, ರಾಗಿ, ಭತ್ತ, ಶೇಂಗಾ, ಅವರೆ, ಹತ್ತಿ, ತರಕಾರಿ ಬೆಳೆಗಳಿಗೆ ಹಾನಿಯಾಗಿದೆ. ಒಟ್ಟು 66,376 ಹೆಕ್ಟೇರ್‌ನಲ್ಲಿ ಬೆಳೆ ನಾಶವಾಗಿದೆ.

ಶಿವಮೊಗ್ಗ ವರದಿ: 7,573 ಹೆಕ್ಟೇರ್‌ನಲ್ಲಿ ಬೆಳೆ ನಾಶ: ಶಿವಮೊಗ್ಗ ಜಿಲ್ಲೆಯಲ್ಲಿ ಮಳೆ ಮುಂದುವರಿದಿದೆ. ಹಲವೆಡೆ ಇಡೀ ದಿನ ಜಿಟಿಜಿಟಿ ಮಳೆ ಸುರಿದಿದೆ. ಹೊಸನಗರ ತಾಲ್ಲೂಕಿನಲ್ಲಿ 10 ಸೆ.ಮೀ. ಮಳೆಯಾಗಿದೆ. ಅಡಿಕೆ ತೋಟಗಳು, ಭತ್ತದ ಗದ್ದೆಗಳು, ಮೆಕ್ಕೆಜೋಳದ ಜಮೀನುಗಳಲ್ಲಿ ನೀರು ನಿಂತಿದೆ. ಭತ್ತದ ಬೆಳೆ ನೆಲ ಕಚ್ಚಿದೆ. ಮೆಕ್ಕೆಜೋಳದ ತೆನೆಗಳು ಹೊಲದಲ್ಲೇ ಮೊಳಕೆಯಾಗುತ್ತಿವೆ. ಪ್ರಸಕ್ತ ವರ್ಷ ಮಳೆ, ಪ್ರವಾಹದಿಂದಾಗಿ 7,573 ಹೆಕ್ಟೇರ್ ಬೆಳೆ ನಾಶವಾಗಿದೆ. 11,837 ರೈತರು ಆರ್ಥಿಕ ನಷ್ಟ ಅನುಭವಿಸಿದ್ದಾರೆ. 1,749 ಮನೆಗಳು ಕುಸಿದಿವೆ.

90 ಎಕರೆ ಭತ್ತ, ಮೆಕ್ಕೆಜೋಳಕ್ಕೆ ಹಾನಿ: ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ವಡ್ನಾಳ್ ಗ್ರಾಮದ ಕೆರೆ 6 ವರ್ಷದ ಬಳಿಕ ಕೋಡಿ ಬಿದ್ದಿದೆ. ತಾಲ್ಲೂಕಿನಲ್ಲಿ 90 ಎಕರೆ ಪ್ರದೇಶದಲ್ಲಿ ಭತ್ತ ಹಾಗೂ ಮೆಕ್ಕೆಜೋಳ ಬೆಳೆಗೆ ಹಾನಿಯಾಗಿದೆ. ಅಡಿಕೆ ಬೇಯಿಸಿ, ಒಣಗಿಸಲು ರೈತರು ಪರದಾಡುವಂತಾಗಿದೆ. ಬೀರೂರು-ಸಮ್ಮಸಗಿ ರಾಜ್ಯ ಹೆದ್ದಾರಿ 75ರಲ್ಲಿ ಬರುವ ರಾಜಗೊಂಡನಹಳ್ಳಿ ಗ್ರಾಮದ ಬಳಿ ಹೆದ್ದಾರಿ ಜಲಾವೃತವಾಗಿದ್ದು, ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು.

ನ್ಯಾಮತಿ ತಾಲ್ಲೂಕಿನಲ್ಲಿ 15 ಪಕ್ಕಾ ಮನೆಗಳು ಹಾಗೂ 2 ದನದ ಕೊಟ್ಟಿಗೆಗೆ ಹಾನಿಯಾಗಿದೆ. ತಾಲ್ಲೂಕಿನಲ್ಲಿ 114 ಹೆಕ್ಟೇರ್ ಜಮೀನಿನಲ್ಲಿ ಭತ್ತದ ಬೆಳೆ ಹಾನಿಯಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಜಿಟಿಜಿಟಿ ಮಳೆ ಮುಂದುವರಿದಿದೆ.

ಚಿಕ್ಕಮಗಳೂರಿನಲ್ಲಿ ಉತ್ತಮ ಮಳೆ: ಜಿಲ್ಲೆಯ ವಿವಿಧೆಡೆ ಶುಕ್ರವಾರವೂ ಉತ್ತಮ ಮಳೆ ಸುರಿದಿದೆ. ಕಡೂರು, ತರೀಕೆರೆ, ಬೀರೂರು ಭಾಗದಲ್ಲಿ ಧಾರಾಕಾರ, ಕೊಪ್ಪ, ಶೃಂಗೇರಿ, ನರಸಿಂಹರಾಜಪುರ, ಮೂಡಿಗೆರೆ ತಾಲ್ಲೂಕುಗಳಲ್ಲಿಯೂ ಸಾಧಾರಣ ಮಳೆಯಾಗಿದೆ.

ಹಲವೆಡೆ ತೋಟಗಳು ಜಲಾವೃತಗೊಂಡಿವೆ. ನಿರಂತರ ಮಳೆಯಿಂದಾಗಿ ಕಾಫಿ, ಭತ್ತ, ಅಡಿಕೆ, ಮೆಕ್ಕೆಜೋಳ ಬೆಳೆಗಳಿಗೆ ಹಾನಿಯಾಗಿದೆ.

18 ಜಿಲ್ಲೆಗಳಲ್ಲಿ ಯೆಲ್ಲೊ ಅಲರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ನ.20ರಂದು ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ತುಮಕೂರು, ಶಿವಮೊಗ್ಗ, ರಾಮನಗರ, ಕೊಡಗು, ಹಾಸನ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಕೊಪ್ಪಳ, ಹಾವೇರಿ, ಗದಗ, ಧಾರವಾಡ, ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಎರಡು ದಿನಗಳಿಂದ ಹವಾಮಾನದಲ್ಲಿ ಮುಂದುವರಿದಿರುವ ವಾಯುಭಾರ ಕುಸಿತ ಹಾಗೂ ಮೇಲ್ಮೈ ಸುಳಿಗಾಳಿಯ ಪರಿಣಾಮದಿಂದ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ನಿರಂತರವಾಗಿ ಮಳೆಯಾಗುತ್ತಿದೆ. ಉಳಿದ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದ್ದು, ನ.22ರಿಂದ ರಾಜ್ಯದಲ್ಲಿ ಮಳೆ ತಗ್ಗಲಿದೆ.

ಮಳೆ–ಎಲ್ಲಿ, ಎಷ್ಟು?: ಕೋಲಾರ ಜಿಲ್ಲೆಯ ಬಂಗಾರಪೇಟೆ ಹಾಗೂ ಮಾಲೂರಿನಲ್ಲಿ ಶುಕ್ರವಾರ ತಲಾ 17 ಸೆಂ.ಮೀ ಗರಿಷ್ಠ ಮಳೆಯಾಗಿದೆ.

ಗುಬ್ಬಿ, ತುಮಕೂರು 15, ಚಿಂತಾಮಣಿ 12, ಮುಳಬಾಗಿಲು, ಶ್ರೀನಿವಾಸಪುರ 11, ಶಿಡ್ಲಘಟ್ಟ, ತೊಂಡೆಬಾವಿ, ಹೊಸಕೋಟೆ 10, ದೇವನಹಳ್ಳಿ, ದೊಡ್ಡಬಳ್ಳಾಪುರ, ಗೌರಿಬಿದನೂರು, ಚಿಕ್ಕಬಳ್ಳಾಪುರ 9, ಮಧುಗಿರಿ 8, ಪಾವಗಡ, ನೆಲಮಂಗಲ, ಗುಡಿಬಂಡೆ 7, ಹಾಸನ, ಶಿರಾ, ಕಂಪ್ಲಿ 6, ತಿಪಟೂರು, ಹಿರಿಯೂರು, ಮಾಗಡಿ 5, ಚನ್ನಪಟ್ಟಣ 4, ಗಂಗಾವತಿ, ಮದ್ದೂರು, ಮಳವಳ್ಳಿಯಲ್ಲಿ ತಲಾ 3 ಸೆಂ.ಮೀ ಮಳೆಯಾಗಿದೆ.

ದಾವಣಗೆರೆಯಲ್ಲಿ 19 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಮೈಸೂರು ಜಿಲ್ಲೆಯಲ್ಲಿ 1,994 ಮನೆಗಳಿಗೆ ಹಾನಿ

ಮನೆ ಕುಸಿತ: ಐದು ಮಂದಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಭಾಗದ ವಿವಿಧ ಜಿಲ್ಲೆಗಳಲ್ಲಿ ಮಳೆ ಮುಂದುವರಿದಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಮೈಸೂರಿನ ತಿಲಕ್ ನಗರದಲ್ಲಿ ಶಿಥಿಲ ಮನೆ ಶುಕ್ರವಾರ ಬೆಳಿಗ್ಗೆ ಕುಸಿದಿದೆ. ಮನೆಯ ಹಿಂಭಾಗದಲ್ಲಿ ಸಿಲುಕಿದ್ದ ಐವರನ್ನು ರಕ್ಷಿಸಲಾಗಿದೆ.

ಮನೆಯಲ್ಲಿ ಯಾರೂ ವಾಸಿಸುತ್ತಿರಲಿಲ್ಲ. ಆದರೆ, ಹಿಂಭಾಗದಲ್ಲಿ ವಾಸವಿದ್ದವರು ಹೊರಗೆ ಬರಲು ಪರದಾಡಿದರು. ಮೈಸೂರು ತಾಲ್ಲೂಕಿನ ಪಿಲ್ಲಹಳ್ಳಿ, ಹಾರೋಹಳ್ಳಿ, ಹಳ್ಳಿಕೆರೆಹುಂಡಿ ಕೆಲ ಮನೆಯ ಗೋಡೆಗಳು ಕುಸಿದಿವೆ.

1,994 ಮನೆಗಳಿಗೆ ಹಾನಿ: ಮೈಸೂರು ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ 1,994 ಮನೆಗಳಿಗೆ ಹಾನಿಯಾಗಿದೆ. 40 ಮನೆಗಳು ಪೂರ್ಣ, ಉಳಿದವು ಭಾಗಶಃ ಹಾನಿಗೊಂಡಿವೆ. ದೇವರಾಜ ಮಾರುಕಟ್ಟೆ ಸೇರಿದಂತೆ ಹಳೆಯ ಕಟ್ಟಡಗಳು, ಮನೆಗಳು ಕುಸಿಯುವ ಭೀತಿ ಎದುರಾಗಿದೆ.

‘ಯಾವುದೇ ಸ್ಥಿತಿ ಎದುರಿಸಲು ಜಿಲ್ಲಾಡಳಿತ ಸಜ್ಜಾಗಿದೆ’ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ತಿಳಿಸಿದರು.

ವರುಣಾ ಭಾಗದಲ್ಲಿ ಮಳೆಗೆ ರಾಗಿ, ಭತ್ತ, ಅರಿಸಿನ, ತರಕಾರಿ ಬೆಳೆ ಹಾನಿಯಾಗಿವೆ. ಹುಣಸೂರು ತಾಲ್ಲೂಕಿನಲ್ಲಿ ಮಳೆಗೆ ಒಂದು ತಿಂಗಳಿನಲ್ಲಿ 123 ಹೆಕ್ಟೇರ್ ಫಸಲು ನಾಶವಾಗಿದ್ದು, 500 ಮನೆಗಳು ಕುಸಿದಿವೆ.

ಚಾಮರಾಜನಗರದ ಉಪ್ಪಾರ ಬೀದಿಯಲ್ಲಿ ಗುರುವಾರ ರಾತ್ರಿ 11 ಮನೆಗಳ ಗೋಡೆಗಳು ಕುಸಿದಿವೆ. ಈವರೆಗೆ 349 ಮನೆಗಳಿಗೆ ಭಾಗಶಃ ಹಾನಿಯಾಗಿದೆ. 1,620 ಹೆಕ್ಟೇರ್‌ನಲ್ಲಿ ಬೆಳೆ ನಷ್ಟ ಸಂಭವಿಸಿದೆ. 33.52 ಹೆಕ್ಟೇರ್ ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ.

ಹಾಸನ ಜಿಲ್ಲೆಯಲ್ಲಿ ಒಂದು ಮನೆ ಪೂರ್ಣ, 58 ಮನೆಗಳಿಗೆ ಭಾಗಶಃ ಹಾನಿ ಉಂಟಾಗಿದೆ. 25 ಸಾವಿರ ಹೆಕ್ಟೇರ್‌ನಲ್ಲಿ ರಾಗಿ, ಮೆಕ್ಕೆಜೋಳ, ಭತ್ತ ಬೆಳೆ ನಾಶವಾಗಿದೆ. ಚನ್ನರಾಯಪಟ್ಟಣ ತಾಲ್ಲೂಕಿನ ಮುನೇಶ್ವರ ದೇವಸ್ಥಾನ ಕುಸಿದು ಬಿದ್ದಿದೆ. ಹಿರೀಸಾವೆಯಲ್ಲಿ ಮನೆ ಕುಸಿದಿವೆ.

ಕೊಡಗಿನಲ್ಲಿ ಶುಕ್ರವಾರ ಹುತ್ತರಿ ಆಚರಣೆ ನಡೆಯುತ್ತಿದ್ದು ಭತ್ತದ ಗದ್ದೆಗಳಲ್ಲಿ ಕದಿರು ತೆಗೆದು ಮನೆಗೆ ಧಾನ್ಯಲಕ್ಷ್ಮಿ ಬರಮಾಡಿಕೊಳ್ಳುವ ಸಂಭ್ರಮಕ್ಕೆ ಮಳೆಯು ಅಡ್ಡಿ ಪಡಿಸಿದೆ.

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕಿನ ಹೆಮ್ಮನಹಳ್ಳಿ, ಮದ್ದೂರು ತಾಲ್ಲೂಕಿನ ವಳಗೆರೆಹಳ್ಳಿಯಲ್ಲಿ ತಲಾ ಒಂದು ಮನೆ ಕುಸಿದಿದೆ. ಮಹಿಳೆಯೊಬ್ಬರು ಪಾರಾಗಿದ್ದಾರೆ. ನಾಗಮಂಗಲ, ಮಳವಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ರಾಗಿ, ಭತ್ತದ ಬೆಳೆ ನೀರು ಪಾಲಾಗಿದೆ.

ಟೊಮೆಟೊ ದುಬಾರಿ!

ಮೈಸೂರು ಭಾಗದಲ್ಲಿ ಟೊಮೆಟೊ ದರ ದುಬಾರಿಯಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಟೊಮೆಟೊ ಕೆ.ಜಿಗೆ ₹ 100, ನುಗ್ಗೆಕಾಯಿ ₹ 240ಕ್ಕೆ ಏರಿದೆ. ಒಂದು ಕಂತೆ ನಾಟಿ ಕೊತ್ತಂಬರಿ ಸೊಪ್ಪು ₹50. ಕೆ.ಜಿ ಏಲಕ್ಕಿ ಬಾಳೆಹಣ್ಣು ದರ ₹ 30 ಇದೆ.

ಮಡಿಕೇರಿಯಲ್ಲಿ ಕೆ.ಜಿ ಟೊಮೆಟೊ ದರವು ₹ 80, ಈರುಳ್ಳಿ ₹ 50, ಬೀನ್ಸ್ ₹ 80, ಕ್ಯಾರೆಟ್ ₹ 75 ಇದೆ. ಚಾಮರಾಜನಗರದಲ್ಲಿ ಕೆ.ಜಿ ಟೊಮೆಟೊಗೆ ₹70ರಿಂದ ₹100 ವರೆಗೆ ಬೆಲೆ ಇದೆ. ರೈತರಿಗೆ ಕೆ.ಜಿಗೆ ₹55ರಿಂದ ₹72ವರೆಗೆ ಸಿಗುತ್ತಿದೆ.

ಮೈಸೂರು ಜಿಲ್ಲೆಯಲ್ಲಿ ಹಾಪ್‌ಕಾಮ್ಸ್‌ನಲ್ಲಿ ಟೊಮೆಟೊ ₹ 80, ಬೀನ್ಸ್ ₹ 50, ಬದನೆ ₹ 56, ಬೆಂಡೆಕಾಯಿ ₹ 64, ದಪ್ಪಮೆಣಸಿನಕಾಯಿ ₹ 94, ನುಗ್ಗೆಕಾಯಿ ₹ 200, ಕ್ಯಾರೆಟ್ ₹ 80, ಈರುಳ್ಳಿ ₹ 52 ಇದೆ. ದರ ಹೆಚ್ಚಿದ್ದರೂ ರೈತರಿಗೂ ಲಾಭವಾಗುತ್ತಿಲ್ಲ.

ಹಾಸನ ಜಿಲ್ಲೆಯಲ್ಲಿ ತೇವಾಂಶ ಹೆಚ್ಚಿ ತರಕಾರಿಗಳು ಕೊಳೆಯುತ್ತಿವೆ. ಟೊಮೊಟೊ ಕೆ.ಜಿ.ಗೆ ₹85 ಇದ್ದರೆ, ಈರುಳ್ಳಿ ದರ ಕೆ.ಜಿ. ₹ 60ಕ್ಕೇರಿದೆ. ಹುರುಳಿಕಾಯಿ ₹ 60, ಬಿಟ್‌ರೂಟ್ ₹70, ಬದನೆಕಾಯಿ ₹90, ಕ್ಯಾರೆಟ್ ₹ 60, ನುಗ್ಗೇಕಾಯಿ ₹100, ಹಸಿಮಣಸಿನಕಾಯಿ ₹ 80, ಹೀರೇಕಾಯಿ ₹90 ಇದೆ.

ತಿರುಪತಿಯಲ್ಲಿ ಶುಕ್ರವಾರ ಧಾರಾಕಾರ ಮಳೆಯಿಂದಾಗಿ ರಸ್ತೆಯಲ್ಲಿ ಪ್ರವಾಹ ಸ್ಥಿತಿ ಉಂಟಾಗಿದ್ದು, ಜನರು ಮೀನು ಹಿಡಿಯಲು ಹಾತೊರೆದರು –ಪಿಟಿಐ ಚಿತ್ರ

ಆಂಧ್ರದಲ್ಲಿ ಪ್ರವಾಹ: 12 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹವಾಮಾನ ವೈಪರೀತ್ಯದಿಂದ ಆಂಧ್ರಪ್ರದೇಶದ ಚಿತ್ತೂರು, ಕಡಪ, ನೆಲ್ಲೂರು ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗಿದೆ. ಕಡಪ ಜಿಲ್ಲೆಯ ರಾಜಂಪೇಟ ಬಳಿ ಪ್ರವಾಹದಿಂದಾಗಿ ಕನಿಷ್ಠ 12 ಮಂದಿ ಮೃತರಾಗಿರುವ ವರದಿ ಇದೆ.

ರಾಜ್ಯ ಸಾರಿಗೆ ಸಂಸ್ಥೆ ಬಸ್ ಪ್ರವಾಹದ ನಡುವೆ ಸಿಲುಕಿದ್ದು ಹಲವು ಪ್ರಯಾಣಿಕರು ಕೊಚ್ಚಿಹೋಗಿದ್ದಾರೆ. ಸ್ಥಳೀಯರ ಪ್ರಕಾರ, ಇನ್ನೂ ಹೆಚ್ಚಿನ ಜನರು ಮೃತಪಟ್ಟಿರಬಹುದು. ಅಧಿಕಾರಿಗಳು ಮೃತರ ಸಂಖ್ಯೆಯನ್ನು ಇನ್ನೂ ಖಚಿತಪಡಿಸಬೇಕಿದೆ.

ಅನಂತಪುರಂ ಮತ್ತು ಕಡಪ ಜಿಲ್ಲೆಗಳಿಗೆ ರಕ್ಷಣಾ ಕಾರ್ಯಗಳಿಗೆ ನಾಲ್ಕು ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲಾಗಿದೆ. ಇನ್ನೂ ಐದು ಹೆಲಿಕಾಪ್ಟರ್‌ಗಳನ್ನು ನಿಯೋಜಿಸುವ ಸಂಭವವಿದೆ ಎಂದು ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರು ತಿಳಿಸಿದ್ದಾರೆ.

ತುಮಕೂರು, ಕೋಲಾರ: ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಗುರುವಾರ ಇಡೀ ರಾತ್ರಿ ಮಳೆಯ ಅಬ್ಬರ ಕಡಿಮೆಯಾಗಿರಲಿಲ್ಲ.

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಬಿಳ್ಳೂರು ಗ್ರಾಮದಲ್ಲಿ ಶುಕ್ರವಾರ ಕೋಡಿಬಿದ್ದ ಕೆರೆಯ ನೀರು ವೀಕ್ಷಿಸಲು ಬಂದಿದ್ದ ಬೋಯಿಪಲ್ಲಿ ಗ್ರಾಮದ ರಮಣ (33) ಎಂಬುವವರು ಕೊಚ್ಚಿ ಹೋಗಿದ್ದಾರೆ. ಈ ವೇಳೆ ನೀರಿನ ರಭಸಕ್ಕೆ ಐವರು ಕೊಚ್ಚಿ ಹೋಗಿದ್ದು, ನಾಲ್ವರನ್ನು ರಕ್ಷಿಸಲಾಗಿದೆ. ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಗುರುವಾರ ಅಮರಾವತಮ್ಮ ಎಂಬ ಮಹಿಳೆಯೊಬ್ಬರು ಕಾಲುವೆ ನೀರಿನಲ್ಲಿ ಕೊಚ್ಚಿಹೋಗಿದ್ದರು.ಇಂದು ಅವರ ಶವ ಸಿಕ್ಕಿದೆ.

ಕೋಲಾರ ತಾಲ್ಲೂಕಿನ ಕೆಂದಟ್ಟಿ ಗ್ರಾಮದಲ್ಲಿ ಮನೆ ಕುಸಿದು ಪ್ರಭಾಕರ್ (50) ಮೃತಪಟ್ಟಿದ್ದಾರೆ.

ಮಣಿದ ಪ್ರಧಾನಿ ಮೋದಿ, ರೈತರ ಜಯ

ಒಂದನೇ ಪುಟದಿಂದ...

2024ರ ಲೋಕಸಭಾ ಚುನಾವಣೆಯ ಫೈನಲ್ಸ್‌ಗೆ ಉತ್ತರಪ್ರದೇಶದ ಹಾಲಿ ವಿಧಾನಸಭಾ ಚುನಾವಣೆಯೇ ಸೆಮಿಫೈನಲ್ಸ್. ಲೋಕಸಭೆಯ 80 ಸ್ಥಾನಗಳಿಗೆ ಪ್ರತಿನಿಧಿಗಳನ್ನು ಕಳುಹಿಸಿಕೊಡುವ ವಿಶಾಲ ಸೀಮೆಯಿದು.

2014ರ ಲೋಕಸಭಾ ಚುನಾವಣೆಗಳಲ್ಲಿ ಉತ್ತರಪ್ರದೇಶವನ್ನು ಮೋಶಾ (ಮೋದಿ, ಅಮಿತ್ ಶಾ) ಜೋಡಿ ಗುಡಿಸಿ ಹಾಕಿ ಕೇಂದ್ರ ಸರ್ಕಾರವನ್ನು ತನ್ನ ಉಡಿಗೆ ಹಾಕಿಕೊಂಡಿತ್ತು. ಆದರೆ ಈ ಜೋಡಿಯ ಪ್ರಚಂಡ ಸಾಮರ್ಥ್ಯ ಮತ್ತೊಮ್ಮೆ ಸಂಶಯಾತೀತವಾಗಿ ಸಾಬೀತಾಗಿದ್ದು 2017ರ ಉತ್ತರಪ್ರದೇಶ ವಿಧಾನಸಭಾ ಚುನಾವಣೆಗಳಲ್ಲಿ ಸಾಧಿಸಿದ ಅಸಾಧಾರಣ ಗೆಲುವಿನಿಂದ. ಈ ಗೆಲುವೇ 2019ರ ಲೋಕಸಭಾ ಚುನಾವಣೆಗಳ ಗೆಲುವಿಗೆ ಸೋಪಾನವಾಯಿತು. 2024ರಲ್ಲಿ ಮೋದಿಯವರು ಸತತ ಮೂರನೆಯ ಸಲ ಗೆದ್ದು ಪ್ರಧಾನಿ ಪಟ್ಟದಲ್ಲಿ ಕೂರಬೇಕಿದ್ದರೆ 2022ರಲ್ಲಿ ಉತ್ತರಪ್ರದೇಶದಲ್ಲಿ ಮತ್ತೊಮ್ಮೆ ಜಯಭೇರಿ ಬಾರಿಸುವುದು ನಿರ್ಣಾಯಕ.

ಈ ಕಠೋರ ವಾಸ್ತವದ ನಡುವೆ ರೈತ ಪ್ರತಿಭಟನೆಯ ಕಾರಣ ಪಶ್ಚಿಮ ಮತ್ತು ಪೂರ್ವ ಉತ್ತರಪ್ರದೇಶ ಸೀಮೆಗಳು ಬಿಜೆಪಿಯ ಕಾಲ ಕೆಳಗಿನ ನೆಲವನ್ನು ಅಲುಗಿಸಿವೆ. ಚುನಾವಣೆಯಲ್ಲಿ ಸೋಲುವ ಭಯವನ್ನು ಹುಟ್ಟಿಸಿವೆ.

ದೆಹಲಿಯ ಗಡಿಗಳಿಗೆ ಲಗ್ಗೆ ಹಾಕಿದ್ದ ರೈತ ಚಳವಳಿಯ ಕತೆ ಇನ್ನೇನು ಮುಗಿದೇ ಹೋಯಿತೆಂದು ಒಂದೊಮ್ಮೆ ಗಹಗಹಿಸಿತ್ತು ಪ್ರಭುತ್ವ. ಆದರೆ ಕುತಂತ್ರ ಷಡ್ಯಂತ್ರ ದಮನ ದೌರ್ಜನ್ಯಗಳ ಬೂದಿಯಿಂದ ಫೀನಿಕ್ಸ್ ಹಕ್ಕಿಯಂತೆ ಮತ್ತೆ ಹುಟ್ಟಿ ಹರವಿದ ರೈತ ಚಳವಳಿಗೆ ಗೆಲುವು ದಕ್ಕಿದೆ. ರೈತನ ಹಾದಿಗೆ ಮುಳ್ಳು ಹಾಸಿ ಕಂದಕಗಳನ್ನು ತೋಡಿದ್ದರು ಆಳುವವರು. ಅವೇ ಮುಳ್ಳುಗಳ ಪಕ್ಕದಲ್ಲಿ ಮಣ್ಣು ಚೆಲ್ಲಿ ಹೂವಿನ ಗಿಡಗಳ ನೆಟ್ಟಿದ್ದ ರೈತ.

ಎಲುಬು ಕೊರೆವ ಚಳಿ, ರಕ್ತ ಸುಡುವ ಬಿಸಿಲು, ಸುರಿದ ಮಳೆ, ಕವಿದು ಉಸಿರುಗಟ್ಟಿಸಿದ ಮಲಿನ ಗಾಳಿಗೆ, ತಮ್ಮ ಹೆಸರಿಗೆ ಮಸಿ ಬಳಿಯುವ ಅಪಪ್ರಚಾರದ ಜಂಝಾವಾತಕ್ಕೆ ಅಳುಕದೆ ದೆಹಲಿಯ ಗಡಿಗಳಲ್ಲಿ ಮೈಲುಗಳುದ್ದದ ವಿಸ್ತಾರದಲ್ಲಿ ಆಕಾಶವನ್ನೇ ಹೊದ್ದು ಉದ್ದಕ್ಕೆ ಬೀಡುಬಿಟ್ಟಿದ್ದವರು ಅಪ್ಪಟ ಒಕ್ಕಲು ಮಕ್ಕಳು ಮತ್ತು ಕೃಷಿ ಕಾರ್ಮಿಕರು. ಏಳುನೂರಕ್ಕೂ ಹೆಚ್ಚು ಮಂದಿ ಪ್ರತಿಭಟನೆಯಲ್ಲೇ ಪ್ರಾಣ ತೆತ್ತಿದ್ದಾರೆ. ಅವರ ಮೇಲೆ ಪಾಶವೀ ಬಲಪ್ರಯೋಗ ನಡೆಯಿತು.

ಇವರನ್ನು ಖಲಿಸ್ತಾನಿಗಳು, ಭಯೋತ್ಪಾದಕರು, ದೇಶದ್ರೋಹಿಗಳು, ಪರೋಪಜೀವಿ, ಆಂದೋಲನಜೀವಿ ಎಂದೆಲ್ಲ ಕರೆಯಲಾಯಿತು. ಹರಿಯಾಣದ ಐಎಎಸ್ ಅಧಿಕಾರಿ ರೈತರ ಬುರುಡೆ ಬಿಚ್ಚುವಂತೆ ನೀಡಿದ ಮೌಖಿಕ ಆದೇಶವನ್ನು ಅಕ್ಷರಶಃ ಪಾಲಿಸಲಾಯಿತು.

ಜಿಲ್ಲೆ ಜಿಲ್ಲೆಗಳಲ್ಲಿ ರೈತರ ವಿರುದ್ಧ ಹಿಂಸಾಚಾರಕ್ಕೆ ಇಳಿಯುವಂತೆ ಖುದ್ದು ಹರಿಯಾಣದ ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್ ಅವರೇ ತಮ್ಮ ಪಕ್ಷದ ಕಾರ್ಯಕರ್ತರನ್ನು ಎತ್ತಿಕಟ್ಟಿದ್ದರು. ದೇಶ್ ಕೇ ಗದ್ದಾರೋಂ ಕೋ ಗೋಲೀ ಮಾರೋ ಸಾಲೋಂ ಕೋ(-ದೇಶದ್ರೋಹಿಗಳಿಗೆ ಗುಂಡಿಟ್ಟು ಕೊಲ್ಲಿ) ಎಂದು ಅಬ್ಬರಿಸಿ ದಾಳಿ ನಡೆಸಿ ರೈತರನ್ನು ಒಕ್ಕಲೆಬ್ಬಿಸುವ ಪ್ರಯತ್ನ ಆಳುವ ಪಕ್ಷದ ಸಮರ್ಥಕರಿಂದ ನಡೆಯಿತು.

ಇತ್ತೀಚೆಗೆ, ಕೇಂದ್ರ ಸಚಿವರೊಬ್ಬರ ಮಗನು ಕುಳಿತಿದ್ದ ವಾಹನವೂ ಸೇರಿದಂತೆ ಮಂತ್ರಿಯ ಬೆಂಬಲಿಗರ ಕಾರುಗಳನ್ನು ಪ್ರದರ್ಶನ ನಿರತ ರೈತರ ಮೇಲೆ ಹರಿಸಿ ಉತ್ತರಪ್ರದೇಶದ ಲಖಿಂಪುರ ಖೇರಿಯಲ್ಲಿ ಎಂಟು ಮಂದಿ ಬಲಿ ಪಡೆಯಲಾಯಿತು. ಆಳುವವರು ರೈತರ ವಿರುದ್ಧ ಹೊತ್ತಿಸಿದ ದ್ವೇಷದ ಕಿಚ್ಚಿಗೆ ಇದೊಂದು ಸಣ್ಣ ನಿದರ್ಶನ.

ಮೊದಲ ಬಾರಿಗೆ ದೇಶವಾಸಿಗಳಿಂದ ಮೋದಿ ಕ್ಷಮೆ ಯಾಚಿಸಿದ್ದಾರೆ. ತೆಗೆದುಕೊಂಡ ತೀರ್ಮಾನದಿಂದ ಹಿಂದೆ ಸರಿದಿರುವುದು ಇದು ಎರಡನೆಯ ಬಾರಿ. ‘ಸೂಟುಬೂಟಿನ ಸಿರಿವಂತರ ಸರ್ಕಾರ’ ಎಂಬ ಚುಚ್ಚುಮಾತಿಗೆ ಬೆಚ್ಚಿ ಅವರು ಕೈಬಿಟ್ಟ ಮತ್ತೊಂದು ರೈತ ವಿರೋಧಿ ನಡೆ ಭೂಸ್ವಾಧೀನ ಕಾಯಿದೆಯ ತಿದ್ದುಪಡಿ ಸುಗ್ರೀವಾಜ್ಞೆ. 2015ರ ಬಿಹಾರ ವಿಧಾನಸಭಾ ಚುನಾವಣೆಯ ಹೊಸ್ತಿಲಿನಲ್ಲಿ ಈ ಸುಗ್ರೀವಾಜ್ಞೆಯನ್ನು ಸಂಸತ್ತಿನಲ್ಲೇ ವಾಯಿದೆ ಮೀರಲು ಬಿಟ್ಟು ನಿಷ್ಫಲಗೊಳಿಸಲಾಗಿತ್ತು. ಸರ್ಕಾರಿ ಯೋಜನೆಗಳಿಗೆ ಭೂಸ್ವಾಧೀನ ಮಾಡಿಕೊಳ್ಳುವಾಗ ಸಾಮಾಜಿಕ ಸಾಧಕ ಬಾಧಕಗಳನ್ನು ಬದಿಗೆ ಸರಿಸುವ ಮತ್ತು ಖಾಸಗಿ–ಸರ್ಕಾರಿ ಒಡೆತನದ ಯೋಜನೆಗಳಿಗೆ ಜಮೀನು ಸ್ವಾಧೀನ ಮಾಡಿಕೊಳ್ಳುವಾಗ ಆ ಜಮೀನಿನ ಶೇ 70ರಷ್ಟು ಒಡೆಯರ ಒಪ್ಪಿಗೆ ಹಾಗೂ ಖಾಸಗಿ ಯೋಜನೆಗಳಿಗೆ ಸಂಬಂಧಿಸಿದಂತೆ ಶೇ 80ರಷ್ಟು ಒಡೆಯರ ಒಪ್ಪಿಗೆ ಕಡ್ಡಾಯವಲ್ಲ ಎಂಬುದು ಈ ಸುಗ್ರೀವಾಜ್ಞೆಯ ತಿರುಳಾಗಿತ್ತು.

ಒಕ್ಕಲು ಮಕ್ಕಳ ಬದುಕುಗಳು ವ್ಯಥೆಯ ಕತ್ತಲಲ್ಲಿ ಮುಳುಗಿವೆ. ಈ ಕಾನೂನುಗಳು ರದ್ದಾದ ನಂತರವೂ ಕೊನೆಗೊಳ್ಳದಷ್ಟು ಅಗಾಧ ಕೃಷಿ ಬಿಕ್ಕಟ್ಟು ಇದೆ. ಕಳೆದ ಎರಡು ದಶಕಗಳಲ್ಲಿ ದೇಶದ ಹೊಲಗದ್ದೆಗಳು ತೋಟ ತುಡಿಕೆಗಳ ಮಣ್ಣಿನಲ್ಲಿ ಲಕ್ಷಾಂತರ ರೈತರ ಆತ್ಮಹತ್ಯೆಯ ರಕ್ತ ಬೆರೆತಿದೆ. ಈ ಮಣ್ಣಿಗೆ ಮತ್ತಷ್ಟು ಇನ್ನಷ್ಟು ರೈತರ ರಕ್ತವನ್ನು ಬೆರೆಸಬಾರದು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ತಾಜಾ ಸುದ್ದಿಗಾಗಿ ಪ್ರಜಾವಾಣಿ ಆ್ಯಪ್ ಬಳಸಿ https://bit.ly/PrajavaniApp

ಇಂದು

ಸಂವಾದ

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ರಾಜಕೀಯ
ಭಾಗವಹಿಸುವವರು:
ಆರ್ ಜಿ ಹಳ್ಳಿ ನಾಗರಾಜ್, ಸಾಹಿತಿ, ಸಂಘಟಕ
ಬಂಜಗೆರೆ ಜಯಪ್ರಕಾಶ್, ಸಂಸ್ಕೃತಿ ಚಿಂತಕ
ಬಿ.ವಿ.ವಸಂತ ಕುಮಾರ್, ಅಧ್ಯಕ್ಷ, ಕರ್ನಾಟಕ ಸಾಹಿತ್ಯ ಅಕಾಡೆಮಿ.
ಗೀತಾ ವಸಂತ, ಸಾಹಿತಿ, ಪ್ರಾಧ್ಯಾಪಕಿ
ಬೆಳಿಗ್ಗೆ 11 ರಿಂದ 12

ವಿವಾದಾತ್ಮಕ ಕೃಷಿ ಕಾಯ್ದೆ ಹಿಂದಕ್ಕೆ: ಕಾರಣಗಳೇನು?
ಭಾಗವಹಿಸುವವರು:
ಸುನಂದಾ ಜಯರಾಮ್, ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರು. **ಸಂದೀಪ್ ಶಾಸ್ತ್ರಿ**, ರಾಜಕೀಯ ವಿಶ್ಲೇಷಕ. **ರಾಜೇಂದ್ರ ಪೋದ್ದಾರ್**, ನಿರ್ದೇಶಕ, ಕರ್ನಾಟಕ ಜಲ ಮತ್ತು ನೆಲ ನಿರ್ವಹಣಾ ಸಂಸ್ಥೆ. **ಕೆ.ಪಿ.ಸುರೇಶ**, ಪ್ರಗತಿಪರ ರೈತ, ಲೇಖಕ
ಮಧ್ಯಾಹ್ನ 3 ರಿಂದ 4

ಪ್ರಜಾವಾಣಿ ಆಯೋಜಿಸಿದ್ದ **ನಾಡದೇವಿಗೆ ಗೀತ ನಮನ**
‘ಕನ್ನಡದ ಹಾಡುಗಳ ಹಾಡಿ, ಬಹುಮಾನ ಗೆಲ್ಲಿ’
ಸ್ಪರ್ಧೆಯ ಅತ್ಯುತ್ತಮ 10 ಗಾಯಕರ ಹಾಡು
ನಿರೂಪಣೆ: **ಸಂಧ್ಯಾ ಭಟ್**
ಸಹಕಾರ: **ಶ್ರೀನಿವಾಸ ಕಪ್ಪಣ್ಣ**
Facebook Premier ಸಂಜೆ 6ಕ್ಕೆ

ಜಸ್ಟ್ ಮ್ಯೂಸಿಕ್
ಖಂಜಿರ ಕನಸುಗಾರ!

ಪಾಡ್‌ಕಾಸ್ಟ್:
ಈದಿನದ ವಿಶೇಷ:
ಸಂಜೆ 4 **ಹರಟೆ ಕಟ್ಟೆ**,
ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ**, ಬೆ. 7.30 **ದಿನದ ಸೂಕ್ತಿ**, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್**, ಬೆಳಿಗ್ಗೆ 9 **ಪ್ರಚಲಿತ**, ಬೆಳಿಗ್ಗೆ 9.30 **ಸಂಪಾದಕೀಯ**
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಸಹಯೋಗ: **ಸಾಹಿತಿ ಮತ್ತು ಕಲಾವಿದರ ವೇದಿಕೆ ಹಾಗೂ ರಂಗವಿಜಯ**
ನಿನ್ನಂಥೋರ್ ಯಾರೂ ಇಲ್ವಲ್ಲೋ ಈ ಲೋಕದಾ ಮ್ಯಾಲೇ
ಅಗಲಿದ **ಪುನೀತ್ ರಾಜ್‌ಕುಮಾರ್‌**ಗೆ ಸಾಹಿತಿ- ಕಲಾವಿದರ **ರಂಗನಮನ**
ಭಾಗವಹಿಸುವವರು: ಜಸ್ಟೀಸ್ ಎ.ಜೆ.ಸದಾಶಿವ, ಬರಗೂರು ರಾಮಚಂದ್ರಪ್ಪ, ಹೆಚ್.ಎಸ್.ಶಿವಪ್ರಕಾಶ್, ಬಿ.ಜಯಶ್ರೀ, ನಾಗತಿಹಳ್ಳಿ ಚಂದ್ರಶೇಖರ್, ಪಿ.ಶೇಷಾದ್ರಿ, ಗಿರಿಜಾ ಲೋಕೇಶ್, ಪ್ರಕಾಶ್ ರಾಜ್, ಅರುಂಧತಿ ನಾಗ್, ಪ್ರಕಾಶ್ ಬೆಳವಾಡಿ, ದತ್ತಣ್ಣ, ಉಮಾಶ್ರೀ, ಬಿ.ಸುರೇಶ್, ಜಯರಾಮ್ ರಾಯಪುರ, ಸುಧಾ ಬೆಳವಾಡಿ, ಟಿ.ಎಸ್.ನಾಗಾಭರಣ, ಎಂ.ಎಸ್.ಮೂರ್ತಿ
ಸಂಚಾಲಕರು: **ಶ್ರೀನಿವಾಸ್ ಜಿ ಕಪ್ಪಣ್ಣ**, ಸಹಸಂಚಾಲಕರು: **ಶಶಿಧರ್ ಭಾರಿಘಾಟ್, ಸಿ.ಕೆ.ಗುಂಡಪ್ಪ, ಮಾಲೂರು ವಿಜಿ.**
Facebook LIVE ಸಂಜೆ 4.30ರಿಂದ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಸಮಸ್ಯೆಯೊಂದಿಗೆ ಹೋರಾಡಿದಾಗಷ್ಟೇ ಆ ಸಮಸ್ಯೆಯನ್ನು ನೀವು ಅರ್ಥಮಾಡಿಕೊಳ್ಳಲು ಸಾಧ್ಯ.

-ಎಲಾನ್ ಮಸ್ಕ್

ಕಾಯ್ದೆ ಹಿಂಪಡೆಯುವ ಘೋಷಣೆ ಚುನಾವಣೆ ದೃಷ್ಟಿಯ ನಿರ್ಧಾರ

ಕೇಂದ್ರ ಸರ್ಕಾರವು ರೂಪಿಸಿದ್ದ, ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಮೂರು ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ್ದಾರೆ. ಕಾಯ್ದೆಗಳು ಅಂಗೀಕಾರವಾಗಿ 406 ದಿನಗಳ ಬಳಿಕ ಈ ನಿರ್ಧಾರವನ್ನು ಅವರು ಪ್ರಕಟಿಸಿದ್ದಾರೆ. ಈ ಕಾಯ್ದೆಗಳ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ನಡೆದಿದೆ. ಮುಖ್ಯವಾಗಿ, ಪಂಜಾಬ್, ಹರಿಯಾಣ ಮತ್ತು ಉತ್ತರಪ್ರದೇಶದ ಪಶ್ಚಿಮ ಭಾಗದ ರೈತರು ದೆಹಲಿಯ ಮೂರು ಗಡಿಗಳಲ್ಲಿ ಬೀಡುಬಿಟ್ಟು ಪ್ರತಿಭಟನೆ ಆರಂಭಿಸಿ ವರ್ಷ ತುಂಬಲು ಇನ್ನೇನು ಒಂದು ವಾರವಷ್ಟೇ ಇದೆ. ಈ ಹೊತ್ತಿಗೆ, ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಸೂದೆ ಮಂಡಿಸಿ ಮೂರೂ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಮೋದಿ ಅವರು ಘೋಷಿಸಿದ್ದಾರೆ. ಕಳೆದ ಒಂದು ವರ್ಷದಲ್ಲಿ ಈ ಕಾಯ್ದೆಗಳ ಸುತ್ತ ನಡೆದಿರುವ ವಿದ್ಯಮಾನಗಳು ಅಸಂಖ್ಯ. ಸರ್ಕಾರ ಮತ್ತು ಪ್ರತಿಭಟನೆ ನಡೆಸುತ್ತಿರುವ ರೈತರ ಮಧ್ಯೆ 11 ಸುತ್ತು ಮಾತುಕತೆ ನಡೆದಿದ್ದರೂ ಯಾವುದೇ ವಿಚಾರದಲ್ಲಿ ಸಮ್ಮತಿ ಬರಲು ಸಾಧ್ಯವಾಗಿರಲಿಲ್ಲ. ಜನವರಿ 22ರ ಬಳಿಕ ಮಾತುಕತೆ ನಡೆದಿಲ್ಲ. ಪ್ರತಿಭಟನೆ ಹಿಂದಕ್ಕೆ ಪಡೆಯದೆ ಮಾತುಕತೆಗೆ ಇಲ್ಲ ಎಂದು ಕೇಂದ್ರ ಸರ್ಕಾರ ಮತ್ತು ಆಡಳಿತಾರೂಢ ಬಿಜೆಪಿಯಲ್ಲಿ ಅತ್ಯಂತ ಪ್ರಭಾವಿಯಾಗಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 2020ರ ಡಿಸೆಂಬರ್‌ನಲ್ಲಿಯೇ ಹೇಳಿದ್ದರು. ಪ್ರತಿಭಟನಕಾರರನ್ನು ಖಲಿಸ್ತಾನಿಗಳು, ಭಯೋತ್ಪಾದಕರು, ದೇಶದ್ರೋಹಿಗಳು ಎಂದೆಲ್ಲ ಆಡಳಿತ ಪಕ್ಷದ ಹಲವು ಮುಖಂಡರು ಹಂಗಿಸಿದ್ದರು. ಪ್ರತಿಭಟನಕಾರರ ಮೇಲೆ ದೇಶದ ಹಲವೆಡೆ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ರೈತರ ಪ್ರತಿಭಟನೆಯನ್ನು ಸರ್ಕಾರವು ಅತ್ಯಂತ ಲಘುವಾಗಿ ಪರಿಗಣಿಸಿತ್ತು ಎಂಬುದಕ್ಕೆ ಇವೆಲ್ಲ ದ್ಯೋತಕಗಳಾಗಿದ್ದವು. ಅದೇನೇ ಇದ್ದರೂ ರೈತರು ನಡೆಸಿದ ಬಹುತೇಕ ಶಾಂತಿಯುತ ಮತ್ತು ದೃಢ ಮನಸ್ಸಿನ ಹೋರಾಟಕ್ಕೆ ಸರ್ಕಾರ ಮಣಿದಿದೆ. ರೈತರ ಹೋರಾಟಕ್ಕೆ ದೊರೆತ ಮೊದಲ ಗೆಲುವು ಎಂದು ಇದನ್ನು ಪರಿಗಣಿಸಬಹುದು. ಬೆಳೆಗಳ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಮಾನ್ಯತೆ ಬೇಕು ಎಂಬ ರೈತರ ಬೇಡಿಕೆಯ ಬಗ್ಗೆ ಸರ್ಕಾರ ಇನ್ನೂ ಏನನ್ನೂ ಹೇಳಿಲ್ಲ.

ರೈತರು ನಡೆಸಿದ ಬಹುತೇಕ ಶಾಂತಿಯುತ ಮತ್ತು ದೃಢ ಮನಸ್ಸಿನ ಹೋರಾಟಕ್ಕೆ ದೊರೆತ ಮೊದಲ ಗೆಲುವು ಎಂದು ಇದನ್ನು ಪರಿಗಣಿಸಬಹುದು

ತಮಗೆ ಬೇಕಾಗಿಲ್ಲ ಎಂದು ರೈತರು ದೃಢ ಮತ್ತು ದಿಟ್ಟ ಧ್ವನಿಯಲ್ಲಿ ಸಾರಿದ ಮೂರು ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವುದರ ಜತೆಗೆ, ಅವುಗಳನ್ನು ಒಂದು ವರ್ಗದ ರೈತರಿಗೆ ಮನದಟ್ಟು ಮಾಡಲಾಗದ್ದಕ್ಕೆ ಪ್ರಧಾನಿಯವರು ದೇಶದ ಜನರ ಕ್ಷಮೆಯನ್ನೂ ಕೇಳಿದ್ದಾರೆ. ರೈತರ ಪ್ರತಿಭಟನೆಯನ್ನು ಸರ್ಕಾರ ಲಘುವಾಗಿ ಪರಿಗಣಿಸಿದ್ದರಿಂದಾಗಿಯೇ ಕ್ಷಮೆ ಕೇಳುವ ಸನ್ನಿವೇಶ ಸೃಷ್ಟಿಯಾಯಿತು. ಸಿಖ್ ಧರ್ಮಸ್ಥಾಪಕ ಗುರು ನಾನಕ್ ಅವರ ಹುಟ್ಟುಹಬ್ಬದ ದಿನ ದೇಶವನ್ನು ಉದ್ದೇಶಿಸಿ ಮಾತನಾಡಿ, ಪ್ರಧಾನಿಯವರು ಕಾಯ್ದೆ ಹಿಂದಕ್ಕೆ ಪಡೆಯುವ ಭರವಸೆ ಕೊಟ್ಟಿದ್ದಾರೆ. ಪಂಜಾಬ್ ಮತ್ತು ಉತ್ತರಪ್ರದೇಶ ಸೇರಿದಂತೆ ಐದು ರಾಜ್ಯಗಳಲ್ಲಿ ಇನ್ನು ಕೆಲವೇ ತಿಂಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಪಂಜಾಬ್‌ನಲ್ಲಿ ಮತ್ತು ಉತ್ತರಪ್ರದೇಶದ ಕೆಲವು ಭಾಗಗಳಲ್ಲಿ ಸಿಖ್ಖರು ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ. ಹಾಗಾಗಿ, ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ನಿರ್ಧಾರವನ್ನು ಗುರು ನಾನಕ್ ಅವರ ಹುಟ್ಟುಹಬ್ಬದಂದೇ ಪ್ರಧಾನಿ ಘೋಷಿಸಿದ್ದು ಕಾಕತಾಳೀಯ ಎನ್ನಲು ಸಾಧ್ಯವಿಲ್ಲ. ಹಿಮಾಚಲ ಪ್ರದೇಶದಲ್ಲಿ ಇತ್ತೀಚೆಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಬಿಜೆಪಿ ಕೈಯಲ್ಲಿದ್ದ ಎರಡು ವಿಧಾನಸಭಾ ಕ್ಷೇತ್ರಗಳು ಮತ್ತು ಒಂದು ಲೋಕಸಭಾ ಕ್ಷೇತ್ರವನ್ನು ಕಸಿದುಕೊಂಡಿತ್ತು. ಕೃಷಿ ಕಾಯ್ದೆಗಳ ಬಗ್ಗೆ ರೈತರಲ್ಲಿ ಇದ್ದ ಆಕ್ರೋಶವೇ ಈ ಸೋಲಿಗೆ ಕಾರಣ ಎಂಬ ವಿಶ್ಲೇಷಣೆ ಇದೆ. ಭೂಸ್ವಾಧೀನ ಸುಗ್ರೀವಾಜ್ಞೆಯ ಬಗ್ಗೆಯೂ ರೈತರು ಈ ಹಿಂದೆ ಭಾರಿ ಆಕ್ರೋಶ ವ್ಯಕ್ತಪಡಿಸಿದ್ದರು. ಪ್ರತಿಭಟನೆಯನ್ನೂ ನಡೆಸಿದ್ದರು. 2015ರಲ್ಲಿ ಬಿಹಾರ ವಿಧಾನಸಭೆಗೆ ಚುನಾವಣೆ ನಡೆಯುವ ಮುನ್ನ ಆ ಸುಗ್ರೀವಾಜ್ಞೆಯನ್ನು ಕೇಂದ್ರ ಸರ್ಕಾರ ಹಿಂದಕ್ಕೆ ಪಡೆದಿತ್ತು. ಹಾಗಾಗಿ, ಕೇಂದ್ರ ಸರ್ಕಾರವು ಕೆಲವೇ ತಿಂಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿ ಇರಿಸಿಕೊಂಡೇ ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ನಿರ್ಧಾರಕ್ಕೆ ಬಂದಿದೆ ಎಂಬುದರಲ್ಲಿ ಅನುಮಾನ ಇಲ್ಲ. ಚುನಾವಣೆಯನ್ನು ಮಾತ್ರ ಗಮನದಲ್ಲಿ ಇರಿಸಿಕೊಂಡು ಸರ್ಕಾರವೊಂದು ನಿರ್ಧಾರವನ್ನು ಕೈಗೊಳ್ಳುತ್ತದೆ ಎಂಬುದು ಜನಪರ ಆಡಳಿತದ ಲಕ್ಷಣವಲ್ಲ.

ಕೃಷಿ ಕಾಯ್ದೆಗಳ ವಿಚಾರವನ್ನು ಸರ್ಕಾರವು ಪ್ರತಿಷ್ಠೆ ಮಾಡಿಕೊಂಡದ್ದು ಸರಿಯಲ್ಲ. ಅದು ದೇಶದ ರೈತರಲ್ಲಿ ಸರ್ಕಾರದ ಕುರಿತು ಮೂಡಿಸಿದ ಅಪನಂಬಿಕೆಯು ಕೂಡ ಪ್ರಧಾನಿಯ ಘೋಷಣೆಯ ಬಳಿಕ ಸ್ಪಷ್ಟವಾಯಿತು. ರೈತರ ಬೇಡಿಕೆ ಈಡೇರಿಸುವುದಾಗಿ ಪ್ರಧಾನಿಯೇ ಘೋಷಿಸಿದರೂ ಅದನ್ನು ನಂಬುವ ಸ್ಥಿತಿಯಲ್ಲಿ ರೈತರು ಇಲ್ಲ. ಸಂಸತ್ತಿನಲ್ಲಿ ಮಸೂದೆ ಮಂಡಿಸಿ, ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವವರೆಗೆ ಪ್ರತಿಭಟನೆ ನಿಲ್ಲದು ಎಂದು ಪ್ರತಿಭಟನೆಯ ನೇತೃತ್ವ ವಹಿಸಿರುವ ಭಾರತೀಯ ಕಿಸಾನ್ ಯೂನಿಯನ್‌ನ ನಾಯಕ ರಾಕೇಶ್ ಟಿಕಾಯತ್ ಹೇಳಿದ್ದಾರೆ. ಸರ್ಕಾರವು ಕಾಯ್ದೆಗಳನ್ನು ಹಿಂದಕ್ಕೆ ಪಡೆಯುತ್ತದೆ ಎಂಬ ಸಂಭ್ರಮವೂ ಈಗ ಬೇಡ ಎಂದು ಅವರು ಹೇಳಿದ್ದಾರೆ. ಪ್ರಧಾನಿಯ ಮಾತನ್ನೇ ಜನ ನಂಬಲಾಗದಂತಹ ಸ್ಥಿತಿಯು ಶೋಚನೀಯ. ಈ ಸ್ಥಿತಿ ನಿರ್ಮಾಣವಾಗಿರುವುದರ ಹೊಣೆಯನ್ನು ಸರ್ಕಾರವೇ ಹೊರಬೇಕು.

ದಿನದ ಟ್ವೀಟ್

ಕಾನೂನುಬದ್ಧ ಹಕ್ಕಾಗಲಿ

ಯುದ್ಧದಲ್ಲಿ ಅರ್ಧ ಗೆಲುವು ಸಿಕ್ಕಿದೆ. ಮೂರು ವಿವಾದಾತ್ಮಕ ಕೃಷಿ ಕಾನೂನುಗಳನ್ನು ಹಿಂತೆಗೆದುಕೊಳ್ಳುವ ನಿರ್ಧಾರ ಸ್ವಾಗತಾರ್ಹ. ಆದರೆ ಎಲ್ಲಿಯವರೆಗೆ ಕನಿಷ್ಠ ಬೆಂಬಲ ಬೆಲೆಯನ್ನು ರೈತರ ಕಾನೂನುಬದ್ಧ ಹಕ್ಕನ್ನಾಗಿ ಮಾಡುವುದಿಲ್ಲವೋ ಅಲ್ಲಿಯವರೆಗೂ ಕೃಷಿಕರ ಸಂಕಷ್ಟಕ್ಕೆ ಕೊನೆಯಿಲ್ಲ.

ದೇವಿಂದರ್ ಶರ್ಮಾ, ಲೇಖಕ, ಕೃಷಿ ವಿಶ್ಲೇಷಕ

ಕಿಡಿನುಡಿ



ಕಾಮಗಾರಿ ಗುತ್ತಿಗೆಗಳ ಟೆಂಡರ್‌ನಲ್ಲಿ ಕಮಿಷನ್ ಹೊಡೆಯುವ ಕೆಲಸಗಳನ್ನು ಸರ್ಕಾರ ಮೊದಲು ನಿಲ್ಲಿಸಬೇಕು. ಪ್ರಧಾನ ಮಂತ್ರಿಗಳಿಗೆ ಈ ಬಗ್ಗೆ ಯಾರೋ ಪತ್ರ ಬರೆದು ದೂರು ನೀಡಿದ್ದಾರೆ. ಇನ್ನಾದರೂ ಪರ್ಸಂಟೇಜ್ ವ್ಯವಹಾರ ನಿಲ್ಲಿಸಲಿ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 20-11-1996

● **ಸೌಂದರ್ಯಸ್ಪರ್ಧೆ ನಿಲುಗಡೆಗೆ ಹೈಕೋರ್ಟ್ ನಕಾರ**

ಬೆಂಗಳೂರು, ನ. 19– ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನ. 23ರಂದು ನಡೆಯುವ ವಿಶ್ವಸುಂದರಿ ಸ್ಪರ್ಧೆಯನ್ನು ‘ಕೋರ್ಟ್ ಆದೇಶ ನೀಡುವ ಮೂಲಕ ನಿಲ್ಲಿಸಲಾಗುವುದಿಲ್ಲ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತು.

ಸ್ಪರ್ಧೆ ನಡೆಸುವ ಸಂಬಂಧದಲ್ಲಿ ಎಂಟು ಮಾರ್ಗಸೂಚಿಗಳನ್ನು ಕೋರ್ಟ್ ನೀಡಿತು.

ಈ ಮಾರ್ಗಸೂಚಿ ಪಾಲನೆ ಬಗ್ಗೆ ಸ್ಪರ್ಧೆ ಮುಗಿದ ಮೇಲೆ ಕೋರ್ಟಿಗೆ ವರದಿ ಸಲ್ಲಿಸಬೇಕೆಂದು ಪೊಲೀಸ್ ಮಹಾ ನಿರ್ದೇಶಕರಿಗೆ ಮತ್ತು ಹೈಕೋರ್ಟಿನ ರಿಜಿಸ್ಟ್ರಾರ್ ಜನರಲ್ ಅವರಿಗೆ ಆದೇಶಿಸಿತು.

● **ಮುದ ನೀಡದ ‘ಮಿಸ್ ಪರ್ಸನಾಲಿಟಿ’**

ಬೆಂಗಳೂರು, ನ. 19– ತೀವ್ರ ಆಸಕ್ತಿ ಕೆರಳಿಸಿದ್ದ ವಿಶ್ವಸುಂದರಿ ಸ್ಪರ್ಧೆಯ ಎರಡನೇ ಮುಖ್ಯ ಕಾರ್ಯಕ್ರಮವಾದ ‘ಮಿಸ್ ಪರ್ಸನಾಲಿಟಿ’ ಸ್ಪರ್ಧೆ ಪ್ರೇಕ್ಷಕರು ನಿರೀಕ್ಷಿಸಿದಷ್ಟು ಮುದ ನೀಡುವಲ್ಲಿ ವಿಫಲವಾಯಿತು.

ಅಪಾರ ನಿರೀಕ್ಷೆ ಹೊತ್ತು ನಗರದಿಂದ ಸುಮಾರು 55 ಕಿ.ಮೀ. ಹಾದಿಯನ್ನು ಕ್ರಮಿಸಿ ದೊಡ್ಡಬಳ್ಳಾಪುರ ಸಮೀಪದ ‘ಗ್ರೀನ್ ವ್ಯಾಲಿ’ ವಿಹಾರಧಾಮಕ್ಕೆ ತೆರಳಿದ ಸೌಂದರ್ಯ ವೀಕ್ಷಕರು, ಅವಸರದಲ್ಲಿ ನಡೆದುಹೋದ ‘ಮಿಸ್ ಪರ್ಸನಾಲಿಟಿ’ ಸ್ಪರ್ಧೆಯನ್ನು ಪೂರ್ಣ ವೀಕ್ಷಿಸಲೂ ಸಾಧ್ಯವಾಗದೆ ನಿರಾಶೆಯಿಂದ ಮರಳಬೇಕಾಯಿತು.

50 ವರ್ಷಗಳ ಹಿಂದೆ

ಶನಿವಾರ, 20-11-1971

● **ಪ್ರದೇಶ ಪಕ್ಷವಾಗಿ ರಾಜ್ಯ ಸಂಸ್ಥಾ ಕಾಂಗ್ರೆಸ್ ರೂಪಾಂತರ?**

ಬೆಂಗಳೂರು, ನ. 19– ಮೈಸೂರು ರಾಜ್ಯದಲ್ಲಿ ಸಂಸ್ಥಾ ಕಾಂಗ್ರೆಸ್ ಪ್ರದೇಶ ಪಕ್ಷವಾಗಿ ಪರಿವರ್ತನೆಯಾಗುವ ಸಂಭವವಿದೆಯೇ?

ಪಕ್ಷದ ನಾಯಕರಲ್ಲಿ ಪಕ್ಷದ ಭವಿಷ್ಯದ ಸ್ವರೂಪ ಹಾಗೂ ಮಾರ್ಗ ಕುರಿತು ನಡೆಯುತ್ತಿರುವ ತೀವ್ರ ಚರ್ಚೆಯಲ್ಲಿ ಈ ಅಂಶ ಪ್ರಧಾನವಾಗಿ ಪ್ರಸ್ತಾಪದಲ್ಲಿದೆ.

ಎಲ್ಲ ದೃಷ್ಟಿಗಳಿಂದ ಈ ಮಾರ್ಗ ಸೂಕ್ತವೆಂದೆನಿಸಿದರೆ, ರಾಜ್ಯದಲ್ಲಿ ಸಂಸ್ಥಾ ಕಾಂಗ್ರೆಸ್ಸನ್ನು ಪ್ರದೇಶ ಪಕ್ಷವನ್ನಾಗಿ ಏಕೆ ಪರಿವರ್ತಿಸಬಾರದು ಎಂಬ ಯೋಚನೆ ಹೊಸದೇನೂ ಅಲ್ಲ.

● **ಕಳ್ಳತನ ಕಲಿಸುವ ಶಾಲೆ!**

ಮದರಾಸು, ನ. 19– ಚಿಕ್ಕ ಹುಡುಗರಿಗೆ ಕಳ್ಳತನದಲ್ಲಿ ಶಿಕ್ಷಣ ನೀಡುವ ತರಬೇತಿ ಶಾಲೆಯೊಂದನ್ನು ತಮಿಳುನಾಡಿನ ತಿರುಚಿನಾಪಳ್ಳಿಯ ತಿರುಪೆರಂಬೂರಿನಲ್ಲಿ ವೃತ್ತಿಗೆ ಹಳಬರಾದವರು ಹಾಗೂ ಖದೀಮ ಅಪರಾಧಿಗಳು ನಡೆಸುತ್ತಿದ್ದಾರೆ.

ಕಳೆದ ಶುಕ್ರವಾರ ಇಲ್ಲಿನ ಸೆಂಟ್ರಲ್ ಸ್ಟೇಷನ್ನಿನಲ್ಲಿ ಹನ್ನೆರಡು ವರ್ಷದ ಬಾಲಕರನ್ನು ಬಂಧಿಸಿದಾಗ ನಗರದ ರೈಲ್ವೆ ಪೊಲೀಸರಿಗೆ ಈ ‘ಶಾಲೆ ಇರುವುದರ’ ಸುಳಿವು ಗೊತ್ತಾಯಿತು.

ತಿರುಪೆರಂಬೂರಿನಲ್ಲಿ ತಮಗೆ ಮತ್ತು ಇತರ ಬಾಲಕರಿಗೆ ತರಬೇತಿ ನೀಡಿ ‘ವೃತ್ತಿಯಲ್ಲಿ ಹಿರಿಯರಾದವರಿಗೆ’ ನೆರವು ನೀಡಲು ಮದರಾಸಿಗೆ ಕಳುಹಿಸಲಾಯಿತೆಂದು ಬಾಲಕರು ಪೊಲೀಸರಿಗೆ ತಪ್ಪೊಪ್ಪಿಗೆ ನೀಡಿದ್ದಾರೆ.

ಈ ಸಂದರ್ಭದ ಬೆಳವಣಿಗೆಗಳು ರಾಜಕೀಯ ಪಕ್ಷಗಳ ಆಂತರಿಕ ಆರೋಗ್ಯದ ಸೂಚ್ಯಂಕವೂ ಹೌದು

ಪರಿಷತ್ ಚುನಾವಣೆ: ರಾಜಕೀಯ ಮಹತ್ವ

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ಕರ್ನಾಟಕದಲ್ಲಿ ಸದ್ಯದಲ್ಲೇ ಚುನಾವಣೆಗಳು ನಡೆಯಲಿವೆ. ಜಿಲ್ಲಾ ಮಟ್ಟದಲ್ಲಿ ವಿವಿಧ ಸ್ಥಳೀಯ ಸಂಸ್ಥೆಗಳ ಸದಸ್ಯರಿಂದ ಈ ಸದಸ್ಯರು ಚುನಾಯಿತರಾಗುತ್ತಾರೆ. ಇದು ಒಂದು ರೀತಿಯಲ್ಲಿ ಪರೋಕ್ಷ ಚುನಾವಣೆ. ಸ್ಥಳೀಯ ಸಂಸ್ಥೆಗಳ ಸದಸ್ಯರು ಮತದಾರರಾಗಿರುತ್ತಾರೆ. ಹೀಗಿದ್ದೂ ಸ್ಥಳೀಯ ಮಟ್ಟದಲ್ಲಿನ ಒಲವು ನಿಲುವುಗಳು ಹಾಗೂ ಪಕ್ಷ ನಿಷ್ಠೆಯ ಅಸ್ಥಿರತೆಗಳಿಂದಾಗಿ ಈ ಸಂದರ್ಭದಲ್ಲಿ ಬಹಳಷ್ಟು ಕುತೂಹಲ ಹಾಗೂ ಊಹಾಪೋಹ ಗರಿಗೆದರಿಕೊಳ್ಳುತ್ತವೆ.

ವಿಧಾನ ಪರಿಷತ್ (ವಿಧಾನ ಪರಿಷತ್ತಿಗೆ ಮೇಲ್ಮನೆ-ವಿಧಾನಸಭೆಗೆ ಕೆಳಮನೆ ಎನ್ನಲಾಗುತ್ತದೆ) ಬೇಕೇ ಬೇಡವೇ ಎಂಬುದನ್ನು ನಿರ್ಧರಿಸುವ ಕುರಿತಾದ ವಿಚಾರವನ್ನು ಭಾರತದ ಸಂವಿಧಾನವು ರಾಜ್ಯಗಳಿಗೇ ಬಿಟ್ಟುಕೊಟ್ಟಿದೆ. ಸದ್ಯಕ್ಕೆ, ಭಾರತದ 28 ರಾಜ್ಯಗಳ ಪೈಕಿ ಆರು ರಾಜ್ಯಗಳು ವಿಧಾನ ಪರಿಷತ್ ಹೊಂದಿವೆ. ಕರ್ನಾಟಕ ಬಿಟ್ಟರೆ, ವಿಧಾನ ಪರಿಷತ್ ಹೊಂದಿರುವ ಇತರ ರಾಜ್ಯಗಳೆಂದರೆ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಬಿಹಾರ ಹಾಗೂ ಉತ್ತರಪ್ರದೇಶ. ಆಸಕ್ತಿಯ ಸಂಗತಿ ಎಂದರೆ, ಈಗ ಅಧಿಕಾರದಲ್ಲಿರುವ ಇಬ್ಬರು ಮುಖ್ಯಮಂತ್ರಿಗಳೂ (ಮಹಾರಾಷ್ಟ್ರದ ಉದ್ಧವ್ ಠಾಕ್ರೆ ಹಾಗೂ ಬಿಹಾರದ ನಿತೀಶ್ ಕುಮಾರ್) ವಿಧಾನ ಪರಿಷತ್ ಸದಸ್ಯರೇ ಆಗಿದ್ದಾರೆ. ಕರ್ನಾಟಕದಲ್ಲೂ ಸದಾನಂದ ಗೌಡ ಅವರು ಮುಖ್ಯಮಂತ್ರಿಯಾದ ನಂತರ ವಿಧಾನ ಪರಿಷತ್ತಿಗೆ ಚುನಾಯಿತಗೊಂಡಿದ್ದರು.

ವಾಸ್ತವವಾಗಿ, 1987ರಲ್ಲಿ, ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯ ಬಲವನ್ನು ಏರಿಸಿದ ಕೆಲವೇ ರಾಜ್ಯಗಳಲ್ಲಿ ಕರ್ನಾಟಕ ಕೂಡ ಸೇರಿದೆ. ಕರ್ನಾಟಕ ವಿಧಾನ ಪರಿಷತ್ ಸಂಖ್ಯಾಬಲ 75.

ವಿಧಾನ ಪರಿಷತ್ ಸದಸ್ಯರ ಚುನಾವಣೆಗೆ ರಾಜ್ಯ ಸಜ್ಜಾಗುತ್ತಿರುವಂತೆಯೇ, ಅದರ ಪಾತ್ರವನ್ನು ಕುರಿತು ಒಂದಿಷ್ಟು ಸಾವಧಾನವಾಗಿ ಪುನರ್‌ವಿಮರ್ಶಿಸುವುದು ಉಪಯುಕ್ತ. ವಿಧಾನಮಂಡಲದ ಮೇಲ್ಮನೆಗೆ ಸಾಮಾನ್ಯವಾಗಿ ನಿರ್ದಿಷ್ಟ ಪಾತ್ರವಿರುತ್ತದೆ. ಕೆಳಮನೆಯಲ್ಲಿ ಕೈಗೊಂಡ ಶಾಸನಾತ್ಮಕ ಕ್ರಿಯೆಗಳ ಪುನರ್‌ವಿಮರ್ಶೆಗೆ ಈ ‘ಎರಡನೇ’ ಮನೆ ಅವಕಾಶ ಒದಗಿಸುವುದರೊಂದಿಗೇ ‘ಪ್ರಾತಿನಿಧ್ಯ’ಗಳ ಪಾತ್ರವನ್ನೂ ನಿರ್ವಹಿಸುತ್ತದೆ. ಭಾರತದ ಸಂಸತ್‌ನಲ್ಲಿ, ರಾಜ್ಯಸಭೆಯನ್ನು (ಮೇಲ್ಮನೆ), ಹೆಸರೇ ಸೂಚಿಸುವಂತೆ ‘ರಾಜ್ಯಗಳ ಪರಿಷತ್’ ಆಗಿ ಪರಿಭಾವಿಸಲಾಗುತ್ತದೆ. ಭಾರತದ ರಾಜ್ಯಗಳ ಹಿತಾಸಕ್ತಿಗಳನ್ನು ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸುವಂತಹದ್ದು ಇದು. ಹೀಗಾಗಿ, ರಾಜ್ಯಸಭೆಯ ಬಹಳಷ್ಟು ಸದಸ್ಯರು ರಾಜ್ಯಗಳ ವಿಧಾನಸಭೆಗಳಿಂದ ಚುನಾಯಿತರಾದವರು. ಇದೇ ರೀತಿ, ಕೆಳಮನೆಗಳಲ್ಲಿ ಆತುರದ ಶಾಸನಾತ್ಮಕ ಕ್ರಿಯೆಗಳ ಸಾಧ್ಯತೆಗಳ ಮೇಲೆ ನಿಯಂತ್ರಣ ಇಡಲು ರಾಜ್ಯ ಮಟ್ಟದ ವಿಧಾನ ಪರಿಷತ್‌ಗಳನ್ನು ‘ಎರಡನೇ ಮನೆ’ಗಳಾಗಿ ಪರಿಗಣಿಸಲಾಗುತ್ತದೆ. ನೇರವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಿ ಕೆಳಮನೆಗಳಿಗೆ ಚುನಾಯಿತರಾಗಲು ಸಾಧ್ಯವಿಲ್ಲದಂತಹ ವರ್ಗಗಳಿಗೆ ಪ್ರಾತಿನಿಧ್ಯ ಒದಗಿಸುವಂತಹ ನೆಲೆಯಾಗಿಯೂ ಇದನ್ನು ಕಾಣಲಾಗುತ್ತದೆ.

73 ಮತ್ತು 74ನೇ ಸಾಂವಿಧಾನಿಕ ತಿದ್ದುಪಡಿಯ ನಂತರ, ಒಕ್ಕೂಟ ವ್ಯವಸ್ಥೆಯ ನ್ಯಾಯಬದ್ಧ ಮೂರನೇ ಹಂತವಾಗಿ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಸಾಂವಿಧಾನಿಕ ಸ್ಥಾನಮಾನ ಸಿಕ್ಕಿದ ನಂತರ, ಸ್ಥಳೀಯ ಸಂಸ್ಥೆಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ರಾಜ್ಯ ಮಟ್ಟದಲ್ಲಿ ವಿಧಾನ ಪರಿಷತ್‌ಗಳು ಪ್ರಮುಖ ವೇದಿಕೆಗಳಾಗುತ್ತವೆ ಎಂದು ಹಲವರು ಭಾವಿಸಿದ್ದರು.

ವಿಧಾನ ಪರಿಷತ್ತಿನ ಸಂರಚನೆಯ ಪ್ರಕಾರ, ಸ್ಥಳೀಯ ಸಂಸ್ಥೆಗಳು ಹಾಗೂ ರಾಜ್ಯ ವಿಧಾನಸಭೆಗಳಿಂದ ತಲಾ ಮೂರನೇ ಒಂದರಷ್ಟು ಸದಸ್ಯರನ್ನು ವಿಧಾನ ಪರಿಷತ್ತಿಗೆ ಚುನಾಯಿಸಲಾಗುತ್ತದೆ. ಉಳಿದ ಮೂರನೇ ಒಂದರಷ್ಟು ಸದಸ್ಯರನ್ನು, ಪದವೀಧರರ ಹಾಗೂ ಶಿಕ್ಷಕರ ಕ್ಷೇತ್ರಗಳಿಂದ ಚುನಾಯಿಸಲಾಗುತ್ತದೆ; ಇದರ ಜೊತೆಗೇ ವಿವಿಧ ಕ್ಷೇತ್ರಗಳ ಸಾಧಕರನ್ನೂ ವಿಧಾನ ಪರಿಷತ್‌ಗೆ ಸರ್ಕಾರದಿಂದ ನಾಮಕರಣ ಮಾಡಲಾಗುತ್ತದೆ. ಈಗ ರಾಜ್ಯವು ಸದ್ಯದಲ್ಲೇ ಎದುರುಗೊಳ್ಳುತ್ತಿರುವುದು, ಈ ಸ್ಥಳೀಯ ಸಂಸ್ಥೆಗಳಿಂದ ಮೂರನೇ ಒಂದರಷ್ಟು ಸದಸ್ಯರಿಗಾಗಿ (25) ನಡೆಯುತ್ತಿರುವ ಚುನಾವಣೆಗಳು.

ವಿಧಾನ ಪರಿಷತ್ತಿಗೆ ಚುನಾಯಿತರಾಗುವವರ ಸಂಕ್ಷಿಪ್ತ ವ್ಯಕ್ತಿಚಿತ್ರಗಳು ಸಾಮಾನ್ಯವಾಗಿ ಏನಾಗಿರುತ್ತವೆ ಹಾಗೂ ಹೇಗಿರುತ್ತವೆ? ಹೆಚ್ಚಿನ ಸಂದರ್ಭದಲ್ಲಿ, ರಾಜಕೀಯ ಪಕ್ಷಗಳ ಮುಖಂಡರು ಈ ವಿಧಾನ ಪರಿಷತ್ ಸದಸ್ಯತ್ವ ಎಂಬುದನ್ನು, ಪಕ್ಷದ ನಿಷ್ಠರನ್ನು ಗುರುತಿಸಲು ಮತ್ತು ವಿಧಾನಸಭೆಯ ನೇರ ಚುನಾವಣೆಯಲ್ಲಿ ಸೋತವರು ಅಥವಾ ಪಕ್ಷದ ನಾಯಕರಿಗೆ ಹತ್ತಿರವಾಗಿರುವವರಿಗೆ ಅವಕಾಶಗಳನ್ನು ಕಲ್ಪಿಸುವಂತಹ ಮಾರ್ಗವನ್ನಾಗಿ ಪರಿಭಾವಿಸಿಕೊಂಡು ಬಂದಿದ್ದಾರೆ. ಆದರ್ಶದ ನೆಲೆಯಲ್ಲಿ ಹೇಳಬೇಕೆಂದರೆ, ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗುವ ಸದಸ್ಯರು, ಈ ಹಿಂದೆ ಚುನಾಯಿತ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡಿದವರಾಗಿದ್ದು ಆ ಅನುಭವಗಳನ್ನು ರಾಜ್ಯ ವಿಧಾನ ಮಂಡಲದ ಮೇಲ್ಮನೆಗೆ ತರಬೇಕು. ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದ ಕರ್ನಾಟಕ ವಿಧಾನ ಪರಿಷತ್ ಸದಸ್ಯರ ಸಂಕ್ಷಿಪ್ತ ವ್ಯಕ್ತಿವಿವರಗಳನ್ನು ಪರಿಶೀಲಿಸಿದಲ್ಲಿ, ಸ್ಥಳೀಯ ಸಂಸ್ಥೆಗಳ ಅನೇಕ ಮಾಜಿ ‘ಅಧ್ಯಕ್ಷರು’ ಅಥವಾ ‘ಉಪಾಧ್ಯಕ್ಷ’ರನ್ನು ಅವರ ಕೊಡುಗೆಗಳಿಗಾಗಿ ಅವರುಗಳ ಪಕ್ಷಗಳು ಗುರುತಿಸಿ ರಾಜ್ಯ ವಿಧಾನ ಪರಿಷತ್‌ಗೆ ಕರೆತಂದಿರುವುದು ಗೋಚರವಾಗುತ್ತದೆ. ಇಂತಹ ಸದಸ್ಯರ ಸಂಖ್ಯೆ ಹೆಚ್ಚಾಗಬೇಕು ಎಂಬಂಥ ಆದರ್ಶ ಮೆರೆಯಲಿ ಎಂಬುದು ಎಲ್ಲರ ನಿರೀಕ್ಷೆ.

ಚುನಾವಣೆಗೆ ಸ್ಪರ್ಧಿಸಲು ತಾವು ಆಯ್ಕೆ ಮಾಡುವ ಅಭ್ಯರ್ಥಿಗಳು ಸ್ಥಳೀಯ ಮಟ್ಟದಲ್ಲಿ ಪಕ್ಷದ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದಾರೆಯೇ ಈ ದಿಸೆಯಲ್ಲಿ ಏನಾದರೂ ಕೊಡುಗೆ ಸಲ್ಲಿಸಿದ್ದಾರೆಯೇ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಚುನಾಯಿತರಾಗಿ ಸೇವೆ ಸಲ್ಲಿಸಿದ್ದಾರೆಯೇ ಎಂಬುದರ ಬಗ್ಗೆ ರಾಜಕೀಯ ಪಕ್ಷಗಳು ಆಂತರಿಕ ಚರ್ಚೆಗಳನ್ನು ನಡೆಸುವುದು ಒಳಿತು. ಅನೇಕ ಸಲ, ರಾಜಕೀಯ ಪಕ್ಷಗಳು ಆಯ್ಕೆ ಮಾಡಿದ ಅಭ್ಯರ್ಥಿಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಅಥವಾ ರಾಜಕಾರಣದಲ್ಲಿ ಅಂತಹ ಕೊಡುಗೆ ಅಥವಾ ಸೇವೆ ಸಲ್ಲಿಸಿದ ಯಾವುದೇ ಹಿನ್ನೆಲೆಯೂ ಇಲ್ಲದಿರುವುದು ವ್ಯಕ್ತವಾಗಿದೆ. ಆಗ, ಸ್ಥಳೀಯ ಪ್ರಾಧಿಕಾರಗಳಲ್ಲಿ ಚುನಾಯಿತರಾಗಿ ಸೇವೆ ಸಲ್ಲಿಸಿದವರಿಗೆ ಪ್ರಾತಿನಿಧ್ಯ ಒದಗಿಸಬೇಕೆನ್ನುವ ಮೂಲ ಉದ್ದೇಶವೇ ವಿಫಲವಾಗುತ್ತದೆ.

ಈ ಚುನಾವಣೆಗಳು ಗಮನ ಸೆಳೆದುಕೊಳ್ಳುವುದಕ್ಕೆ ಮತ್ತೊಂದು ಕಾರಣ ಎಂದರೆ, ರಾಜಕೀಯ ಪಕ್ಷಗಳ ಮೈತ್ರಿಗಳ ಸ್ವರೂಪ ಹಾಗೂ ಸ್ಥಳೀಯ ರಾಜಕೀಯಗಳು ಬಹಿರಂಗಗೊಳ್ಳುವ ಬಗೆಗಳು. ಸ್ಥಳೀಯ ಮಟ್ಟದಲ್ಲಿ ಇಂತಹ ಮೈತ್ರಿಗಳಿಗಿರುವ ಅಸ್ಥಿರತೆಗಳನ್ನು ಗಮನಿಸಿದಲ್ಲಿ ಒಂದು ಜಿಲ್ಲೆಯಲ್ಲಿ ಪಕ್ಷಗಳ ಮಧ್ಯೆ ಏರ್ಪಡುವ ಅನಿರೀಕ್ಷಿತ ಮೈತ್ರಿಯು ಪಕ್ಕದ ಮತ್ತೊಂದು ಜಿಲ್ಲೆಯಲ್ಲೇ ತದ್ವಿರುದ್ಧವಾದದ್ದಾಗಿರುವಂತಹ ನಿದರ್ಶನಗಳನ್ನೂ ಈ ಹಿಂದೆ ಅನೇಕ ಸಂದರ್ಭಗಳಲ್ಲಿ ಕಾಣಲಾಗಿದೆ. ರಾಜಕೀಯ ಪಕ್ಷಗಳ ಒಳಗೇ ಇರುವ ಬಣ ಸಂಘರ್ಷಗಳೂ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಈ ಚುನಾವಣೆ ಸಂದರ್ಭಗಳಲ್ಲಿ ಸ್ಫೋಟಗೊಳ್ಳುತ್ತವೆ.

ಈ ಎಲ್ಲಾ ರಾಜಕೀಯ ತಂತ್ರಗಾರಿಕೆಗಳು, ಕುತಂತ್ರಗಳು ಬರಲಿರುವ ದಿನಗಳಲ್ಲಿ ಅನಾವರಣಗೊಳ್ಳಲಿವೆ. ಇವು ಸ್ಥಳೀಯ ಮಟ್ಟದಲ್ಲಿ ರಾಜಕೀಯ ಪಕ್ಷಗಳ ಆಂತರಿಕ ಆರೋಗ್ಯದ ಸೂಚ್ಯಂಕಗಳೂ ಆಗುತ್ತವೆ. ಅಲ್ಲದೆ, ಸ್ಥಳೀಯ ಮೈತ್ರಿಗಳಿಗೆ ‘ಅವಕಾಶಗಳ ವಿಶ್ವ’ವೂ ಆಗಲಿವೆ. ಈ ಮೈತ್ರಿಗಳ ಹಿಂದಿರುವ ರಾಜಕಾರಣ ಹಾಗೂ ಸಮಾಜಶಾಸ್ತ್ರೀಯ ನೆಲೆಗಳು ಆಸಕ್ತಿದಾಯಕ ಹಾಗೂ ಬಹಳಷ್ಟು ಸಂಗತಿಗಳನ್ನು ಅನಾವರಣಗೊಳಿಸುವಂತಹವು.

ಚುರುಮುರಿ

ಬುಟ್ಟಿಯೊಳಗಿನ ಹಾವು!

● ಬಿ.ಎನ್.ಮಲ್ಲೇಶ್

‘ಅಲ್ರೀ... ಕೊತ್ತಮರಿ ಸೊಪ್ಪು ತರೋಕೆ ಅಂತ ಹೋದೋರು ಒಂದು ಗಂಟೆ ಲೇಟಾಗ್ ಬಂದೀರಲ್ಲ, ಎಲ್ಲಿ ಹಾಳಾಗ್ ಹೋಗಿದ್ರಿ?’ ಮಡದಿ ಪಮ್ಮಿಯ ಕೋಪಕ್ಕೆ ಥೇಟ್ ಕೊತ್ತಿಮರಿಯಂತಾದ ತೆಪರೇಸಿ ‘ಅದೂ... ದಾರೀಲಿ ಯಾರೋ ಹಾವಾಡಿಸ್ತಾ ಇದ್ರು ಕಣೆ, ನೋಡ್ತಾ ನಿಂತುಬಿಟ್ಟೆ’ ಎಂದ.

‘ಏನು? ಹಾವಾಡಿಸೋದ್ನ ನೋಡ್ತಾ ನಿಂತಿದ್ರಾ? ನಾಚ್ಕೆ ಆಗಲ್ವ?’ ಪಮ್ಮಿಗೆ ಮತ್ತಷ್ಟು ಕೋಪ.

‘ಅದೂ ಹಂಗಲ್ಲ, ಬುಟ್ಟೀಲಿ ದೊಡ್ಡ ಕಾಳಿಂಗ ಸರ್ಪ ಐತೆ, ಅದನ್ನ ಹೊರಗೆ ಬಿಡ್ತೀನಿ, ಅದನ್ನ ನೋಡದೆ ಹಾಗೇ ಹೋದ್ರೆ ಕೆಟ್ಟದಾಗುತ್ತೆ ಅಂದ ಹಾವಾಡಿಸೋನು. ಅದ್ಕೇ ನಿಂತುಬಿಟ್ಟೆ...’

‘ಜೊತೆಗೆ ಹಾವು-ಮುಂಗುಸಿ ಫೈಟಿಂಗ್ ತೋರಿಸ್ತೀನಿ, ನೋಡ್ಕಂಡ್ ಹೋಗಿ ಅನ್ಲಿಲ್ವಾ?’

‘ಅಲ್ಲ, ಅದೂ ಹಾವು ಹದಿನೈದು ಅಡಿ ಉದ್ದ ಐತೆ, ಆರಡಿ ಎದ್ದು ನಿಲ್ಲುತ್ತೆ ಅಂದ, ನೋಡ್ಬೇಕು ಅನಿಸ್ತು...’

‘ಸರಿ, ಹಾವು ತೋರಿಸಿದ್ನಾ?’

‘ಮೊದ್ಲು ನಾಗರಹಾವು, ಎರಡು ತಲೆ ಹಾವು, ಕೇರೆ ಹಾವು, ಹೆಬ್ಬಾವು ಏನೇನೋ ತೋರಿಸ್ದ. ಬುಟ್ಟಿ ಒಳಗಿದ್ದ ಹಾವು ತೆಗೀಲೇ ಇಲ್ಲ...’

‘ಬೇಗ ತೋರ್‍ಸಿ, ನಾ ಹೋಗ್ಬೇಕು ಅನ್ಬೇಕಿತ್ತು?’

‘ಅಂದೆ... ಅವನು ತಾಯತ ಮಾರೋಕೆ ಶುರು ಮಾಡ್ದ... ನಾನೂ ಒಂದು ತಗಂಡೆ’.

‘ಕೊನೆಗೂ ಹಾವು ತೋರಿಸಿದ್ನೋ ಇಲ್ವೋ?’

‘ಕೊನೇಗೆ ಈಗ ಹಾವು ತೋರಿಸ್ತೀನಿ ಅಂತ ಬುಟ್ಟಿ ಮುಚ್ಚಳ ತೆಗೆದ, ಆದ್ರೆ...’

‘ಆದ್ರೆ ಏನು?’

‘ಬುಟ್ಟಿಯೊಳಗೆ ಹಾವು ಇರ್ಲೇ ಇಲ್ಲ! ರಾತ್ರಿ ಎಲ್ಲೋ ತಪ್ಪಿಸ್ಕಂಡಿದೆ ಬಡ್ಡಿಮಗಂದು ಅಂತ ಪೇಚಾಡಿದ ಹಾವಾಡಿಸೋನು...’

ಅಷ್ಟರಲ್ಲಿ ಟಿ.ವಿ.ಯಲ್ಲಿ ಬ್ರೇಕಿಂಗ್ ನ್ಯೂಸ್ ಸದ್ದಾಯಿತು ‘ಬಿಟ್ ಕಾಯಿನ್ ಆರೋಪಿ ನಾಪತ್ತೆ, ಪೊಲೀಸರ ಹುಡುಕಾಟ...!’

ತೆಪರೇಸಿ, ಪಮ್ಮಿ ಮುಖ ಮುಖ ನೋಡಿಕೊಂಡರು.

ಸಂಗತ

ಮೋದಿ ಜಪ ಮತ್ತು ಪಕ್ಷದ ಮಿತಿ

ಬಿಜೆಪಿಯ ಈ ದೌರ್ಬಲ್ಯವನ್ನು ಬಳಸಿಕೊಳ್ಳುವ ಅವಕಾಶ ವಿರೋಧ ಪಕ್ಷಗಳಿಗೆ ಇದೆ

● ಡಾ. ಪಿ.ಎಸ್.ಜಯರಾಮು

ಕೋವಿಡ್-19 ಸಾಂಕ್ರಾಮಿಕವು ಭುಗಿಲೆದ್ದ ನಂತರ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯ ಸಭೆ ಮೊದಲ ಬಾರಿಗೆ ನವದೆಹಲಿಯಲ್ಲಿ ಈಚೆಗೆ ನಡೆಯಿತು. ಐದು ರಾಜ್ಯಗಳಲ್ಲಿ ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಅನುಸರಿಸಬೇಕಾದ ಕಾರ್ಯತಂತ್ರ, ಗೊತ್ತುಗುರಿ ಕುರಿತು ಚರ್ಚೆಯಾಗಿದೆ.

ಈ ದಿಸೆಯಲ್ಲಿ ಪಕ್ಷದ ಸನ್ನದ್ಧತೆಯ ಭಾಗವಾಗಿ, ಡಿ. 25ರೊಳಗೆ 10.4 ಲಕ್ಷ ಮತಗಟ್ಟೆಗಳಲ್ಲಿ ಬೂತ್ ಮಟ್ಟದ ಸಮಿತಿಗಳನ್ನು ಸ್ಥಾಪಿಸಲು, ಮತದಾರರ ಪಟ್ಟಿಯ ಪ್ರತೀ ಪುಟವನ್ನು ನೋಡಿಕೊಳ್ಳಲು ‘ಪನ್ನಾ ಸಮಿತಿ’ಗಳನ್ನು ರಚಿಸಲು ನಿರ್ಧರಿಸಲಾಗಿದೆ. ಚುನಾವಣೆಗಳನ್ನು ಗೆಲ್ಲುವ, ಅಧಿಕಾರ ಗಳಿಸುವ ಹಾಗೂ ಉಳಿಸಿಕೊಳ್ಳುವ ಮಹತ್ವಾಕಾಂಕ್ಷೆಯ ವಿಷಯದಲ್ಲಿ ಬಿಜೆಪಿಗೆ ಬೇರೆ ಯಾವ ಪಕ್ಷವೂ ಸಾಟಿಯಲ್ಲ.

ಕೋವಿಡ್ ನಿಯಂತ್ರಣಕ್ಕೆ 100 ಕೋಟಿ ಡೋಸ್ ಲಸಿಕೆ ಹಾಕಿರುವುದನ್ನು ಜನರ ಮುಂದಿಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಸಾಂಕ್ರಾಮಿಕವನ್ನು ನಿಭಾಯಿಸಿದ ವಿಧಾನವನ್ನು ಮತದಾರರಿಗೆ ವಿವರಿಸುವಂತೆ, ಚುನಾವಣೆಯನ್ನು ಎದುರುಗೊಳ್ಳಲಿರುವ ರಾಜ್ಯಗಳ ನಾಯಕರಿಗೆ ಸೂಚಿಸಲಾಗಿದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಸಭೆಯ ಪ್ರಮುಖ ಉದ್ದೇಶವು ಮೋದಿಯವರನ್ನು ಪಕ್ಷದ ಸಂರಕ್ಷಕನೆಂದು ಬಿಂಬಿಸುವುದು, ಮುಂದಿನ ಚುನಾವಣೆಗಳಲ್ಲಿ ಪಕ್ಷವು ಅವರ ಮೇಲೆ ಅವಲಂಬಿತವಾಗಿರುವುದನ್ನು ಪುನರುಚ್ಚರಿಸುವುದೇ ಆಗಿತ್ತು ಎಂದು ಅನಿಸುತ್ತದೆ.

ಪುನರ್‌ರಚಿತ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಹಿರಿಯ ನಾಯಕರಾದ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಷಿ ಅವರನ್ನು ಉಳಿಸಿಕೊಳ್ಳಲಾಗಿದೆ. ಆದರೆ, ಸರ್ಕಾರದ ಕೆಲವು ನೀತಿಗಳ ಬಗ್ಗೆ ನಿಷ್ಠುರವಾಗಿ ಅಭಿಪ್ರಾಯ ವ್ಯಕ್ತಪಡಿಸಿರುವ ವರುಣ್ ಗಾಂಧಿ, ಮೇನಕಾ ಗಾಂಧಿ ಮತ್ತು ಡಾ. ಸುಬ್ರಮಣಿಯನ್ ಸ್ವಾಮಿ ಅವರನ್ನು ಕೈಬಿಡಲಾಗಿದೆ. ಮೋದಿಯವರ ಪಟ್ಟಶಿಷ್ಯರ ಸಾಲಿಗೆ ಹೊಸದಾಗಿ ಸೇರಿರುವ ಅಶ್ವಿನಿ ವೈಷ್ಣವ್ ಅವರನ್ನು ಸೇರಿಸಿಕೊಳ್ಳಲಾಗಿದೆ. ಮೋದಿಯವರ ಮಾತು-ನಿಲುವುಗಳಲ್ಲಿ ನಿಷ್ಠೆ ಹೊಂದಿದವರು ಮಾತ್ರ ಕಾರ್ಯಕಾರಿಣಿಯ ಸದಸ್ಯರಾಗಿರಲು ಸಾಧ್ಯ ಎನ್ನುವ ಸಂದೇಶವನ್ನು ಈ ನಿರ್ಣಯಗಳು ಸಾರಿವೆ.

ಪದ ಬಳಕೆಯ ಬಗ್ಗೆ ವಿಶಿಷ್ಟ ಒಲವು ಹೊಂದಿರುವ ಮೋದಿ, ಪಕ್ಷವು ‘ಸೇವಾ’ (ಸೇವೆ), ‘ಸಂಕಲ್ಪ್’ (ಸಂಕಲ್ಪ) ಮತ್ತು ‘ಸಮರ್ಪಣ್’ಗಾಗಿ (ಅರ್ಪಣೆ) ನಿಂತಿದೆ ಎಂದು ಹೇಳಿದರು. ಆದರೆ, ಈ ‘ಮೌಲ್ಯ’ಗಳನ್ನು ಎಲ್ಲಾ ಹಂತದ ನಾಯಕರು ಅನುಸರಿಸುತ್ತಿದ್ದಾರೆಯೇ ಎಂಬ ಬಗ್ಗೆ ಪಕ್ಷವು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ರಾಜಕೀಯ ನಡವಳಿಕೆಯ ವಿಷಯದಲ್ಲಿ ಬಿಜೆಪಿಯು ಇತರ ಪಕ್ಷಗಳಿಗಿಂತ ಭಿನ್ನವಾಗೇನೂ ಇಲ್ಲ, ಅಲ್ಲಿಯಂತೆ ‘ವೀಲಿಂಗ್-ಡೀಲಿಂಗ್’ ಇಲ್ಲೂ ನಡೆಯುತ್ತಿದೆ ಎಂಬುದು ಪ್ರಜ್ಞಾವಂತ ನಾಗರಿಕರಿಗೆ ಗೊತ್ತಿರುವ ಸಂಗತಿಯೇ.

ಬಿಜೆಪಿಗೆ ಕುಟುಂಬ ರಾಜಕಾರಣದಲ್ಲಿ ನಂಬಿಕೆ ಇಲ್ಲ ಎಂದು ಪ್ರತಿಪಾದಿಸಿದ ಮೋದಿ, ಕಾಂಗ್ರೆಸ್ ಪಕ್ಷದ ಮೇಲೆ ನೆಹರೂ ಕುಟುಂಬದ ಹಿಡಿತವನ್ನು ಉಲ್ಲೇಖಿಸಿದರು. ಬಿಜೆಪಿ ಮುಖಂಡರು ಮುಂಬರುವ ದಿನಗಳಲ್ಲೂ ಚುನಾವಣಾ ಪ್ರಚಾರದ ಸಮಯದಲ್ಲಿ ನೆಹರೂ ಕುಟುಂಬವನ್ನು ಗುರಿಯಾಗಿಸಿಕೊಳ್ಳುವುದು ನಿಶ್ಚಿತ. ಅದೇನೇ ಇರಲಿ, ಇಂತಹ ಟೀಕೆ ಎದುರಿಸಬೇಕಾದ ಸ್ಥಿತಿ ಏಕೆ ಬಂದಿದೆ ಎಂಬುದರ ಬಗ್ಗೆ ಕಾಂಗ್ರೆಸ್ ಆತ್ಮಾವಲೋಕನ ಮಾಡಿಕೊಳ್ಳುವುದರ ಜೊತೆಗೆ ಈ ಕುರಿತ ಪ್ರಶ್ನೆಗೆ ಉತ್ತರಿಸಬೇಕಾಗಿದೆ.

ಸಭೆಯಲ್ಲಿ ರಾಜಕೀಯ ನಿರ್ಣಯವನ್ನು ಯೋಗಿ ಆದಿತ್ಯನಾಥ ಮಂಡಿಸಿದರು. ಇದು, ಪಕ್ಷದಲ್ಲಿ ಅವರಿಗೆ ನೀಡಿರುವ ಪ್ರಾಮುಖ್ಯವನ್ನು ಸೂಚಿಸುತ್ತದೆ. ಕೆಲವೇ ತಿಂಗಳಲ್ಲಿ ನಡೆಯಲಿರುವ ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಅಧಿಕಾರ ಉಳಿಸಿಕೊಂಡರೆ, ಅವರ ವರ್ಚಸ್ಸು ಇಮ್ಮಡಿಸುತ್ತದೆ. ಕೆಲವು ಊಹಾಪೋಹಗಳ ಪ್ರಕಾರ, ಅವರು 2024ರಲ್ಲಿ ಮೋದಿಯವರಿಗೆ ಸವಾಲಾಗಿ ಹೊರಹೊಮ್ಮಬಹುದು. ಸಭೆಯಲ್ಲಿ ಮಂಡಿಸಿದ ಗೊತ್ತುವಳಿಯ ಒಂದು ಅಂಶವು ‘ಜಮ್ಮು ಮತ್ತು ಕಾಶ್ಮೀರದಲ್ಲಿ ಭದ್ರತೆ, ಶಾಂತಿ ಮತ್ತು ಅಭಿವೃದ್ಧಿ’ಯ ಅಧ್ಯಾಯದ ಕುರಿತದ್ದಾಗಿದೆ. ಕೇಂದ್ರಾಡಳಿತ ಪ್ರದೇಶದಲ್ಲಿ ಸರ್ಕಾರ ಕೈಗೊಂಡ ಉಪಕ್ರಮಗಳು ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಪೂರ್ಣಗೊಳಿಸಿರುವುದನ್ನು ಅದು ಸೂಚಿಸುತ್ತದೆ. ವಾಸ್ತವದಲ್ಲಿ, ಹಿಂಸಾಚಾರ ಮತ್ತು ಅಸುರಕ್ಷತೆಯ ಭಾವ ಕಾಶ್ಮೀರ ಕಣಿವೆಯಲ್ಲಿ ಈಗಲೂ ಮುಂದುವರಿದಿದೆ.

ರಾಜಕೀಯ ಗೊತ್ತುವಳಿಯು ಕೃಷಿಗೆ ಸಂಬಂಧಿಸಿದ ಕಾಯ್ದೆಗಳು, ಪೌರತ್ವ (ತಿದ್ದುಪಡಿ) ಕಾಯ್ದೆ ಮತ್ತು ಚೀನಾದೊಂದಿಗಿನ ಆತಂಕಕಾರಿ ಸ್ಥಿತಿ ಬಗ್ಗೆ ಏನನ್ನೂ ಒಳಗೊಂಡಿಲ್ಲ (ಮೂರು ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಧಾನಿ ಶುಕ್ರವಾರ ಘೋಷಿಸಿದ್ದಾರೆ). ಚೀನಾಕ್ಕೆ ಗಟ್ಟಿ ಸಂದೇಶ ರವಾನಿಸುವ ಅವಕಾಶವನ್ನು ಪಕ್ಷ ಈ ಮೂಲಕ ಕಳೆದುಕೊಂಡಿದೆ.

ಇದೇನೇ ಇರಲಿ, ಒಬ್ಬ ನಾಯಕನ ಮೇಲಿನ ಅತಿಯಾದ ಅವಲಂಬನೆಯು ಪಕ್ಷಕ್ಕೆ ಎಲ್ಲ ಕಾಲಕ್ಕೂ ಎಲ್ಲ ರಾಜ್ಯಗಳಲ್ಲೂ ಮತ ಮತ್ತು ಗೆಲುವು ತಂದುಕೊಡಬಲ್ಲದು ಎಂದು ನಿರೀಕ್ಷಿಸುವಂತಹ ಸ್ಥಿತಿಯು ಪಕ್ಷವೊಂದರ ದೌರ್ಬಲ್ಯದ ಸಂಕೇತವೂ ಹೌದು. ವಿಧಾನಸಭಾ ಚುನಾವಣೆಗಳಲ್ಲಿ ವಿರೋಧ ಪಕ್ಷಗಳಿಗೆ ಬಿಜೆಪಿಯ ಈ ಸ್ಥಿತಿಯೇ ಅನುಕೂಲಕರ ಅಂಶವಾಗಿ ಪರಿಣಮಿಸುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಲೇಖಕ: ರಾಜ್ಯಶಾಸ್ತ್ರದ ನಿವೃತ್ತ ಪ್ರಾಧ್ಯಾಪಕ
ಬೆಂಗಳೂರು ವಿಶ್ವವಿದ್ಯಾಲಯ

ವಾಚಕರ ವಾಣಿ

ತಡವಾದರೂ ತಕ್ಕ ಕ್ರಮ

ವಿವಾದಿತ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಲು ಪ್ರಧಾನಿ ನಿರ್ಧರಿಸಿರುವುದು ತಡವಾಗಿಯಾದರೂ ಕೈಗೊಂಡ ತಕ್ಕ ಕ್ರಮ. ಇದಕ್ಕೆ ಉತ್ತರಪ್ರದೇಶ, ಪಂಜಾಬ್ ವಿಧಾನಸಭಾ ಚುನಾವಣೆ ಕಾರಣ ಇರಬಹುದು. ಉತ್ತರ ಪ್ರದೇಶದಲ್ಲಿ ಮಂಡಿ ಆದಾಯ ಒಂದೇ ವರ್ಷದಲ್ಲಿ ಒಂದು ಸಾವಿರ ಕೋಟಿ ರೂಪಾಯಿಯಷ್ಟು ಕುಸಿದಿದ್ದನ್ನು, ಹೊಸ ಎಪಿಎಂಸಿಗಳ ನಿರ್ಮಾಣವನ್ನು ತಡೆಹಿಡಿದಿರುವುದನ್ನು ಆ ಸರ್ಕಾರವೇ ವಿಧಾನಸಭೆಯಲ್ಲಿ ಒಪ್ಪಿಕೊಂಡಿತ್ತು. ಪಂಜಾಬಿನಲ್ಲಿ ಅಕಾಲಿದಳವೂ ಈ ಕಾನೂನುಗಳ ಬಗೆಗೆ ಆಕ್ಷೇಪ ವ್ಯಕ್ತಪಡಿಸಿತ್ತು. ಕರ್ನಾಟಕದ ಎಪಿಎಂಸಿಗಳಿಗೆ ಈಗ ಏನಾಗಿದೆ ಎಂಬ ಬಗ್ಗೆ ‘ಪ್ರಜಾವಾಣಿ’ ವರದಿಗಳನ್ನು ಪ್ರಕಟಿಸಿತ್ತು.

ಕೇಂದ್ರದ ಬಗ್ಗೆ ಸೊಲ್ಲೆತ್ತಲಾಗದ ರಾಜ್ಯದ ಮಂತ್ರಿಗಳು ಈಗಲಾದರೂ ತಮ್ಮ ತಮ್ಮ ಜಿಲ್ಲೆಗಳಲ್ಲಿ ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆಯ ನೈಜ ಸ್ಥಿತಿಯನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರಲಿ. ಅವರು ಸಮಿತಿ ರಚನೆ ಮಾರ್ಗ ಹಿಡಿಯದೆ ಈಗ ಏನು ಮಾಡಬೇಕೆಂದು ನಿರ್ಧರಿಸಲಿ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಪ್ರಜ್ಞಾವಂತ ವಲಯ ಧ್ವನಿ ಎತ್ತಲಿ

ಕನ್ನಡ ನಾಡು, ನುಡಿಯ ಅಧ್ಯಯನಕ್ಕಾಗಿ ಹುಟ್ಟಿಕೊಂಡ ಕನ್ನಡ ವಿಶ್ವವಿದ್ಯಾಲಯ ಇಂದು ಭ್ರಷ್ಟತೆಯ ಕೂಪವಾಗಿದೆ. ಅಲ್ಲಿನ ವಿದ್ಯಾರ್ಥಿಯಾಗಿಯೇ ನಾನು ಈ ಸಂಗತಿ ಒಪ್ಪಿಕೊಳ್ಳುವುದು ಸಂಕಟದ ಸಂಗತಿ. ಸ್ವಜನಪಕ್ಷಪಾತ, ಭ್ರಷ್ಟಾಚಾರದಿಂದ ಕೂಡಿದ ಆಡಳಿತ ನಿರ್ಲಜ್ಜ ಸ್ಥಿತಿಗೆ ತಲುಪಿದೆ. ಸಂಶೋಧನೆಗಾಗಿಯೇ ಹುಟ್ಟಿಕೊಂಡ ವಿಶ್ವವಿದ್ಯಾಲಯವೊಂದರಲ್ಲಿ ಸಂಶೋಧನಾ ಕೋರ್ಸ್ ಪಿಎಚ್.ಡಿಗಾಗಿ ನಾಲ್ಕು ವರ್ಷಗಳಿಂದ ಅರ್ಜಿಯನ್ನೇ ಕರೆದಿಲ್ಲ! ರಾಷ್ಟ್ರೀಯ ಶಿಷ್ಯವೇತನ ಪಡೆಯುವ ವಿದ್ಯಾರ್ಥಿಗಳಿಂದ ಹಣ ಪಡೆಯುವ ಪ್ರಾಧ್ಯಾಪಕರಿದ್ದಾರೆ. ಇಂತಹವರಿಗೆ ಕುಲಪತಿಗಳ ಕೃಪಾಕಟಾಕ್ಷವಿದೆ ಎಂಬ ಆರೋಪವಿದೆ.

ಬೇರೆ ಕೆಲವು ವಿಶ್ವವಿದ್ಯಾಲಯಗಳಲ್ಲಿ ಜ್ಞಾನಾಭಿವೃದ್ಧಿಗಾಗಿ ವಿಚಾರಸಂಕಿರಣ, ಕಮ್ಮಟಗಳನ್ನು ಆಯೋಜಿಸಿದರೆ ಇಲ್ಲಿ ಹಣ ಕೊಳ್ಳೆಹೊಡೆಯಲು ಆಯೋಜಿಸಲಾಗುತ್ತದೆ ಎಂಬ ದೂರುಗಳಿವೆ. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಣ ಕೊಳ್ಳೆ ಹೊಡೆಯಲಾಗಿದೆ. ಇಂತಹ ಭ್ರಷ್ಟತೆಯ ವಿರುದ್ಧ ಆಡಳಿತವನ್ನು ಪ್ರಶ್ನಿಸಿದವರ ಧ್ವನಿ ಅಡಗಿಸಲು ಕಾನೂನು ಘಟಕದ ವತಿಯಿಂದ ಬೆದರಿಕೆಯ ತಂತ್ರ ಅನುಸರಿಸಲಾಗುತ್ತಿದೆ. ವಿಶ್ವವಿದ್ಯಾಲಯದ ಭ್ರಷ್ಟಾಚಾರದ ಆರೋಪಗಳನ್ನು ನ್ಯಾಯಾಂಗ ವಿಚಾರಣೆಗೆ ಒಪ್ಪಿಸಲಿ. ನಾಡಿನ ಪ್ರಜ್ಞಾವಂತ ವಲಯ ಈ ಕುರಿತು ಮತ್ತಷ್ಟು ಧ್ವನಿ ಎತ್ತಲಿ. ತಕ್ಷಣ ರಾಜ್ಯಪಾಲರು ಮಧ್ಯಪ್ರವೇಶಿಸಿ ಸೂಕ್ತ ಕ್ರಮ ಜರುಗಿಸಲಿ.

ವಿವೇಕರಾವ್ ಪಾಟೀಲ, ಹಂಪಿ

ಬೇಕಿರುವುದು ‘ಜನಸಹಾಯ ಯಾತ್ರೆ’

ಇಡೀ ರಾಜ್ಯವೇ ಮಳೆಯಿಂದ ತತ್ತರಿಸುತ್ತಿರುವಾಗ, ಜನತೆ ಸಂಕಷ್ಟದಲ್ಲಿರುವಾಗ ‘ಜನಸಹಾಯ ಯಾತ್ರೆ’ ಬದಲಿಗೆ ಬಿಜೆಪಿಯು ‘ಜನಸ್ವರಾಜ್ ಯಾತ್ರೆ’ ಮತ್ತು ಸಮಾವೇಶಕ್ಕೆ ಮುಂದಾಗಿರುವುದು ಎಷ್ಟು ಸಮಂಜಸ ಎಂದು ಪ್ರಜ್ಞಾವಂತರು ಕೇಳುತ್ತಿದ್ದಾರೆ. ಯಾವುದೋ ಒಂದು ಕಾರಣವನ್ನು ಮುಂದೆ ಮಾಡಿಕೊಂಡು ಪುನಃ ಪುನಃ ಸಮಾವೇಶ ಮತ್ತು ಯಾತ್ರೆಗಳನ್ನು ನಡೆಸುತ್ತಿರುವುದು ಜನತೆಗೆ ರಾಜಕೀಯ ಪಕ್ಷಗಳ ಬಗೆಗೆ ಜುಗುಪ್ಸೆ ಮೂಡಿಸಿದೆ.

ಮಾರಿ ಕಣ್ಣು ಹೋರಿ ಮೇಲೆ ಎನ್ನುವಂತೆ ರಾಜಕಾರಣಿಗಳ ದೃಷ್ಟಿ ಯಾವಾಗಲೂ ಮುಂದಿನ ಚುನಾವಣೆಯ ಮೇಲೆ ಎನ್ನುವುದನ್ನು ನೋಡಿದಾಗ ಅವರ ಬಗೆಗೆ ತಿರಸ್ಕಾರ ಮೂಡುತ್ತದೆ. ಇಂತಹ ಯಾತ್ರೆಗಳಲ್ಲಿ ವ್ಯಕ್ತಿಪೂಜೆ, ಹೊಗಳಿಕೆ, ತೆಗಳಿಕೆಯನ್ನು ಬಿಟ್ಟು ಇನ್ನೇನಾದರೂ ಇರುತ್ತದೆಯೇ? ರಾಜಕೀಯ ಪಕ್ಷಗಳು ಹೆಸರು ಬದಲಾವಣೆ, ಪ್ರತಿಮೆ ಸ್ಥಾಪನೆ ಮತ್ತು ಯಾತ್ರೆ-ಸಮಾವೇಶಗಳ ಆಚೆಗೂ ಚಿಂತಿಸಬೇಕು.

ರಮಾನಂದ ಶರ್ಮಾ, ಬೆಂಗಳೂರು

ಮಾದರಿ ಕೃಷಿ ಕಾಯ್ದೆ ರೂಪಿಸಿ

ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ತೆಗೆದುಕೊಳ್ಳುವ ಕೇಂದ್ರ ಸರ್ಕಾರದ ನಿರ್ಧಾರ ರೈತರ ಹೋರಾಟಕ್ಕೆ ಸಿಕ್ಕ ಜಯ. ಉಪಚುನಾವಣೆಗಳ ಫಲಿತಾಂಶ ಸರ್ಕಾರಕ್ಕೆ ಪಾಠ ಕಲಿಸಿದಂತೆ ಕಾಣುತ್ತದೆ. ಸತತವಾಗಿ ಒಂದು ವರ್ಷ, ಸಾವು-ನೋವನ್ನು ಲೆಕ್ಕಿಸದೆ ನಡೆಸಿದ ಅಹಿಂಸಾತ್ಮಕ ಹೋರಾಟ ಪ್ರಪಂಚಕ್ಕೇ ಮಾದರಿ.

ಆದರೂ ಕನಿಷ್ಠ ಬೆಂಬಲ ಬೆಲೆಯನ್ನು ವೈಜ್ಞಾನಿಕವಾಗಿ ಲೆಕ್ಕಾಚಾರ ಮಾಡಿ ಜಾರಿಗೆ ತರದಿದ್ದರೆ ರೈತರ ಗೋಳು ಇದ್ದದ್ದೆ. ಪ್ರತಿಸಲವೂ ರೈತರು ತಮ್ಮ ಬೇಡಿಕೆಗಳಿಗೆ ಬೀದಿಯಲ್ಲಿ ನಿಂತು ಹೋರಾಟ ಮಾಡಬೇಕಾದ ಪರಿಸ್ಥಿತಿ ನಿಜಕ್ಕೂ ಶೋಚನೀಯ. ದೇಶದ ಶೇಕಡ 60 ಭಾಗದ ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸುವ ಕೃಷಿಯನ್ನು ಎಲ್ಲಾ ಸರ್ಕಾರಗಳು ನಿರ್ಲಕ್ಷಿಸುತ್ತಾ ಬಂದಿವೆ. ಈಗಲಾದರೂ ಪಕ್ಷಗಳು ಚಿಂತನೆ ನಡೆಸಿ ಮಾದರಿಯಾದ ಕಾಯ್ದೆಯನ್ನು ರೂಪಿಸಬೇಕು.

ಅತ್ತಿಹಳ್ಳಿ ದೇವರಾಜ, ಹಾಸನ

‘ಎರಡು ಭಾರತ’ ಇರುವುದು ಸುಳ್ಳೇ?

ವಿಡಂಬನಕಾರ ವೀರ್ ದಾಸ್ ಅವರು ಅಮೆರಿಕದಲ್ಲಿ ನೀಡಿದ ಕಾರ್ಯಕ್ರಮದಲ್ಲಿ ಭಾರತದ ಬಗ್ಗೆ ನೀಡಿರುವ ಹೇಳಿಕೆಯು ಹೇಯ ಮತ್ತು ದೇಶಕ್ಕೆ ಅವಮಾನ ತಂದಿದೆ ಎಂದಿದ್ದಾರೆ ಸಾಮಗ ದತ್ತಾತ್ರಿ (ವಾ.ವಾ., ನ. 19). ಆದರೆ ವೀರ್ ದಾಸ್ ಅವರು ಹೇಳಿದ್ದರಲ್ಲಿ ಸುಳ್ಳು ಏನಿದೆ? ಎರಡು ಭಾರತ ಇರುವುದು, ಉಳ್ಳವರು- ನಿರ್ಗತಿಕರು, ಸಮಾನತೆ- ಅಸಮಾನತೆ, ಅಧಿಕಾರದ ಅಟ್ಟಹಾಸ- ಹಕ್ಕಿಗಾಗಿ ಹೋರಾಟದಂತಹ ವಿಷಯಗಳು ದಿನವೂ ನಮ್ಮ ಕಣ್ಣು ಕುಕ್ಕುವಂತೆ ನಡೆಯುತ್ತಿಲ್ಲವೇ?

ಬದಲಿಗೆ, ನೆಹರೂ ಇರಲಿ ಮಹಾತ್ಮ ಗಾಂಧಿಯವರನ್ನೂ ಹೀನಾಮಾನವಾಗಿ ಹೀಯಾಳಿಸುವ ಪ್ರವೃತ್ತಿ ನಿರಂತರವಾಗಿ ಬೆಳೆಯುತ್ತ ಇರುವುದು ಹೇಯ ಅಲ್ಲವೇ? ಅಷ್ಟೇ ಯಾಕೆ ಈ ವರ್ಷವೇ ಪದ್ಮಶ್ರೀ ಪುರಸ್ಕೃತ ನಟಿಯೊಬ್ಬರು ಗಾಂಧಿ ಮತ್ತು ದೇಶದ ಸ್ವಾತಂತ್ರ್ಯ ಹೋರಾಟದ ಫಲಶ್ರುತಿಯನ್ನು ತುಚ್ಛವಾಗಿ ವ್ಯಾಖ್ಯಾನಿಸಿರುವುದು ಭಾರತೀಯರೆಲ್ಲರೂ ತಲೆತಗ್ಗಿಸುವ ಸಂಗತಿಯಲ್ಲವೇ? ಸತ್ಯ ಸದಾ ಕಹಿಯೇ. ಕನಿಷ್ಠ ಅದನ್ನು ಸ್ವೀಕರಿಸುವ ಮನೋಭೂಮಿಕೆಯನ್ನಾದರೂ ಹೊಂದುವುದು ಒಳ್ಳೆಯ ಪ್ರವೃತ್ತಿ.

ಎಚ್.ವಿ.ನಟರಾಜ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಟ್‌ಕಾಯಿನ್ ಹಗರಣವನ್ನು ಸರ್ಕಾರ ನಿಭಾಯಿಸಿದ ರೀತಿ ಸರಿ ಇದೆಯೇ?

ಬೆಕ್ಕು ಕಣ್ ಮುಚ್ಚಿ ಬಿಟ್ ಬೈಬಿಟ್ ಹಾಲು ಕುಡಿದಾಗ...

ಬೆಕ್ಕು ತಾನು ಕಣ್ಮುಚ್ಚಿಕೊಂಡು ಹಾಲು ಕುಡಿದರೆ ಜಗತ್ತಿಗೆ ಗೊತ್ತಾಗುವುದಿಲ್ಲ ಎಂಬ ಭಾವನೆಯಲ್ಲಿ ಈ ಸರ್ಕಾರದ ಪ್ರಮುಖ ಭಾಗವಾಗಿರುವ ಅನೇಕ ಮಂದಿ ಹತ್ತಾರು ಸಾವಿರ ಕೋಟಿ ರೂಪಾಯಿ ಮೌಲ್ಯದ ಬಿಟ್ ಕಾಯಿನ್‌ಗಳನ್ನು ಲಪಟಾಯಿಸಿ ಈಗ ನಿದ್ದೆಗೆಟ್ಟಿರುವುದಂತೂ ಅಕ್ಷರಶಃ ಸತ್ಯ

ಪ್ರಜಾವಾಣಿ ಚರ್ಚೆ

• ಪ್ರಿಯಾಂಕ್ ಖರ್ಗೆ

ಬಿಟ್‌ಕಾಯಿನ್ ಎಲ್ಲರಿಗೂ ಒಮ್ಮೆಗೇ ಅರ್ಥವಾಗುವ ವಿಚಾರ ಅಲ್ಲ. ಜೀವನಪೂರ್ತಿ ಗಾಂಧಿ ನೋಟು ಹಿಡಿದು ರೂಪಾಯಿಯಲ್ಲೇ ವಹಿವಾಟು ನಡೆಸಿರುವ ನಾವುಗಳು ಷೇರು ಮಾರುಕಟ್ಟೆ ಅಂದರೇನೇ ತುಸು ತಲೆ ಕೆಡಿಸಿಕೊಳ್ಳೋ ಸ್ಥಿತಿ ಇರುವಾಗ, ಡಿಜಿಟಲ್ ಕರೆನ್ಸಿಯನ್ನು ಅರಗಿಸಿಕೊಳ್ಳುವುದು ಸುಲಭದ ಮಾತಲ್ಲ. ಭೌತಿಕವಾಗಿ ಕೈಗೇ ಎಟುಕದ, ನಮ್ಮಂತ ಸಾಮಾನ್ಯರ ಪಾಲಿಗೆ ಇದು ಇನ್ನೂ ನಿಗೂಢವಾಗಿಯೇ ಇದೆ. ಮೇಲ್ನೋಟಕ್ಕೆ ಕಾಣಸಿಗುತ್ತಿರುವಂತೆ; ಇನ್ನೂ ಸ್ಪಷ್ಟವಾಗಿ ಹೇಳಬಹುದಾದರೆ 'ಚೌಕಿದಾರ' ಎಂದೇ ಜಗತ್ ಪ್ರಸಿದ್ಧರಾದ ಪ್ರಧಾನಿ ನರೇಂದ್ರ ಮೋದಿ ಅವರ ಕಚೇರಿಗೆ ಈ ಪ್ರಕರಣದ ನಿಖರ ದಾಖಲೆ ತಲುಪಿದೆ. ಬಿಟ್‌ಕಾಯಿನ್‌ಗಳನ್ನೇ ಬಂಡವಾಳ ಮಾಡಿಕೊಂಡ ರಾಜ್ಯದ ಬಿಜೆಪಿ ಸರ್ಕಾರ, ಸಾವಿರಾರು ಕೋಟಿಯ ದೊಡ್ಡ ಹಗರಣವನ್ನೇ ನಡೆಸಿದೆ ಎಂಬ ಆರೋಪ ದಟ್ಟವಾಗಿದೆ.

ಬೆಂಕಿ ಇಲ್ಲದೇ ಹೊಗೆ ಆಡುವುದಿಲ್ಲ ಎಂಬ ಮಾತಿದೆ. ವಿಚಿತ್ರವೆಂದರೆ ಕಾಣದ 'ಕಾಯಿನ್'ಗಳ ಜಾಡನ್ನೇ ಹಿಡಿದ ಕರ್ನಾಟಕದ ಬಿಜೆಪಿ 'ಚೌಕಿದಾರರು', ಬಿಟ್‌ಕಾಯಿನ್ ಕದ್ದಿರುವ ಅಂತರಾಷ್ಟ್ರೀಯ ಕಳ್ಳನಿಂದಲೇ ತಮ್ಮ ನಿಗೂಢ ಖಾತೆಗೆ ವರ್ಗಾವಣೆ ಮಾಡಿಕೊಂಡಿರುವ ಮಾಹಿತಿಗಳು ಸದ್ದು ಮಾಡುತ್ತಿವೆ. ಕಳ್ಳನನ್ನು ಹಿಡಿದವರು ಆತನನ್ನು ಜೈಲಿಗೆ ಅಟ್ಟುವ ಬದಲು, ತಮ್ಮ ಕಸ್ಟಡಿಯೊಳಗಿಟ್ಟುಕೊಂಡು ಕಳವಿನ ಜಾಣ ಮಾರ್ಗವನ್ನು ಅವನಿಂದಲೇ ಕಲಿತು, ಹಣ ಲಪಟಾಯಿಸಿರುವ ಹೊಸ ಹಗರಣ ಇದು. ದಶಕದ ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ನಡೆದ ಅಕ್ರಮ ಗಣಿಗಾರಿಕೆ ಹಗರಣಕ್ಕಿಂತ ಹಲವುಪಟ್ಟು ದೊಡ್ಡದಾದ, ಹ್ಯಾಕಿಂಗ್ ಜಾಲದಲ್ಲಿ ವಿದೇಶದ ಖಾತೆಗಳಿಂದಲೂ ಹಣ ಎಗರಿಸಿದ ಘೋರ ಅಪರಾಧದ ಪಾತಕ ಲೋಕ ಇದು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆದಿಯಾಗಿ ಬಿಜೆಪಿಯ ವರಿಷ್ಠರು ಈ ಬಿಟ್‌ಕಾಯಿನ್ ಪ್ರಕರಣ ಗಂಭೀರ ವಿಷಯವಲ್ಲ ಎಂದು ಸಮರ್ಥನೆ ಕೊಡುತ್ತಿದ್ದಾರೆ. ಇನ್ನೊಂದೆಡೆ, 'ಈ ವಿಷಯವನ್ನು ಪ್ರಧಾನಿಯವರಲ್ಲಿ ನಾನೇ ಪ್ರಸ್ತಾಪ ಮಾಡಿದ್ದೆ' ಎಂದು ಮುಖ್ಯಮಂತ್ರಿ ಹೇಳಿಕೊಂಡಿದ್ದಾರೆ. ಈ ವಿಷಯವನ್ನು ಸೋರಿಕೆ ಮಾಡದಂತೆ ನೋಡಿಕೊಳ್ಳಲು ಕೇಂದ್ರದ ಗೃಹ ಸಚಿವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಸೂಚಿಸಿದ್ದಾರೆ. ರಾಜ್ಯ ಸರ್ಕಾರದ ಸಚಿವರು ಹಾಗೂ ಬಿಜೆಪಿಯ ನಾಯಕರು ಪತ್ರಿಕಾಗೋಷ್ಠಿ ನಡೆಸಿ ವಿಷಯಾಂತರ ಮಾಡಿ ಜನರ ಗಮನ ಬೇರೆಡೆ ಸೆಳೆಯುವ ಕೆಲಸ ಮಾಡುತ್ತಿದ್ದಾರೆ. ಇವೆಲ್ಲ ವಿದ್ಯಮಾನ ಗಮನಿಸಿದರೆ ಒಟ್ಟಾರೆ ಈ ಪ್ರಕರಣವನ್ನು ಮುಚ್ಚಿಹಾಕಲು ಸರ್ಕಾರ ಪ್ರಯತ್ನಿಸುತ್ತಿರುವಂತೆ ಕಾಣಿಸುತ್ತಿದೆ.

ಬಿಟ್‌ಕಾಯಿನ್ ಪ್ರಕರಣ ಮೊದಲ ಬಾರಿಗೆ ಬೆಳಕಿಗೆ ಬಂದಿದ್ದು, 2020ರ ನವೆಂಬರ್ ತಿಂಗಳಲ್ಲಿ. ಪೊಲೀಸರ ಪ್ರಕಾರ, ಬಿಟ್‌ಕಾಯಿನ್ ಪಾವತಿಸಿ ವಿದೇಶದಿಂದ ಡ್ರಗ್ಸ್ ಆಮದು ಮಾಡಿಕೊಳ್ಳುವ ಪ್ರಕರಣದಲ್ಲಿ (ಕ್ರೈಂ ನಂಬರ್ 91/2020) ಬಂಧಿತನಾದ ಶ್ರೀಕೃಷ್ಣ ಇಡೀ ಹಗರಣದ ಕೇಂದ್ರ. ಜೀವನದಲ್ಲಿ ಮಾಡಿದ್ದ ಎಲ್ಲ ಹ್ಯಾಕಿಂಗ್ ವಿವರಗಳನ್ನು ಪೊಲೀಸರ ಮುಂದೆ ತನಿಖೆ ವೇಳೆ ಆತ ಒಪ್ಪಿಕೊಳ್ಳುತ್ತಾನೆ. ಅವನ ಹೇಳಿಕೆಗಳನ್ನೇ ಆಧಾರವಾಗಿಸಿ ಸ್ವತಃ ಪೊಲೀಸರೇ ಅವನ ವಿರುದ್ಧ ಮೇಲಿಂದ ಮೇಲೆ ದೂರನ್ನು ದಾಖಲಿಸುತ್ತಾ 4 ತಿಂಗಳು ಕಸ್ಟಡಿಯಲ್ಲಿಯೇ ವಿಚಾರಣೆಯನ್ನೂ ನಡೆಸುತ್ತಾರೆ.

ತನಿಖೆಯು ನ್ಯಾಯರೂಪದಲ್ಲಿ ನಡೆದಿದ್ದರೆ ಸತ್ಯಾಸತ್ಯತೆಯನ್ನು ತೆರೆದಿಡಬೇಕಾಗಿತ್ತು. ಆದರೆ, ಒಂದು ಕಾಲದಲ್ಲಿ ದೇಶದ ಹೆಮ್ಮೆ ಎನಿಸಿದ್ದ ರಾಜ್ಯದ ಪೊಲೀಸರು, ಈ ಪ್ರಕರಣದಲ್ಲಿ ಅನುಮಾನದ ಹುತ್ತ ಕಟ್ಟುವ ರೀತಿಯಲ್ಲಿ ಸತ್ಯವನ್ನೇ ಮರೆಮಾಚಲು ತನಿಖೆ ಹೆಸರಿನಲ್ಲಿ ಅಕ್ರಮಗಳನ್ನು ನಡೆಸುತ್ತಾ ಹೋಗಿರುವುದು ಒಂದು ರೀತಿಯ 'ಪವಾಡ'.

ಶ್ರೀಕೃಷ್ಣನ ಸ್ವಯಂಹೇಳಿಕೆಯನ್ನೇ ಆಧಾರವಾಗಿಸಿಕೊಂಡು ಪೊಲೀಸರೇ ದಾಖಲಿಸಿಕೊಂಡ ಕ್ರೈಂ ನಂಬರ್ 45/2020 ವಿಚಾರಣೆ ವೇಳೆ, ₹9 ಕೋಟಿ ಮೌಲ್ಯದ 31 ಬಿಟ್‌ಕಾಯಿನ್‌ಗಳನ್ನು ವಶಪಡಿಸಿಕೊಂಡಿದ್ದೇವೆ ಎಂದು (31 ಬಿಟ್ ಕಾಯಿನ್‌ಗಳ ಇಂದಿನ ಮೌಲ್ಯ ₹13.45 ಕೋಟಿ) ಬೆಂಗಳೂರು ಪೊಲೀಸರು ಇದೇ ವರ್ಷದ ಜನವರಿ 12ರಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಆದರೆ, ನ್ಯಾಯಾಲಯಕ್ಕೆ ಸಲ್ಲಿಸಿದ ದೋಷಾರೋಪಪಟ್ಟಿಯಲ್ಲಿ, ಯಾವುದೇ ಬಿಟ್‌ಕಾಯಿನ್ ವಶಪಡಿಸಿಕೊಂಡಿಲ್ಲ ಎನ್ನಲಾಗಿದೆ. ಹಾಗಿದ್ದಲ್ಲಿ, ಬಿಟ್‌ಕಾಯಿನ್ ವಶಪಡಿಸಿಕೊಂಡಿದ್ದೇವೆ ಎಂದು ಮಾಧ್ಯಮಗಳ ಮುಂದೆ ಬಂದು ಸುಳ್ಳು ಹೇಳಿದ್ದೇಕೆ?

ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಅನ್ನು ಕೂಡ ಹ್ಯಾಕ್ ಮಾಡಿರುವುದಾಗಿ ಶ್ರೀಕೃಷ್ಣ ಒಪ್ಪಿಕೊಂಡಿದ್ದಾನೆ. ಎರಡು ಬಾರಿ ವೆಬ್‌ಸೈಟ್ ಹ್ಯಾಕ್ ಮಾಡಿ, ಒಮ್ಮೆ ₹18 ಕೋಟಿ ಹಾಗೂ ಇನ್ನೊಮ್ಮೆ ₹28 ಕೋಟಿಯನ್ನು ತನ್ನ ಸ್ನೇಹಿತನ ಖಾತೆಗಳಿಗೆ ವರ್ಗಾವಣೆ ಮಾಡಿರುವುದಾಗಿ ತಿಳಿಸಿದ್ದಾನೆ. ₹28 ಕೋಟಿ ವರ್ಗಾವಣೆಗೆ ಬ್ಯಾಂಕ್‌ನ ಕಡೆಯಿಂದ 'ಬ್ರೇಕ್' ಹಾಕಲಾಗಿತ್ತಾದರೂ, ₹18 ಕೋಟಿ ವರ್ಗಾವಣೆಯನ್ನು ತಡೆಯಲು ಸರ್ಕಾರಕ್ಕೆ ಆಗಿಲ್ಲ. ಈ ಕುರಿತು ಕ್ರೈಂ ನಂ 9/2019 ರಲ್ಲಿಯೇ ಪ್ರಕರಣ ದಾಖಲಾಗಿದೆ. ಆದರೆ, ಆರೋಪಿಯೇ 100ಕ್ಕೂ ಹೆಚ್ಚು ದಿನ ಪೊಲೀಸ್ ಕಸ್ಟಡಿಯಲ್ಲಿದ್ದರೂ ₹18 ಕೋಟಿಯನ್ನು ಈವರೆಗೂ ವಸೂಲಾತಿ ಮಾಡಿಲ್ಲವೇಕೆ? ಇದು ಯಾರ ಪಾಲಾಗಿದೆ? ಈ ಬಗ್ಗೆ ತನಿಖೆಯೇ ನಡೆದಿಲ್ಲವೇಕೆ?

ಈ ಕ್ರೈಂ ನಂಬರ್ 45/2020ರ ವಿಚಾರಣೆ ವೇಳೆ ಪೊಲೀಸರು ಒಟ್ಟು 3 ಪಂಚನಾಮೆಗಳನ್ನು ಮಾಡಿದ್ದಾರೆ. 8ನೇ ಜನವರಿಯಲ್ಲಿ ನಡೆಯುವ ಮೊದಲ ಪಂಚನಾಮೆಯಲ್ಲಿ ಶ್ರೀಕೃಷ್ಣನ ಬಿಟ್‌ಕಾಯಿನ್ ವ್ಯಾಲೆಟ್‌ನ ಪಾಸ್‌ವರ್ಡ್ ಬದಲಿಸಿ 31 ಬಿಟ್‌ಕಾಯಿನ್ ವಶ ಪಡಿಸಿಕೊಂಡಿರುವುದಾಗಿ ತಿಳಿಸಿದ್ದಾರೆ. ಜನವರಿ 18ರಂದು ನಡೆಯುವ ಎರಡನೇ ಪಂಚನಾಮೆಯಲ್ಲಿ ರಾಬಿನ್‌ನಿಂದ (ಆರೋಪಿ ನಂ 2) 0.08 ಬಿಟ್‌ಕಾಯಿನ್ ವಶಪಡಿಸಿಕೊಂಡು ಯುನೋ ಕಾಯಿನ್ ಎಂಬ ಸಂಸ್ಥೆಯಲ್ಲಿ ಪೊಲೀಸ್ ವ್ಯಾಲೆಟ್ ತೆರೆದು ಅಲ್ಲಿಗೆ ವರ್ಗಾವಣೆ ಮಾಡಿಕೊಂಡು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಜನವರಿ 22ರಂದು ನಡೆಯುವ ಮೂರನೇ ಪಂಚನಾಮೆಯಲ್ಲಿ ಶ್ರೀಕೃಷ್ಣನಿಂದ ವಶಪಡಿಸಿಕೊಂಡಿದ್ದ 31 ಬಿಟ್‌ಕಾಯಿನ್‌ಗಳನ್ನೂ ಪೊಲೀಸ್ ವ್ಯಾಲೆಟ್‌ಗೆ ವರ್ಗಾವಣೆ ಮಾಡಲು ಹೋದಾಗ, ಅಲ್ಲಿ 31 ಬಿಟ್‌ಕಾಯಿನ್ ಬದಲಾಗಿ 186.8 ಬಿಟ್‌ಕಾಯಿನ್‌ಗಳು ಸಿಕ್ಕಿವೆ. ಆದರೆ, 'ಪ್ರೈವೇಟ್ ಕೀ' ಇಲ್ಲದೆ ಅವುಗಳ ವರ್ಗಾವಣೆ ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ. ಈ ಎರಡು ಪಂಚನಾಮೆಗಳಲ್ಲಿ ಪೊಲೀಸರು ಸೈಬರ್ ಪರಿಣಿತರು ಎಂದು ಕರೆಸುವುದು ಯುನೋ ಕಾಯಿನ್ ಕಂಪನಿಯ ಇಬ್ಬರು ನಿರ್ದೇಶಕರನ್ನು ಎಂಬುದು ಸಂದೇಹಗಳಿಗೆ ಕಾರಣವಾಗುವ ಅಂಶ.

ಕ್ರೈಂ ನಂ 153/2020ರ ಎಫ್‌ಐಆರ್‌ನಲ್ಲಿ ಯುನೋ ಕಾಯಿನ್ ವೆಬ್‌ಸೈಟ್ ಅನ್ನು ಶ್ರೀ ಕೃಷ್ಣ ಹ್ಯಾಕ್ ಮಾಡಿರುವ ಉಲ್ಲೇಖವಿದೆ. ಹೀಗಿರುವಾಗ, ಯಾವ ಸಂಸ್ಥೆಯ ವೆಬ್‌ಸೈಟ್ ಅನ್ನು ಆರೋಪಿ ಈಗಾಗಲೇ ಹ್ಯಾಕ್ ಮಾಡಿದ್ದನೋ, ಅದೇ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪೊಲೀಸರು ವ್ಯಾಲೆಟ್ ತೆರೆದಿದ್ದೇಕೆ? ಈಗಾಗಲೇ ಹ್ಯಾಕ್‌ಗೆ ಒಳಗಾದ ಸಂಸ್ಥೆಯ ಮೇಲೆ ಪೊಲೀಸರಿಗೆ ಇರುವ ಭರವಸೆಯಾದರೂ ಏನು? ಈ ಸಂಸ್ಥೆಯವರನ್ನೇ ಕರೆಸಿ ಪ್ರಕರಣ ಮುಚ್ಚಲು ಬೇಕಾದಂತೆ ಪಂಚನಾಮೆ ಮಾಡಿಸಿರುವುದನ್ನು ಗಮನಿಸಿದರೆ ಪೊಲೀಸರಿಗೆ ಒತ್ತಡ ಇತ್ತೇ ಎಂಬ ಸಂಶಯ ಮೂಡುತ್ತದೆ.

ಹಗರಣ ಎಲ್ಲಿದೆ? : ಈ ಹಗರಣಕ್ಕೆ ಪುಷ್ಟಿ ನೀಡುವ ಒಂದು ಕುತೂಹಲಕಾರಿ ಸಂಗತಿ ಇದೆ. 'ವೇಲ್ ಅಲರ್ಟ್ಸ್'; ಇದು ಜಗತ್ತಿನ ಬಿಟ್‌ಕಾಯಿನ್ ವಹಿವಾಟಿನ ಕುರಿತು ವರದಿ ಮಾಡುವ ಸಂಸ್ಥೆ. 2016ರಲ್ಲಿ ಹ್ಯಾಕ್ ಆಗಿದ್ದ ಬಿಟ್‌ಫಿನೆಕ್ಸ್ ಕಂಪನಿಯ ಒಟ್ಟು 15,000 ಬಿಟ್‌ಕಾಯಿನ್‌ಗಳು ಈ ಐದು (2021ರವರೆಗಿನ) ವರ್ಷಗಳಲ್ಲಿ ಮೊದಲ ಬಾರಿಗೆ 2020ರ ಡಿಸೆಂಬರ್1 ಹಾಗೂ 2021ರ ಏಪ್ರಿಲ್ 1 ರಂದು ದಿನಾಂಕಗಳಂದು ವರ್ಗಾವಣೆಯಾಗಿದೆ ಎಂದು ವರದಿ ಮಾಡಿದೆ.

'ಬಿಟ್‌ಫಿನೆಕ್ಸ್' ಕಂಪನಿಯ ಸರ್ವರ್ ಅನ್ನು ಎರಡು ಬಾರಿ ಹ್ಯಾಕ್ ಮಾಡಿರುವುದಾಗಿ ಶ್ರೀಕೃಷ್ಣ ನವೆಂಬರ್‌ನಲ್ಲಿ ಪೊಲೀಸರ ಎದುರು ಒಪ್ಪಿಕೊಂಡಿದ್ದಾನೆ. ನಂತರ ವೇಲ್ ಅಲರ್ಟ್ಸ್ ಸಂಸ್ಥೆಯ ವರದಿಯಂತೆ ಹ್ಯಾಕ್ ಆದ ಈ ಕಂಪನಿಯ ಬಿಟ್‌ಕಾಯಿನ್ ವರ್ಗಾವಣೆಯಾದ ಎರಡು ದಿನಗಳಂದು ಶ್ರೀಕೃಷ್ಣ ಪೊಲೀಸ್ ಕಸ್ಟಡಿಯಲ್ಲಿದ್ದ. ಕಸ್ಟಡಿಯಲ್ಲಿರುವ ಅವಧಿ ಹಾಗೂ ಬೃಹತ್ ಪ್ರಮಾಣದ ಬಿಟ್‌ಕಾಯಿನ್ ವರ್ಗಾವಣೆಯನ್ನು ತಾಳೆ ಹಾಕಿದರೆ, ಸಾವಿರಾರು ಕೋಟಿ ಹಗರಣ ಮತ್ತು ಅದರ ಜತೆಗೆ ಬಿಜೆಪಿ ನಾಯಕರಿಗೆ ಇರಬಹುದಾದ ನಂಟಿನ ಸಂಶಯ ಮತ್ತಷ್ಟು ದಟ್ಟವಾಗುತ್ತದೆ.

ಬೆಕ್ಕು ತಾನು ಕಣ್ಮುಚ್ಚಿಕೊಂಡು ಹಾಲು ಕುಡಿದರೆ ಜಗತ್ತಿಗೆ ಗೊತ್ತಾಗುವುದಿಲ್ಲ ಎಂಬ ಭಾವನೆಯಲ್ಲಿ ಈ ಸರ್ಕಾರದ ಪ್ರಮುಖ ಭಾಗವಾಗಿರುವ ಅನೇಕ ಮಂದಿ ಹತ್ತಾರು ಸಾವಿರ ಕೋಟಿ ರೂಪಾಯಿ ಮೌಲ್ಯದ ಬಿಟ್ ಕಾಯಿನ್‌ಗಳನ್ನು ಲಪಟಾಯಿಸಿ ಈಗ ನಿದ್ದೆಗೆಟ್ಟಿರುವುದಂತೂ ಅಕ್ಷರಶಃ ಸತ್ಯ.

ಪ್ರಿಯಾಂಕ್ ಖರ್ಗೆ, ಕೆಪಿಸಿಸಿ ಐಟಿ ವಿಭಾಗ ಮುಖ್ಯಸ್ಥ, ಶಾಸಕ

ಬದುಕು ಒಂದು ತಪಸ್ಸು

ಯಶಸ್ವಿ ಜೀವನದ ಹಿಂದೆ ಒಂದು ಶ್ರದ್ಧೆ ಇರುತ್ತೆ. ಶ್ರದ್ಧೆ ಹಿಂದೆ ಒಂದು ಪರಿಶ್ರಮ ಇರುತ್ತೆ. ಶ್ರದ್ಧೆ ಮತ್ತು ಪರಿಶ್ರಮ ಇಲ್ಲದೆ ಯಾವ ಕೆಲಸವೂ ಯಶಸ್ವಿಯಾಗಿ ಪೂರ್ಣಗೊಳಿಸಲು ಸಾಧ್ಯವಿಲ್ಲ. ಪರಿಶ್ರಮದಿಂದ ನಿಗದಿತ ಗುರಿಯತ್ತ ಪರಿಕ್ರಮಿಸುವುದು ಅಷ್ಟೊಂದು ಸುಲಭವಲ್ಲ. ಶ್ರದ್ಧೆ ಎಂದರೆ ತಪಸ್ಸಿನಂತೆ. ಶ್ರದ್ಧೆ ಮತ್ತು ತಪಸ್ಸು ಭಿನ್ನವಲ್ಲ. ಎರಡೂ ಮನಸ್ಸನ್ನು ಚಂಚಲ-ಕ್ಕೆಡೆಕೊಡದೆ, ಏಕಾಗ್ರಚಿತ್ತದಿಂದ ಕಾರ್ಯ ಸಾಧಿಸುವ ಗುರಿ ಹೊಂದಿರುತ್ತದೆ. ಋಷಿಮುನಿಗಳು ಕಾಡುಮೇಡುಗಳಲ್ಲಿ ಕಾರ್ಯಸಿದ್ಧಿಗಾಗಿ ತಪಸ್ಸನ್ನಾಚರಿಸಿದರೆ, ಸಾಮಾನ್ಯ ಜನ ನಾಡಿನಲ್ಲಿ ಶ್ರದ್ಧಾ-ಭಕ್ತಿಯಿಂದ ಬದುಕಿನ ಸಿದ್ಧಿಗಾಗಿ ಕಾರ್ಯ-ಮಗ್ನರಾಗಿರುತ್ತಾರೆ. ಒಬ್ಬ ಯಶಸ್ವಿ ತಪಸ್ವಿಗೆ ಇರುವ ಶುದ್ಧ ಮನಃಸ್ಥಿತಿಯೇ ಸಾಮಾನ್ಯ ಜನರಿಗೂ ಬೇಕು. ಬದುಕನ್ನು ತಪಸ್ಸಿನಂತೆ ನಿರ್ವಹಿಸಿದರೆ ಮಾತ್ರ ನಮ್ಮ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯ.

ಸಾವಿರಾರು ವರ್ಷಗಳಿಂದ ಸಾವಿರಾರು ಕೋಟಿ ಜನ ಈ ಭೂಮಿಗೆ ಬಂದು ಹೋಗಿದ್ದಾರೆ. ಬಂದವರೆಲ್ಲಾ ಯಶಸ್ವಿ ಜೀವನ ನಡೆಸಿಲ್ಲ. ಕೆಲವೇ ಜನ ತಾವು ಅಂದುಕೊಂಡಿದ್ದನ್ನು ಸಾಧಿಸಿದ್ದಾರೆ. ಶೇ.99ರಷ್ಟು ಜನ ಯೋಜಿತ ರೀತಿಯಲ್ಲಿ ಜೀವನಪಥದಲ್ಲಿ ಸಾಗಲಾರದೆ ಮುಗ್ಗರಿಸಿದ್ದಾರೆ. ಇದಕ್ಕೆ ಕಾರಣ ಬದುಕನ್ನ ತಪಸ್ಸಿನಂತೆ ಸ್ವೀಕರಿಸದೆ, ಸ್ವೇಚ್ಛೆಯಾಗಿ ಬಳಸಿದ್ದು. ಭೂಮಿ ಮೇಲೆ ಯಾವುದೂ ಸುಲಭದಲ್ಲಿ ಸಿಗುವುದಿಲ್ಲ. ಕಷ್ಟಪಟ್ಟು ಬೆನ್ನತ್ತಿ ಹೋದರಷ್ಟೇ ಸಿಗುತ್ತದೆ. ಕ್ರೂರಪ್ರಾಣಿ ಸಹ ತನ್ನ ಆಹಾರಕ್ಕಾಗಿ ಸಾಧುಪ್ರಾಣಿಯ ಬೆನ್ನ ಬೀಳುತ್ತದೆ. ಆಹಾರಕ್ಕಾಗಿ ಬಡಪ್ರಾಣಿಗಳ ಅರಸುವ ಪ್ರಾಣಿಗಳು ತಾವೇ ಮತ್ತೊಂದು ದೊಡ್ಡ ಪ್ರಾಣಿಗೆ ಬಲಿಯಾಗುವ ಆತಂಕವೂ ಇರುತ್ತೆ. ಹಾಗಂತ, ಯಾವ ಪ್ರಾಣಿಯೂ ಹೆದರಿ ಆಹಾರ ಅರಸದೆ ಸುಮ್ಮನಿರುವುದಿಲ್ಲ. ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಾ ತನ್ನ ಆಹಾರ ಮತ್ತು ಬದುಕನ್ನ ರಕ್ಷಿಸಿಕೊಳ್ಳುತ್ತದೆ.

ಮನುಷ್ಯ ಬುದ್ಧಿ ಇರುವ ಪ್ರಾಣಿ. ತಾನಿದ್ದೆಡೆಗೆ ಎಲ್ಲವನ್ನೂ ತಂದುಕೊಳ್ಳುವ ಜ್ಞಾನವಿದೆ. ಹೀಗಾಗಿ ತನ್ನವರನ್ನೇ ಆಳುಗಳಾಗಿ ಮಾಡಿಕೊಂಡು ಬದುಕು ಕಟ್ಟಿಕೊಂಡಿದ್ದಾನೆ. ಕಾಲಮಾನ ಬದಲಾದಂತೆ ಕೆಲಸ ಬೇರೆಯಾಗಿರಬಹುದು. ಆದರೆ ದುಡಿಯುವ ಊಳಿಗಮಾನದ ಅರ್ಥ ಒಂದೇ. ಅದು ಅಧಿಕಾರಿಯೇ ಆಗಿರಲಿ, ಕೂಲಿ ಕಾರ್ಮಿಕನೇ ಆಗಿರಲಿ, ಅವರೆಲ್ಲಾ ತನ್ನ ಮೇಲಿನವರ ಆದೇಶದಂತೆ ದುಡಿಮೆ ಮಾಡುತ್ತಿರುತ್ತಾರೆ. ಇಂಥ ಕಾಯಕಸಮಾಜ ನಮ್ಮ ಅಭಿವೃದ್ಧಿಯ ಅಡಿಪಾಯ. ಇಂಥ ಕಾಯಕ ಒಕ್ಕೂಟವಿಲ್ಲದಿದ್ದರೆ, ಮಾನವಸಮಾಜ ಉದ್ಧಾರವಾಗುವುದಿಲ್ಲ. ಆದರೆ ವೃತ್ತಿಪರ ಬದುಕಿನಲ್ಲಿ ಮೇಲು-ಕೀಳೆಂಬ ಭೇದಭಾವ ಇರಬಾರದಷ್ಟೆ. ಭಾರತೀಯರು ವಿಶ್ವದಲ್ಲೆ ಅತ್ಯಂತ ಉಚ್ಛ್ರಾಯ ನಾಗರಿಕ ಸಮಾಜವನ್ನು ಹೊಂದಿತ್ತು. ಆದರೆ ಕಾಯಕಸ-ಮಾಜದಲ್ಲಿ ಕಂಡ ತಾರತಮ್ಯ ಅದರ ಮೂಲ ಉದ್ದೇಶವನ್ನೇ ಹಾಳು ಗೆಡವಿತು. ಇಲ್ಲಿ ಬದುಕಿನೆಡೆಗಿನ ಶ್ರದ್ಧೆ-ಪ್ರೀತಿಗಿಂತ ಇನ್ನೊಬ್ಬರ ಶೋಷಿಸುವ ಕುಯುಕ್ತಿಯು ಒಳ್ಳೆ ಅಂಶಗಳನ್ನು ನಾಶ ಮಾಡಿತು.

ಮಾನವರೆಲ್ಲಾ ಬದುಕನ್ನು ತಪಸ್ಸಿನಂತೆ ಪರಿಶುದ್ಧ ಮನಸ್ಸಿನಿಂದ ನಿರ್ವಹಿಸದೆ ತಪ್ಪು ಮಾಡಿದರು. ಇದರಿಂದ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ತೊಡಕಾಯಿತು. ಮಾನವರೊಳಗೆ ಹುಟ್ಟುವ ಲೋಭ-ಮೋಹಗಳು ಆಕಸ್ಮಿಕವಾಗಿ ಬರುವಂಥವಲ್ಲ. ಇವು ನಮ್ಮೊಳಗೆ ಜಾಗೃತವಾಗಿದ್ದು ಭುಗಿಲೇಳುವ ಪ್ರಳಯಮುಖಿಗಳು. ಇವುಗಳನ್ನು ನಿಗ್ರಹಿಸಿ ಪ್ರಾಂಜಲ ಮನಸ್ಸಿನಿಂದ ದುಡಿಯಬೇಕು. ಇದಕ್ಕಾಗಿ ನಮ್ಮನ್ನು ಕಾಡುವ ಕಾಮ-ಕ್ರೋಧ–ಮದ-ಮಾತ್ಸರ್ಯಗಳಂಥ ಅರಿಷಡ್ವರ್ಗಗಳನ್ನು ಋಷಿಗಳಂತೆ ನಿಗ್ರಹಿಸಬೇಕು. ಒಳ್ಳೆಯದ್ಯಾವುದು, ಕೆಟ್ಟದ್ಯಾವುದು ಅನ್ನೋ ವಿವೇಚಿಸುವ ಜ್ಞಾನ ಬೆಳೆಸಿಕೊಳ್ಳಬೇಕು. ಈ ಜಗತ್ತು ಮೋಸದ ಪರಿಧಿ. ಇದರಲ್ಲಿ ಸೋಗಿನ ಪರದೆ ತೂಗು ಹಾಕಲಾಗಿದೆ. ಈ ಮಾಯಾಜಾಲವನ್ನು ಅರಿಯದೆ ಎಡವಿಬಿದ್ದರೆ ಜೀವನದಲ್ಲಿ ಮತ್ತೇ ಮೇಳೇಳುವುದು ಕಷ್ಟ. ಆದ್ದರಿಂದ ಎಲ್ಲರೂ ಸಜ್ಜನರ ಸಹವಾಸ ಮಾಡಿ 'ಸಚ್ಚಿದಾನಂದ'ದ ಶ್ರದ್ಧಾಬದುಕನ್ನು ರೂಪಿಸಿಕೊ-ಳ್ಳಬೇಕು.

ವಂಚನೆ ಪ್ರಕರಣವೋ? ಸನ್ನಿವೇಶ ದುರ್ಬಳಕೆಯ ರಾಜಕೀಯವೋ?

ಯಾರನ್ನೂ ರಕ್ಷಣೆ ಮಾಡದೆ,ತಪ್ಪಿತಸ್ಥರನ್ನು ಶಿಕ್ಷಿಸಲು ಸರ್ಕಾರ ಕ್ರಮ ವಹಿಸಲಿದೆ. ಹಗರಣದ ವ್ಯಾಪ್ತಿಯನ್ನೂ ಪರಿಗಣಿಸಿ, ಎಲ್ಲ ಸ್ತರಗಳಲ್ಲಿ ತನಿಖೆಯೂ ನಡೆಯುತ್ತಿದೆ. ಇದರಲ್ಲಿ ಯಾರೇ ಶಾಮೀಲಾಗಿದ್ದರೂ, ಎಷ್ಟೇ ಪ್ರಭಾವಿಗಳಿರಲಿ ಕ್ರಮ ನಿಶ್ಚಿತ ಎಂದು ಮುಖ್ಯಮಂತ್ರಿಗಳೇ ಹೇಳಿದ್ದಾರೆ.

• ಡಾ.ಕೆ.ಸುಧಾಕರ್

ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚನೆಯಾದಾಗಿನಿಂದಲೂ, ಜನರನ್ನು ದಾರಿ ತಪ್ಪಿಸಲು ಉದ್ದೇಶಪೂರ್ವಕವಾಗಿ ಒಂದಲ್ಲ ಒಂದು ವಿವಾದ ಸೃಷ್ಟಿಸಲಾಗುತ್ತಿದೆ. ಮಾದಕ ವಸ್ತುಗಳಿಂದ ಆರಂಭವಾದ ಪ್ರಕರಣವನ್ನು ಈಗ ಬಿಟ್‌ಕಾಯಿನ್ ಕಳವು ಎಂಬ ಅಂತರ್ಜಾಲ ಅಪರಾಧದ ಬಳಿಗೆ ತಂದು ನಿಲ್ಲಿಸಲು ಕಾಂಗ್ರೆಸ್ ಹರಸಾಹಸ ಪಡುತ್ತಿದೆ. ತಾವು ಇರುವುದೇ, ಬೇಜಾವಾಬ್ದಾರಿಯಿಂದ ವರ್ತಿಸಲು, ಮನಬಂದಂತೆ ಆರೋಪ ಮಾಡಲು ಎಂಬಂತೆ ವರ್ತಿಸುತ್ತಿರುವ ವಿರೋಧ ಪಕ್ಷಗಳು, ಈಗ ಬಿಟ್‌ಕಾಯಿನ್ ವಿಚಾರ ಎಳೆದು ತಂದು ವಿನಾಕಾರಣ ವಿವಾದ ಸೃಷ್ಟಿಸಿವೆ. ಆದರೆ ಯಾವೊಬ್ಬ ಕಾಂಗ್ರೆಸ್ ನಾಯಕರೂ ದಾಖಲೆಗಳನ್ನು ಮುಂದಿಟ್ಟಿಲ್ಲ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ಯಶಸ್ವಿ 100 ದಿನ ಪೂರೈಸಿದ ಬಳಿಕ, ಇದನ್ನು ದೊಡ್ಡ ವಿವಾದವಾಗಿಸಿ ಸರ್ಕಾರ ಉರುಳಿಸಬಹುದು ಎಂಬ ಭ್ರಮೆಯಲ್ಲಿ ಪ್ರತಿಪಕ್ಷಗಳು ಇವೆ.

ಪ್ರಕರಣದ ಆರೋಪಿ ಶ್ರೀಕೃಷ್ಣನನ್ನು ಡ್ರಗ್ಸ್‌ಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ 2020ರ ನವೆಂಬರ್‌ನಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದರು. ವಿಚಾರಣೆ ವೇಳೆ ಕ್ರಿಪ್ಟೊಕರೆನ್ಸಿ ವೆಬ್‌ಸೈಟ್ ಹ್ಯಾಕ್ ಮಾಡಿರುವ ಬಗ್ಗೆ ಶ್ರೀಕಿ ಬಾಯಿಬಿಟ್ಟಿದ್ದ. ಇದಕ್ಕಾಗಿಯೇ ಪ್ರಕರಣವನ್ನು ಸಿಸಿಬಿಗೆ ವರ್ಗಾಯಿಸಲಾಗಿತ್ತು.

ಬಿಟ್‌ಕಾಯಿನ್ ಎಂಬುದು ಅಂತರ್ಜಾಲದಲ್ಲಿ ಮಾತ್ರ ಇರುವ ಒಂದು ಕ್ರಿಪ್ಟೊಕರೆನ್ಸಿ. ಇದು ನಮ್ಮ ರೂಪಾಯಿಯಂತೆ ಭೌತಿಕವಾಗಿ ಇರುವುದಿಲ್ಲ. ಇಂತಹ ಕಾಯಿನ್ ವಿಷಯದಲ್ಲಿ ಹಗರಣ ನಡೆಸಲಾಗಿದೆ ಎಂಬಂತೆ ಕಾಂಗ್ರೆಸ್ ಬಿಂಬಿಸುತ್ತಿದೆ. ಹಗರಣವೇ ನಡೆಯದಿರುವುದರಿಂದ ಕಾಂಗ್ರೆಸ್ ಬಳಿ ದಾಖಲೆಗಳೇ ಇಲ್ಲ. ರಫೇಲ್ ವಿಚಾರಗಳಲ್ಲಿ ಆರೋಪ ಮಾಡಿ ಮುಖಭಂಗ ಅನುಭವಿಸಿದ ಕಾಂಗ್ರೆಸ್ ಈಗಲೂ ಠುಸ್ ಪಟಾಕಿ ಎನಿಸುವ ಆರೋಪಗಳನ್ನು ಮಾಡುತ್ತಿದೆ.

ಸ್ವಂತ ಖಾತೆಯೇ ಇಲ್ಲ!: ಪ್ರಕರಣದ ತನಿಖೆಗಾಗಿ ಬಿಟ್‌ಕಾಯಿನ್ ಖಾತೆ ತೆರೆಯಲಾಯಿತು. ತನಿಖಾಧಿಕಾರಿಗಳು ಶ್ರೀಕಿಯ 31.8 ಕಾಯಿನ್‌ಗಳಿದ್ದ ಬಿಟ್‌ಕಾಯಿನ್ ವ್ಯಾಲೆಟ್‌ನ (ಒಂದು ಬಗೆಯ ಖಾತೆ) ಪಾಸ್‌ವರ್ಡ್ ಬದಲಿಸಿ, ನ್ಯಾಯಾಲಯಕ್ಕೆ ಮಾಹಿತಿ ಸಲ್ಲಿಸಿದ್ದರು. ಇಲ್ಲಿ ಪೊಲೀಸರು ಅಥವಾ ಸರ್ಕಾರ ಹಗರಣ ಮಾಡಲು ಉದ್ದೇಶಿಸಿದ್ದರೆ ಹಾಗೂ ಕಾಯಿನ್‌ಗಳನ್ನು ಪಡೆದು ಹಣ ಸಂಪಾದನೆ ಮಾಡಬೇಕೆಂದಿದ್ದರೆ ಆ ಹಂತದಲ್ಲಿ ನಿಯಮ ಪ್ರಕಾರ ನ್ಯಾಯಾಲಯಕ್ಕೆ ಮಾಹಿತಿ ಸಲ್ಲಿಸುವ ಅಗತ್ಯವೇನಿತ್ತು?

ಇದಾದ ಬಳಿಕ ಮತ್ತೆ ನ್ಯಾಯಾಲಯದಿಂದ ಅನುಮತಿ ಪಡೆದು ವ್ಯಾಲೆಟ್ ತೆರೆದಾಗ ಅಲ್ಲಿ 186.81 ಕಾಯಿನ್‌ಗಳು ಪತ್ತೆಯಾಗಿದ್ದವು. ನಂತರ ಇದು ಲೈವ್ ವ್ಯಾಲೆಟ್ ಎಂದು ತಿಳಿದುಬಂತು. ಅಂದರೆ ಆರೋಪಿ ಶ್ರೀಕಿ ಯಾವುದೇ ಸ್ವಂತ ಖಾತೆ ಹೊಂದಿರದೆ ತನ್ನದೇ ಖಾತೆ ಎಂಬಂತೆ ಕಥೆ ಕಟ್ಟಿದ್ದ. ಇದು ಕ್ರಿಪ್ಟೊಕರೆನ್ಸಿ ಎಕ್ಸ್‌ಚೇಂಜ್ ವ್ಯವಸ್ಥೆಯ ಖಾತೆಯಾಗಿತ್ತು. ಈ ಕಾರಣಕ್ಕಾಗಿ, ಹಿಂದೆ ಕಡಿಮೆ ಕಾಯಿನ್ ತೋರಿಸಿದ್ದ ಖಾತೆಯಲ್ಲಿ ಈಗ ಹೆಚ್ಚು ಕಾಯಿನ್‌ಗಳು ಕಂಡುಬಂದಿದ್ದವು. ಹೀಗಾಗಿ, ತನಿಖಾಧಿಕಾರಿಗಳು ಯಾವುದೇ ಕಾಯಿನ್‌ಗಳನ್ನು ಮುಟ್ಟದೆ ಹಾಗೆಯೇ ಬಿಟ್ಟುಬಿಟ್ಟರು. ಈ ಎಲ್ಲ ಪ್ರಕ್ರಿಯೆಗಳನ್ನು ವೀಡಿಯೊ ಮಾಡಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ 0.08 ಬಿಟ್ ಕಾಯಿನ್‌ಗಳನ್ನು ಪೊಲೀಸ್ ವ್ಯಾಲೆಟ್‌ಗೆ ವರ್ಗಾಯಿಸಿರುವುದಾಗಿ ಪೊಲೀಸ್ ಆಯುಕ್ತರು ಸ್ಪಷ್ಟಪಡಿಸಿದ್ದಾರೆ. ಇಷ್ಟೆಲ್ಲ ಸ್ಪಷ್ಟತೆ ಇದ್ದರೂ ಕಾಯಿನ್ ವರ್ಗಾವಣೆ ನಡೆದಿದೆ ಎಂಬುದನ್ನೇ ಪ್ರತಿಪಕ್ಷಗಳ ನಾಯಕರು ಜಪಿಸುತ್ತಿದ್ದಾರೆ.

ತನಿಖೆಗೆ ಸಮಯ ಬೇಡವೇ?: ಇಂಟರ್‌ಪೋಲ್‌ಗೆ ಮಾಹಿತಿ ಏಕೆ ನೀಡಿರಲಿಲ್ಲ ಎಂಬುದು ಮತ್ತೊಂದು ಆರೋಪ. ಹ್ಯಾಕ್ ಮಾಡಿರುವುದಾಗಿ ಆರೋಪಿ ಹೇಳಿದ್ದರೂ ಅದಕ್ಕೆ ಸೂಕ್ತ ಆಧಾರ ಇರಲಿಲ್ಲ. ಸೈಬರ್ ತಜ್ಞರು ಇದನ್ನು ಪರಿಶೀಲಿಸಿ ಕೆಲ ಹೇಳಿಕೆಗಳು ಆಧಾರರಹಿತ ಎಂದು ತಿಳಿಸಿದ್ದರು. ಇದಕ್ಕೆ ಸ್ವಲ್ಪ ಸಮಯ ಹಿಡಿದಿದ್ದು ನಿಜ. ಆದರೆ ಇದು ಉದ್ದೇಶಪೂರ್ವಕ ವಿಳಂಬವಲ್ಲ. 2021ರ ಮಾರ್ಚ್-ಏಪ್ರಿಲ್‌ನಲ್ಲೇ ಸಿಬಿಐ ಇಂಟರ್‌ಪೋಲ್ ಹಾಗೂ ಜಾರಿ ನಿರ್ದೇಶನಾಲಯಕ್ಕೂ ಮಾಹಿತಿ ನೀಡಲಾಗಿದೆ. ಮಾಹಿತಿ ಬಚ್ಚಿಡುವ ದುರುದ್ದೇಶ ಇದ್ದಿದ್ದರೆ ಇಂಟರ್‌ಪೋಲ್‌ಗೆ ಪತ್ರಬರೆಯುವ ಪ್ರಮೇಯವೇ ಇರುತ್ತಿರಲಿಲ್ಲ.

ಬಿಟ್ ಕಾಯಿನ್‌ನಲ್ಲಿ ಬಿಜೆಪಿಯ ನಾಯಕರ ಕೈವಾಡ ಇದೆ ಎಂಬುದು ಮತ್ತೊಂದು ಹೊಣೆಗೇಡಿತನದ ಆಪಾದನೆ. ಕಾಂಗ್ರೆಸ್ ನಾಯಕರೇ ಹೇಳಿದಂತೆ 2016ರಿಂದಲೇ ಇಂತಹ ಅಪರಾಧಗಳು ನಡೆಯುತ್ತಿವೆ ಎಂದಾದರೆ, ಆಗ ಇದ್ದ ಕಾಂಗ್ರೆಸ್ ಸರ್ಕಾರ ಈ ಬಗ್ಗೆ ಮೌನವಾಗಿದ್ದು ಏಕೆ? ನಮ್ಮ ಸರ್ಕಾರ ಬಂದ ಮೇಲೆ, ಪ್ರಕರಣದ ತನಿಖೆ ಚುರುಕಾಗಿದ್ದು ಹಿರಿಯ ಐಪಿಎಸ್ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ನಡೆಯುತ್ತಿದೆ. ಯಾವುದೇ ಹಂತದಲ್ಲೂ ಮುಖ್ಯಮಂತ್ರಿಗಳಾಗಲಿ, ಸಚಿವರಾಗಲಿ ಹಸ್ತಕ್ಷೇಪ ಮಾಡಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿರುವಾಗಲೇ ಈ ತನಿಖೆ ನಡೆಯುತ್ತಿದೆ. ಶ್ರೀಕಿಯನ್ನು ಬಂಧಿಸಿ, ಇಷ್ಟೆಲ್ಲ ಮಾಹಿತಿ ಕಲೆ ಹಾಕಿರುವಾಗ ತನಿಖೆ ಎಷ್ಟು ವೇಗವಾಗಿ ನಡೆಯುತ್ತಿದೆ ಎಂಬುದು ಸೂರ್ಯಸ್ಪಷ್ಟ.

ವೇಲ್ ಅಲರ್ಟ್ ಎಂಬ ಖಾತೆಯಿಂದ ಬಂದ ಮಾಹಿತಿ ಆಧರಿಸಿ ತನಿಖೆ ನಡೆಸಬೇಕಿತ್ತು ಎಂಬ ವಾದವೂ ಇದೆ. ದೂರುಗಳೇ ಬಾರದೆ, ಸಾಮಾಜಿಕ ಜಾಲತಾಣದಲ್ಲಿ ಬಂದ ಮಾಹಿತಿ ಆಧರಿಸಿ ಯಾವ ಇಲಾಖೆಯೂ ತನಿಖೆ ಕೈಗೊಳ್ಳುವುದಿಲ್ಲ. 14,682 ಬಿಟ್ ಕಾಯಿನ್‌ಗಳು ವರ್ಗಾವಣೆಗೊಂಡಿವೆ ಎಂಬ ಆರೋಪ ಇದೆ. ಆದರೆ, ಬೇರೆ ದೇಶ ಅಥವಾ ಯಾವುದೇ ಸಂಸ್ಥೆಗಳು ನಮ್ಮ ಪೊಲೀಸರನ್ನು ಸಂಪರ್ಕ ಮಾಡಿಲ್ಲ.

ರಾಜಕೀಯ ಮೇಲಾಟ: ಮೂಲತಃ ಇದು ಡ್ರಗ್ಸ್‌ಗೆ ಸಂಬಂಧಿಸಿದ ಪ್ರಕರಣ. ಆದರೆ, ಇದು ಬಿಟ್‌ಕಾಯಿನ್ ವಿಚಾರ ಎಂದು ಹೇಳುತ್ತಿರುವ ಕಾಂಗ್ರೆಸ್, ತನಿಖೆಯ ಹಾದಿ ತಪ್ಪಿಸುವ ಕೆಲಸ ಮಾಡಿದೆ. ತನಿಖಾ ಹಂತದ ಕೆಲ ಸೂಕ್ಷ್ಮಗಳನ್ನು ಹಿಡಿದು ಅವುಗಳನ್ನೇ ದೊಡ್ಡದಾಗಿಸಿ, ಕೋಟ್ಯಂತರ ರೂಪಾಯಿ ಹಗರಣ ನಡೆದಿದೆ ಎನ್ನುವುದು ಬೇಜವಾಬ್ದಾರಿಯ ಪರಮಾವಧಿ.

ಕಳೆದೊಂದು ವರ್ಷದಿಂದ ರಾಜ್ಯದಲ್ಲಿ ಡ್ರಗ್ಸ್‌ಗೆ ಕಡಿವಾಣ ಹಾಕಲು ಬಿಜೆಪಿ ಸರ್ಕಾರ ಕಠಿಣ ಹೆಜ್ಜೆ ಇಟ್ಟಿದೆ. ಈವರೆಗೆ ಕೋಟ್ಯಂತರ ರೂಪಾಯಿ ಮೌಲ್ಯದ ಡ್ರಗ್ಸ್ ವಶಕ್ಕೆ ಪಡೆದು ಅನೇಕ ಆರೋಪಿಗಳನ್ನು ಬಂಧಿಸಲಾಗಿದೆ. ಹಲವಾರು ವರ್ಷಗಳಿಂದ ಈ ದಂಧೆ ನಡೆಯುತ್ತಿದ್ದರೂ, ಕಾಂಗ್ರೆಸ್ ಸರ್ಕಾರ ಕಿಂಚಿತ್ತೂ ಕ್ರಮ ಕೈಗೊಳ್ಳುವ ಆಸಕ್ತಿ ತೋರಿರಲಿಲ್ಲ. ನಮ್ಮ ಸರ್ಕಾರ ಡ್ರಗ್ಸ್ ಮಾಫಿಯಾವನ್ನು ಬೇರುಮಟ್ಟದಿಂದ ಕೀಳಲು ಶ್ರಮಿಸುತ್ತಿರುವಾಗ ಪ್ರಕರಣದ ಹಾದಿ ತಪ್ಪಿಸಲು ಮಣ್ಣಿನ ಗುಡ್ಡೆಯನ್ನೇ ಬೆಟ್ಟ ಎಂಬಂತೆ ಬಿಂಬಿಸುವ ಪ್ರಯತ್ನ ಮಾಡುತ್ತಿರುವುದು ಜನವಿರೋಧಿ ನೀತಿ.

ಯಾರನ್ನೂ ರಕ್ಷಣೆ ಮಾಡದೆ,ತಪ್ಪಿತಸ್ಥರನ್ನು ಶಿಕ್ಷಿಸಲು ಸರ್ಕಾರ ಕ್ರಮ ವಹಿಸಲಿದೆ. ಹಗರಣದ ವ್ಯಾಪ್ತಿಯನ್ನೂ ಪರಿಗಣಿಸಿ, ಎಲ್ಲ ಸ್ತರಗಳಲ್ಲಿ ತನಿಖೆಯೂ ನಡೆಯುತ್ತಿದೆ. ಇದರಲ್ಲಿ ಯಾರೇ ಶಾಮೀಲಾಗಿದ್ದರೂ, ಎಷ್ಟೇ ಪ್ರಭಾವಿಗಳಿರಲಿ ಕ್ರಮ ನಿಶ್ಚಿತ ಎಂದು ಮುಖ್ಯಮಂತ್ರಿಗಳೇ ಹೇಳಿದ್ದಾರೆ.

ಲೇಖಕ:ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ, ಕರ್ನಾಟಕ

ಪದಬಂಧ 4783

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಿಶ್ರಾಂತಿ ಕೊಡುವ ಪೀಠ (4)
3. ಸಸ್ಯಗಳಿಂದ ತೆಗೆದ ಎಣ್ಣೆ (4)
5.ಇದು ಸುಲಭ ಸಾಧ್ಯವಲ್ಲದುದು (3)
7.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ! (2)
9.ಮಂಕರಿಯನ್ನು ಹೊತ್ತವ ಬಲು ದಡ್ಡ! (2)
11. ಕಾವ್ಯಲಕ್ಷಣಗಳನ್ನೆಲ್ಲಾ ಬಲ್ಲವನೀತ (4)
12.ಯೆಂಡ್ಕುಡುಕ ರತ್ನನ ಜಗತ್ತು (4)
13.ಮುನಿದಾಗ ಮಾರಿಯಾಗುವ ಸ್ತ್ರೀ! (2)
14.ನೆನಪಾದಾಗ ಹೇಳಿರುವ ಕಾರಣ (2)
16.ಅರಸುತ್ತಿರುವಾಗ ರಾಜ ಸಿಕ್ಕಿದನಲ್ಲಾ! (3)
18.ಕಲೆಯಿಂದ ಕೂಡಿದ ಆಹ್ವಾನ! (4)
19.ಮಾಧ್ಯಮದಿಂದ ಗೊತ್ತಾಗಿರುವ ವಸ್ತುಸ್ಥಿತಿ! (4)

ಮೇಲಿಂದ ಕೆಳಕ್ಕೆ
1.ಸುಮ್ಮನೆ ನಸುನಕ್ಕರೆ ಇಷ್ಟೊಂದು ಹಿಗ್ಗು! (3)
2.ನಗದು ಕೊಟ್ಟು ಖರೀದಿಸಿದ ಆಭರಣ (2)
3.ಯೌವ್ವನದಲ್ಲಿ ಕಾಣಿಸಿದ ಅರಣ್ಯ (2)
4.ತಿರುವಿನಲ್ಲಿರುವ ಭಿಕ್ಷುಕ (3)
6.ಕರಾವಳಿ ಬ್ರಾಹ್ಮಣರ ಒಂದು ಪಂಗಡ (3)
8.ಆಳಿನ ಜೊತೆ ಬೆಟ್ಟವಿರುವ ಪರಾಧೀನತೆ (5)
9.ರಹಸ್ಯವಾಗಿ ಕೂಡಿ ಮಾತಾಡುವುದು (5)
12.ಪತ್ತೇದಾರನಿಗೆ ಗೋಚರಿಸಿದ ಸ್ತರ! (3)
13.ಸಿನಿಕನ ಮೂಗಿದು (3)
15.ವನದಲ್ಲಿ ಬೀಸುತ್ತಿರುವ ಗಾಳಿ (3)
16.ಅಬಲೆ ನೋಡುತ್ತಿರುವ ತರಂಗ (2)
17.ಕಸವಿಸಿಗೊಂಡರೂ ರುಚಿ ಎಂದುಬಿಡಿ! (2)



4782ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಷಾದ 3.ಗುಮಾನಿ
5.ನರ 6.ರಿಪೇರಿ
7.ಯಮ 9.ಶಿಲಾರಸ
10.ಅನುಭಾವಿ 11.ತಟ
13.ಪರಾಗ 15.ಸರ
16.ಲುಬ್ಧಕ 17.ಕ್ಷಿತಿಜ

ಮೇಲಿಂದ ಕೆಳಕ್ಕೆ:
1.ವಿವರ 2.ದಳ್ಳುರಿ
3.ಗುಜರಿ 4.ನಿಶ್ಚಯ
5.ನಖಶಿಖಾಂತ
8.ಮನೋವಿಕಾರ
12.ಟಪಾಲು 13.ಪದಕ
14.ಗವಾಕ್ಷಿ 15.ಸರೋಜ

ಸುಡೊಕು 5169

	2			5		8		
8			3		9		2	1
	4	3		1				7
	3	2				7		6
				7	2		9	
7	9				6			5
3	1		9		5		7	
	7			8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5168 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಗುಂಡಣ್ಣ

ದಿನ ಭವಿಷ್ಯ

ಶನಿವಾರ ನವೆಂಬರ್ 20, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಅನೂರಾಧಾ ಪ್ರತಿಪದೆ ಗಂ. 20-28 (ಹ. 2-38) ಶನಿವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 58-52 (ಬೆ.ಘ್ಟಾ. 5-59) ಶಿವ ನಾಮ ಯೋಗ ಗಂ. 54-29 ಕೌಲವ ಕರಣ ಗಂ. 20-28 ವಿಷ ಗಂ. 36-49 ಅಮೃತ ಗಂ 50-7 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-24 ಸೂರ್ಯಾಸ್ತ: 5-46 ಅದೃಷ್ಟ ಸಂಖ್ಯೆ 3 4

ಮೇಷ: ಆರ್ಥಿಕ ಸಂಕಷ್ಟ ದೂರವಾಗಿ ಮನಸ್ಸಿಗೆ ನೆಮ್ಮದಿ. ಅನೇಕ ಅವಕಾಶಗಳು ಅರಸಿ ಬರಲಿವೆ. ಶುಭ ಸಮಾರಂಭಗಳಲ್ಲಿ ಭಾಗಿ. ಹಿರಿಯರನ್ನು ಗೌರವಿಸಿ.

ವೃಷಭ: ಧನಾಗಮನಕ್ಕಿಂತ ವ್ಯಯವೇ ಹೆಚ್ಚಾಗುವ ಸಾಧ್ಯತೆ. ದೇವತಾ ಕಾರ್ಯಗಳಿಗೆ ಆದ್ಯತೆ ನೀಡಲಿದ್ದೀರಿ. ಹಣಕಾಸಿನ ವಿಷಯದಲ್ಲಿ ಎಚ್ಚರಿಕೆ ಅಗತ್ಯ.

ಮಿಥುನ: ತುಂಬಾ ಶ್ರಮವಹಿಸಿದ ನಿಮ್ಮ ಕಾರ್ಯಗಳಲ್ಲಿ ಶೀಘ್ರಗತಿಯಲ್ಲಿ ಯಶಸ್ಸು ಕಾಣುವಿರಿ. ಮನಸ್ಸಿಗೆ ಸಂಬಂಧಿಸಿದ ವ್ಯವಹಾರಗಳು ನೆರವೇರಲಿವೆ. ಮರು ಪ್ರಯತ್ನದಿಂದ ಕಾರ್ಯ ಸಾಧನೆ.

ಕರ್ಕಾಟಕ: ಕುಲದೇವತಾ ದರ್ಶನ ಭಾಗ್ಯ. ಬೆನ್ನು ನೋವು ಜಾಸ್ತಿಯಾಗುವ ಸಾಧ್ಯತೆ. ಅನಿವಾರ್ಯ ಕಾರಣಗಳಿಂದಾಗಿ ನಡೆಯಬೇಕಾದ ಕಾರ್ಯ ಮುಂದೂಡುವಿರಿ. ವಾರಾಂತ್ಯದ ಸಂತೋಷ ಇಮ್ಮಡಿಗೊಳ್ಳಲಿದೆ.

ಸಿಂಹ: ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಶೀಘ್ರಗತಿಯಲ್ಲಿ ಲಾಭ. ರತ್ನ ವ್ಯಾಪಾರಿಗಳಿಗೆ ಅನುಕೂಲವಾಗಲಿದೆ. ಹೆಣ್ಣುಮಕ್ಕಳ ಆರೋಗ್ಯದಲ್ಲಿ ಚೇತರಿಕೆ. ಆತ್ಮೀಯರಿಂದ ಸಿಹಿ ಸುದ್ದಿ.

ಕನ್ಯಾ: ಉದ್ಯೋಗದಲ್ಲಿ ಪದೋನ್ನತಿಯನ್ನು ಹೊಂದಲಿದ್ದೀರಿ. ಸಹೋದರಿಯರ ಆಗಮನ ನಿರೀಕ್ಷೆ. ಬಂಗಾರಕ್ಕೆ ಸಂಬಂಧಿಸಿದಂತೆ ಕಲಹ ಸಾಧ್ಯತೆ. ತಾಳ್ಮೆಯಿಂದ ನೆಮ್ಮದಿ. ವಾಹನ ಖರೀದಿಗೆ ಸುಸಂದರ್ಭ.

ತುಲಾ: ಮಕ್ಕಳ ಬಗ್ಗೆ ಚಿಂತೆ ಇದೆ. ಗುರುಗಳ ಪ್ರಶಂಸೆಯ ಬಲದಿಂದ ಕಾರ್ಯದಲ್ಲಿ ಉನ್ನತಿ. ಆರೋಗ್ಯದಲ್ಲಿ ಚೇತರಿಕೆ. ಹಿರಿಯರ ಮಾರ್ಗದರ್ಶನದಿಂದ ಸಂತೋಷ.

ವೃಶ್ಚಿಕ: ಸಂಗಾತಿಯೊಂದಿಗೆ ದೂರ ಪ್ರಯಾಣ. ನಿಶ್ಚಿತ ಕಾರ್ಯದಲ್ಲಿ ಗೆಲುವು. ಯತಿಗಳ ಆಗಮನ. ಹಿಂದಿನ ಸಾಲ ವಸೂಲಾತಿ. ದಿನದ ಕೊನೆಯಲ್ಲಿ ನೆಮ್ಮದಿ.

ಧನು: ಅನಾರೋಗ್ಯದ ಬಗ್ಗೆ ಎಚ್ಚರದಿಂದಿರಿ. ಪ್ರತಿಸ್ಪರ್ಧಿಗಳ ಸವಾಲು. ಯೋಚಿಸಿ ಕಾರ್ಯಪ್ರವೃತ್ತರಾಗುವುದು ನಿಮ್ಮ ಯಶಸ್ಸಿನ ಗುಟ್ಟಾಗಲಿದೆ. ಉದ್ಯೋಗಕ್ಕೆ ಸಂಬಂಧಿಸಿದಂತೆ ಅನ್ಯರಲ್ಲಿ ಚರ್ಚೆ.

ಮಕರ: ಆರ್ಥಿಕವಾಗಿ ಚೇತರಿಸಿಕೊಳ್ಳುವಿರಿ. ಮನಸ್ಸಿನ ನೋವು ನಿವಾರಣೆಯಾಗಲಿದೆ. ಪತ್ರಿಕಾ ವರದಿಗಾರರು ಎಚ್ಚರಿಕೆಯಿಂದಿರುವುದು ಸೂಕ್ತ.

ಕುಂಭ: ಈ ದಿನದ ಪ್ರಗತಿ ಉತ್ತಮವಾಗಿದೆ. ದೂರ ಪ್ರದೇಶಗಳಿಗೆ ಪ್ರಯಾಣ ಮಾಡಲಿದ್ದೀರಿ. ದಾಂಪತ್ಯದಲ್ಲಿ ಅತ್ಯಂತ ಸಂತಸದ ದಿನ. ಮಕ್ಕಳ ಆರೋಗ್ಯದಲ್ಲಿ ಚೇತರಿಕೆ. ಸಂತೋಷಮಯ ಬದುಕು.

ಮೀನ: ನಿಮ್ಮ ಗೌರವ ಹೆಚ್ಚಾಗಲಿದೆ. ಇಷ್ಟಮಿತ್ರರ ಆಗಮನದ ಜೊತೆಗೆ ಮನೆಯಲ್ಲಿ ಹಬ್ಬದ ವಾತಾವರಣ. ವಾಹನ ಚಲಾವಣೆಯಲ್ಲಿ ನಿಗಾ ಇರಲಿ. ಚಿಲ್ಲರೆ ವ್ಯಾಪಾರಿಗಳಿಗೆ ಶುಭದಿನ.

ನಿಮ್ಮ ಜನ್ಮದಿನ 20-ನವೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಮನಸ್ಸಿಗೆ ಸಂಬಂಧಪಟ್ಟ ಕಾರ್ಯದಿಂದ ಉತ್ತಮ ಯಶಸ್ಸು ಸಿಗಲಿದೆ. ಮನೋವೈದ್ಯರು ತಜ್ಞರುಗಳಿಗೆ ಬಿಡುವಿಲ್ಲದ ಕಾರ್ಯ. ಅಪ್ರತಿಮ ಸಾಧಕರೆನಿಸುವ ಸಾಧ್ಯತೆ ಕಂಡುಬರುತ್ತಿದೆ. ತಾಯಿಯ ಆರೋಗ್ಯದ ಬಗ್ಗೆ ವಿಶೇಷ ಗಮನವಿರಲಿ.

ಕುಟುಂಬ ರಾಜಕಾರಣದ ಸುತ್ತ ಅಧಿಕಾರದ ಗಿರಕಿ

• ಎಂ.ಮಹೇಶ

ಲಕ್ಷ್ಮಿ ಹೆಬ್ಬಾಳಕರ


ಲಖನ್ ಜಾರಕಿಹೊಳಿ

ರಮೇಶ ಜಾರಕಿಹೊಳಿ

ಚನ್ನರಾಜ ಹಟ್ಟಿಹೊಳಿ

ಬೆಳಗಾವಿ: ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಚನ್ನರಾಜ ಹಟ್ಟಿಹೊಳಿ ಅವರಿಗೆ ಅವಕಾಶ ಕೊಡುವ ಮೂಲಕ ಕಾಂಗ್ರೆಸ್ ಪಕ್ಷವು ಕುಟುಂಬ ರಾಜಕಾರಣಕ್ಕೆ ಮಣೆ ಹಾಕಿದೆ.

ಚನ್ನರಾಜ (36) ಅವರು ಕೆಪಿಸಿಸಿ ವಕ್ತಾರೆಯೂ ಆಗಿರುವ ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಸಹೋದರ. ತೀವ್ರ ಪೈಪೋಟಿಯ ನಡುವೆಯೂ ತಮ್ಮನಿಗೆ ಅವಕಾಶ ಕೊಡಿಸುವಲ್ಲಿ ಶಾಸಕಿ ಯಶಸ್ವಿಯಾಗಿದ್ದಾರೆ. ಪಕ್ಷದಲ್ಲಿ ತಮ್ಮ ಪ್ರಾಬಲ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

ಹಾಲಿ ಸದಸ್ಯ (ಕಳೆದ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಗೆದ್ದಿದ್ದರು) ವಿವೇಕ್‌ರಾವ್ ಪಾಟೀಲ, ಮಾಜಿ ಸಂಸದ ಪ್ರಕಾಶ ಹುಕ್ಕೇರಿ ಮೊದಲಾದವರು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಈ ಹಿರಿಯರನ್ನು ಕಡೆಗಣಿಸಿ ಯುವ ಹಾಗೂ ಹೊಸ ಮುಖಕ್ಕೆ ಪಕ್ಷವು ಮನ್ನಣೆ ನೀಡಿದೆ. ಚನ್ನರಾಜ ಅವರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೂಡ ಬೆಂಬಲವಾಗಿ ನಿಂತಿದ್ದಾರೆ. ಜತೆಗೆ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಸಮ್ಮತಿಯೂ ಸಿಕ್ಕಿದೆ ಎನ್ನಲಾಗುತ್ತಿದೆ.

ಅವರ ಪರವಾಗಿ, ಜಿಲ್ಲೆಯ ಪ್ರಭಾವಿ ನಾಯಕರೂ ಆಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಕೂಡ ಪ್ರಚಾರಕ್ಕೆ ಧುಮುಕಿದ್ದಾರೆ. ತಾವು ಪ್ರತಿನಿಧಿಸುವ ಯಮನಕನಮಡಿ ಕ್ಷೇತ್ರದಲ್ಲಿ ಗ್ರಾಮ ಪಂಚಾಯಿತಿಗಳ ಸದಸ್ಯರ ಸಭೆ ನಡೆಸಿ ಮತಯಾಚಿಸಿದ್ದಾರೆ.

ಮರೈನ್ ಎಂಜಿನಿಯರಿಂಗ್ ಪದವೀಧರರಾಗಿರುವ ಚನ್ನರಾಜ ಅವರು ಆರು ತಿಂಗಳುಗಳಿಂದಲೂ ಕ್ಷೇತ್ರದಲ್ಲಿ ಸಂಚರಿಸಿ ಚುನಾವಣೆಗೆ ಸಿದ್ಧತೆ ಮಾಡಿಕೊಂಡಿದ್ದರು. ಚುನಾವಣೆಗಳ ಸಂದರ್ಭದಲ್ಲಿ ಸಹೋದರಿ ಪರವಾಗಿ ಕಾರ್ಯತಂತ್ರ ರೂಪಿಸುತ್ತಿದ್ದರು.

ಲಖನ್ ಕಣಕ್ಕಿಳಿಸಲು ಪ್ರಯತ್ನ: ಇನ್ನೊಂದೆಡೆ, ಸಹೋದರನಾದ ಉದ್ಯಮಿ ಲಖನ್ ಜಾರಕಿಹೊಳಿಯನ್ನು ಕಣಕ್ಕಿಳಿಸಬೇಕು ಎಂದು ಗೋಕಾಕದ ಶಾಸಕ ರಮೇಶ ಜಾರಕಿಹೊಳಿ ಹಾಗೂ ಕೆಎಂಎಫ್ ಅಧ್ಯಕ್ಷರೂ ಆಗಿರುವ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಪ್ರಯತ್ನ ನಡೆಸಿದ್ದರು. ಬಿಜೆಪಿಯಿಂದ 2ನೇ ಅಭ್ಯರ್ಥಿಯಾಗಲು ಅವಕಾಶ ಕೊಡಬೇಕು ಎಂದು ವರಿಷ್ಠರ ಮೇಲೆ ಒತ್ತಡ ತಂದಿದ್ದರು. ಒಂದು ವೇಳೆ ಟಿಕೆಟ್ ಸಿಗದಿದ್ದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿಯಾದರೂ ಕಣಕ್ಕಿಳಿಸುವ ನಿರ್ಧಾರವನ್ನು ಸಹೋದರರು ಮಾಡಿದ್ದಾರೆ ಎನ್ನಲಾಗುತ್ತಿದೆ.

ಬಿಜೆಪಿ ಹಾಗೂ ಲಖನ್ ಪರವಾಗಿ ರಮೇಶ ಈಗಾಗಲೇ ಪ್ರಚಾರ ಆರಂಭಿಸಿದ್ದಾರೆ. ಗೋಕಾಕದ ನಂತರ ಖಾನಾಪುರ, ರಾಯಬಾಗದಲ್ಲಿ ಗ್ರಾಮ ಪಂಚಾಯಿತಿಗಳ ಸದಸ್ಯರ ಸಭೆ ನಡೆಸಿ ಬೆಂಬಲ ಕೋರಿದ್ದಾರೆ. ಅವರೊಂದಿಗೆ, ಮಹಾರಾಷ್ಟ್ರ ಏಕೀಕರಣ ಸಮಿತಿ ಯಿಂದ ಅಂತರ ಕಾಯ್ದುಕೊಂಡಿರುವ ಮತ್ತು ಬಿಜೆಪಿ ಸೇರ್ಪಡೆಗೆ ಸಿದ್ಧರಾಗಿದ್ದಾರೆ ಎನ್ನಲಾದ ಅರವಿಂದ ಪಾಟೀಲ ಕೂಡ ಖಾನಾಪುರದಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದು ಕುತೂಹಲ ಮೂಡಿಸಿದೆ. ಲಖನ್ ಕೂಡ ಸ್ಪರ್ಧಿಸಿದಲ್ಲಿ ಸ್ಪರ್ಧಾ ಕಣವು ರಮೇಶ ಜಾರಕಿಹೊಳಿ–ಲಕ್ಷ್ಮಿ ಹೆಬ್ಬಾಳಕರ ನಡುವಿನ ಜಿದ್ದಾಜಿದ್ದಿಗೆ ಸಾಕ್ಷಿಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಬೆಂಗಳೂರು ಗ್ರಾಮಾಂತರ–ರಾಮನಗರ ವಿಧಾನ ಪರಿಷತ್ ಕ್ಷೇತ್ರ

ರವಿ, ರಮೇಶ್‌ಗೌಡ ನಾಮಪತ್ರ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ಪುನರಾಯ್ಕೆ ಬಯಸಿ ಕಾಂಗ್ರೆಸ್ ಅಭ್ಯರ್ಥಿ ಎಸ್.ರವಿ ಹಾಗೂ ಜೆಡಿಎಸ್ ಅಭ್ಯರ್ಥಿ ರಮೇಶ್ ಗೌಡ ಶುಕ್ರವಾರ ನಾಮಪತ್ರ ಸಲ್ಲಿಸಿದರು.

ಬೆಂಬಲಿಗರೊಂದಿಗೆ ಜಿಲ್ಲಾಡಳಿತ ಭವನಕ್ಕೆ ಬಂದ ಅಭ್ಯರ್ಥಿಗಳು ಹೆಚ್ಚುವರಿ ಜಿಲ್ಲಾಧಿಕಾರಿಗೆ ನಾಮಪತ್ರ ಸಲ್ಲಿಸಿದರು. ಮಾಜಿ ಸಂಸದ ಎಂ.ವೀರಪ್ಪ ಮೊಯಿಲಿ ಮತ್ತು ಮಾಜಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರು ಕಾಂಗ್ರೆಸ್ ಅಭ್ಯರ್ಥಿಗೆ ಸಾಥ್ ನೀಡಿದರು.

ಜೆಡಿಎಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ ರಮೇಶ್ ಗೌಡ ಅವರಿಗೆ ಪಕ್ಷ ಇನ್ನೂ 'ಬಿ' ಫಾರಂ ನೀಡಿಲ್ಲ. ಮಂಗಳವಾರ ಜೆಡಿಎಸ್ ಅಭ್ಯರ್ಥಿಗಳನ್ನು ಘೋಷಿಸುವುದಾಗಿ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಘೋಷಿಸಿದ್ದಾರೆ. ಹಾಗಾಗಿ ಮಂಗಳವಾರ ಅವರು 'ಬಿ' ಫಾರಂ ಸಲ್ಲಿಸುವ ಸಾಧ್ಯತೆ ಇದೆ.

ಸಂಸದ ಡಿ.ಕೆ.ಸುರೇಶ್ ಅವರು ಜಿಲ್ಲಾಧಿಕಾರಿ ಕಚೇರಿಯ ಬಳಿ ಬಂದಿದ್ದರು. ಆದರೆ, ಅಭ್ಯರ್ಥಿ ನಾಮಪತ್ರ ಸಲ್ಲಿಸುವಾಗ ಒಳಗೆ ಹೋಗಲಿಲ್ಲ. ದೊಡ್ಡಬಳ್ಳಾಪುರ ಶಾಸಕ ವೆಂಕಟರಮಣಯ್ಯ, ದೇವನಹಳ್ಳಿಯ ಮಾಜಿ ಶಾಸಕರಾದ ಮುನಿನರಸಿಂಹಯ್ಯ, ಕೆ.ವೆಂಕಟಸ್ವಾಮಿ ಅವರು ಅಭ್ಯರ್ಥಿಯೊಂದಿಗೆ ಒಳಗೆ ಹೋಗಲು ಪ್ರಯತ್ನಿಸಿದರು. ಇಬ್ಬರಿಗೆ ಮಾತ್ರ ಅವಕಾಶವಿದ್ದ ಕಾರಣ ಅವರು ಹೊರಗಡೆ ನಿಲ್ಲಬೇಕಾಯಿತು.

ಜೆಡಿಎಸ್ ಅಭ್ಯರ್ಥಿ ರಮೇಶ್ ಗೌಡ ನಾಮಪತ್ರ ಸಲ್ಲಿಸುವಾಗ ಪಕ್ಷದ ರಾಜ್ಯ ನಾಯಕರ ಅನುಪಸ್ಥಿತಿ ಎದ್ದು ಕಾಣುತ್ತಿತ್ತು. ದೇವನಹಳ್ಳಿ ಶಾಸಕ ನಿಸರ್ಗ ನಾರಾಯಣಸ್ವಾಮಿ, ಜಿಲ್ಲಾಧ್ಯಕ್ಷ ಬಿ.ಮುನೇಗೌಡ, ಬಮೂಲ್ ನಿರ್ದೇಶಕ ಬಿ.ಶ್ರೀನಿವಾಸ್ ಕೂಡ ಕಾಣಿಸಿಕೊಳ್ಳಲಿಲ್ಲ. ದೇವನಹಳ್ಳಿ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಆರ್.ಮುನೇಗೌಡ ಹಾಗೂ ಚನ್ನರಾಯಪಟ್ಟಣ ಹೋಬಳಿ ಜೆಡಿಎಸ್ ಘಟಕದ ಅಧ್ಯಕ್ಷ ಮುನಿರಾಜು ಮಾತ್ರ ಜತೆಗಿದ್ದರು.

ಹಾಲಿ ಸದಸ್ಯರ ನಡುವೆ ಕದನ

ರಾಮನಗರ: ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಯು ಈ ಬಾರಿ ಪರಿಷತ್‌ನ ಇಬ್ಬರು ಹಾಲಿ ಸದಸ್ಯರ ನಡುವಿನ ಕದನಕ್ಕೆ ಸಾಕ್ಷಿಯಾಗಲಿದೆ.

ಈ ಕ್ಷೇತ್ರದಿಂದ ಪುನರಾಯ್ಕೆ ಬಯಸಿರುವ ಕಾಂಗ್ರೆಸ್ ಅಭ್ಯರ್ಥಿ ಎಸ್. ರವಿ ಮತ್ತು ಜೆಡಿಎಸ್‌ನಿಂದ ವಿಧಾನ ಪರಿಷತ್ ಸದಸ್ಯ ರಮೇಶ್ ಗೌಡರ ನಡುವಿನ ಸ್ಪರ್ಧೆ ಕುತೂಹಲ ಕೆರಳಿಸಿದೆ. ಬಿಜೆಪಿಯು ಬಿ.ಎಂ. ನಾರಾಯಣ ಸ್ವಾಮಿ ಅವರಿಗೆ ಟಿಕೆಟ್ ಘೋಷಿಸಿದೆ.

ಜೆಡಿಎಸ್ ಅಭ್ಯರ್ಥಿಯಾಗಿರುವ ರಮೇಶ್ ಗೌಡ ಎಚ್.ಡಿ. ದೇವೇಗೌಡರ ಕುಟುಂಬದ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ಜೆಡಿಎಸ್‌ನ ಬೆಂಗಳೂರು ನಗರ ಯುವ ಘಟಕದ ಅಧ್ಯಕ್ಷರಾಗಿದ್ದ ರಮೇಶ್ 2018 ರಲ್ಲಿ ಬಿಜೆಪಿಯ ವಿ. ಸೋಮಣ್ಣ ಅವರಿಂದ ತೆರವಾದ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆ ಆಗಿದ್ದರು. 2022ರವರೆಗೂ ಅವರ ಸದಸ್ಯತ್ವದ ಅವಧಿ ಇದೆ.

ಕಳೆದ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿದ್ದ ಇ. ಕೃಷ್ಣಪ್ಪ ಕಾಂಗ್ರೆಸ್‌ನ ರವಿ ಎದುರು 378 ಮತಗಳ ಅಂತರದಿಂದ ಪರಾಭವಗೊಂಡಿದ್ದರು. ಈ ಬಾರಿ ಅವರು ಸ್ಪರ್ಧೆಗೆ ಒಲವು ತೋರದ ಕಾರಣ ರಮೇಶ್ ಗೌಡ ಅವರನ್ನು ಪಕ್ಷ ಕಣಕ್ಕೆ ಇಳಿಸಿದೆ.

ಎರಡು ಬಾರಿ ವಿಧಾನ ಪರಿಷತ್ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಮತ್ತೊಮ್ಮೆ ಪಕ್ಷದ ಒಮ್ಮತದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದು, ಈ ಬಾರಿಯೂ ಗೆಲುವು ಖಚಿತ

ಎಸ್.ರವಿ, ಕಾಂಗ್ರೆಸ್ ಅಭ್ಯರ್ಥಿ

ವಿಧಾನ ಪರಿಷತ್ ಕ್ಷೇತ್ರದ ವ್ಯಾಪ್ತಿಯ ಎಂಟು ತಾಲ್ಲೂಕುಗಳಲ್ಲಿ ಐವರು ಜೆಡಿಎಸ್ ಶಾಸಕರಿದ್ದಾರೆ. ಆದ್ದರಿಂದ ನಮಗೆ ಹೆಚ್ಚಿನ ಬಲ ಬಂದಿದೆ.

ರಮೇಶ್ ಗೌಡ, ಜೆಡಿಎಸ್ ಅಭ್ಯರ್ಥಿ

ಎಂಎನ್‌ಆರ್‌ಗೆ ಪರೋಕ್ಷ ಎಚ್ಚರಿಕೆ

ಮಂಗಳೂರು: ದಕ್ಷಿಣ ಕನ್ನಡ ದ್ವಿಸದಸ್ಯ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಹೇಳಿದ್ದ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಎನ್. ರಾಜೇಂದ್ರಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿರುವುದು ಬಿಜೆಪಿಯ ಕೆಂಗಣ್ಣಿಗೆ ಕಾರಣವಾಗಿದೆ.

ಶುಕ್ರವಾರ ನಗರದಲ್ಲಿ ನಡೆದ ಬಿಜೆಪಿ ಜನಸ್ವರಾಜ್ ಸಮಾವೇಶದಲ್ಲಿ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಆಡಿರುವ ಮಾತುಗಳು ಇದಕ್ಕೆ ಪುಷ್ಟಿ ನೀಡುತ್ತಿವೆ.

ಸಮಾವೇಶದಲ್ಲಿ ಮಾತನಾಡಿದ ಸೋಮಶೇಖರ್, 'ದಕ್ಷಿಣ ಕನ್ನಡ ಮತ್ತು ಉಡುಪಿಗೆ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಸ್ಥಾಪಿಸುವಂತೆ ಇಲ್ಲಿನ ಜನಪ್ರತಿನಿಧಿಗಳು, ಸಹಕಾರ ಸಂಘದ ಪ್ರತಿನಿಧಿಗಳು ಒತ್ತಾಯಿಸುತ್ತಿದ್ದಾರೆ. ನೀತಿ ಸಂಹಿತೆ ಇರುವುದರಿಂದ ಈ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ಆದರೆ, ಅವರ ಒತ್ತಾಸೆಯನ್ನು ಈಡೇರಿಸಲು ಪ್ರಯತ್ನ ಮಾಡುತ್ತೇನೆ' ಎಂದರು.

ರಾಜೇಂದ್ರಕುಮಾರ್ ಅವರ ಹೆಸರನ್ನು ಉಲ್ಲೇಖಿಸದೆ ಮಾತನಾಡಿದ ಅವರು, 'ಇಲ್ಲಿನ ಡಿಸಿಸಿ ಬ್ಯಾಂಕ್‌ನಲ್ಲಿ ನವೋದಯ ಟ್ರಸ್ಟ್‌ಗೆ ಅವಕಾಶ ನೀಡಲಾಗಿದೆ. ಅಲ್ಲದೇ ಈ ಟ್ರಸ್ಟ್‌ಗೆ ಡಿಸಿಸಿ ಬ್ಯಾಂಕ್‌ನಿಂದ ಪ್ರತಿ ತಿಂಗಳು ₹19 ಲಕ್ಷ ವರ್ಗಾವಣೆ ಮಾಡಲಾಗುತ್ತಿದೆ. ಇದು ಕಾನೂನು ಬಾಹಿರ. ಇದನ್ನು ಬೆಂಬಲಿಸುವ ಅಧಿಕಾರಿಗಳನ್ನು ಸುಮ್ಮನೆ ಬಿಡುವುದಿಲ್ಲ' ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ: ಕುಟುಂಬ ರಾಜಕಾರಣಕ್ಕೆ ಮಣೆ

ಬೆಂಗಳೂರು: ಕುಟುಂಬ ರಾಜಕಾರಣಕ್ಕೆ ಮಣೆ ಹಾಕುವುದಿಲ್ಲ ಎಂದು ಹೇಳಿಕೊಂಡೇ ಬಂದಿದ್ದ ಬಿಜೆಪಿ ಶುಕ್ರವಾರ ರಾತ್ರಿ ಬಿಡುಗಡೆ ಮಾಡಿರುವ 20 ಕ್ಷೇತ್ರಗಳ ವಿಧಾನಪರಿಷತ್‌ನ ಚುನಾವಣಾ ಅಭ್ಯರ್ಥಿಗಳ ಪಟ್ಟಿಯಲ್ಲಿ ಶಾಸಕ ಜಗದೀಶ ಶೆಟ್ಟರ್ ಅವರ ತಮ್ಮ ಪ್ರದೀಪ್ ಶೆಟ್ಟರ್, ಅಪ್ಪಚ್ಚು ರಂಜನ್ ತಮ್ಮ ಸುಜಾ ಕುಶಾಲಪ್ಪ ಸೇರಿ ಕೆಲವರಿಗೆ ಟಿಕೆಟ್ ನೀಡಿದೆ.

25 ಕ್ಷೇತ್ರಗಳ ಪೈಕಿ 20 ಕ್ಷೇತ್ರಗಳ ಅಭ್ಯರ್ಥಿ ಪಟ್ಟಿ ಬಿಡುಗಡೆ ಮಾಡಲಾಗಿದೆ. ದ್ವಿಸದಸ್ಯ ಕ್ಷೇತ್ರಗಳ ಪೈಕಿ ಬೆಳಗಾವಿ, ಮೈಸೂರು, ವಿಜಯಪುರ, ದಕ್ಷಿಣ ಕನ್ನಡ, ಧಾರವಾಡ ಜಿಲ್ಲೆಗಳ ತಲಾ ಒಂದೊಂದು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಲಾಗಿದೆ.

ಕೊಡಗಿನಲ್ಲಿ ಅಪ್ಪಚ್ಚು ರಂಜನ್ ಅವರ ತಮ್ಮ ಸುನೀಲ್ ಸುಬ್ರಮಣಿ ಸದ್ಯ ವಿಧಾನ ಪರಿಷತ್ತಿನ ಸದಸ್ಯರು. ಈ ಬಾರಿ ಅವರ ಬದಲು ಮತ್ತೊಬ್ಬ ತಮ್ಮ ಸುಜಾ ಕುಶಾಲಪ್ಪ ಅವರಿಗೆ ಟಿಕೆಟ್ ನೀಡಲಾಗಿದೆ. ಬಿಜೆಪಿ ಮತ್ತೊಬ್ಬ ಪ್ರಮುಖ ನಾಯಕ, ಸಭಾಪತಿಯಾಗಿದ್ದ ಡಿ.ಎಚ್.ಶಂಕರಮೂರ್ತಿ ಅವರ ಪುತ್ರ ಹಾಗೂ ಆರ್ಯವೈಶ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷರೂ ಆಗಿರುವ ಡಿ.ಎಸ್. ಅರುಣ್ ಅವರೂ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಬಿಜೆಪಿಯಲ್ಲಿ ಟಿಕೆಟ್ ಸಿಗುವ ನಿರೀಕ್ಷೆಯಿಂದ ಹಾಲಿ ಸದಸ್ಯರಾಗಿರುವ ಸಂದೇಶ್ ನಾಗರಾಜ್ ಜೆಡಿಎಸ್‌ನಿಂದ ಹೊರಗೆ ಕಾಲಿಟ್ಟಿದ್ದರು. ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರದಲ್ಲಿ ರಘು ಕೌಟಿಲ್ಯ ಅವರಿಗೆ ಟಿಕೆಟ್ ಸಿಕ್ಕಿದೆ. ಬಿಬಿಎಂಪಿ ಸದಸ್ಯರಾಗಿದ್ದ ಎನ್.ಲೋಕೇಶ್ ಅವರು ತುಮಕೂರು ಕ್ಷೇತ್ರಕ್ಕೆ ಸ್ಥಾನ ಪಡೆದಿದ್ದಾರೆ.

ಜೆಡಿಎಸ್‌ನಿಂದ ಸಕಲೇಶಪುರ ಕ್ಷೇತ್ರದ ಶಾಸಕರಾಗಿ, ಬಳಿಕ ಕಾಂಗ್ರೆಸ್ ಸೇರಿ ಅಲ್ಲಿ ನೆಲೆ ಕಾಣದೇ ಬಿಜೆಪಿ ಸೇರಿದ್ದ ಎಚ್.ಎಂ. ವಿಶ್ವನಾಥ್ ಅವರಿಗೆ ಹಾಸನದಿಂದ ಟಿಕೆಟ್ ಸಿಕ್ಕಿದೆ.

ನಿರೀಕ್ಷೆಯಂತೆ ಸಮಾಜಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ವಿಧಾನಪರಿಷತ್ ಉಪಸಭಾಪತಿ ಎಂ.ಕೆ.ಪ್ರಾಣೇಶ್, ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ ಅವರಿಗೆ ಟಿಕೆಟ್ ನೀಡಲಾಗಿದೆ.

ಬಿಜೆಪಿ ಅಭ್ಯರ್ಥಿಗಳ ಪಟ್ಟಿ

ಕ್ಷೇತ್ರ	ಅಭ್ಯರ್ಥಿ ಹೆಸರು
ಕೊಡಗು	ಸುಜಾ ಕುಶಾಲಪ್ಪ
ದಕ್ಷಿಣ ಕನ್ನಡ	ಕೋಟ ಶ್ರೀನಿವಾಸ ಪೂಜಾರಿ
ಚಿಕ್ಕಮಗಳೂರು	ಎಂ.ಕೆ. ಪ್ರಾಣೇಶ್
ಶಿವಮೊಗ್ಗ	ಡಿ.ಎಸ್. ಅರುಣ್
ಧಾರವಾಡ	ಪ್ರದೀಪ ಶೆಟ್ಟರ್
ಬೆಳಗಾವಿ	ಮಹಂತೇಶ ಕವಟಗಿಮಠ
ಕಲಬುರ್ಗಿ	ಬಿ.ಜಿ. ಪಾಟೀಲ
ಚಿತ್ರದುರ್ಗ	ಕೆ.ಎಸ್. ನವೀನ್
ಮೈಸೂರು	ರಘು ಕೌಟಿಲ್ಯ
ಹಾಸನ	ಎಚ್.ಎಂ. ವಿಶ್ವನಾಥ್
ಉತ್ತರ ಕನ್ನಡ	ಗಣಪತಿ ಉಳ್ವೇಕರ್

ಕ್ಷೇತ್ರ	ಅಭ್ಯರ್ಥಿ ಹೆಸರು
ಬೀದರ್	ಪ್ರಕಾಶ ಖಂಡ್ರೆ
ಬೆಂಗಳೂರು	ಎಚ್.ಎಸ್. ಗೋಪಿನಾಥ ರೆಡ್ಡಿ
ಮಂಡ್ಯ	ಮಂಜು ಕೆ.ಆರ್. ಪೇಟೆ
ಕೋಲಾರ	ಕೆ.ಎನ್. ವೇಣುಗೋಪಾಲ
ರಾಯಚೂರು	ವಿಶ್ವನಾಥ .ಎ. ಬನಹಟ್ಟಿ
ಬೆಂಗಳೂರು ಗ್ರಾಮಾಂತರ	ಬಿ.ಎಂ. ನಾರಾಯಣಸ್ವಾಮಿ
ಬಳ್ಳಾರಿ	ವೈ.ಎಂ. ಸತೀಶ್
ತುಮಕೂರು	ಎನ್. ಲೋಕೇಶ್
ವಿಜಯಪುರ	ಪಿ.ಎಚ್. ಪೂಜಾರ್

ಗುರುನಾನಕ್ ಜಯಂತಿ

ಗುರುನಾನಕ್ ಜಯಂತಿ ಅಂಗವಾಗಿ ಬೀದರ್‌ನಲ್ಲಿ ಶುಕ್ರವಾರ ಸಿಖ್ ಸಮುದಾಯದವರು ಶಸ್ತ್ರ ಹಿಡಿದು ಓಟದಲ್ಲಿ ಪಾಲ್ಗೊಂಡಿದ್ದರು

ಪ್ರಜಾವಾಣಿ ಚಿತ್ರ: ಗುರುಪಾದಪ್ಪ ಸಿರ್ಸಿ

ವಿದ್ಯಾರ್ಥಿಗಳಿಗೆ ಶುಲ್ಕ ಹೆಚ್ಚುವ ಆತಂಕ: ಕಟ್ಟಡಗಳ ಮೌಲ್ಯ ಆಧರಿಸಿ ಕರ

ಖಾಸಗಿ ಶಾಲೆಗೆ ಶುಲ್ಕದ ಬರೆ

• ರಶ್ಮಿ ಬೇಲೂರು

ಮುಖ್ಯಾಂಶಗಳು

- ಸುಸ್ಥಿರತೆ ಪ್ರಮಾಣ ಪತ್ರದ ಹೆಸರಿನಲ್ಲಿ ವಸೂಲಿ
- ಮುಖ್ಯಮಂತ್ರಿ ಮೊರೆಹೋದ ಖಾಸಗಿ ಶಾಲೆಗಳು

ಬೆಂಗಳೂರು: ಆರ್ಥಿಕ ಸಂಕಷ್ಟದ ಸುಳಿಯಲ್ಲಿರುವ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಮೇಲೆ ಈಗ ಕಟ್ಟಡಗಳ ಮೌಲ್ಯಮಾಪನದ ಶುಲ್ಕದ ಭಾರ ಬೀಳುತ್ತಿದೆ. ಶಾಲಾ ಕಟ್ಟಡಗಳ ಸುಸ್ಥಿರತೆ ಪ್ರಮಾಣಪತ್ರ ಪಡೆಯಲು ಆಯಾ ಕಟ್ಟಡದ ಒಟ್ಟು ಮೌಲ್ಯದ ಶೇಕಡ 0.5ರಷ್ಟು ಮೌಲ್ಯಮಾಪನ ಶುಲ್ಕ ಪಾವತಿಸಬೇಕೆಂದು ಲೋಕೋಪಯೋಗಿ ಇಲಾಖೆ ಸುತ್ತೋಲೆ ಹೊರಡಿಸಿದೆ.

ಶಾಲಾ ಆಡಳಿತ ಮಂಡಳಿಗಳು ಕಟ್ಟಡದ ಮೌಲ್ಯದ ಶೇ 0.5ರಷ್ಟು ಎಂಜಿನಿಯರಿಂಗ್ ಶುಲ್ಕವನ್ನು ಅರ್ಜಿಯ ಜತೆಗೆ ಪಾವತಿಸುವಂತೆ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಹಳೆಯ ಮತ್ತು ಹೊಸ ಎರಡೂ ಬಗೆಯ ಕಟ್ಟಡಗಳಿಗೆ ಈ ಶುಲ್ಕ ಅನ್ವಯವಾಗುತ್ತದೆ.

'ಕಟ್ಟಡಗಳ ಮೌಲ್ಯವನ್ನು ಆಧರಿಸಿ ₹ 10 ಲಕ್ಷದಿಂದ ₹ 50 ಲಕ್ಷದವರೆಗೂ ಎಂಜಿನಿಯರಿಂಗ್ ಶುಲ್ಕ ಪಾವತಿಸಬೇಕಾಗುತ್ತದೆ. ಬಾಡಿಗೆ ಕಟ್ಟಡದಲ್ಲಿ ಶಾಲೆ ನಡೆಯುತ್ತಿದ್ದರೂ ಸುಸ್ಥಿರತೆ ಪ್ರಮಾಣಪತ್ರ ಪಡೆಯಬೇಕು. ಆಗಲೂ ಇಷ್ಟೇ ಶುಲ್ಕ ಪಾವತಿಸಬೇಕು' ಎನ್ನುತ್ತಾರೆ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಪ್ರತಿನಿಧಿಗಳು.

'ಸರ್ಕಾರದ ಇಂತಹ ಕ್ರಮಗಳು ಖಾಸಗಿ ಶಾಲೆಗಳು ವಿಪರೀತವಾಗಿ ಶುಲ್ಕ ಹೆಚ್ಚಿಸುವುದಕ್ಕೆ ಎಡೆಮಾಡುತ್ತವೆ. ಸದ್ಯ ಖಾಸಗಿ ಶಾಲೆಗಳು ಹೊಸದಾಗಿ ಶುಲ್ಕ ಸಂಗ್ರಹಿಸಲು ಅಥವಾ ಶುಲ್ಕ ಹೆಚ್ಚಳ ಮಾಡಲು ಅವಕಾಶಗಳಿಲ್ಲ. ಆದರೆ, ಕಟ್ಟಡದ ಸುಸ್ಥಿರತೆ ಪ್ರಮಾಣಪತ್ರಕ್ಕೆ ದೊಡ್ಡ ಪ್ರಮಾಣದ ಶುಲ್ಕ ಪಾವತಿಸಬೇಕೆಂಬ ಸೂಚನೆಗಳು ಶೈಕ್ಷಣಿಕ ಶುಲ್ಕ ಹೆಚ್ಚಿಸಬೇಕಾದ ಒತ್ತಡ ಸೃಷ್ಟಿಸುತ್ತವೆ' ಎಂದು ಕರ್ನಾಟಕ ಖಾಸಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಆಡಳಿತ ಮಂಡಳಿಗಳ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಹೇಳಿದರು.

ಕೋವಿಡ್ ಸಾಂಕ್ರಾಮಿಕ ಸೃಷ್ಟಿಸಿದ ಆರ್ಥಿಕ ಬಿಕ್ಕಟ್ಟಿನಿಂದ ಕೆಲವು ಶಾಲೆಗಳ ಮಾಲೀಕರು ಜೀವನವನ್ನೇ ಅಂತ್ಯಗೊಳಿಸಿಕೊಂಡಿದ್ದಾರೆ. ಕೆಲವರು ಶಾಲೆಗಳನ್ನು ಮುಚ್ಚಿದ್ದಾರೆ. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಸರ್ಕಾರದ ಈ ಆದೇಶವನ್ನು ಒಪ್ಪುವುದಾದರೂ ಹೇಗೆ ಎಂದು ಅವರು ಪ್ರಶ್ನಿಸಿದರು.

ಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಇಲಾಖೆ ಪ್ರಧಾನಿ ಕಾರ್ಯದರ್ಶಿಗೆ ಮನವಿ ಸಲ್ಲಿಸಿರುವ ಅಸೋಸಿಯೇಷನ್, ಸುತ್ತೋಲೆಯನ್ನು ಹಿಂಪಡೆಯುವಂತೆ ಆಗ್ರಹಿಸಿದೆ. ಸರ್ಕಾರಿ ಶಾಲೆಗಳನ್ನು ಈ ಸುತ್ತೋಲೆಯಿಂದ ಹೊರಗಿಟ್ಟಿರುವ ಬಗ್ಗೆಯೂ ಆಕ್ಷೇಪವನ್ನು ದಾಖಲಿಸಿದೆ. 'ಸುರಕ್ಷತಾ ಕ್ರಮಗಳು ಖಾಸಗಿ ಶಾಲೆಗಳಿಗೆ ಮಾತ್ರ ಅನ್ವಯವಾಗುತ್ತವೆಯೆ?' ಎಂದು ಪ್ರಶ್ನಿಸಿದೆ.

ನೋಂದಾಯಿತ ಖಾಸಗಿ ಅನುದಾನರಹಿತ ಶಾಲಾ ಆಡಳಿತ ಮಂಡಳಿಗಳ ಅಸೋಸಿಯೇಷನ್ ಕೂಡ ಈ ಸುತ್ತೋಲೆ ಪ್ರಶ್ನಿಸಿ ಲೋಕೋಪಯೋಗಿ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಮನವಿ ಸಲ್ಲಿಸಿದೆ. ಸುತ್ತೋಲೆಯನ್ನು ಹಿಂಪಡೆದು, ಯಾವುದೇ ಷರತ್ತುಗಳಿಲ್ಲದೇ ಶಾಲಾ ಕಟ್ಟಡಗಳಿಗೆ ಸುಸ್ಥಿರತೆ ಪ್ರಮಾಣಪತ್ರ ಒದಗಿಸುವಂತೆ ಒತ್ತಾಯಿಸಿದೆ.

'ಖಾಸಗಿ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಮಾತ್ರ ಸುರಕ್ಷತೆ ಮತ್ತು ಭದ್ರತೆ ಬೇಕು, ಸರ್ಕಾರಿ ಶಾಲೆಗಳಲ್ಲಿ ಓದುವವರಿಗೆ ಬೇಡ ಎಂಬರ್ಥದಲ್ಲಿ ಸುತ್ತೋಲೆ ಹೊರಡಿಸಲಾಗಿದೆ. ಈ ರೀತಿಯ ಸುತ್ತೋಲೆಗಳು ಖಾಸಗಿ ಶಿಕ್ಷಣ ಸಂಸ್ಥೆಗಳು ಬಾಗಿಲು ಮುಚ್ಚಲು ಕಾರಣವಾಗುತ್ತವೆ' ಎಂದು ಅಸೋಸಿಯೇಷನ್ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಪ್ರತಿಕ್ರಿಯಿಸಿದರು.

ಕಸಾಪ ಚುನಾವಣೆ: ಮತದಾನ ನಾಳೆ

ಪ್ರಜಾವಾಣಿ ವಾರ್ತೆ

ಅಂಕಿ-ಅಂಶಗಳು

ಬೆಳಿಗ್ಗೆ 8ರಿಂದ ಸಂಜೆ 4 ಮತದಾನದ ಸಮಯ

420 ಮತಗಟ್ಟೆಗಳು

3,10,109 ಮತದಾರರು

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯಾಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಇದೇ ಭಾನುವಾರ (ನ. 21) ಮತದಾನ ನಡೆಯಲಿದೆ.

ಈ ಬಾರಿ 3 ಲಕ್ಷಕ್ಕೂ ಅಧಿಕ ಮಂದಿ ಮತ ಚಲಾಯಿಸಲು ಅರ್ಹರಾಗಿದ್ದಾರೆ. ರಾಜ್ಯಾಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಮತ ಚಲಾವಣೆ ನಡೆಯಲಿದೆ. 400ಕ್ಕೂ ಅಧಿಕ ಮತಗಟ್ಟೆಗಳನ್ನು ಈ ಬಾರಿ ಗುರುತಿಸಲಾಗಿದೆ. ರಾಜ್ಯಾಧ್ಯಕ್ಷ ಸ್ಥಾನಕ್ಕೆ 21 ಅಭ್ಯರ್ಥಿಗಳು ಸ್ಪರ್ಧೆಯಲ್ಲಿ ಇದ್ದಾರೆ.

ಯಾದಗಿರಿ ಜಿಲ್ಲಾ ಘಟಕ ಹಾಗೂ ತಮಿಳುನಾಡು ಗಡಿನಾಡ ಘಟಕದ ಅಧ್ಯಕ್ಷ ಸ್ಥಾನಕ್ಕೆ ತಲಾ ಒಬ್ಬರು ಮಾತ್ರ ಕಣದಲ್ಲಿದ್ದಾರೆ. ಹೀಗಾಗಿ, ಅಲ್ಲಿ ಅವಿರೋಧ ಆಯ್ಕೆ ನಡೆಯಲಿದೆ. ಗೋವಾ ಗಡಿನಾಡು ಘಟಕಕ್ಕೆ ಯಾವುದೇ ಅಭ್ಯರ್ಥಿ ಸ್ಪರ್ಧಿಸಿಲ್ಲ. ಕೇರಳ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ಗಡಿನಾಡು ಘಟಕಕ್ಕೆ ಚುನಾವಣೆ ನಡೆಯಲಿದೆ.

ತಾಲ್ಲೂಕುಗಳು, ಕೆಲವು ಹೋಬಳಿಗಳು ಹಾಗೂ ಬೆಂಗಳೂರು ನಗರ ಜಿಲ್ಲೆಯ 28 ವಿಧಾನಸಭೆ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಹೊರನಾಡು, ಹೊರದೇಶದ ಮತದಾರರಿಗೆ ಅಂಚೆ ಮೂಲಕ ಮತಪತ್ರಗಳನ್ನು ರವಾನಿಸಲಾಗಿದ್ದು, ಈಗಾಗಲೇ ಕೆಲವರು ಮತ ಚಲಾಯಿಸಿ ಕಳುಹಿಸುತ್ತಿದ್ದಾರೆ. ಇದೇ 23ರ ಬೆಳಿಗ್ಗೆ 11 ಗಂಟೆಯೊಳಗೆ ಕೇಂದ್ರ ಚುನಾವಣಾಧಿಕಾರಿ ಕಚೇರಿಗೆ ತಲುಪಿದ ಮತಪತ್ರಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.

ಮತಗಟ್ಟೆ ಹುಡುಕಲು ಆ್ಯಪ್

ಮತದಾರರು ಮತಗಟ್ಟೆಯ ವಿವರ ಪಡೆದುಕೊಳ್ಳಲು 'Election kasapa' ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಮತದಾರರ ಪಟ್ಟಿಯನ್ನು ಕನ್ನಡ ವರ್ಣಮಾಲೆಯ ಅಕ್ಷರಗಳಿಗೆ ಅನುಗುಣವಾಗಿ ಮುದ್ರಿಸಲಾಗಿದೆ. ಜಿಲ್ಲಾ ಘಟಕದ ಅಧ್ಯಕ್ಷರ ಚುನಾವಣೆ ಫಲಿತಾಂಶ ಮತದಾನದ ದಿನವೇ ಘೋಷಿಸಲಾಗುತ್ತದೆ.

ಇದೇ 24 ರಂದು ಪರಿಷತ್ತಿನ ಚುನಾವಣಾಧಿಕಾರಿಯ ಕೇಂದ್ರ ಕಚೇರಿಯಲ್ಲಿ ಗಡಿನಾಡ ಘಟಕಗಳ ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟ ಅಂಚೆ ಮತಪತ್ರಗಳನ್ನು ಎಣಿಕೆ ಮಾಡಿ, ಫಲಿತಾಂಶ ಘೋಷಿಸಲಾಗುತ್ತದೆ. ಬಳಿಕ ಜಿಲ್ಲೆಗಳಿಂದ ಬಂದ ಮತಗಳು ಹಾಗೂ ಅಂಚೆಗಳಿಂದ ಬಂದ ಮತಗಳನ್ನು ಕ್ರೋಢೀಕರಿಸಿ ರಾಜ್ಯಾಧ್ಯಕ್ಷ ಸ್ಥಾನದ ಫಲಿತಾಂಶವನ್ನು ಚುನಾವಣಾಧಿಕಾರಿ ಪ್ರಕಟಿಸಲಿದ್ದಾರೆ.

ಸರ್ಕಾರದ ವಿರುದ್ಧ ಯೋಗೇಶ್ವರ್ ಗರಂ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಪಟ್ಟಣದಲ್ಲಿ ಶುಕ್ರವಾರ ಸಂಜೆ ಜರುಗಿದ ಬಿಜೆಪಿಯ ಜನಸ್ವರಾಜ್ ಯಾತ್ರೆಯ ಸಮಾವೇಶದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಅವರು ಪಕ್ಷದ ಮುಖಂಡರ ಸಮ್ಮುಖದಲ್ಲಿಯೇ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದರು.

'ರಾಜ್ಯದಲ್ಲಿ ನಮ್ಮದೇ ಸರ್ಕಾರ ಇದ್ದರೂ ನಮ್ಮ ಜಿಲ್ಲೆಯ ಬಿಜೆಪಿ ಕಾರ್ಯಕರ್ತರಿಗೆ ಖುಷಿ ಇಲ್ಲ. ನಮ್ಮ ಕೆಲಸಗಳು ಆಗುತ್ತಿಲ್ಲ. ನಮ್ಮ ಮಾತು ನಡೆಯುತ್ತಿಲ್ಲ' ಎಂದು ತಮ್ಮದೇ ಸರ್ಕಾರದ ವಿರುದ್ಧ ಅಸಮಾಧಾನ ಹೊರಹಾಕಿದರು.

'ಕೆಪಿಸಿಸಿ ಅಧ್ಯಕ್ಷರು , ಜೆಡಿಎಸ್ ನಾಯಕರು ನಮ್ಮ ಜಿಲ್ಲೆಯವರೆ. ಪಕ್ಷವನ್ನು ಕಷ್ಟಪಟ್ಟು ಕಟ್ಟುತ್ತಿದ್ದೇವೆ. ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿರುವ ಕಾರ್ಯಕರ್ತರು ಪಕ್ಷಕ್ಕೆ ಗೌರವಕ್ಕಾಗಿ ಸಮಾವೇಶಕ್ಕೆ ಆಗಮಿಸಿದ್ದಾರೆ' ಎಂದರು.

'ಮುದ್ರಾಂಕ ಶುಲ್ಕ: ಸರ್ಕಾರದ ದರೋಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುದ್ರಾಂಕ ಶುಲ್ಕದ ಹೆಸರಿನಲ್ಲಿ ರಾಜ್ಯ ಸರ್ಕಾರ ನಾಗರಿಕರ ಹಗಲು ದರೋಡೆ ನಡೆಸಿದೆ' ಎಂದು ಹೈಕೋರ್ಟ್ ಕಿಡಿ ಕಾರಿದೆ.

ಹೆಚ್ಚುವರಿ ಮುದ್ರಾಂಕ ಶುಲ್ಕ ಆಕ್ಷೇಪಿಸಿ ಸಲ್ಲಿಸಲಾದ ರಿಟ್ ಅರ್ಜಿಯನ್ನು ಶುಕ್ರವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅರ್ಜಿದಾರರ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ವಾರ್ಷಿಕ ಶೇ 12ರ ಬಡ್ಡಿಯಂತೆ ಪಾವತಿಸುವಂತೆ ಪ್ರತಿವಾದಿಗಳಿಗೆ ಆದೇಶಿಸಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ದೊಮ್ಮಸಂದ್ರ ಗ್ರಾಮದ ಸರ್ವೆ ನಂಬರ್ 101ರಲ್ಲಿ ಅರ್ಜಿದಾರರ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೆಚ್ಚುವರಿ ಮುದ್ರಾಂಕ ಶುಲ್ಕ ಹೇರಿದ್ದನ್ನು ಪ್ರಶ್ನಿಸಿದ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಪೀಠ ಈ ಆದೇಶ ನೀಡಿದೆ.

'ಮೇಲ್ಮನೆ ಚುನಾವಣೆ ಬಳಿಕ ರಾಜ್ಯ ಪ್ರವಾಸ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿಯಲ್ಲಿ ಶುಕ್ರವಾರ ಬಿಜೆಪಿ ಜನಸ್ವರಾಜ್ ಸಮಾವೇಶಕ್ಕೆ ಬಂದ ಶಾಸಕ ಬಿ.ಎಸ್.ಯಡಿಯೂರಪ್ಪ ಅವರನ್ನು ಕಾರ್ಯಕರ್ತರು ಸ್ವಾಗತಿಸಿದರು –ಪ್ರಜಾವಾಣಿ ಚಿತ್ರ

ಹುಬ್ಬಳ್ಳಿ: ವಿಧಾನಪರಿಷತ್ ಚುನಾವಣೆ ಬಳಿಕ ರಾಜ್ಯದಾದ್ಯಂತ ಓಡಾಡಿ ಪಕ್ಷವನ್ನು ಮರುಸಂಘಟನೆ ಮಾಡುತ್ತೇನೆ. ಪಕ್ಷವನ್ನು ಮತ್ತಷ್ಟು ಬಲಪಡಿಸುತ್ತೇನೆ ಎಂದು ಶಾಸಕ ಬಿ.ಎಸ್.ಯಡಿಯೂರಪ್ಪ ಶುಕ್ರವಾರ ಹೇಳಿದರು.

ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಶುಕ್ರವಾರ ಹಮ್ಮಿಕೊಂಡಿದ್ದ ಜನಸ್ವರಾಜ್ ಸಮಾವೇಶ ಉದ್ಘಾಟಿಸಿದ ಅವರು 'ಇತ್ತೀಚಿನ ದಿನಗಳಲ್ಲಿ ಜನಪ್ರತಿನಿಧಿಗಳ ಬಗ್ಗೆ ಜನರಿಗೆ ನಂಬಿಕೆ ಮತ್ತು ವಿಶ್ವಾಸ ಕಡಿಮೆಯಾಗುತ್ತಿದೆ. ಜನರಿಂದ ಆಯ್ಕೆಯಾಗಿ ಬಂದವರು ಜನರ ನಡುವೆ ಇದ್ದರೆ ಮಾತ್ರ ಅವರಿಗೆ ಗೌರವ, ಬೆಲೆ ಸಿಗುತ್ತದೆ' ಎಂದು ಗ್ರಾಮ ಪಂಚಾಯಿತಿ ಸದಸ್ಯರಿಗೆ ಕಿವಿಮಾತು ಹೇಳಿದರು.

'ಹಣಬಲ, ತೋಳ್ಬಲ ಹಾಗೂ ಜಾತಿಯ ವಿಷಬೀಜವನ್ನು ಬಿತ್ತಿ ವಾಮಮಾರ್ಗದಲ್ಲಿ ಕಾಂಗ್ರೆಸ್ ಉಪಚುನಾವಣೆ ಗೆದ್ದಿದೆ. ಇದು ಸಾರ್ವತ್ರಿಕ ಚುನಾವಣೆಯ ಮೇಲೆ ಯಾವ ಪರಿಣಾಮ ಬೀರುವುದಿಲ್ಲ. ಮುಂದಿನ 20 ವರ್ಷ ಕೇಂದ್ರದಲ್ಲಿ ಬಿಜೆಪಿಯೇ ಅಧಿಕಾರದಲ್ಲಿರಲಿದೆ' ಎಂದರು.

ಸಾರಿಗೆ ಸಚಿವ ಬಿ. ಶ್ರೀರಾಮುಲು 'ಪರಿಶಿಷ್ಟರು ಹೊಟ್ಟೆಪಾಡಿಗಾಗಿ ಬಿಜೆಪಿ ಸೇರುವುದಿಲ್ಲ. ನಮ್ಮ ಪಕ್ಷ ಪರಿಶಿಷ್ಟರಿಗೆ ಅತ್ಯುನ್ನತ ಸ್ಥಾನಮಾನ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಎಲ್ಲ ವರ್ಗಗಳ ಜನಪ್ರತಿನಿಧಿಗಳಿಗೆ ಆದ್ಯತೆ ನೀಡುತ್ತಿದ್ದಾರೆ' ಎಂದರು.

'ಉಪಚುನಾವಣೆಯಲ್ಲಿ ಒಂದು ಸ್ಥಾನದಲ್ಲಿ ಗೆಲುವು ಪಡೆದಿದ್ದಕ್ಕೆ ಕಾಂಗ್ರೆಸ್ ಅಹಂಕಾರದಿಂದ ಬೀಗುತ್ತಿದೆ. ಅವರಿಗೆ ವಿಧಾನಪರಿಷತ್ ಚುನಾವಣೆಯಲ್ಲಿ ತಕ್ಕ ತಿರುಗೇಟು ನೀಡುತ್ತೇವೆ. 15ಕ್ಕಿಂತಲೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲುತ್ತೇವೆ' ಎಂದರು.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ, ಸಚಿವರಾದ ಗೋವಿಂದ ಕಾರಜೋಳ, ಶಂಕರಪಾಟೀಲ ಮುನೇನಕೊಪ್ಪ, ಪಕ್ಷದ ಧಾರವಾಡ ಜಿಲ್ಲಾ ಘಟಕದ ಅಧ್ಯಕ್ಷ ಅರವಿಂದ ಬೆಲ್ಲದ, ಶಾಸಕರಾದ ಸಿ.ಎಂ. ನಿಂಬಣ್ಣನವರ, ಅಮೃತ ದೇಸಾಯಿ ಇನ್ನಿತರರಿದ್ದರು.

ಉಡುಪಿ ವರದಿ: ಉಡುಪಿಯಲ್ಲಿ ಜನಸ್ವರಾಜ್ ಸಮಾವೇಶದಲ್ಲಿಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಭಾಗವಹಿಸಿದ್ದರು. ಸಭೆಯಲ್ಲಿ ಮಾತನಾಡಿದ ಸಚಿವ ಕೋಟ ಶ್ರೀನಿವಾಸಪೂಜಾರಿ, 'ಚುನಾವಣೆಗಳಿಗೂ, ಕೃಷಿ ಕಾಯ್ದೆ ಹಿಂಪಡೆದಿರುವುದಕ್ಕೂ ಸಂಬಂಧವಿಲ್ಲ' ಎಂದರು.

ಇಂಧನ ಸಚಿವ ಸುನಿಲ್ ಕುಮಾರ್, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ಕುಂದಾಪುರ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಅವರು ಪಾಲ್ಗೊಂಡಿದ್ದರು.

ಗ್ರಾ.ಪಂ ಅಧ್ಯಕ್ಷರಿಗೆ ಕಾರು ಸೌಲಭ್ಯ– ಕಟೀಲ್ ಸಲಹೆ

ಸಿರವಾರ (ರಾಯಚೂರು ಜಿಲ್ಲೆ): 'ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರಿಗೆ ನೀಡುವಂತೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೂ ಕಾರು ಸೌಲಭ್ಯ ನೀಡಬೇಕು. ಸದಸ್ಯರಿಗೂ ಮಾಸಿಕ ₹10 ಸಾವಿರ ಗೌರವಧನ ನೀಡಬೇಕು' ಎಂದು ಮುಖ್ಯಮಂತ್ರಿ ಅವರಿಗೆ ಸಲಹೆ ನೀಡಿದ್ದೇನೆ' ಎಂದು ಬಿಜೆಪಿ ರಾಜ್ಯಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು.

ಸಿರವಾರ ಪಟ್ಟಣದಲ್ಲಿ ಜನಸ್ವರಾಜ್ ಸಮಾವೇಶ ಉದ್ಘಾಟಿಸಿ ಮಾತನಾಡಿದರು. 'ಮುಖ್ಯಮಂತ್ರಿ ಈಗಾಗಲೇ ರಾಜ್ಯದ 750 ಗ್ರಾಮಗಳನ್ನು ಅಮೃತ ಯೋಜನೆಯಡಿ ಅಭಿವೃದ್ಧಿ ಮಾಡುತ್ತಿದ್ದಾರೆ. ಗ್ರಾಮ ಪಂಚಾಯಿತಿಗಳನ್ನು ಕೇರಳ ಮಾದರಿಯಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಬಿಜೆಪಿ ಯೋಜಿಸಿದೆ' ಎಂದು ತಿಳಿಸಿದರು.

ರೈತರ ಆದಾಯ ದ್ವಿಗುಣಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಜಾರಿಗೆ ತರಲು ಹೊರಟಿದ್ದ ಕೃಷಿ ಕಾಯ್ದೆಗಳಿಗೆ ಕಾಂಗ್ರೆಸ್ ಅಡ್ಡಗಾಲು ಹಾಕಿತು

ಜಗದೀಶ್ ಶೆಟ್ಟರ್ , ಶಾಸಕ

ತರಳಬಾಳು ಮಠದ ಪೀಠಾಧ್ಯಕ್ಷ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ

ರಿಯಲ್ ಎಸ್ಟೇಟ್ ದಂಧೆ: ಕಡಿವಾಣವೇ ಕಂಟಕ

ಪ್ರಜಾವಾಣಿ ವಾರ್ತೆ

ಸಿರಿಗೆರೆ (ಚಿತ್ರದುರ್ಗ): ರಿಯಲ್ ಎಸ್ಟೇಟ್ ವ್ಯವಹಾರಗಳಿಗೆ ಧಾರ್ಮಿಕ ಕೇಂದ್ರವನ್ನು ದುರ್ಬಳಕೆ ಮಾಡಿಕೊಳ್ಳುವ ಹುನ್ನಾರಕ್ಕೆ ಕಡಿವಾಣ ಹಾಕಿರುವುದೇ ಕಂಟಕವಾಗಿದೆ ಎಂದು ತರಳಬಾಳು ಮಠದ ಪೀಠಾಧ್ಯಕ್ಷ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಾಧು ಸದ್ಧರ್ಮ ವೀರಶೈವ ಸಂಘ ಸಿರಿಗೆರೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಮಾತನಾಡಿದ ಸ್ವಾಮೀಜಿ, 'ಬೆಂಗಳೂರಿನ ತರಳಬಾಳು ಕೇಂದ್ರ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಬಳಕೆ ಆಗುತ್ತಿತ್ತು. ಈ ಬಗ್ಗೆ ಹಲವು ಬಾರಿ ಎಚ್ಚರಿಕೆ ನೀಡಲಾಗಿತ್ತು. ಸುಧಾರಣೆ ಕಾಣದಿದ್ದಾಗ ಕೆಲ ನಿರ್ಬಂಧ ವಿಧಿಸಲಾಯಿತು. ಆಗ ನಮ್ಮ ಹೆಸರು ದುರುಪಯೋಗ ಮಾಡಿಕೊಂಡು ಮಠದ ಬಗ್ಗೆ ಗೊಂದಲ ಸೃಷ್ಟಿಸಲಾಯಿತು' ಎಂದರು.

'ರಿಯಲ್ ಎಸ್ಟೇಟ್ ವ್ಯವಹಾರ ಮಾಡುವಂತೆ ಯಾರಿಗೂ ಸಲಹೆ ನೀಡಿಲ್ಲ. ಇದಕ್ಕೆ ಮಠದ ಹಣ, ಬಂಡವಾಳ ಕೊಟ್ಟಿಲ್ಲ. ಶಿಷ್ಯರು, ಭಕ್ತರ ಉದ್ಯಮ, ವ್ಯವಹಾರಕ್ಕೆ ಶುಭ ಹಾರೈಸಲಾಗಿದೆ. ಇದಕ್ಕೆ ಅನರ್ಥ ಕಲ್ಪಿಸಿ ಅಪಪ್ರಚಾರ ಮಾಡಲಾಗಿದೆ. ಮಠದಿಂದ ಉಪಕಾರ ಪಡೆದವರು, ಮಠವನ್ನು ತಿಂದು ತೇಗಿದವರೇ ತಿರುಗಿ ಬಿದ್ದಿದ್ದಾರೆ. ಈ ಮಠ ರಾಜಾಶ್ರಯದಲ್ಲಿ ಬೆಳೆದಿಲ್ಲ; ಭಕ್ತರೇ ಕಟ್ಟಿ ಬೆಳೆಸಿದ್ದಾರೆ. ಅಷ್ಟು ಸುಲಭವಾಗಿ ಏನೂ ಮಾಡಲಾಗದು' ಎಂದರು.

'ತರಳಬಾಳು ವಿದ್ಯಾಸಂಸ್ಥೆಯ ಕಾರ್ಯದರ್ಶಿಯಾಗಿದ್ದವರ ಹೆಸರಿನಲ್ಲಿ ಸಿರಿಗೆರೆಯಲ್ಲಿ 55 ಎಕರೆ ಜಮೀನಿತ್ತು. ಇದರಲ್ಲಿ ಒಂದಷ್ಟು ಭೂಮಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಳ್ಳಲಾಯಿತು. ಪರಿಹಾರವಾಗಿ ಬಂದ ₹ 36 ಲಕ್ಷ ಈವರೆಗೆ ಮಠಕ್ಕೆ ನೀಡಿಲ್ಲ. ಮಠದ ಆಸ್ತಿಯನ್ನು ಸ್ವಾಧೀನಮಾಡಿಕೊಳ್ಳಲು ಪ್ರಯತ್ನಿಸಿದರು' ಎಂದರು.

ಉತ್ತರಾಧಿಕಾರಿ ನೇಮಕಕ್ಕೆ ಸಮಿತಿ ರಚನೆ

ತರಳಬಾಳು ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ಉತ್ತರಾಧಿಕಾರಿ ನೇಮಕಕ್ಕೆ ಸಮಿತಿ ರಚಿಸಲು ಸಾಧು ಸದ್ಧರ್ಮ ವೀರಶೈವ ಸಂಘದ ಸಭೆ ತೀರ್ಮಾನಿಸಿತು.

'ಏಕ ಚಕ್ರಾಧಿಪತ್ಯ ನೆಲೆಯೂರುತ್ತಿದೆ ಎಂಬ ದೂಷಣೆ ಕೇಳಿಬರುತ್ತಿದೆ. ಸಮಾಜವು ಉತ್ತರಾಧಿಕಾರಿ ನೇಮಕವನ್ನು ಗಂಭೀರವಾಗಿ ಪರಿಗಣಿಸಬೇಕು. ಸಮಿತಿಯೊಂದನ್ನು ರಚಿಸಿ ನಮ್ಮೊಂದಿಗೆ ಚರ್ಚಿಸಿ ಮುಂದುವರಿಯುವುದು ಒಳಿತು' ಎಂದು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಭೆಯ ಮುಂದಿಟ್ಟರು. ಇದನ್ನು ಒಪ್ಪದ ಭಕ್ತರು, 'ನೀವೇ ಮುಂದುವರಿಯಬೇಕು , ಉತ್ತರಾಧಿಕಾರಿ ಆಯ್ಕೆ ಮಾಡಬೇಕು' ಎಂದು ಪಟ್ಟು ಹಿಡಿದರು. ಇದಕ್ಕೆ ಸ್ವಾಮೀಜಿ ಒಪ್ಪಲಿಲ್ಲ.

'ಹಿಂದಿನ ಗುರುಗಳಾದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ 60 ವರ್ಷಕ್ಕೆ ಪೀಠತ್ಯಾಗ ಪತ್ರವನ್ನು ಸಮಾಜಕ್ಕೆ ನೀಡಿದ್ದರು. ಅಂತಹ ಯಾವುದೇ ಪತ್ರವನ್ನು ನಾವು ಈವರೆಗೆ ನೀಡಿಲ್ಲ. 2012ರಲ್ಲಿ ಪೀಠಾಧ್ಯಕ್ಷ ಸ್ಥಾನಕ್ಕೆ ನಿವೃತ್ತಿ ಘೋಷಣೆ ಮಾಡಲಾಯಿತು ಎಂಬುದು ಸುಳ್ಳು. ನಿವೃತ್ತಿ ಘೋಷಣೆ ಮಾಡುವಂತೆ ಕೋರಿಕೊಳ್ಳಲಾಗಿತ್ತು ಅಷ್ಟೇ' ಎಂದು ಸ್ವಾಮೀಜಿ ಸ್ಪಷ್ಟಪಡಿಸಿದರು.

ಚಿತ್ರದುರ್ಗ ತಾಲ್ಲೂಕಿನ ಸಿರಿಗೆರೆಯ ತರಳಬಾಳು ಮಠದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ಮುದುಡದಿರಲಿ ಮೊಗ್ಗಿನ ಮನಸು

ಸುಕೃತ ಎಸ್.

ಕೈಗೆ ಸಿಕ್ಕಿದ್ದು ಬಿಸಾಡುವುದು; ಹೇಳಿದ ಒಂದು ಮಾತೂ ಕೇಳುವುದಿಲ್ಲ; ಯಾವುದನ್ನು ಮಾಡಬೇಡ ಎನ್ನುತ್ತೇವೋ ಅದನ್ನೇ ಮಾಡುತ್ತಾನೆ/ಳೆ. ಏನಾದರು ಹೇಳಿದರೆ, 'ಬಾಯಿಮುಚ್ಚಿಕೊಂಡು ಇರಮ್ಮ', 'ನಾನು ಮಾಡುವುದಿಲ್ಲ', 'ನನ್ನ ಒಂಟಿಯಾಗಿ ಬಿಟ್ಟುಬಿಡಿ' ಎಂದೆಲ್ಲಾ ಕೂಗುತ್ತಾನೆ/ಳೆ – ಇದು ಸುಮಾರು 7–8 ವರ್ಷ ವಯಸ್ಸಿನ ಮಕ್ಕಳ ಪೋಷಕರ ಸಾಮಾನ್ಯ ಗೋಣಗಾಟ. ಇತ್ತೀಚೆಗೆ, ಪೋಷಕರು ತಮ್ಮ ಮೇಲೆ ಓದು ಎಂದು ಒತ್ತಡ ಹಾಕುತ್ತಾರೆ ಎಂದು ಹೈಸ್ಕೂಲ್ ಮಕ್ಕಳು ಮನೆಬಿಟ್ಟು ಹೋಗಿದ್ದ ಘಟನೆಯನ್ನು ನೆನಪಿಸಿಕೊಳ್ಳಬಹುದು. ಈ ರೀತಿಯ ಘಟನೆಗಳು ಪದೇ ಪದೇ ನಡೆಯುತ್ತಲೇ ಇವೆ.

ನಗರಗಳಲ್ಲಿ ವಾಸಿಸುವ ಕುಟುಂಬ; ಒತ್ತಡದ ಬದುಕು; ಬೆಳಿಗ್ಗೆ ಮನೆ ಬಿಟ್ಟ ಪೋಷಕರು ಮತ್ತೆ ಮನೆಗೆ ಬರುವುದು ಸಂಜೆಯೇ. ಸುಸ್ತಾಗಿ ಬಂದ ಪೋಷಕರಿಗೆ ಮಕ್ಕಳ ಆರೈಕೆ ಕೆಲವೊಮ್ಮೆ ಹೊರೆ ಎನ್ನಿಸಬಹುದು. ಅವರ ಆಟ–ಪಾಠದ ಬಗ್ಗೆ ಗಮನ ನೀಡಲು ಸಾಧ್ಯವಾಗದು. ಇಂಥ ಸಂದರ್ಭದಲ್ಲಿ ಮಕ್ಕಳು ಹಠ ಮಾಡಿದರೆ, ತಮ್ಮ ಮಾತು ಕೇಳಲಿಲ್ಲ ಎಂದಾಗ ಸಹಜವೆಂಬಂತೆ ಹೊಡೆಯುವುದು, ಶಿಕ್ಷೆ ನೀಡುವುದನ್ನು ಪೋಷಕರು ಮಾಡುತ್ತಾರೆ. ನಿರ್ಲಕ್ಷ್ಯಕ್ಕೆ ಒಳಗಾದ ಮಕ್ಕಳ ಮೇಲೆ ಇಂಥ ಶಿಕ್ಷೆಗಳು ಮತ್ತಷ್ಟು ಒತ್ತಡವನ್ನು ಸೃಷ್ಟಿಸುತ್ತವೆ.

> ಮಕ್ಕಳಿಗೆ ಅತಿಯಾದ ಸ್ವಾತಂತ್ರ್ಯ ನೀಡಿದರೆ ಓದುವುದಿಲ್ಲ, ಮೊಬೈಲ್ ನೋಡ್ಕೊಂಡು ಕಾಲಹರಣ ಮಾಡ್ತಾರೆ; ಕಟ್ಟುನಿಟ್ಟಾಗಿ ಸಲಹಿದರೆ ಮನೆ ಬಿಟ್ಟು ಓಡಿ ಹೋಗುವುದು, ಆತ್ಮಹತ್ಯೆಯಂತಹ ದುರಂತ ಸಂಭವಿಸಬಹುದು. ಹಾಗಾದರೆ ಪೋಷಕರು ಏನು ಮಾಡಬೇಕು?

'ನಾನು ಚಿಕ್ಕವಳಿದ್ದಾಗ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಆಗಿತ್ತು. ಈ ವಿಷಯವನ್ನು ಮನೆಯಲ್ಲಿ ಹೇಳಲು ನನಗೆ ಧೈರ್ಯ ಬರಲಿಲ್ಲ. ಜೊತೆಗೆ ಅವರು ನಂಬುತ್ತಾರೋ ಇಲ್ಲವೋ ಎನ್ನುವ ಭಯ ಕಾಡಿತು' ಎಂದು ನಟಿ ನೀನಾ ಗುಪ್ತಾ ಅವರು ಒಮ್ಮೆ ಹೇಳಿಕೊಂಡಿದ್ದಾರೆ. 'ಮನೆಯಲ್ಲಿ ಇಂಥ ಪರಿಸ್ಥಿತಿ ಬರಬಾರದು. ಮಕ್ಕಳು ತಮಗಾದ ಸಮಸ್ಯೆಯನ್ನು ಪೋಷಕರ ಬಳಿ ಹೇಳಿಕೊಳ್ಳಬಹುದು, ಅವರು ಅದನ್ನು ಕೇಳಿಸಿಕೊಳ್ಳುತ್ತಾರೆ ಎನ್ನುವ ನಂಬಿಕೆಯನ್ನು ಪೋಷಕರು ಬೆಳೆಸಬೇಕು' ಎನ್ನುತ್ತಾರೆ ಮಂಜುಳಾ.

ಮಂಜುಳಾ ಎಂ.ವೈ

ಮಕ್ಕಳು ಯಾಕೆ ಹೀಗೆ ವರ್ತಿಸುತ್ತಿದ್ದಾರೆ ಎನ್ನುವುದನ್ನು ತಿಳಿಯುವುದು ಮೊದಲ ಆದ್ಯತೆ ಆಗಬೇಕು; ಅವರ ಬಗ್ಗೆ ಬೇಸರ ಅಥವಾ ಸಿಟ್ಟು ಮಾಡಿಕೊಳ್ಳಬಾರದು. ಹಾಗಾದರೆ, ಕಾರಣ ತಿಳಿಯುವುದು ಹೇಗೆ? ಮೊದಲೇ ಹೇಳಿದ ಹಾಗೆ ಮಕ್ಕಳಿಗೆ ಹೆಚ್ಚು ಸಮಯ ನೀಡಬೇಕು. ಅವರ ಮಾತುಗಳನ್ನು ಕೇಳಿಸಿಕೊಳ್ಳುವ ವ್ಯವಧಾನ ನಮ್ಮಲ್ಲಿರಬೇಕು. ಆಗ ಮಕ್ಕಳೇ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ. ನಮ್ಮಲ್ಲಿ ಒಂದು ವೇಳೆ ಹೇಳಿಕೊಳ್ಳಲಿಲ್ಲ ಎಂದರೆ, ಅವರೊಂದಿಗೆ ಆಟವಾಡಬೇಕು. ಆಟವಾಡುತ್ತಾ ಅವರ ಮನಸ್ಸು ಪ್ರಫುಲ್ಲವಾಗಿರುತ್ತದೆ. ಈ ಸಮಯದಲ್ಲಿ ಅವರು ಎಲ್ಲವನ್ನೂ ಹೇಳಿಕೊಳ್ಳುತ್ತಾರೆ ಎನ್ನುವುದು ಅವರ ಅಭಿಪ್ರಾಯ.

'ಒಳ್ಳೆಯ ನಡತೆಗೆ ಮಕ್ಕಳಿಗೆ ಉಡುಗೊರೆ ಕೊಡುವ ಅಭ್ಯಾಸವನ್ನು ಪೋಷಕರು ಬೆಳೆಸಿಕೊಳ್ಳಬೇಕು. 'ನೀನು ಈ ವಾರವೆಲ್ಲಾ ಸಿಟ್ಟು ಮಾಡಿಲ್ಲ ಎಂದರೆ, ನಿನಗೆ ಇಷ್ಟವಾದ ಚಾಕೊಲೇಟ್ ಕೊಡಿಸುತ್ತೇನೆ' ಇತ್ಯಾದಿ. ಆಗ ಮಕ್ಕಳು ಹೇಳಿದ ಮಾತು ಕೇಳುತ್ತಾರೆ. ಈ ಯಾವುದಕ್ಕೂ ಮಕ್ಕಳು ಸರಿಹೋಗಲಿಲ್ಲ ಎಂದಾದರೆ ಅವರನ್ನು ಮನೋವೈದ್ಯರ ಬಳಿ ಕರೆದುಕೊಂಡು ಹೋಗುವುದು ಉತ್ತಮ' ಎಂದು ಸಲಹೆ ನೀಡುತ್ತಾರೆ.

ಮಕ್ಕಳು ಯಾಕೆ ಹೀಗೆ ವರ್ತಿಸುತ್ತಾರೆ?

'ಮಕ್ಕಳ ಈ ರೀತಿಯ ವರ್ತನೆಗೆ ಮನೆಯ ವಾತಾವರಣವೇ ಮೂಲ ಕಾರಣ. ಶಾಲೆಯಲ್ಲೋ, ಮನೆಯ ಹತ್ತಿರ ಆಡವಾಡಲು ಹೋಗಿದ್ದ ಸಂದರ್ಭದಲ್ಲೋ... ಹೀಗೆ ನಾನಾ ಸನ್ನಿವೇಶಗಳಲ್ಲಿ ದೈಹಿಕವಾಗಿರಬಹುದು ಅಥವಾ ಮನಸ್ಸಿಗೆ ಸಂಬಂಧಿಸಿದ್ದಾಗಿರಬಹುದು ತೊಂದರೆಗೆ ಒಳಗಾಗಿರುತ್ತಾರೆ. ಹೆಚ್ಚಿನ ಬಾರಿ ಮಕ್ಕಳು ತಮಗಾದ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ. ಲೈಂಗಿಕ ದೌರ್ಜನ್ಯದಂಥ ವಿಷಯಗಳಲ್ಲಿ ಮಕ್ಕಳು ಕೆಲವು ಬಾರಿ ಹೇಳಿಕೊಳ್ಳುವುದಿಲ್ಲ' ಎನ್ನುತ್ತಾರೆ ಕ್ರೈಸ್ಟ್ ವಿಶ್ವವಿದ್ಯಾಲಯದ ಮನೋವಿಜ್ಞಾನ ವಿಭಾಗದ ಪ್ರಾಧ್ಯಾಪಕಿ ಮಂಜುಳಾ ಎಂ.ವೈ.

ಪೋಷಕರದ್ದೇ ತಪ್ಪು

ಇಂಥ ಸಂದರ್ಭಗಳಲ್ಲಿ ಮಕ್ಕಳಿಗಿಂತ ಪೋಷಕರದ್ದೇ ಹೆಚ್ಚು ತಪ್ಪುಗಳಿರುತ್ತವೆ ಎನ್ನುತ್ತಾರೆ ಮನಃಶಾಸ್ತ್ರಜ್ಞರು. 'ಇದು ತುಂಬಾ ಸಂಕೀರ್ಣವಾದ ವಿಚಾರ. ಕ್ರಿಯೆಗೆ ಪ್ರತಿಕ್ರಿಯೆ ಎನ್ನುವಂತೆ ಒಂದಕ್ಕೊಂದು ಬೆಸೆದುಕೊಂಡಿದೆ. ಮಕ್ಕಳು ಮಾತು ಕೇಳುತ್ತಿಲ್ಲ ಎಂದು ಪೋಷಕರು ಮತ್ತಷ್ಟು ಸಿಟ್ಟು ಮಾಡುವುದು, ಅವರಿಗೆ ಶಿಕ್ಷೆ ನೀಡುವುದು. ಶಿಕ್ಷೆಯು ಮಕ್ಕಳಿಗೆ ಹಿಂಸೆ ಆಗುವುದು, ಮಕ್ಕಳು ಮತ್ತೆ ತಪ್ಪು ಮಾಡುವುದು, ಹಠ ಮಾಡುವುದು ಹೀಗೆ ಮುಂದುವರೆಯುತ್ತದೆ. ಈ ಚೈನ್ ಬ್ರೇಕ್ ಆಗಬೇಕಿದೆ. ಬ್ರೇಕ್ ಮಾಡುವಲ್ಲಿ ಪೋಷಕರ ಪಾತ್ರ ಮಹತ್ವದ್ದು' ಎನ್ನುತ್ತಾರೆ ಮಂಜುಳಾ.

ಖ್ಯಾತ ನರವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಹೇಳುವಂತೆ ಮಗುವಿನ ಮೊದಲ ಐದು ವರ್ಷ ಬಹಳ ಮುಖ್ಯವಾಗುತ್ತದೆ. ಅವರ ವ್ಯಕ್ತಿತ್ವವು ಮೊದಲ ಐದು ವರ್ಷದಲ್ಲೇ ಮೊಳೆಯುತ್ತದೆ. ಮಕ್ಕಳು ಪೋಷಕರನ್ನೇ ಅನುಸರಿಸುತ್ತಾರೆ. ಮನೆಯಲ್ಲಿ ಸದಾ ಆಗುವ ಜಗಳ, ಕುಟುಂಬದ ಬೇರೆ ಬೇರೆ ಸಮಸ್ಯೆಗಳು ಮಕ್ಕಳ ಮನಃಸ್ಥಿತಿಯ ಮೇಲೆ ಬಹಳ ಪರಿಣಾಮ ಬೀರುತ್ತವೆ. ಅವರ ಹಠಮಾರಿತನಕ್ಕೆ, ಮಾತು ಕೇಳದೇ ಇರುವುದಕ್ಕೆ ಇದೂ ಕಾರಣ ಎನ್ನಬಹುದು.

ಪೋಷಕರು ಏನು ಮಾಡಬಾರದು?

- ಪೋಷಕರು ಹೊಡೆದರೂ, ಪ್ರೀತಿ ಮಾಡಿದರೂ ಮಕ್ಕಳಿಗೆ ತೊಂದರೆ ಇಲ್ಲ, ಒಪ್ಪಿಕೊಳ್ಳುತ್ತಾರೆ. ಆದರೆ, ನಿರ್ಲಕ್ಷ್ಯವನ್ನು ಮಾತ್ರ ಅವರು ಸಹಿಸುವುದಿಲ್ಲ. ಎಷ್ಟೇ ಒತ್ತಡದಲ್ಲಿ ಇರಲಿ ಮಕ್ಕಳು ಬಯಸುವ ಸಮಯವನ್ನು ಅವರಿಗೆ ನೀಡಲೇಬೇಕು.
- ಮಕ್ಕಳಿಗೆ ಮೌಲ್ಯಗಳ ಸಂಘರ್ಷ ಬರದಂತೆ ನೋಡಿಕೊಳ್ಳಬೇಕು. ಟಿ.ವಿ ನೋಡಬಾರದು ಎಂದು ಮಕ್ಕಳಿಗೆ ಹೇಳುವುದು, ಮತ್ತೆ ಪೋಷಕರು ಗಂಟೆಗಟ್ಟಲೆ ಕೂತು ಟಿ.ವಿ ನೋಡುವುದು. ಸುಳ್ಳು ಹೇಳಬಾರದು ಎಂದು ಮಕ್ಕಳಿಗೆ ಹೇಳುವುದು ಮತ್ತು ಯಾರದ್ದಾದರೂ ಕರೆ ಬಂದಾಗ 'ಅಮ್ಮ/ಅಪ್ಪ ಮನೆಯಲ್ಲಿ ಇಲ್ಲ ಎಂದು ಹೇಳು' ಎಂದು ಮಕ್ಕಳಿಂದಲೇ ಹೇಳಿಸುವುದು. ಇದು ಮಕ್ಕಳಲ್ಲಿ ಮೌಲ್ಯ ಸಂಘರ್ಷಕ್ಕೆ ಕಾರಣವಾಗುತ್ತದೆ.
- ಮಕ್ಕಳ ಈ ವರ್ತನೆಗಳಿಗೆ ಶಿಕ್ಷೆ ಕೊಡುವುದು, ಬೈಯುವುದು ಖಂಡಿತವಾಗಿಯೂ ಪರಿಹಾರವಲ್ಲ. ಇದು ಸಮಸ್ಯೆಯನ್ನು ಇನ್ನಷ್ಟು ಬಿಗಡಾಯಿಸುತ್ತದೆ. ಮಕ್ಕಳನ್ನು ಇನ್ನಷ್ಟು ತೊಂದರೆಗೆ ಒಳಗಾಗುವಂತೆ ನಾವೇ ಮಾಡಿದಂತಾಗುತ್ತದೆ.

ಮುಟ್ಟಾದಾಗ ಹೊಟ್ಟೆನೋವು: ಪರಿಹಾರವೇನು?

ಸ್ಪಂದನ

ಡಾ. ವೀಣಾ ಎಸ್. ಭಟ್

- **ನನಗೆ 30 ವರ್ಷ. ಮದುವೆಯಾಗಿ 12 ವರ್ಷಗಳಾಗಿವೆ. ಇಬ್ಬರು ಮಕ್ಕಳಿದ್ದಾರೆ. ನನಗೆ 25 ದಿನಗಳಿಗೊಮ್ಮೆ ಮುಟ್ಟಾಗುತ್ತದೆ. ಮೊದಲ ಮೂರು ದಿನಗಳು ಸ್ವಲ್ಪ ಮಾತ್ರ ರಕ್ತಸ್ರಾವ ಆಗುತ್ತದೆ. 4-5ನೇ ದಿನ ಹೆಚ್ಚು ಸ್ರಾವವಾಗಿ ತುಂಬಾ ಹೊಟ್ಟೆನೋವು ಇರುತ್ತದೆ. 6ನೇ ದಿನದಿಂದ ಕಡಿಮೆಯಾಗುತ್ತಾ ಬರುತ್ತದೆ. ಪರಿಹಾರ ತಿಳಿಸಿ?**

ಪವಿತ್ರಾ, ಬೆಂಗಳೂರು

ಪವಿತ್ರಾರವರೇ, ನಿಮಗಿರುವುದು ಸೆಕೆಂಡರಿ ಡಿಸ್‌ಮೆನೋರಿಯಾ (ದ್ವಿತೀಯ ಸ್ತರದ ಋತುರೋಧನ). ಈ ತರಹದ ಹೊಟ್ಟೆನೋವು ಸಾಮಾನ್ಯವಾಗಿ ಸಂತಾನೋತ್ಪತ್ತಿ ಅಂಗಗಳಲ್ಲಾಗುವ ತೊಂದರೆಯಿಂದ ಉಂಟಾಗುತ್ತದೆ. ಈ ನೋವು ಮುಟ್ಟು ಬರುವ ಮೊದಲೇ ಆರಂಭವಾಗುವಂತಹದ್ದು. ನಂತರವೂ ಮುಂದುವರೆಯುತ್ತದೆ. ನೀವು ವೈದ್ಯರ ಸಲಹೆಯ ಮೇರೆಗೆ ಒಮ್ಮೆ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಪರೀಕ್ಷೆ ಮಾಡಿಸಿಕೊಳ್ಳಿ. ಯಾಕೆಂದರೆ ಇಂತಹ ಸೆಕೆಂಡರಿ ಡಿಸ್‌ಮೆನೋರಿಯಾ ಗರ್ಭಕೋಶದಲ್ಲಿ ನಾರುಗಡ್ಡೆಗಳಿದ್ದಾಗ (ಫೈಬ್ರಾಯ್ಡ್) ಕಾಣಿಸಿಕೊಳ್ಳಬಹುದು. ಮತ್ತು ಹೆಚ್ಚಿನ ಸಂದರ್ಭದಲ್ಲಿ ಎಂಡೋಮೆಟ್ರಿಯೋಸಿಸ್ ಹಾಗೂ ಅಡಿನೋಮಯೋಸಿಸ್‌ನಿಂದ ಉಂಟಾಗುತ್ತದೆ. ಗರ್ಭಕೋಶ, ಅಂಡಾಶಯ ಹಾಗೂ ಗರ್ಭನಾಳದ ಸೋಂಕಾಗಿದ್ದಾಗ, ಕೆಲವೊಮ್ಮೆ ಕಾಪರ್ಟಿ ಅಳವಡಿಸಿಕೊಂಡಾಗಲೂ ಗರ್ಭಕೋಶಕ್ಕೆ ಆ ಮೂಲಕ ನಂಜುಂಟಾಗಿದ್ದರೂ ಈ ರೀತಿಯ ನೋವು ಕಾಣಿಸಿಕೊಳ್ಳಬಹುದು. ಆದ್ದರಿಂದ ನೀವು ನಿರ್ಲಕ್ಷ್ಯ ಮಾಡದೇ ತಜ್ಞ ವೈದ್ಯರ ಹತ್ತಿರ ಸೂಕ್ತ ತಪಾಸಣೆ ಹಾಗೂ ಅವಶ್ಯವಾದಲ್ಲಿ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಪರೀಕ್ಷೆಗಳಿಂದ ನಿಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಿ. ಋತುಚಕ್ರದ ಸಮಯದಲ್ಲಿ ನೋವು ನಿವಾರಕ ಮಾತ್ರೆಗಳನ್ನು ವೈದ್ಯರ ಸಲಹೆ ಮೇರೆಗೆ ತೆಗೆದುಕೊಳ್ಳಿ.

- **ನನಗೆ 35 ವರ್ಷ. ಒಂದು ತಿಂಗಳು ಮುಟ್ಟಾದಾಗ ಬ್ಲೀಡಿಂಗ್ ಮೂರುದಿನ ಆಗುತ್ತದೆ. ಇನ್ನೊಂದು ಬಾರಿ ಮುಟ್ಟಾದಾಗ ಎರಡು ದಿನಕ್ಕೇ ನಿಲ್ಲುತ್ತದೆ. ಯಾಕೆ ಮುಟ್ಟು ಹೀಗಾಗುತ್ತದೆ ತಿಳಿಸಿ?**

ಹೆಸರು, ಊರು ತಿಳಿಸಿಲ್ಲ

ಋತುಚಕ್ರದಲ್ಲಿ ರಕ್ತಸ್ರಾವ ಒಬ್ಬೊಬ್ಬರಿಗೆ ಒಂದೊಂದು ತರನಾಗಿ ಆಗುತ್ತದೆ. ಕೆಲವರಿಗೆ ಎರಡೇ ದಿನ ರಕ್ತಸ್ರಾವವಾದರೆ ಕೆಲವರಿಗೆ ಮೂರು– ನಾಲ್ಕು ದಿನ ರಕ್ತಸ್ರಾವವಾಗುತ್ತದೆ. ಇದರಿಂದ ಏನೂ ತೊಂದರೆಯಿಲ್ಲ. ಅಂದರೆ ತಿಂಗಳ ಮುಟ್ಟಿನಲ್ಲಿ 30 ಮಿ.ಲೀ. ನಿಂದ 80 ಮಿ.ಲೀ ತನಕ ರಕ್ತಸ್ರಾವವಾಗುವುದು ಸಹಜ. ಹಾಗಾಗಿ ನೀವೇನೂ ಚಿಂತಿಸಬೇಡಿ. ಅಧಿಕ ರಕ್ತಸ್ರಾವವಾದರಷ್ಟೇ ಅಂದರೆ 6-7 ದಿನವಾದರೂ ರಕ್ತಸ್ರಾವ ನಿಲ್ಲದಿದ್ದಲ್ಲಿ ಮತ್ತು ದಿನಕ್ಕೆ ಐದಾರು ಪ್ಯಾಡ್‌ಗಳಿಗಿಂತಲೂ ಹೆಚ್ಚು ಬದಲಿಸಬೇಕಾಗಿ ಬಂದರೆ ಆ ಸಂದರ್ಭದಲ್ಲಿ ತಜ್ಞ ವೈದ್ಯರ ಸಲಹೆ ಪಡೆದುಕೊಳ್ಳಿ.

- **ನನಗೆ 32 ವರ್ಷಗಳು. 56 ಕೆ.ಜಿ ಇದ್ದೀನಿ. 40 ದಿನಕ್ಕೊಮ್ಮೆ ಮುಟ್ಟಾಗುತ್ತದೆ. ಬೇರೆ ಯಾವುದೇ ಸಮಸ್ಯೆ ಇಲ್ಲ. ವೈದ್ಯರು 'ನಿಮಗೆ ಅಂಡಾಣು ಬಿಡುಗಡೆಯಾಗುತ್ತಿಲ್ಲ' ಎಂದು ಹೇಳಿದ್ದಾರೆ. ನನಗೆ ಗರ್ಭ ಧರಿಸಲು ಏನಾದರೂ ಸಮಸ್ಯೆಯಾಗುತ್ತದೆಯೇ? ದಯವಿಟ್ಟು ತಿಳಿಸಿ.**

ಹೆಸರು, ಊರು ತಿಳಿಸಿಲ್ಲ

ನೀವು ಎಷ್ಟು ಎತ್ತರವಿದ್ದೀರಿ ಎಂದು ತಿಳಿಸಿಲ್ಲ. ನಿಮಗೆ ಅಂಡಾಣು ಬಿಡುಗಡೆಯಾಗುತ್ತಿಲ್ಲ ಎಂದರೆ ನಿಮಗೆ ಪಿ.ಸಿ.ಒ.ಡಿ ಸಮಸ್ಯೆ ಇರಬಹುದು. ನಾನು ಈ ಸಮಸ್ಯೆಯ ಬಗ್ಗೆ ಹಿಂದಿನ ಸಂಚಿಕೆಗಳಲ್ಲಿ ವಿವರವಾಗಿ ತಿಳಿಸಿದ್ದೀನಿ. ಈ ಬಗ್ಗೆ ನೀವು ಓದಿಕೊಂಡು ನಿಮ್ಮ ಜೀವನಶೈಲಿ ಬದಲಾಯಿಸಿಕೊಳ್ಳಿ. ನಿಮ್ಮ ಸಮಸ್ಯೆ ಸರಿಹೋಗಬಹುದು. ವೈದ್ಯರು ಈಗಾಗಲೇ ಚಿಕಿತ್ಸೆಕೊಡುತ್ತಿದ್ದರೆ ಅದನ್ನು ಮುಂದುವರೆಸಿ.

- **ನನ್ನ ಸ್ನೇಹಿತೆ 18 ವರ್ಷದವಳು. ಅವಳು ವರ್ಷಕ್ಕೊಮ್ಮೆ ಮುಟ್ಟಾಗುತ್ತಾಳೆ ಮತ್ತು 3 ತಿಂಗಳ ತನಕ ರಕ್ತಸ್ರಾವವಾಗುತ್ತದೆ. ಈ ಸಮಸ್ಯೆ ಅವಳ 9ನೇ ವಯಸ್ಸಿನಿಂದಲೇ ಆರಂಭವಾಗಿದೆ. ಯಾಕೆ ಹೀಗೆ? ಏನಾದರೂ ಪರಿಹಾರವಿದೆಯೇ?**

ಹೆಸರು, ಊರು ತಿಳಿಸಿಲ್ಲ

ನಿಮ್ಮ ಸ್ನೇಹಿತೆಗೆ 9 ವರ್ಷಕ್ಕೆ, ಬೇಗನೇ ಋತುಪ್ರಾಪ್ತಿಯಾಗಿರುವುದರಿಂದ, ತಿಂಗಳಿಗೆ ಸರಿಯಾಗಿ 18 ವರ್ಷವಾದರೂ ಋತುಚಕ್ರ ಆಗುತ್ತಿಲ್ಲವೆಂದರೆ ಅವರಿಗೂ ಹದಿಹರೆಯದ ಪಿ.ಸಿ.ಒ.ಡಿ. ಸಮಸ್ಯೆ ಇರಬಹುದು. ಅವರು ಕೂಡಾ ಜೀವನಶೈಲಿ ಬದಲಾಯಿಸಿಕೊಂಡು ಪೌಷ್ಟಿಕ ಹಾಗೂ ಸಮತೋಲನ ಆಹಾರ ಸೇವಿಸುತ್ತಾ, ನಿಯಮಿತವಾಗಿ ದೈಹಿಕ ಚಟುವಟಿಕೆ ಅಳವಡಿಸಿಕೊಂಡು ಸಮತೂಕ ಕಾಯ್ದುಕೊಳ್ಳುತ್ತಾ ತಜ್ಞರ ಸಲಹೆಯ ಮೇರೆಗೆ ಚಿಕಿತ್ಸೆ ಪಡೆಯಲಿ.

- **3ನೇ ಹೆರಿಗೆ ಸಿಸೇರಿಯನ್ ಶಸ್ತ್ರ ಚಿಕಿತ್ಸೆಯಿಂದ ಆಗಿದೆ. ನಾವು ಲೈಂಗಿಕ ಸಂಪರ್ಕ ಮಾಡಿದರೆ ನೋವು ಹಾಗೂ ಉರಿಯಾಗುತ್ತದೆ. ಪರಿಹಾರ ತಿಳಿಸಿ.**

ಹೆಸರು, ಊರು ತಿಳಿಸಿಲ್ಲ

ನಿಮಗೆ ಯೋನಿ ಸೋಂಕಾಗಿದ್ದರೂ ಲೈಂಗಿಕ ಸಂಪರ್ಕದಲ್ಲಿ ಈ ರೀತಿಯಾದ ನೋವು ಹಾಗೂ ಉರಿಯಾಗುತ್ತದೆ. ಕೆಲವೊಮ್ಮೆ ಶಸ್ತ್ರಚಿಕಿತ್ಸೆಯಿಂದ ಅಡೆಶನ್ಸ್ ಅಥವಾ ಪರಸ್ಪರ ಮೆತ್ತಿಕೊಳ್ಳುವಿಕೆಯಿಂದ ಕೂಡಾ ಈ ರೀತಿಯ ನೋವುಂಟಾಗಬಹುದು. ಕೆಲವೊಮ್ಮೆ ಮೂತ್ರಕೋಶದ ಸೋಂಕು ಇತ್ಯಾದಿಗಳಿಂದಲೂ ಲೈಂಗಿಕ ಸಂಪರ್ಕದಲ್ಲಿ ನೋವುಂಟಾಗಬಹುದು. ಕೆಲವೊಮ್ಮೆ ಬಾಣಂತನದಲ್ಲಿ ಬದಲಾಗುತ್ತಿರುವ ಹಾರ್ಮೋನ್ ಮಟ್ಟ ಹಾಗೂ ಮಗುವಿನ ಬಗ್ಗೆ ಹೆಚ್ಚುವ ಕಾಳಜಿಯಿಂದ ಲೈಂಗಿಕ ಆಸಕ್ತಿ ಕಡಿಮೆಯಾಗಿ ಈ ರೀತಿ ಅನಿಸಿರಲೂಬಹುದು. ಯಾವುದಕ್ಕೂ ಸೂಕ್ತ ಕಾರಣ ಕಂಡುಹಿಡಿದು ಚಿಕಿತ್ಸೆ ಕೊಡಬೇಕಾಗುತ್ತದೆ. ನಿಮ್ಮ ಹತ್ತಿರದ ಸ್ತ್ರೀರೋಗ ತಜ್ಞರನ್ನು ಭೇಟಿ ಮಾಡಿ. ಕೂಲಂಕಷವಾಗಿ ಪರೀಕ್ಷಿಸಿಕೊಳ್ಳಿ.

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಕೊತ್ತಂಬರಿ ಸೊಪ್ಪಿನ ಬಾತ್, ಹೇರಳೆಕಾಯಿ ಚಿತ್ರಾನ್ನ

ನಳಪಾಕ

ಹೇಮಲತಾ ಆರ್.ಕೆ.

ಕೊತ್ತಂಬರಿ ಸೊಪ್ಪಿನ ಬಾತ್

ಬೇಕಾಗುವ ಸಾಮಗ್ರಿಗಳು: ಕೊತ್ತಂಬರಿ ಸೊಪ್ಪು– ಒಂದು ಕಟ್ಟು, ಹಸಿಮೆಣಸಿನಕಾಯಿ– 6, ಶುಂಠಿ–ಬೆಳ್ಳುಳ್ಳಿ ಸ್ವಲ್ಪ, ಈರುಳ್ಳಿ– 1, ಟೊಮೆಟೊ– 1, ಗರಂಮಸಾಲೆ 1 ಚಮಚ, ಅರಿಶಿನ ಸ್ವಲ್ಪ, ಗೋಡಂಬಿ– 10, ಚಕ್ಕೆ 1 ಇಂಚು, ಲವಂಗ– 3, ಏಲಕ್ಕಿ 1, ಪಲಾವ್ ಎಲೆ 2.

ತಯಾರಿಸುವ ವಿಧಾನ: ಕೊತ್ತಂಬರಿ ಸೊಪ್ಪು, ಹಸಿಮೆಣಸಿನ ಕಾಯಿ, ಶುಂಠಿ, ಬೆಳ್ಳುಳ್ಳಿ ಎಲ್ಲವನ್ನೂ ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಕುಕರ್ ಬಿಸಿಗಿಟ್ಟು, ಅದಕ್ಕೆ 2 ಚಮಚ ಎಣ್ಣೆ, 1 ಚಮಚ ತುಪ್ಪ ಹಾಕಿ ಲವಂಗ, ಚಕ್ಕೆ, ಏಲಕ್ಕಿ, ಪಲಾವ್ ಎಲೆ ಹಾಕಿ ಹುರಿಯಿರಿ. ನಂತರ ಗೋಡಂಬಿ ಹಾಕಿ ಹೊಂಬಣ್ಣ ಬರುವವರೆಗೆ ಹುರಿದು, ಈರುಳ್ಳಿ, ಟೊಮೆಟೊ ಹಾಗೂ ರುಬ್ಬಿದ ಮಿಶ್ರಣ ಸೇರಿಸಿ ಎಣ್ಣೆ ಬಿಡುವವರೆಗೂ ಬಾಡಿಸಿ. ನಂತರ ಕಾಲು ಚಮಚ ಅರಿಶಿನ, ಗರಂಮಸಾಲೆ 1 ಚಮಚ ಸೇರಿಸಿ. ನೀರು ಕುದಿ ಬಂದ ನಂತರ ತೊಳೆದುಕೊಂಡ ಅಕ್ಕಿಯನ್ನು ಸೇರಿಸಿ ಕುಕರ್ ಮುಚ್ಚಿ ಎರಡು ಕೂಗು ಕೂಗಿಸಿದರೆ ರುಚಿಯಾದ ಕೊತ್ತಂಬರಿ ಸೊಪ್ಪಿನ ಬಾತ್ ಅಥವಾ ಕೋರಿಯಾಂಡರ್ ರೈಸ್ ಸಿದ್ಧ.

ಬ್ಯಾಚುಲರ್ ಸ್ಟೈಲ್ ಪೀನಟ್ ರೈಸ್

ಪುಡಿ ತಯಾರಿಸಲು ಬೇಕಾಗುವ ಸಾಮಗ್ರಿಗಳು: 3 ಟೇಬಲ್ ಚಮಚ ಕಡಲೇಕಾಯಿ ಬೀಜ, ಕಡಲೇಬೇಳೆ– 1 ಚಮಚ, ಮೆಣಸು– 1 ಚಮಚ, ಜೀರಿಗೆ– 1 ಚಮಚ, ಕರಿಬೇವು ಸ್ವಲ್ಪ, ಒಣಮೆಣಸಿನಕಾಯಿ ಮೂರು. ಇವೆಲ್ಲವನ್ನು ಹುರಿದು ಪುಡಿ ಮಾಡಿ.

ತಯಾರಿಸುವ ವಿಧಾನ: ಒಂದು ಬಾಣಲೆಯನ್ನು ಬಿಸಿಗಿಟ್ಟು ಅದಕ್ಕೆ ಮೂರರಿಂದ ನಾಲ್ಕು ಚಮಚ ಎಣ್ಣೆ ಸೇರಿಸಿ ಸಾಸಿವೆ, ಕಡಲೇಬೇಳೆ, ಕಡಲೇಕಾಯಿಬೀಜ, ಕರಿಬೇವು, ಒಣಮೆಣಸಿನಕಾಯಿ, ಅರ್ಧ ಚಮಚ ಇಂಗು ಸೇರಿಸಿ ಒಗ್ಗರಣೆ ತಯಾರಿಸಿ. ಇದಕ್ಕೆ ಮೊದಲೇ ತಯಾರಿಸಿದ ಅನ್ನವನ್ನು ಸೇರಿಸಿ ಕಾಲು ಚಮಚ ಅರಿಶಿನ, ರುಚಿಗೆ ತಕ್ಕಷ್ಟು ಉಪ್ಪು, ಹುರಿದು ಪುಡಿ ಮಾಡಿದ್ದನ್ನು ಸೇರಿಸಿ ಚೆನ್ನಾಗಿ ಕಲೆಸಿ. ಇದಕ್ಕೆ ಬೇಕಿದ್ದಲ್ಲಿ ಅರ್ಧ ಹೋಳು ನಿಂಬೆ ರಸ ಸೇರಿಸಿಕೊಳ್ಳಬಹುದು. ಚೆನ್ನಾಗಿ ಕಲೆಸಿದ ನಂತರ ಅನ್ನವನ್ನು 2 ನಿಮಿಷ ಬಿಸಿ ಮಾಡಿದರೆ ರುಚಿಯಾದ ಹಾಗೂ ಬಹಳ ಬೇಗ ತಯಾರಾಗುವ ಬ್ಯಾಚುಲರ್ ಸ್ಟೈಲ್ ಪೀನಟ್ ರೈಸ್ ಸವಿಯಬಹುದು.

ಹಳ್ಳಿ ಶೈಲಿಯ ಹೇರಳೆಕಾಯಿ ಚಿತ್ರಾನ್ನ

ಬೇಕಾಗುವ ಸಾಮಗ್ರಿಗಳು: ಹೇರಳೆಕಾಯಿ 1, ಹಸಿಮೆಣಸಿನಕಾಯಿ– 10, ಒಣಮೆಣಸಿನಕಾಯಿ– 2, ಕರಿಬೇವು ಸ್ವಲ್ಪ, ಈರುಳ್ಳಿ 1, ಕಡಲೇಕಾಯಿಬೀಜ– 1 ಚಮಚ, ಕಡಲೆ ಬೇಳೆ– 1 ಚಮಚ, ಎಣ್ಣೆ 4 ಚಮಚ, ಸಾಸಿವೆ– 1 ಚಮಚ, ಅರಿಶಿನ ಸ್ವಲ್ಪ, ಕೊತ್ತಂಬರಿ ಸೊಪ್ಪು ಸ್ವಲ್ಪ, ತೆಂಗಿನ ತುರಿ ಸ್ವಲ್ಪ, ಮೆಂತ್ಯ ಸ್ವಲ್ಪ, ಉಪ್ಪು ರುಚಿಗೆ ತಕ್ಕಷ್ಟು.

ತಯಾರಿಸುವ ವಿಧಾನ: ಜೀರಿಗೆ 1 ಚಮಚ, ಸಾಸಿವೆ ಕಾಲು ಚಮಚ, ಮೆಂತ್ಯ ಕಾಲು ಚಮಚ ಹಾಕಿ ಎಲ್ಲವನ್ನೂ ಹುರಿದು ಪುಡಿ ಮಾಡಿಕೊಳ್ಳಿ. ಬಾಣಲೆಗೆ ಸ್ವಲ್ಪ ಎಣ್ಣೆ ಹಾಕಿ, ಎಣ್ಣೆ ಕಾದ ನಂತರ ಕಡಲೇಕಾಯಿ ಬೀಜ ಹುರಿದು ತೆಗೆದಿಟ್ಟುಕೊಳ್ಳಿ. ಅದೇ ಎಣ್ಣೆಗೆ ಸಾಸಿವೆ, ಕಡಲೇಬೇಳೆ, ಹಸಿಮೆಣಸಿನಕಾಯಿ, ಒಣಮೆಣಸಿನಕಾಯಿ, ಕರಿಬೇವು ಸೇರಿಸಿ ಹುರಿದು ಹೆಚ್ಚಿಟ್ಟುಕೊಂಡ ಈರುಳ್ಳಿಯನ್ನು ಸೇರಿಸಿ ಬಾಡಿಸಿ. ಇದಕ್ಕೆ ಅರಿಶಿನ, ರುಚಿಗೆ ತಕ್ಕಷ್ಟು ಉಪ್ಪು, ಹುರಿದು ಪುಡಿಮಾಡಿದ ಜೀರಿಗೆ ಪುಡಿ ಸೇರಿಸಿ ಮತ್ತೆ 2 ನಿಮಿಷ ಹುರಿದುಕೊಳ್ಳಿ. ಕೊನೆಯದಾಗಿ ತೆಂಗಿನ ಕಾಯಿ, ಕೊತ್ತಂಬರಿ ಸೊಪ್ಪು ಸೇರಿಸಿ ಇದಕ್ಕೆ ಹೇರಳೆಕಾಯಿ ರಸ ಸೇರಿಸಿದರೆ ಗೊಜ್ಜು ಸಿದ್ಧವಾಗುತ್ತದೆ. ಮೊದಲೇ ಸಿದ್ಧಪಡಿಸಿದ ಅನ್ನಕ್ಕೆ ಬೇಕಾದಷ್ಟು ಗೊಜ್ಜನ್ನು ಸೇರಿಸಿ ಕಲೆಸಿದರೆ ಹಳ್ಳಿ ಶೈಲಿಯ ರುಚಿಕರ ಹೇರಳೆಕಾಯಿ ಚಿತ್ರಾನ್ನ ರೆಡಿ.

(ಲೇಖಕಿ: ಹೇಮಾಸ್ ಕುಕಿಂಗ್ ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

ಸೀರೆಗೂ ಸೈ, ಜೀನ್ಸ್‌ಗೂ ಸೈ ಜಾಕೆಟ್

ರೇಷ್ಮಾ

ಫ್ಯಾಷನ್

ಚಳಿಗಾಲದಲ್ಲಿ ದೇಹ ಬೆಚ್ಚಗಿಡುವುದೇ ಹರಸಾಹಸ. ರಾತ್ರಿ–ಹಗಲು ಮೈ ನಡುಗಿಸುವ ಚಳಿಗೆ ಬೆಚ್ಚಗಿದ್ದರೆ ಚೆನ್ನ ಎನ್ನಿಸದೇ ಇರದು. ಈ ಸಮಯದಲ್ಲಿ ದೇಹವನ್ನು ಬೆಚ್ಚಗಾಗಿಸಿ ಚಳಿ ದೂರ ಮಾಡಲು ಜಾಕೆಟ್‌ಗಳು ಸೂಕ್ತ. ಫ್ಯಾಷನ್ ಟ್ರೆಂಡ್‌ಗೆ ಹೊಂದುವಂತಹ, ಮಿಲೇನಿಯಲ್ ಯುವತಿಯರು ಇಷ್ಟಪಡುವಂತಹ ವೈವಿಧ್ಯಮಯ ಜಾಕೆಟ್‌ಗಳು ಫ್ಯಾಷನ್ ಮಾರುಕಟ್ಟೆಯಲ್ಲಿ ಕೈಬೀಸಿ ಕರೆಯುತ್ತವೆ. ಜಾಕೆಟ್ ಟ್ರೆಂಡ್‌ನಲ್ಲಿ ದೊಡ್ಡ ಮಟ್ಟಿಗೆ ಬದಲಾವಣೆಗಳಾಗದಿದ್ದರೂ ತಕ್ಕ ಮಟ್ಟಿಗೆ ಟ್ರೆಂಡ್ ಬದಲಾಗುತ್ತಲೇ ಇರುತ್ತದೆ. ಲಾಂಗ್ ಜಾಕೆಟ್, ಸೀರೆಯೊಂದಿಗೆ ಧರಿಸುವ ರವಿಕೆ ರೂಪದ ಜಾಕೆಟ್ ಇತ್ತೀಚಿನ ಟ್ರೆಂಡ್‌ಗಳು. ಜಾಕೆಟ್ ಧರಿಸುವುದರಿಂದ ದೇಹ ಬೆಚ್ಚಗಿರುವ ಜೊತೆಗೆ ಟ್ರೆಂಡಿ ಆಗಿಯೂ ಕಾಣಿಸಬಹುದು. ಜಾಕೆಟ್‌ಗಳನ್ನು ಸೀರೆ, ಟಾಪ್, ಜೀನ್ಸ್, ಸ್ಕರ್ಟ್ ಹೀಗೆ ಎಲ್ಲದರ ಜೊತೆಗೂ ಧರಿಸಬಹುದು. ಆದರೆ ಯಾವುದಕ್ಕೆ ಯಾವುದು ಸೂಕ್ತ ಎಂದು ತಿಳಿದುಕೊಂಡಿರುವುದು ಅವಶ್ಯ.

ಸೀರೆಯೊಂದಿಗೆ ಜಾಕೆಟ್

ತುಂಬಾನೇ ಚಳಿ ಇದೆ, ಸೀರೆ ಧರಿಸಿದರೆ ಜಾಕೆಟ್ ಧರಿಸುವುದು ಹೇಗೆ? ಆದರೆ ಸೀರೆ ಧರಿಸದೇ ಬೇರೆ ವಿಧಿಯಿಲ್ಲ ಎಂದು ಕೊರಗುವವರಿದ್ದಾರೆ. ಆದರೆ ಸೀರೆಗೆ ಹೊಂದುವಂತಹ ಹಲವು ರೀತಿ ಹಾಗೂ ವಿನ್ಯಾಸದ ಜಾಕೆಟ್‌ಗಳಿವೆ. ಕಾಟನ್ ಸೀರೆಗೆ ಉದ್ದನೆಯ ಜಾಕೆಟ್ ಧರಿಸುವುದು ಇಂದಿನ ಟ್ರೆಂಡ್. ಇದು ಹಿಂಭಾಗದಲ್ಲಿ ಕತ್ತಿನಿಂದ ಮೊಣಕಾಲಿನವರೆಗೆ ಇಳಿಬಿದ್ದಿರುತ್ತದೆ. ಜಾಕೆಟ್ ಧರಿಸುವುದರಿಂದ ಸೀರೆ, ಬ್ಲೌಸ್ ಮುಚ್ಚುತ್ತದೆ, ಇದರಿಂದ ಸೀರೆ ಅಂದ ಕೆಡುತ್ತದೆ ಎಂಬ ಚಿಂತೆ ಈಗ ಬೇಡ. ಸೀರೆಯ ಬಣ್ಣಕ್ಕೆ ಹೊಂದುವಂತಹ ಕಾಟನ್ ಹಾಗೂ ಸಿಂಥೆಟಿಕ್ ಜಾಕೆಟ್‌ಗಳನ್ನು ಸೀರೆಯೊಂದಿಗೆ ಧರಿಸಬಹುದು. ಹೂವಿನ ಚಿತ್ತಾರವಿರುವ ಜಾಕೆಟ್‌ಗಳು ಸೀರೆಗೆ ಹೆಚ್ಚು ಹೊಂದುತ್ತವೆ. ಸೀರೆಯೊಂದಿಗೆ ಡೆನಿಮ್ ಜಾಕೆಟ್‌ಗಳನ್ನೂ ಧರಿಸಬಹುದು. ಇವು ಟ್ರೆಂಡಿ ಹಾಗೂ ಸ್ಟೈಲಿಶ್ ಆಗಿಯೂ ಕಾಣುವಂತೆ ಮಾಡುತ್ತವೆ. ಸೀರೆಯೊಂದಿಗೆ ಜಾಕೆಟ್ ಮಾದರಿಯ ರವಿಕೆ ಧರಿಸುವುದೂ ಕೂಡ ಲೇಟೆಸ್ಟ್ ಟ್ರೆಂಡ್. ಇದರೊಂದಿಗೆ ರವಿಕೆಯ ಬಣ್ಣದ್ದೇ ಕಾಟನ್ ಅಥವಾ ಸಿಂಥೆಟಿಕ್‌ನ ಫ್ಯಾನ್ಸಿ ಲುಕ್ ಇರುವ ಜಾಕೆಟ್‌ಗಳನ್ನು ಧರಿಸಬಹುದು. ಭುಜದಿಂದ ಕಾಲಿನವರೆಗೂ ಇಳಿ ಬಿದ್ದಿರುವ ಲಾಂಗ್ ಜಾಕೆಟ್ ಅನ್ನು ಸೀರೆಯೊಂದಿಗೆ ತೊಡುವ ಟ್ರೆಂಡ್‌ಗೆ ನಟಿಯರಾದ ಶಿಲ್ಪಾ ಶೆಟ್ಟಿ, ಜಾಕ್ವೆಲಿನ್ ಫೆರ್ನಾಂಡಿಸ್, ಸೋಹಾ ಅಲಿ ಖಾನ್ ಮೊದಲಾದವರು ಸೈ ಎಂದಿದ್ದಾರೆ.

ಜೀನ್ಸ್‌ನೊಂದಿಗೆ ಜಾಕೆಟ್

ಚಳಿಗಾಲದಲ್ಲಿ ಜೀನ್ಸ್ ತೊಡುವುದರಿಂದ ದೇಹವನ್ನು ಬೆಚ್ಚಗಾಗಿರಿಸಿಕೊಳ್ಳಬಹುದು. ಜೀನ್ಸ್ ಜೊತೆ ಸಾಮಾನ್ಯವಾಗಿ ಎಲ್ಲಾ ಬಗೆಯ ಜಾಕೆಟ್‌ಗಳು ಹೊಂದುತ್ತವೆ. ಇವು ನಮಗೆ ಟ್ರೆಂಡಿ ಲುಕ್ ಸಿಗುವಂತೆ ಮಾಡುವುದಲ್ಲದೇ ಸ್ಟೈಲಿಶ್ ಆಗಿಯೂ ಕಾಣುವಂತೆ ಮಾಡುತ್ತವೆ. ಡೆನಿಮ್, ಕಾಟನ್, ಲೆದರ್, ಉಲ್ಲನ್ ಜಾಕೆಟ್‌ನೊಂದಿಗೆ ಲಾಂಗ್ ಜಾಕೆಟ್ ಕೂಡ ಜೀನ್ಸ್‌ಗೆ ಹೆಚ್ಚು ಹೊಂದಿಕೆಯಾಗುತ್ತದೆ. ಲೆದರ್ ಜಾಕೆಟ್ ಧರಿಸಿದಾಗ ಲೆದರ್‌ನ ವೈಡ್ ಕಾಫ್ ಬೂಟ್ಸ್ ಧರಿಸಬಹುದು. ಉಲ್ಲನ್ ಜಾಕೆಟ್ ಜೊತೆ ಉಲ್ಲನ್ ಸ್ಕಾರ್ಫ್ ಧರಿಸುವುದರಿಂದ ಅಂದ ಹೆಚ್ಚಿಸಿಕೊಳ್ಳಬಹುದು. ಜೀನ್ಸ್ ಮೇಲೆ ಶರ್ಟ್, ಟೀ ಶರ್ಟ್, ಕುರ್ತಾ ಹೀಗೆ ಯಾವುದು ಧರಿಸಿದ್ದೀರಿ ಎಂಬುದರ ಮೇಲೆ ಜಾಕೆಟ್ ಆಯ್ಕೆ ಮಾಡಿಕೊಳ್ಳಬೇಕು.

ಟೀ ಶರ್ಟ್‌ನೊಂದಿಗೆ

ಟೀ ಶರ್ಟ್ ಧರಿಸಿದಾಗ ಗಿಡ್ಡನೆಯ ಡೆನಿಮ್ ಅಥವಾ ಕಾಟನ್ ಜಾಕೆಟ್ ಧರಿಸುವುದು ಉತ್ತಮ. ಟೀ ಶರ್ಟ್ ಜೊತೆಗೆ ತುಂಬು ತೋಳು, ಅರ್ಧ ತೋಳು ಎರಡೂ ಬಗೆಯ ಜಾಕೆಟ್ ಹೊಂದಿಕೆಯಾಗುತ್ತದೆ. ತುಂಬು ತೋಳಿನ ಟೀ ಶರ್ಟ್ ಜೊತೆಗೆ ಅರ್ಧ ತೋಳಿನ ಜಾಕೆಟ್ ಹೆಚ್ಚು ಹೊಂದುತ್ತದೆ. ಟೀ ಶರ್ಟ್ ಜೊತೆ ಸ್ವೆಟ್ ಶರ್ಟ್ ಕೂಡ ಧರಿಸಬಹುದು.

ಶರ್ಟ್ ಜಾಕೆಟ್

ಶರ್ಟ್ ಜಾಕೆಟ್ ಇಂದಿನ ಲೇಟೆಸ್ಟ್ ಟ್ರೆಂಡ್. ಶರ್ಟ್ ರೂಪದಲ್ಲೇ ಇರುವ ಜಾಕೆಟ್‌ಗಳು ಚಳಿಗಾಲದಲ್ಲಿ ಹೆಚ್ಚು ಹೊಂದುತ್ತವೆ. ಕಾರ್ಗೋ ರೀತಿಯ ಪಾಕೆಟ್ ಇರುವ ಜಾಕೆಟ್‌ಗಳೂ ಕೂಡ ಇಂದು ಫ್ಯಾಷನ್ ಮಾರುಕಟ್ಟೆಯಲ್ಲಿ ಹೆಚ್ಚು ಸದ್ದು ಮಾಡುತ್ತಿವೆ. ಸಾದಾ ಕಾಟನ್‌ನ ಶರ್ಟ್ ಜಾಕೆಟ್‌ಗಳನ್ನು ಫಾರ್ಮಲ್, ಜೀನ್ಸ್, ಜೆಗ್ಗಿಂಗ್ಸ್ ಜೊತೆ ಧರಿಸಬಹುದು.

ಉಲ್ಲನ್ ಜಾಕೆಟ್

ಉಲ್ಲನ್ ಜಾಕೆಟ್‌ಹಿಂದಿನಿಂದಲೂ ಟ್ರೆಂಡ್‌ನಲ್ಲಿತ್ತು. ಈಗಲೂ ಈ ಟ್ರೆಂಡ್ ಮುಂದುವರಿದಿದೆ. ಇದನ್ನು ಟೀ ಶರ್ಟ್, ಶರ್ಟ್, ಸೀರೆ ಎಲ್ಲದರ ಜೊತೆ ಹಾಕಿಕೊಳ್ಳಬಹುದು. ಉಲ್ಲನ್ ಜಾಕೆಟ್ ಧರಿಸಿದಾಗ ಅದಕ್ಕೆ ಹೊಂದುವಂತಹ ಶೂ ಅಥವಾ ಸ್ಯಾಂಡಲ್ ಧರಿಸುವುದು ಮುಖ್ಯವಾಗುತ್ತದೆ.

ಮುಂದಿನ ಹೋರಾಟ ಇಂದು–ನಾಳೆ ಎಸ್‌ಕೆಎಂ ಸಭೆ

ನವದೆಹಲಿ (ಪಿಟಿಐ): ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಸ್ವಾಗತಿಸಿದೆ. ಮುಂದಿನ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲು ಶನಿವಾರ ಮತ್ತು ಭಾನುವಾರ ಮುಖಂಡರ ಸಭೆಯನ್ನು ಕರೆದಿದೆ.

ಮೋರ್ಚಾದ ಕೋರ್ ಕಮಿಟಿ ಸದಸ್ಯ, ಮುಖಂಡ ದರ್ಶನ್ ಪಾಲ್ ಅವರು, ‘ಕಾಯ್ದೆಗಳನ್ನು ಕೈಬಿಡಲು ಕೇಂದ್ರ ಸರ್ಕಾರ ನಿರ್ಧರಿಸಿರುವುದು ಉತ್ತಮ ನಡೆ. ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲೇ ಈ ಬಗ್ಗೆ ಮಸೂದೆ ಮಂಡಿಸಬೇಕು’ ಎಂದು ಹೇಳಿದರು.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕುರಿತ ಇನ್ನೊಂದು ಪ್ರಮುಖ ಬೇಡಿಕೆ ಕುರಿತಂತೆಯೂ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ಎಂಎಸ್‌ಪಿ ಕುರಿತು ಕಾಯ್ದೆಯ ರಕ್ಷಣೆ ನೀಡಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ ಎಂದರು.

ನಾಗರಿಕರ ಹತ್ಯೆ: ರಾಷ್ಟ್ರಪತಿ ಮಧ್ಯಪ್ರವೇಶಕ್ಕೆ ಫಾರೂಕ್ ಒತ್ತಾಯ

ಕಾಶ್ಮೀರ ಕಣಿವೆ ಸಂಪೂರ್ಣ ಸ್ತಬ್ಧ

ಪ್ರಜಾವಾಣಿ ವಾರ್ತೆ

ಬಂದ್ ಹಿನ್ನೆಲೆಯಲ್ಲಿ ಶ್ರೀನಗರದ ಲಾಲ್‌ಚೌಕ ವೃತ್ತದಲ್ಲಿ ಶುಕ್ರವಾರ ಅಂಗಡಿ ಮುಂಗಟ್ಟು ಬಂದ್ ಆಗಿದ್ದವು

ಶ್ರೀನಗರ: ಇಲ್ಲಿನ ಹೈದರ್‌ಪೋರಾ ಪ್ರದೇಶದಲ್ಲಿ ಭದ್ರತಾ ಪಡೆಗಳಿಗೆ ಬಲಿಯಾದ ಮೂವರು ನಾಗರಿಕರ ಹತ್ಯೆ ಖಂಡಿಸಿ ಹುರಿಯತ್ ಕಾನ್ಫರೆನ್ಸ್ ಕರೆ ನೀಡಿದ್ದ ಕಾಶ್ಮೀರ ಬಂದ್‌ಗೆ ಶುಕ್ರವಾರ ಕಣಿವೆಯಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಜನಜೀವನ ಸಂಪೂರ್ಣ ಸ್ತಬ್ಧವಾಗಿತ್ತು.

ಅಂಗಡಿ ಮುಂಗಟ್ಟುಗಳು ಸ್ವಯಂ ಪ್ರೇರಿತವಾಗಿ ಸಂಪೂರ್ಣ ಬಂದ್ ಆಗಿದ್ದವು. ರಜೆ ದಿನವಾದ್ದರಿಂದ ಸರ್ಕಾರಿ ಕಚೇರಿಗಳು ತೆರೆದಿರಲಿಲ್ಲ. ಮುಂಜಾಗ್ರತಾ ಕ್ರಮವಾಗಿ ಸೂಕ್ಷ್ಮ ಪ್ರದೇಶ ಗಳಲ್ಲಿ ಪೊಲೀಸರು ಹಾಗೂ ಅರೆ ಮಿಲಿಟರಿ ಪಡೆಯನ್ನು ನಿಯೋಜಿಸ-ಲಾಗಿತ್ತು. ಪ್ರಮುಖ ರಸ್ತೆಗಳಲ್ಲಿ ಪೊಲೀಸ್ ಗಸ್ತನ್ನು ಹೆಚ್ಚಿಸಲಾಗಿತ್ತು.

2019ರ ಆಗಸ್ಟ್‌ನಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ ನಂತರ ಕಾಶ್ಮೀರ ಪ್ರತ್ಯೇ-ಕತಾವಾದಿಗಳು ಕರೆ ನೀಡಿದ ಮೊದಲ ಬಂದ್ ಇದಾಗಿದೆ.

ನಾಗರಿಕರ ಹತ್ಯೆ ಪ್ರಕರಣವನ್ನು ಗುರುವಾರ ಜಮ್ಮು ಮತ್ತು ಕಾಶ್ಮೀರ ಆಡಳಿತವು ಮ್ಯಾಜಿಸ್ಟ್ರೇಟ್ ತನಿಖೆಗೆ ಒಪ್ಪಿಸಿದೆ. ಅಲ್ಲದೇ ಹತ್ಯೆಯಾದ ಉದ್ಯಮಿ, ವೈದ್ಯರ ಶವಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿ ಮರು ಅಂತ್ಯಸಂಸ್ಕಾರಕ್ಕೆ ಅವಕಾಶ ಕಲ್ಪಿಸಿಕೊ-ಟ್ಟಿದೆ.

ರಾಷ್ಟ್ರಪತಿಗಳ ಮಧ್ಯಪ್ರವೇಶಕ್ಕೆ ಒತ್ತಾಯ: ಹೈದರ್‌ಪೋರಾದಲ್ಲಿ ನಡೆದ ನಾಗರಿಕರ ಹತ್ಯೆ ಪ್ರಕರಣ ಕುರಿತು ರಾಷ್ಟ್ರಪತಿಯವರು ಮಧ್ಯಪ್ರವೇಶಿಸಿ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಎಂದು ಜಮ್ಮು ಮತ್ತು ಕಾಶ್ಮೀರದ ಸರ್ವ ಪಕ್ಷಗಳ ಜನಪ್ರತಿನಿಧಿಗಳ ಒಕ್ಕೂಟ (ಪಿಎಜಿಡಿ) ಒತ್ತಾಯಿಸಿದೆ. ಈ ಕುರಿತು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಪಿಎಜಿಡಿ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಪತ್ರ ಬರೆದಿದ್ದಾರೆ.

ನ.15ರಂದು ಶ್ರೀನಗರದ ಹೊರ-ವಲಯದಲ್ಲಿ ಹೈದರ್‌ಪೋರಾದಲ್ಲಿ ಭದ್ರತಾ ಪಡೆಗಳು ನಡೆಸಿದ ಉಗ್ರರ ವಿರುದ್ಧದ ಕಾರ್ಯಾಚರಣೆ ವೇಳೆ ಮೂವರು ನಾಗರಿಕರು, ಒಬ್ಬ ವಿದೇಶಿ ಉಗ್ರ ಹತರಾಗಿದ್ದರು. ಹತ್ಯೆಯಾದ ಮೂವರು ನಾಗರಿಕರೂ ಉಗ್ರರ ಸಹಚರರು ಎಂದು ಪೊಲೀಸರು ಹೇಳಿದ್ದರು. ನಂತರ ಹತ್ಯೆಯಾದವರು ಉಗ್ರರ ಸಹಚರರಲ್ಲ ಎಂಬುದು ಬೆಳಕಿಗೆ ಬಂದಿದೆ.

ಗದ್ಗದಿತರಾಗಿ ಗಳಗಳನೇ ಅತ್ತ ಎನ್‌. ಚಂದ್ರಬಾಬು ನಾಯ್ಡು

ಟಿಡಿಪಿ ಅಧಿಕಾರಕ್ಕೆ ಬಂದ ನಂತರವೇ ಸದನಕ್ಕೆ ಪ್ರವೇಶ: ನಾಯ್ಡು ಪ್ರತಿಜ್ಞೆ

ಅಮರಾವತಿ (ಪಿಟಿಐ): ‘ತೆಲುಗು ದೇಶಂ ಪಕ್ಷವು ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಮರಳಿದ ನಂತರವೇ ನಾನು ವಿಧಾನಸಭೆಗೆ ಪ್ರವೇಶ ಮಾಡುತ್ತೇನೆ’ ಎಂದು ಆ ಪಕ್ಷದ ಅಧ್ಯಕ್ಷ, ಮಾಜಿ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಶಪಥ ಮಾಡಿದರು.

ವಿಧಾನಸಭೆ ವಿರೋಧಪಕ್ಷದ ನಾಯಕರೂ ಆದ ನಾಯ್ಡು ಶುಕ್ರವಾರ ಭಾವುಕರಾಗಿದ್ದು, ತಮ್ಮ ನಿಲುವನ್ನು ಪ್ರಕಟಿಸಿದರು.

‘ತಮ್ಮ ವಿರುದ್ಧ ಆಡಳಿತಪಕ್ಷ ವೈಎಸ್‌ಆರ್ ಕಾಂಗ್ರೆಸ್ ಸದಸ್ಯರ ನಿರಂತರ ನಿಂದನೆಯಿಂದ ನಾನು ನೊಂದಿದ್ದೇನೆ’ ಎಂದು ಕಾರಣವನ್ನು ತಿಳಿಸಿದರು.

‘ಎರಡೂವರೆ ವರ್ಷದಿಂದ ಇಂತಹ ಅಪಮಾನವನ್ನು ಸಹಿಸಿಕೊಂಡು, ತಾಳ್ಮೆಯಿಂದ ಇದ್ದೇನೆ. ಇಂದು, ನನ್ನ ಪತ್ನಿಯನ್ನೂ ಗುರಿಯಾಗಿಸಿ ಕೊಂಡು ನಿಂದಿಸಲಾಗಿದೆ. ನಾನು ಗೌರವದಿಂದ ಗೌರವಕ್ಕಾಗಿ ಬದುಕಿದ್ದೇನೆ. ಇನ್ನು ಇಂತಹ ನಿಂದನೆ ಸಹಿಸಿಕೊಳ್ಳಲು ಆಗದು’ ಎಂದರು.

ಅವರು ಮಾತು ಮುಂದುವರಿಸುತ್ತಿರುವಂತೆಯೇ ಸ್ಪೀಕರ್ ತಮ್ಮಿನೇನಿ ಸೀತಾರಾಂ ಅವರು ಮೈಕ್‌ನ ಸಂಪರ್ಕವನ್ನು ಕಡಿತಗೊಳಿಸಲು ಸೂಚಿಸಿದರೆ, ಆಡಳಿತ ಪಕ್ಷದ ಸದಸ್ಯರು ನಾಯ್ಡು ಅವರ ಈ ನಿರ್ಧಾರವನ್ನು ‘ಡ್ರಾಮಾ’ ಎಂದು ನಿಂದಿಸಿದರು.

ವಿಜಯವಾಡದಲ್ಲಿ ಶುಕ್ರವಾರ ಪತ್ರಿಕಾ ಗೋಷ್ಠಿಯಲ್ಲಿ ಭಾವುಕರಾದ ಟಿಡಿಪಿ ಅಧ್ಯಕ್ಷ ಎನ್‌ ಚಂದ್ರಬಾಬು ನಾಯ್ಡು
—ಪಿಟಿಐ ಚಿತ್ರ

ಇದಕ್ಕೂ ಮುನ್ನ ಸದನದಲ್ಲಿ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಚರ್ಚೆಯಲ್ಲಿ ಉಭಯ ಪಕ್ಷಗಳ ಶಾಸಕರ ನಡುವೆ ವಾಗ್ವಾದ ನಡೆದಿತ್ತು. ನಾಯ್ಡು ಅವರು ಇದರಿಂದ ವಿಚಲಿತರಾಗಿದ್ದರು. ಬಳಿಕ ತಮ್ಮ ಕಚೇರಿಯಲ್ಲಿ ಶಾಸಕರ ತುರ್ತು ಸಭೆ ಕರೆದರು.

ಅಲ್ಲಿಯೂ ಒಂದೆರಡು ಬಾರಿ ಗದ್ಗದಿತರಾದರು ಎಂದು ಹೇಳಲಾಗಿದೆ. ಅವರನ್ನು ಸಮಾಧಾನಪಡಿಸಲು ವಿಫಲರಾದ ಶಾಸಕರು ಮರಳಿ ಕಲಾಪಕ್ಕೆ ಬಂದರು.

ನಂತರ ನಾಯ್ಡು ತಮ್ಮ ನಿರ್ಧಾರ ಪ್ರಕಟಿಸಿದ್ದು, ‘ಟಿಡಿಪಿ ಅಧಿಕಾರಕ್ಕೆ ಬರುವವರೆಗೂ ಸದನದಿಂದ ದೂರ ಉಳಿಯುತ್ತೇನೆ’ ಎಂದು ಹೇಳಿದರು.

‘ವಿರೋಧಪಕ್ಷದ ನಾಯಕರು ಆದ ಅವರು ಬರುತ್ತಾರೆ ಎಂದು ಕಲಾಪದ ಆರಂಭವನ್ನು ಕೆಲಹೊತ್ತು ವಿಳಂಬ ಮಾಡಲಾಯಿತು. ಆದರೆ, ಅವರು ಬರಲಿಲ್ಲ’ ಎಂದು ಮುಖ್ಯಮಂತ್ರಿ ಹೇಳಿದರು. ಚಂದ್ರಬಾಬು ನಾಯ್ಡು ಅವರು ನಂತರವೂ ಕೆಲಹೊತ್ತು ವಿಧಾನಸಭೆಯಲ್ಲಿ ಇದ್ದರಾದರೂ ಸದನಕ್ಕೆ ಹಾಜರಾಗಲಿಲ್ಲ.

ಏಕೆ ನುಣುಚಿಕೊಳ್ಳುತ್ತಿದ್ದಾರೆ ಸಿ.ಎಂ ಜಗನ್‌ಮೋಹನ್ ರೆಡ್ಡಿ ಪ್ರಶ್ನೆ

ಅಮರಾವತಿ (ಪಿಟಿಐ): ಟಿಡಿಪಿ ಅಧ್ಯಕ್ಷ ಚಂದ್ರಬಾಬುನಾಯ್ಡು ಅವರ ತೀರ್ಮಾನ ಕುರಿತು ಆಶ್ಚರ್ಯ ವ್ಯಕ್ತ-ಪಡಿಸಿರುವ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು, ‘ಅವರು ಏಕೆ ಸದನದಿಂದ ನುಣುಚಿ-ಕೊಳ್ಳುತ್ತಿದ್ದಾರೆ’ ಎಂದು ಪ್ರಶ್ನಿಸಿದರು.

‘ನಾಯ್ಡು ಅವರು ಸದನದಿಂದ ದೂರ ಉಳಿಯುತ್ತಿರುವುದು ಕುಪ್ಪಂ ಪರಿಣಾಮ ಎಂದು ನಮ್ಮ ಪಕ್ಷದ ಶಾಸಕರು ತಿಳಿಸಿದರು. ಈಗಲಾದರೂ ಮಾಜಿ ಮುಖ್ಯಮಂತ್ರಿ ತಮ್ಮ ತಪ್ಪು ಅರಿತುಕೊಳ್ಳಲಿದ್ದಾರೆ ಎಂದು ಭಾವಿಸುತ್ತೇನೆ’ ಎಂದು ಹೇಳಿದರು.

ಬುಧವಾರ ಕುಪ್ಪಂ ನಗರ ಪಾಲಿಕೆಗೆ ನಡೆದಿದ್ದ ಚುನಾವಣೆಯಲ್ಲಿ ಟಿಡಿಪಿ ಹೀನಾಯ ಸೋಲು ಅನುಭವಿಸಿತ್ತು.

ನಾಯ್ಡು ಅವರು ಆರು ಅವಧಿಗಳಿಂದ ಪ್ರತಿನಿಧಿಸುವ ಕ್ಷೇತ್ರದ ವ್ಯಾಪ್ತಿಗೆ ಇದು ಬರಲಿದೆ.

ಸರ್ಕಾರದ ಅಭಿವೃದ್ಧಿ ಯೋಜನೆಗಳ ಲಾಭ ಪಡೆದಿರುವ ಕುಪ್ಪಂನ ಮಹಿಳೆಯರು ಚಂದ್ರಬಾಬು ನಾಯ್ಡು ಅವರಿಗೆ ಪಾಠ ಕಲಿಸಿದ್ದಾರೆ. ಇನ್ನಾದರೂ ಹಿತಾಸಕ್ತಿ ಅರ್ಜಿ ಹಾಕುವ ಮೂಲಕ ಕಾರ್ಯಕ್ರ-ಮಗಳಿಗೆ ಅವರು ತಡೆಯೊಡ್ಡದಿರಲಿ ಎಂದು ಮುಖ್ಯಮಂತ್ರಿ ಪ್ರತಿಕ್ರಿಯಿಸಿದರು.

ಇಂದಿನಿಂದ ಗೋವಾ ಅಂತರರಾಷ್ಟ್ರೀಯ ಸಿನಿಮೋತ್ಸವ

• ಪ್ರೇಮಕುಮಾರ್ ಹರಿಯಬ್ಬೆ

ಪಣಜಿ: ಐವತ್ತೆರಡನೇ ಭಾರತದ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ ಶನಿವಾರ (ನ.20) ಸಂಜೆ ಗೋವಾದ ಪಣಜಿಯಲ್ಲಿ ಆರಂಭವಾಗಲಿದೆ.

ಗೋವಾ ವಿಶ್ವವಿದ್ಯಾಲಯದ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಇಂಡಿಯನ್ ಫಿಲ್ಮ್ ಪರ್ಸನಾಲಿಟಿ ಆಫ್ ದ ಇಯರ್ ಪ್ರಶಸ್ತಿ ಸ್ವೀಕರಿಸಲಿರುವ ಖ್ಯಾತ ನಟಿ ಹೇಮಮಾಲಿನಿ ಮತ್ತು ಗೀತ ರಚನಕಾರ ಪ್ರಸೂನ್ ಜೋಷಿ, ಕೇಂದ್ರ ಪ್ರಸಾರ ಖಾತೆ ಸಚಿವ ಅನುರಾಗ್‌ಸಿಂಗ್ ಠಾಕೂರ್, ರಾಜ್ಯಪಾಲ ಪಿ.ಎಸ್. ಶ್ರೀಧರನ್ ಪಿಳ್ಳೈ, ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಉಪಸ್ಥಿತರಿರುವರು.

ಕಳೆದ ವರ್ಷ ಕೋವಿಡ್ ಕರಿನೆರಳು ಚಿತ್ರೋತ್ಸವದ ಮೇಲೆ ಬಿದ್ದಿತ್ತು.

2020 ನವೆಂಬರ್‌ನಲ್ಲಿ ನಡೆಯಬೇಕಿದ್ದ ಚಿತ್ರೋತ್ಸವ 2021ರ ಜನವರಿ ತಿಂಗಳಲ್ಲಿ ನಡೆದಿತ್ತು.

52ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಗೋವಾ

ಈಗ ಕೋವಿಡ್ ನಿಯಂತ್ರಣಕ್ಕೆ ಗೋವಾ ಸರ್ಕಾರ ರೂಪಿಸಿರುವ ನಿಯಮಗಳಿಗೆ ಅನುಗುಣವಾಗಿ ಚಿತ್ರೋತ್ಸವವನ್ನು ಸಂಘಟಿಸಲಾಗಿದೆ. ಒಂಬತ್ತು ದಿನಗಳ ಈ ಚಿತ್ರೋತ್ಸವ ಭಾರತೀಯ ಸಿನಿಮಾರಂಗದ ಚೇತರಿಕೆಗೆ ಸ್ಫೂರ್ತಿ ಆಗಲಿದೆ ಎಂಬ ನಿರೀಕ್ಷೆ ಇದೆ.

ಇದೇ ಮೊದಲ ಬಾರಿಗೆ ಹಲವು ಒಟಿಟಿ ವೇದಿಕೆಗಳು ಚಿತ್ರೋತ್ಸವದ ಜತೆ ಕೈಜೋಡಿಸಿವೆ.

ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಲಿರುವ ಹಲವು ಚಿತ್ರಗಳನ್ನು ಒಟಿಟಿಗಳಲ್ಲಿ ನೋಡುವ ಅವಕಾಶವಿದೆ.

ಸತ್ಯಜಿತ್ ರೇ ಜನ್ಮ ಶತಮಾನೋತ್ಸವ ವರ್ಷದ ನೆನಪಿನಲ್ಲಿ ನೀಡುವ ಜೀವಮಾನ ಸಾಧನೆಯ ಪ್ರಶಸ್ತಿಗೆ ಹೆಸರಾಂತ ಹಾಲಿವುಡ್ ಚಿತ್ರ ನಿರ್ದೇಶಕ ಮಾರ್ಟಿನ್ ಸ್ಕಾರ್ಸೆಸ್ ಮತ್ತು ಹಂಗೇರಿ ದೇಶದ ಚಿತ್ರ ನಿರ್ದೇಶಕ ಇಸ್ತವನ್ ಝಾಬೊ ಆಯ್ಕೆಯಾಗಿದ್ದು ಸಮಾರೋಪ ಸಮಾರಂಭದಲ್ಲಿ ಅವರು ಪ್ರಶಸ್ತಿ ಸ್ವೀಕರಿಸುವರು.

ಅಂತರರಾಷ್ಟ್ರೀಯ ಸ್ಪರ್ಧಾ ವಿಭಾಗದಲ್ಲಿ ಮೂರು ಭಾರತೀಯ ಸಿನಿಮಾಗಳೂ ಸೇರಿದಂತೆ 15 ಸಿನಿಮಾಗಳಿವೆ.

ಅಸ್ಸಾಮಿನ ದಿಮಾಸ ಬುಡಕಟ್ಟು ಭಾಷೆಯ ಮೊದಲ ಸಿನಿಮಾ ‘ಶೆಮ್ಖೋರ್’ ಮತ್ತು ಮರಾಠಿಯ ‘ಗೋದಾವರಿ ಮತ್ತು ಮೀ ವಸಂತ ರಾವ್’ ಸ್ಪರ್ಧೆಯಲ್ಲಿರುವ ಇನ್ನೆರಡು ಭಾರತೀಯ ಸಿನಿಮಾಗಳು. ಪನೋರಮಾ ವಿಭಾಗದಲ್ಲಿ ಕನ್ನಡದ ‘ಡೊಳ್ಳು’, ‘ತಲೆದಂಡ’, ‘ಆ್ಯಕ್ಟ್ 1978’ ಮತ್ತು ‘ನೀಲಿ ಹಕ್ಕಿ’ ಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಈ ವಿಭಾಗದಲ್ಲಿ ಐದು ಬೆಂಗಾಳಿ, ಐದು ಮರಾಠಿ, ನಾಲ್ಕು ತಮಿಳು ಸೇರಿದಂತೆ ಒಟ್ಟು 26 ಸಿನಿಮಾಗಳು ಮತ್ತು 20 ನಾನ್ ಫೀಚರ್ ಸಿನಿಮಾಗಳು ಪ್ರದರ್ಶನಗೊಳ್ಳಲಿವೆ.

ಕಳೆದ ಒಂದು ವರ್ಷದ ಅವಧಿಯಲ್ಲಿ ನಿಧನರಾದ ದಿಲೀಪ್ ಕುಮಾರ್, ಸುಮಿತ್ರಾ ಭಾವೆ, ಬುದ್ಧದೇವ ದಾಸ್‌ಗುಪ್ತ, ಪುನೀತ್ ರಾಜ್‌ಕುಮಾರ್, ಸಂಚಾರಿ ವಿಜಯ್, ಸುರೇಖಾ ಸಿಕ್ರಿ ಹಾಗೂ ಜೇಮ್ಸ್ ಬಾಂಡ್ ಖ್ಯಾತಿಯ ಇಂಗ್ಲಿಷ್ ನಟ ಸೇಆನ್ ಕೊನೆರಿ ಮತ್ತಿತರರಿಗೆ ಶ್ರದ್ಧಾಂಜಲಿ ಸಲ್ಲಿಸಿ ಅವರ ಚಿತ್ರಗಳನ್ನು ಪ್ರದರ್ಶಿಸಲಾಗುವುದು.

ಉದ್ಘಾಟನಾ ಸಮಾರಂಭದ ನಂತರ ಕರ್ಲೊಸ್ ಸೌರಾ ನಿರ್ದೇಶನದ ಸ್ಪ್ಯಾನಿಷ್ ಚಿತ್ರ ‘ದ ಕಿಂಗ್ ಆಫ್ ಆಲ್ ದ ವರ್ಲ್ಡ್’ ಪ್ರದರ್ಶನವಾಗಲಿದೆ.

ಭಾನುವಾರದಿಂದ ಐನಾಕ್ಸ್ ಚಿತ್ರ ಮಂದಿರ ಮತ್ತು ಕಲಾ ಅಕಾಡೆಮಿಯ ಐದು ತೆರೆಗಳು ಸೇರಿದಂತೆ ಒಟ್ಟು ಏಳು ತೆರೆಗಳಲ್ಲಿ ಮುಂಜಾನೆ 8ರಿಂದ ತಡರಾತ್ರಿವರೆಗೆ ನಿರಂತರವಾಗಿ ಸುಮಾರು 80 ದೇಶಗಳ ಸಿನಿಮಾಗಳು ಪ್ರದರ್ಶನಗೊಳ್ಳಲಿವೆ.

‘ಭಾರತ, ಚೀನಾ ದ್ವಿಪಕ್ಷೀಯ ಸಂಬಂಧ: ಮರು ಚಿಂತನೆ ಅಗತ್ಯ’

ಸಿಂಗಪುರ (ಪಿಟಿಐ): ಒಪ್ಪಂದಗಳನ್ನು ಉಲ್ಲಂಘಿಸಿ ಬೀಜಿಂಗ್ ಹಲವು ಕ್ರಮಗಳನ್ನು ತೆಗೆದುಕೊಂಡಿರುವುದರಿಂದ ಭಾರತ ಮತ್ತು ಚೀನಾ ನಡುವಿನ ಸಂಬಂಧ ‘ಕೆಟ್ಟ ಹಾದಿಯಲ್ಲಿ’ ಸಾಗುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಶುಕ್ರವಾರ ಹೇಳಿದ್ದಾರೆ.

‘ಚೀನಾದ ನಡವಳಿಕೆಗಳು ನಮ್ಮೊಂದಿಗಿನ ಸಂಬಂಧವನ್ನು ಯಾವ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುತ್ತದೆಯೋ ಗೊತ್ತಿಲ್ಲ. ಹಾಗಾಗಿ ಈ ಬಗ್ಗೆ ಮರು ಚಿಂತನೆ ನಡೆಸಬೇಕಾದ ಅಗತ್ಯವಿದೆ. ಇದಕ್ಕೆಲ್ಲ ಚೀನಾವೇ ಉತ್ತರ ನೀಡಬೇಕಿದೆ’ ಎಂದೂ ಅವರು ಹೇಳಿದ್ದಾರೆ.

ಇಂದು ಕಿಸಾನ್ ವಿಜಯ್ ದಿವಸ್ ಆಚರಣೆ– ಕಾಂಗ್ರೆಸ್

ನವದೆಹಲಿ (ಪಿಟಿಐ): ತಿದ್ದುಪಡಿ-ಯಾಗಿದ್ದ ಮೂರು ಕೃಷಿ ಕಾಯ್ದೆಗಳನ್ನು ಕೈಬಿಡುವ ಕೇಂದ್ರದ ನಿರ್ಧಾರದ ಹಿನ್ನೆಲೆಯಲ್ಲಿ ನ.20 ಅನ್ನು ‘ಕಿಸಾನ್ ವಿಜಯ್ ದಿವಸ್’ ಆಗಿ ಆಚರಿಸಲು ಕಾಂಗ್ರೆಸ್ ಪಕ್ಷ ತೀರ್ಮಾನಿಸಿದೆ. ಆ ದಿನ ದೇಶದಾದ್ಯಂತ ವಿಜಯೋತ್ಸವ ರ‍್ಯಾಲಿಗಳನ್ನು ಆಯೋಜಿಸಲಿದೆ.

ಸುದೀರ್ಘ ಕಾಲ ನಡೆದ ಪ್ರತಿಭಟನೆಯ ಅವಧಿಯಲ್ಲಿ ಮೃತಪಟ್ಟಿದ್ದ ಸುಮಾರು 700 ಮಂದಿ ರೈತರ ಕುಟುಂಬ ಸದಸ್ಯರನ್ನು ಪಕ್ಷದ ಮುಖಂಡರು ಭೇಟಿಯಾಗಲಿದ್ದು, ಹುತಾತ್ಮ ರೈತರಿಗೆ ಗೌರವವನ್ನು ಸಲ್ಲಿಸಲು ಆ ದಿನ ಮೇಣದ ಬತ್ತಿ ಜಾಥಾವನ್ನೂ ನಡೆಸಲಾಗುತ್ತದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಈ ಕುರಿತು ಪಕ್ಷದ ರಾಜ್ಯ ಘಟಕಗಳಿಗೆ ಪತ್ರ ಬರೆದಿದ್ದಾರೆ. ಆ ದಿನ ನಿಗದಿಯಂತೆ ರಾಜ್ಯ, ಜಿಲ್ಲಾ, ಬ್ಲಾಕ್ ಮಟ್ಟದಲ್ಲಿ ವಿಜಯೋತ್ಸವ ರ‍್ಯಾಲಿ, ಮೇಣದ ಬತ್ತಿ ಜಾಥಾ ಆಯೋಜಿಸಬೇಕು ಎಂದು ಸೂಚಿಸಿದ್ದಾರೆ.

ಕೋವಿಡ್ ಹೆಚ್ಚಳ ಆಸ್ಟ್ರಿಯಾದಲ್ಲಿ 22ರಿಂದ ಲಾಕ್‌ಡೌನ್

ಅಲೆಕ್ಸಾಂಡರ್ ಶಾಲೆನ್‌ಬರ್ಗ್

ಬರ್ಲಿನ್ (ಎಪಿ): ಆಸ್ಟ್ರಿಯಾದಲ್ಲಿ ಕೋವಿಡ್–19ನ ನಾಲ್ಕನೇ ಅಲೆ ಕಾಣಿಸಿ ಕೊಂಡಿದ್ದು, ಸೋಂಕು ಪ್ರಸರಣ ತಡೆಯುವ ಸಲುವಾಗಿ ಸೋಮವಾರದಿಂದ ಲಾಕ್‌ಡೌನ್ ಘೋಷಿಸಲಾಗಿದೆ.

‘ಮೊದಲ ಹಂತವಾಗಿ ನ.22ರಿಂದ 10 ದಿನಗಳ ಕಾಲ ಲಾಕ್‌ಡೌನ್ ಜಾರಿಗೊಳಿಸಲಾಗುವುದು. 5ನೇ ಅಲೆ ಬಾಧಿಸುವುದು ನಮಗೆ ಇಷ್ಟ ಇಲ್ಲ’ ಎಂದು ಚಾನ್ಸಲರ್ ಅಲೆಕ್ಸಾಂಡರ್ ಶಾಲೆನ್‌ಬರ್ಗ್ ಶುಕ್ರವಾರ ಹೇಳಿದರು.

‘ರೆಸ್ಟೋರೆಂಟ್‌ಗಳನ್ನು ಬಂದ್ ಮಾಡಲಾಗುವುದು, ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರದ್ದುಗೊಳಿ-ಸಲಾಗುವುದು. ಶಾಲೆಗಳನ್ನು ಸಹ ಮುಚ್ಚಲಾಗುತ್ತಿದ್ದು, ಮಕ್ಕಳು ಮನೆಯಲ್ಲಿಯೇ ಕಲಿಕೆ ಮುಂದುವರಿಸಬೇಕು’ ಎಂದೂ ಅವರು ಹೇಳಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

Wanted

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080- 25300714

Multiple Vacancy

THE BANGALORE PRESS
(No.88, Mysore Road, Chamarajpet, Bangalore-18)
has opening for the below roles;

ROLE	REQUIREMENT
Marketing Officer	Matriculates. 1+ years experience in field sales of consumer goods. Fluency in Kannada, English.
Purchase Officer	Matriculates. 2+ years experience in paper, printing and stationery stores. Basic Computer skills preferred.
Binding Supervisor	2+ years experience in the production unit of a paper/ book printing industry

Please email details (including your resume with your work experience and expected salary) to
bangalorepressjobs@gmail.com

CONNECT

69ನೇ ಹುಟ್ಟು ಹಬ್ಬದ ಶುಭಾಷಯಗಳು
ದಿ|| ಶ್ರೀಮತಿ ಜಯಮ್ಮ ಹಾಗೂ ದಿ|| ಈ. ಶಂಕರಪ್ಪರೆಡ್ಡಿಯವರ ಸುಪುತ್ರರಾದ
ಗೌರವ ಡಾಕ್ಟರೇಟ್,
ಶ್ರೀ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ,
ಸಮಾಜ ಸೇವಾ ತಿಲಕ,
ಸಮಾಜದ ಆಶಾ ಕಿರಣ,
ಬಸವ ಸೇವಾರತ್ನ ಹಾಗೂ ಸುವರ್ಣ ಕರ್ನಾಟಕ ಮಾಣಿಕ್ಯ ಪ್ರಶಸ್ತಿ
ಪುರಸ್ಕೃತರಾದ ಶ್ರೀಯುತ
ಡಾ|| ಎಸ್. ನಾಗರಾಜರೆಡ್ಡಿ
ಇವರಿಗೆ
ಜನ್ಮ ದಿನದ ಶುಭಾಷಯಗಳು.
HAPPY BIRTHDAY
ಶುಭ ಕೋರುವವರು:
ಸ್ನೇಹಿತರು ಹಾಗೂ ಕುಟುಂಬವರ್ಗ
ಅನ್ನಸಂದ್ರಪಾಳ್ಯ, ಹೆಚ್.ಎ.ಎಲ್. ಬೆಂಗಳೂರು–17.
ಮೊ: 9341228084 / 9035336466

General

WORK FROM HOME
ಮನೆಯಿಂದಲೇ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000 -15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲಿಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

WANTED TELLE CALLER
WORK FROM HOME
Earn 30,000 to 40,000
Janani group of institutions
Contact No : 9538441194

ಕರ್ನಾಟಕದಾದ್ಯಂತ ಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ ಯುವತಿಯರು ಬೇಕಾಗಿದ್ದಾರೆ. Any education. ವಸತಿಯೂಟದೊಂದಿಗೆ Salary+OT. 17,800-48,000/-. 7204655164, 7204117164

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/-ESI & PF ಸೌಲಭ್ಯವಿರುತ್ತದೆ. ಬೆಂಗಳೂರು. ಸಂಪರ್ಕಿಸಿ: 9606385001, 9606384001.

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ನಮ್ಮ ಕಾರುಗಳಲ್ಲಿ ತೆರಳಿ ಪ್ರಮೋಟ್ ಮಾಡಿ. ಉಚಿತ ವಸತಿಯೊಂದಿಗೆ ದಿನಕ್ಕೆ 800-1200 ಸಂಪಾದಿಸಲು ಸಂಪರ್ಕಿಸಿ: 8904379634 / 9513670249

ಪ್ರಜಾವಾಣಿ ಕ್ಲಾಸಿಫೈಡ್ಸ್
For Lineage & Single/ Multi Column Classifieds Display ads
BOOK YOUR AD ON SUNDAY & GET 50% OFF ON WEEKDAYS
For more information contact:
9880856233 / 9845114560
9606912256

ಪ್ರವಾಸ

Travel

29/1/2022ರಿಂದ 17 ದಿನಗಳ ಅಷ್ಟ ಜ್ಯೋತಿರ್ಲಿಂಗ ಸಮೇತ ಅಹಮದಾಬಾದ್, ದ್ವಾರಕಾ, ಪಟೇಲ್- ಪ್ರತಿಮೆ, ಶಿರಡಿ. ಶಿವರಾತ್ರಿ ಪ್ರಯುಕ್ತ 17/2/2022ರಿಂದ 22 ದಿನಗಳ ಪುರಿ, ಕೋಲ್ಕತ್ತಾ, ನೇಪಾಳ, ಹರಿದ್ವಾರ್, ಕಾಶಿ, ದೆಹಲಿ ಇತ್ಯಾದಿ ವಿವರಗಳಿಗೆ ಏಷ್ಯನ್ ಟ್ರಾವೆಲ್-ಲೈನ್ಸ್(S) ಆರ್.ವಿ.ರಸ್ತೆ #164/3, ಮಿನರ್ವ ಬಸ್-ಸ್ಟಾಪ್ ಎದುರು, ಬೆಂಗಳೂರು4, 080-26565085. 9480182865, 8105657052

10.12.2021 11 ದಿನಗಳು ರಾಜಸ್ಥಾನ್., 20.01.2022 11ದಿನಗಳು ಉಜ್ಜೈನಿ, ಗುಜರಾತ್., 22.02.2022 13ದಿನಗಳು ಕಾಶಿಪ್ರವಾಸ., 03.01.2022 9ದಿನಗಳು ಆಂಧ್ರ ಭದ್ರಾಚಲಂಪ್ರವಾಸ. ಆರ್.ಗಾಂಧಿ ಟೂರ್ಸ್(ರಿ).9945445809/ 9902433500

ವಿಜಯವಾಡ, ಭದ್ರಾಚಲಂ, ಅನ್ನಾವರಂ, ವಿಶಾಖಪಟ್ಟಣಂ, ಬುರ್ರಾಗುಹೆಗಳು, ಶ್ರೀಕಾಕುಳಂ ಶ್ರೀವಾಸವಿಪೆನುಗೊಂಡ, 24.12.2021, 10 ದಿನಗಳು. ನೈಮಿಶಾರಣ್ಯ, ಅಯೋಧ್ಯ, ಅಲಹಾಬಾದ್, ಚಿತ್ರಕೂಟ, ಗಯಾ, ಬೈದ್ಯನಾಥ್, ಕಾಶಿ 19.01.2022, 10 ದಿನಗಳು. ತಿರುವಣ್ಣಮಲೈ, ಚಿದಂಬರಂ, ನವಗ್ರಹಗಳು, ಕುಂಭಕೋಣಂ, ತಂಜಾವೂರು, ಶ್ರೀರಂಗಂ, ರಾಮೇಶ್ವರಂ, ಕನ್ಯಾಕುಮಾರಿ, ಮದುರೈ, ಪಳನಿ, ತಿರುವನಂತಪುರಂ, ಕಾಲಡಿ, ಗುರುವಾಯುರು 20.12.2021, 01.01.2022, 7/10 ದಿನಗಳು. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ NO- 92, 2ನೇ ಮುಖ್ಯ ರಸ್ತೆ, ಎನ್.ಆರ್.ಕಾಲೋನಿ, ತ್ಯಾಗರಾಜನಗರ, Near KEB Quarters ಬೆಂಗಳೂರು-70. 9342287551, 8050629305

ಉತ್ತರಭಾರತ ಪ್ರವಾಸ 11ದಿನ 6.12.21 ರಿಂದ ವೈಷ್ಣೋದೇವಿ ಕುಲ್ಲು ಮನಾಲಿ ದೆಹಲಿ ಆಗ್ರಾ ವಾಘಬಾರ್ಡರ್ ಹಾಗು ಇತರೆ ಸಂಪರ್ಕಿಸಿ 8884459993 ಶುಭಯಾತ್ರಾ ಹಾಲಿಡೇಸ್

ಸ್ಪರ್ಧಾಮಿತ್ರ ACADEMY
PSI/ FDA / SDA
Paper-1 & Paper-2
IAS / KAS / IBPS / BANK-PO
ADMISSION OPEN
Online & Offline Classes
Near Attigupppe Metro Station, Service Road, Vijayanagar, Bengaluru - 40.
9535111188 / 9535111199

ಭವಿಷ್ಯ

Astrology

ಉಚಿತ ಜ್ಯೋತಿಷ್ಯವಾಣಿ. ರಾಘವೇಂದ್ರ ಕುಲಕರ್ಣಿ. ಜನವಶ, ಧನವಶ, ಶತ್ರುಬಾಧೆ, ವಶೀಕರಣ, ಇನ್ನಿತರ ಸಮಸ್ಯೆಗಳಿಗೆ ಫೋನಿನ ಮೂಲಕ ಶೀಘ್ರದಲ್ಲಿ ಪರಿಹಾರ. 9535759222.

★||ಶ್ರೀಶಿರಡಿಸಾಯಿಬಾಬಾ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಕಂಕಣಬಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ 11ಗಂಟೆಗಳಲ್ಲಿ ಪರಿಹಾರ. ಪಂಡಿತ್. ವಿಕ್ರಮ್‌ಭಟ್ 9972654095

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಪರಿಹಾರ. 9900511008

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ, ಇನ್ನಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

ಬಿಲ್ಡರ್ ಎಸೆನ್ಶಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business to Business

Business

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು. 8792252077, ಶಿವಮೊಗ್ಗ. 9008013895

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀಮತಿ ಅಡಿಲೇಡ್ ಎಲಿಜಬೆತ್ ಹೆನ್ರಿ (76)
ಇವರು 15 ನವಂಬರ್, 2021 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಲೇಟ್ ವಿನ್ಸೆಂಟ್ ಇ ಹೆನ್ರಿ ರವರ ಧರ್ಮಪತ್ನಿ. ಆನೀ ಸೊಲೊಮನ್, ಜೀನ್ ಹೆನ್ರಿ ಮತ್ತು ಆಲನ್ ಹೆನ್ರಿ ರವರ ತಾಯಿ
ಇವರ ಚಿರಶಾಂತಿ ಲಭಿಸಲೆಂದು ಕೋರುವ
ಆನೀ, ಪ್ರೀತಮ್, ಡಾನಿಯೆಲ್ ಮತ್ತು ನಥಾನಿಯೆಲ್

ಮೊದಲನೇ ವರ್ಷದ ಪುಣ್ಯಸ್ಮರಣೆ
ಜಿ. ಜಿ. ನಾಗರಾಜ
(24.9.1951 - 20.11.2020)
ನಿವೃತ್ತ ಹಿರಿಯ ಉಪ ಸಂಪಾದಕರು (ಪ್ರಜಾವಾಣಿ)
ನೀವು ನಿಧನರಾಗಿ ಇಂದಿಗೆ ಒಂದು ವರ್ಷವಾಯಿತು ನಿಮ್ಮ ಸವಿನೆನಪಿನಲ್ಲಿ ಇರುವ
ಪತ್ನಿ : ಶ್ರೀಮತಿ ಕೃಷ್ಣವೇಣಿ ನಾಗರಾಜ
ಮಕ್ಕಳಾದ : ವರುಣ್, ನಿತಿನ್,
ಸೊಸೆಯಂದಿರು : ಪ್ರೀತಿ, ಸೀಮಾ,
ಮೊಮ್ಮಕ್ಕಳು : ಧ್ರುವ & ಲಕ್ಷ್ಯಾ
ದುಃಖತಪ್ತರು :
ಕುಟುಂಬ ವರ್ಗದವರು ಹಾಗೂ ಮಿತ್ರರು

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ರಾಹುಲ್ – ರೋಹಿತ್ ಶತಕದ ಜೊತೆಯಾಟ; ಅಶ್ವಿನ್, ಹರ್ಷಲ್ ಬಿಗಿ ದಾಳಿ

ಭಾರತಕ್ಕೆ ಜಯ; ಸರಣಿ ಕೈವಶ

ರಾಂಚಿ (ಪಿಟಿಐ): ಆರಂಭಿಕ ಜೋಡಿ ಕೆ.ಎಲ್.ರಾಹುಲ್ ಮತ್ತು ರೋಹಿತ್ ಶರ್ಮಾ ಅವರ ಶತಕದ ಜೊತೆಯಾಟದ ಬಲದಿಂದ ಭಾರತ ತಂಡ ಭರ್ಜರಿ ಜಯ ಸಾಧಿಸಿತು.

ಜಾರ್ಖಂಡ್ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ನ್ಯೂಜಿಲೆಂಡ್ ಎದುರಿನ ಟ್ವೆಂಟಿ–20 ಸರಣಿಯ ಎರಡನೇ ಪಂದ್ಯದಲ್ಲಿ ತಂಡ ಏಳು ವಿಕೆಟ್‌ಗಳಿಂದ ಗೆದ್ದಿತು.

154 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರೋಹಿತ್ ಶರ್ಮಾ ಬಳಗ 16 ಎಸೆತ ಬಾಕಿ ಉಳಿದಿರುವಾಗಲೇ ದಡ ಸೇರಿತು.

ಮೊದಲ ವಿಕೆಟ್‌ಗೆ ರಾಹುಲ್ ಮತ್ತು ರೋಹಿತ್ 80 ಎಸೆತಗಳಲ್ಲಿ 117 ರನ್ ಸೇರಿಸಿ ಭದ್ರ ಬುನಾದಿ ಹಾಕಿಕೊಟ್ಟರು. ನಂತರ ಟಿಮ್ ಸೌಥಿ ಮೂರು ವಿಕೆಟ್ ಕಬಳಿಸಿದರು. ಋಷಭ್ ಪಂತ್ ಮತ್ತು ವೆಂಕಟೇಶ್ ಅಯ್ಯರ್ ದಿಟ್ಟ ಆಟವಾಡಿ ಸುಲಭ ಜಯ ತಂದುಕೊಟ್ಟರು. ಸಿಕ್ಸರ್ ಮೂಲಕ ಪಂತ್ ಗೆಲುವಿನ ರನ್ ಬಾರಿಸಿದರು.

ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪದಾರ್ಪಣೆ ಪಂದ್ಯವಾಡಿದ ಮಧ್ಯಮವೇಗಿ ಹರ್ಷಲ್ ಪಟೇಲ್ ಮತ್ತು ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರ ಶಿಸ್ತುಬದ್ಧ ದಾಳಿಯ ಮುಂದೆ ನ್ಯೂಜಿಲೆಂಡ್ ಬ್ಯಾಟರ್‌ಗಳು ರನ್ ಗಳಿಸಲು ಪರದಾಡಿದರು. ಹೀಗಾಗಿ ದೊಡ್ಡ ಮೊತ್ತ ಗಳಿಸುವ ಯೋಜನೆ ಸಫಲವಾಗಲಿಲ್ಲ.

ಪಟೇಲ್ (25ಕ್ಕೆ2) ಮತ್ತು ಅಶ್ವಿನ್ (19ಕ್ಕೆ1) ಬಿಗಿ ದಾಳಿಯ ಮುಂದೆ ಕಿವೀಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 153 ರನ್ ಗಳಿಸಿತು.

ಆರಂಭಿಕ ಜೋಡಿ ಮಾರ್ಟಿನ್ ಗಪ್ಟಿಲ್ (31;15ಎ,3ಬೌಂಡರಿ, 2ಸಿಕ್ಸರ್) ಮತ್ತು ಡೆರಿಲ್ ಮಿಚೆಲ್ (31; 28ಎ) ಆತಿಥೇಯ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. ಕೇವಲ ನಾಲ್ಕು ಓವರ್‌ಗಳಲ್ಲಿ 48 ರನ್‌ಗಳು ಸೇರಿದವು.

ಮಧ್ಯಮವೇಗಿ ದೀಪಕ್ ಚಾಹರ್ ಅವರು ಹಾಕಿದ ಎಸೆತ ಅನಿರೀಕ್ಷಿತವಾಗಿ ತುಸು ಎತ್ತರಕ್ಕೆ ಪುಟಿಯಿತು. ಗಪ್ಟಿಲ್ ಪುಲ್ ಮಾಡಲು ಪ್ರಯತ್ನಿಸಿದರು. ಬ್ಯಾಟಿನ ಮೇಲ್ಭಾಗಕ್ಕೆ ಬಡಿದ ಚೆಂಡು ಮೇಲಕ್ಕೆ ಹಾರಿತು. ವಿಕೆಟ್ ಕೀಪರ್ ರಿಷಭ್ ಪಂತ್ ಚೆಂಡಿನ ಬೆನ್ನತ್ತಿ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾದರು.

ಮಾರ್ಕ್ ಚಾಪಮನ್ (21; 17ಎ) ಕೂಡ ಬಿರುಸಿನ ಆಟ ಆರಂಭಿಸಿದರು. ಆದರೆ, ಒಂಬತ್ತನೇ ಓವರ್‌ನಲ್ಲಿ ಅಕ್ಷರ್ ಪಟೇಲ್ ಸ್ಪಿನ್ ಮೋಡಿಗೆ ತಲೆಬಾಗಿದರು. ಎರಡು ಓವರ್‌ಗಳ ನಂತರ ಡೆರಿಲ್ ಮಿಚೆಲ್ ಕೂಡ ಔಟಾದರು. ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಚೊಚ್ಚಲ ವಿಕೆಟ್ ಗಳಿಸಿದ ಹರ್ಷಲ್ ಸಂಭ್ರಮಿಸಿದರು.

ಈ ಹೊತ್ತಿನಲ್ಲಿ ಗ್ಲೆನ್ ಫಿಲಿಪ್ಸ್ ತಂಡಕ್ಕೆ ಆಸರೆಯಾದರು. 21 ಎಸೆತಗಳಲ್ಲಿ 34 ರನ್ ಗಳಿಸಿದರು. ಮೂರು ಸಿಕ್ಸರ್ ಸಿಡಿಸಿದ ಅವರು ತಂಡವನ್ನು ದೊಡ್ಡ ಮೊತ್ತದತ್ತ ಮುನ್ನಡೆಸುವ ಭರವಸೆ ಮುಡಿಸಿದರು.

ಆದರೆ, ಅಶ್ವಿನ್ ಶಿಸ್ತಿನ ದಾಳಿಯ ಮುಂದೆ ರನ್ ಗಳಿಕೆ ಸುಲಭವಾಗಲಿಲ್ಲ. ಟಿಮ್ ಸೀಫರ್ಟ್ (13; 15ಎ) ವಿಕೆಟ್ ಗಳಿಸಿದ ಅಶ್ವಿನ್ ಹೆಚ್ಚು ರನ್ ಬಿಟ್ಟುಕೊಡದೇ ಬ್ಯಾಟರ್‌ಗಳನ್ನು ಕಾಡಿದರು. ಫಿಲಿಪ್ಸ್ ವಿಕೆಟ್ ಗಳಿಸಿದ ಹರ್ಷಲ್ ಮಿಂಚಿದರು. ಆರಂಭದಲ್ಲಿ ಗಪ್ಟಿಲ್‌ರಿಂದ ದಂಡನೆಗೊಳಗಾಗಿದ್ದ ಭುವನೇಶ್ವರ್ ಕುಮಾರ್ 18ನೇ ಓವರ್‌ನಲ್ಲಿ ಜಿಮ್ಮಿ ನಿಶಾಮ್ ವಿಕೆಟ್ ಕಬಳಿಸುವಲ್ಲಿ ಸಫಲರಾದರು.

ಕೆ.ಎಲ್. ರಾಹುಲ್ ಬ್ಯಾಟಿಂಗ್ ವೈಭವ–ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ನ್ಯೂಜಿಲೆಂಡ್ 6ಕ್ಕೆ 153 (20 ಓವರ್)
ಗಪ್ಟಿಲ್ ಸಿ ಪಂತ್ ಬಿ ಚಾಹರ್ 31 (15ಎ, 4X3, 6X2), ಮಿಚೆಲ್ ಸಿ ಯಾದವ್ ಬಿ ಹರ್ಷಲ್ 31 (28ಎ, 4X3), ಚಾಪ್‌ಮನ್ ಸಿ ರಾಹುಲ್ ಬಿ ಅಕ್ಷರ್ 21 (17ಎ, 4X3), ಫಿಲಿಪ್ಸ್ ಸಿ ಋತುರಾಜ್ (ಬದಲಿ) ಬಿ ಹರ್ಷಲ್ 34 (21ಎ, 4X1, 6X3), ಸೀಫರ್ಟ್ ಸಿ ಭುವನೇಶ್ವರ್ ಬಿ ಅಶ್ವಿನ್ 13 (15ಎ, 4X1), ನಿಶಾಮ್ ಸಿ ಪಂತ್ ಬಿ ಭುವನೇಶ್ವರ್ 3 (12ಎ), ಸ್ಯಾಂಟನರ್ ಔಟಾಗದೆ 8 (9ಎ), ಮಿಲ್ನೆ ಔಟಾಗದೆ 5 (4ಎ)
ಇತರೆ (ಲೆಗ್‌ಬೈ 2, ನೋಬಾಲ್ 1, ವೈಡ್ 4) 7
ವಿಕೆಟ್ ಪತನ: 1–48 (ಮಾರ್ಟಿನ್ ಗಪ್ಟಿಲ್, 4.2), 2–79 (ಮಾರ್ಕ್ ಚಾಪ್‌ಮನ್, 8.5), 3–90 (ಡೆರಿಲ್ ಮಿಚೆಲ್, 11.2), 4–125 (ಟಿಮ್ ಸೀಫರ್ಟ್, 15.1), 5–137 (ಗ್ಲೆನ್ ಫಿಲಿಪ್ಸ್, 16.3), 6–140 (ಜೇಮ್ಸ್ ನಿಶಾಮ್, 17.6)
ಬೌಲಿಂಗ್: ಭುವನೇಶ್ವರ ಕುಮಾರ್ 4–0–39–1, ದೀಪಕ್ ಚಾಹರ್ 4–0–42–1, ಅಕ್ಷರ್ ಪಟೇಲ್ 4–0–26–1, ರವಿಚಂದ್ರನ್ ಅಶ್ವಿನ್ 4–0–19–1, ಹರ್ಷಲ್ ಪಟೇಲ್ 4–0–25–2

ಭಾರತ 3ಕ್ಕೆ 155 (17.2 ಓವರ್)
ರಾಹುಲ್ ಸಿ ಫಿಲಿಪ್ಸ್ ಬಿ ಸೌಥಿ 65 (49 ಎ, 4X8, 6X2), ರೋಹಿತ್ ಸಿ ಗಪ್ಟಿಲ್ ಬಿ ಸೌಥಿ 55 (36 ಎ, 4X1, 6X5), ವೆಂಕಟೇಶ್ ಔಟಾಗದೆ 12 (11ಎ, 4X2), ಸೂರ್ಯಕುಮಾರ್ ಬಿ ಸೌಥಿ 1 (2 ಎ), ಪಂತ್ ಔಟಾಗದೆ 12 (6 ಎ, 6X2)
ಇತರೆ (ಲೆಗ್‌ಬೈ 6, ವೈಡ್ 4) 10
ವಿಕೆಟ್ ಪತನ: 1–117 (ಕೆ.ಎಲ್. ರಾಹುಲ್, 13.2), 2–135 (ರೋಹಿತ್ ಶರ್ಮಾ, 15.3), 3–137 (ಸೂರ್ಯಕುಮಾರ್ ಯಾದವ್, 15.6)
ಬೌಲಿಂಗ್: ಟಿಮ್ ಸೌಥಿ 4–0–16–3, ಟ್ರೆಂಟ್ ಬೌಲ್ಟ್ 4–0–36–0, ಮಿಚೆಲ್ ಸ್ಯಾಂಟನರ್ 4–0–33–0, ಆ್ಯಡಂ ಮಿಲ್ನೆ 3–0–39–0, ಈಶ್ ಸೋಧಿ 2–0–13–0 ಜೇಮ್ಸ್ ನಿಶಾಮ್ 0.2–0–12–0

ಫಲಿತಾಂಶ: ಭಾರತಕ್ಕೆ 7 ವಿಕೆಟ್‌ಗಳ ಜಯ

ಪೇನ್ ರಾಜೀನಾಮೆ: ಕಮಿನ್ಸ್ ಮುಂದಿನ ನಾಯಕ?

ಸಿಡ್ನಿ (ರಾಯಿಟರ್ಸ್): ಟಿಮ್ ಪೇನ್ ರಾಜೀನಾಮೆಯ ಹಿನ್ನೆಲೆಯಲ್ಲಿ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮುಂದಿನ ನಾಯಕನಾಗಿ ಪ್ಯಾಟ್ ಕಮಿನ್ಸ್ ಅವರನ್ನು ನೇಮಕ ಮಾಡುವ ಸಾಧ್ಯತೆ ಇದೆ. ಆದರೆ ಟೆಸ್ಟ್ ತಂಡದ ಇಬ್ಬರು ನಾಯಕರು ವಿವಾದದ ಹಿನ್ನೆಲೆಯಲ್ಲಿ ಸ್ಥಾನ ತ್ಯಜಿಸಬೇಕಾಗಿ ಬಂದಿರುವ ಹಿನ್ನೆಲೆಯಲ್ಲಿ ಆಯ್ಕೆ ಪ್ರಕ್ರಿಯೆ ಕ್ರಿಕೆಟ್ ಆಸ್ಟ್ರೇಲಿಯಾಗೆ ತಲೆನೋವಾಗಲಿದೆ.

ಲೈಂಗಿಕವಾಗಿ ಕೆರಳಿಸುವ ಸಂದೇಶ ಕಳುಹಿಸಿದ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಟಿಮ್ ಪೇನ್ ರಾಜೀನಾಮೆ ನೀಡಿದ್ದಾರೆ. ಅವರನ್ನು ನಾಯಕನನ್ನಾಗಿ ನೇಮಕ ಮಾಡುವ ಮುನ್ನ, 2018ರಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಪಂದ್ಯದಲ್ಲಿ ಚೆಂಡು ವಿರೂಪಗೊಳಿಸಿದ ಪ್ರಕರಣದಲ್ಲಿ ಭಾಗಿಯಾದ ಕಾರಣ ಸ್ಟೀವ್ ಸ್ಮಿತ್ ಅವರ ಸ್ಥಾನಕ್ಕೆ ಕುತ್ತು ಬಂದಿತ್ತು.

'ಟಿಮ್ ಪೇನ್ ಅವರ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ. ಮುಂದಿನ ನಾಯಕನನ್ನು ಆರಿಸುವ ಸಂಬಂಧ ರಾಷ್ಟ್ರೀಯ ಆಯ್ಕೆ ಸಮಿತಿಯೊಂದಿಗೆ ಚರ್ಚಿಸಲಾಗುತ್ತಿದೆ' ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ.

ಉಪನಾಯಕ, ವೇಗದ ಬೌಲರ್ 28 ವರ್ಷ ವಯಸ್ಸಿನ ಪ್ಯಾಟ್ ಕಮಿನ್ಸ್ ಅವರನ್ನು ಮುಂದಿನ ನಾಯಕನಾಗಿ ನೇಮಕವಾಗುವ ಸಾಧ್ಯತೆ ಇದೆ. ಆದರೆ ಆಯ್ಕೆ ಸಮಿತಿ ಇದಕ್ಕೆ ಸಮ್ಮತಿ ಸೂಚಿಸುವುದೇ ಎಂಬುದು ಕುತೂಹಲದ ವಿಷಯ. ಇಂಗ್ಲೆಂಡ್ ಎದುರಿನ ಆ್ಯಷಸ್ ಸರಣಿ ಆರಂಭವಾಗಲು ಕೇವಲ ಮೂರು ವಾರ ಉಳಿದಿರುವುದರಿಂದ ಆಯ್ಕೆ ವಿಷಯ ಕಗ್ಗಂಟಾಗಲಿದೆ.



ಟಿಮ್ ಪೇನ್ –ರಾಯಿಟರ್ಸ್ ಚಿತ್ರ

ಡಿವಿಲಿಯರ್ಸ್ ಬೆಂಗಳೂರು ಪ್ರೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಸ್ಟರ್ 360 ಡಿಗ್ರಿ ಖ್ಯಾತಿಯ ಎಬಿ ಡಿವಿಲಿಯರ್ಸ್ ಮತ್ತು ಬೆಂಗಳೂರಿನ ನಂಟಿಗೆ ಒಂದು ದಶಕದ ಕಥೆ ಇದೆ. ದಕ್ಷಿಣ ಆಫ್ರಿಕಾದ ಪ್ರಿಟೋರಿಯಾದಲ್ಲಿ ಜನಿಸಿದ ಅಬ್ರಹಾಂ ಬೆಂಜಮಿನ್ ಡಿವಿಲಿಯರ್ಸ್ ಬೆಂಗಳೂರಿಗರೇ ಆಗಿ ಹೋಗಿದ್ದು ಕ್ರಿಕೆಟ್ ಆಟದ ಪುಸ್ತಕದ ಸುಂದರ ಅಧ್ಯಾಯಗಳಲ್ಲಿ ಒಂದು.

'ನನ್ನ ಮಗ ಬೆಂಗಳೂರಿನವನೇ ಆಗಿ ಹೋಗಿದ್ದಾನೆ. ಇಲ್ಲಿನ ಜನ ಆತನ ಆಟ, ವ್ಯಕ್ತಿತ್ವವನ್ನು ಮೆಚ್ಚಿಕೊಂಡಿರುವ ರೀತಿ ನೋಡಿ ಹೃದಯ ತುಂಬಿ ಬಂದಿದೆ' ಎಂದು ಆರು ವರ್ಷಗಳ ಹಿಂದೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಎಬಿಡಿಯ ತಾಯಿ. ಪ್ರತಿವರ್ಷ ಐಪಿಎಲ್ ಟೂರ್ನಿ ನಡೆದಾಗಲೂ ಕ್ರಿಕೆಟ್‌ಪ್ರಿಯರ ಎದೆಬಡಿತ ಹೆಚ್ಚಿಸುತ್ತಿದ್ದ ಆಟಗಾರ ಎಬಿಡಿ. ಅವರ ಬ್ಯಾಟಿಂಗ್ ಶೈಲಿಗೆ ಅವರೇ ಸರಿಸಾಟಿ. ಕ್ರಿಕೆಟ್‌ನ ಯಾವುದೇ ಮಾದರಿ ಇರಲಿ. ತಮ್ಮದೇ ಆದ ಹೊಡೆತಗಳ ಮೂಲಕ ಬೌಲರ್‌ಗಳಿಗೆ ಸಿಂಹಸ್ವಪ್ನರಾಗಿದವರು. ಸಾಂಪ್ರದಾಯಿಕ ಹೊಡೆತಗಳನ್ನು ಆಡುವ ಸಾಮರ್ಥ್ಯ ಅವರದ್ದು. ಹೊಸ ನಮೂನೆಯ ಹೊಡೆತಗಳ ಅವಿಷ್ಕರಿಸುತ್ತ ಕ್ರೀಸ್ ಮೇಲೆ ಪಾರಮ್ಯ ಸಾಧಿಸಿದವರು. ಇದೀಗ ಅವರ ಆಟದ ವೈಭವಕ್ಕೆ ತೆರೆಬಿದ್ದಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಸೇರಿದಂತೆ ಎಲ್ಲ ಮಾದರಿಯ ಕ್ರಿಕೆಟ್‌ಗೂ ವಿದಾಯ ಘೋಷಿಸಿದ್ದಾರೆ.

ಒಂದು ಆಕರ್ಷಕ ವಿಡಿಯೊ ಗೇಮ್ ರೂಪಿಸಬಹುದಾದಂತಹ ಬ್ಯಾಟಿಂಗ್ ಶೈಲಿ ಅವರದ್ದು ಎಂದು ಬಹಳಷ್ಟು ವೀಕ್ಷಕ ವಿವರಣೆ ಕಾರರು ಶ್ಲಾಘಿಸಿದ್ದಾರೆ. ಫೀಲ್ಡಿಂಗ್‌ನಲ್ಲಿಯೂ ಅವರ ಜಿಮ್ನಾಸ್ಟಿಕ್ ಶೈಲಿಯು ಎಂತಹ ಯುವಕರನ್ನೂ ನಾಚಿಸುವಂತಿತ್ತು. ಮೂರು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಅವರು ಬೌಂಡರಿ ಲೈನ್‌ನಲ್ಲಿ ಮೇಲಕ್ಕೆಗರಿ ಪಡೆದಿದ್ದ ಕ್ಯಾಚ್ ಎಷ್ಟೋ ಕ್ರಿಕೆಟ್ ಪ್ರೇಮಿಗಳ ಮನೆ, ಮನಗಳಲ್ಲಿ 'ಭಿತ್ತಿಚಿತ್ರ'ವಾಗಿ ಉಳಿದುಕೊಂಡಿದೆ.

ಅವರ ರಿವರ್ಸ್ ಸ್ವೀಪ್, ವೈಡ್ ಆ್ಯಂಗಲ್ ಸೈಡ್ ಡ್ರೈವ್‌ಗಳ ಅಂದ ಚೆಂದಕ್ಕೆ ಸರಿಸಾಟಿ ಇಲ್ಲ.

ವಿರಾಟ್–ಎಬಿಡಿ ಸ್ನೇಹ: ಅವರ ಆಟದಷ್ಟೇ ಖ್ಯಾತವಾಗಿರುವುದು ಎಬಿಡಿ ಮತ್ತು ವಿರಾಟ್ ಕೊಹ್ಲಿ ಗೆಳೆತನ. ಇಬ್ಬರೂ ಕ್ರೀಸ್‌ನಲ್ಲಿ ಜೊತೆಗೂಡಿದರೆ ರನ್‌ಗಳ ಹೊಳೆ ಖಚಿತ. ವಿರಾಟ್ ಮತ್ತು ಎಬಿಡಿ ಎರಡು ಸಲ ದ್ವಿಶತಕದ ಜೊತೆಯಾಟವಾಡಿದ್ದಾರೆ. ಈ ಸಾಧನೆ ಮಾಡಿರುವ ಏಕೈಕ ಜೋಡಿ ಇವರದ್ದು. ಅಲ್ಲದೇ ಐದು ಬಾರಿ ಶತಕದ ಜೊತೆಯಾಟವಾಡಿದ್ದಾರೆ.

ತಂಡಕ್ಕೆ ಅಗತ್ಯವಾದಾಗ ಯಾವುದೇ ಕ್ರಮಾಂಕದಲ್ಲಿಯೂ ಬ್ಯಾಟಿಂಗ್ ಮಾಡುವ ದಿಟ್ಟ ಆಟಗಾರ ಎಬಿಡಿ. ಆರಂಭಿಕನಾಗಿ ಹೊಸಚೆಂಡು ಎದುರಿಸುತ್ತಿದ್ದ ರೀತಿಯಲ್ಲಿಯೇ ಆರನೇ ಕ್ರಮಾಂಕದಲ್ಲಿ ಹಳೆಯ ಚೆಂಡನ್ನೂ ಚಚ್ಚುತ್ತಿದ್ದರು. ಬಹಳಷ್ಟು ಪಂದ್ಯಗಳಲ್ಲಿ ತಂಡವನ್ನು ಸೋಲಿನ ದವಡೆಯಿಂದ ಸರಾಗವಾಗಿ ಗೆಲುವಿನತ್ತ ಕೊಂಡೊಯ್ದ ರೀತಿಯಿಂದಾಗಿ 'ಆಪದ್ಬಾಂದವ'ನೆಂಬ ಬಿರುದು ಕೂಡ ಅವರಿಗಿದೆ. ವಿಕೆಟ್ ಕೀಪರ್ ಆಗಿ ನೀಡಿದ ಕಾಣಿಕೆಯೂ ಗಣನೀಯ.

'ಮೊದಲಿನ ಹುಮ್ಮಸ್ಸು ಈಗ ಮೂಡುತ್ತಿಲ್ಲ. ಇಂತಹ ಹೊತ್ತಿನಲ್ಲಿ ಹೊಸಪ್ರತಿಭೆಗಳಿಗೆ ದಾರಿಬಿಟ್ಟುಕೊ ಡುವುದು ಸೂಕ್ತ. ತಂಡದ ಎಲ್ಲ ಆಟಗಾರರು, ನೆರವು ಸಿಬ್ಬಂದಿ, ಅಭಿಮಾನಿಗಳ ಪ್ರೀತಿಗೆ ಚಿರಋಣಿಯಾಗಿದ್ದೇನೆ. ಎಲ್ಲವನ್ನೂ ಕೊಟ್ಟ ಕ್ರಿಕೆಟ್ ಮೇಲಿನ ಪ್ರೀತಿ ಎಂದೆಂದಿಗೂ ಇರುತ್ತದೆ' ಎಂದು 37 ವರ್ಷದ ಎಬಿಡಿ ಟ್ವೀಟ್ ಮಾಡಿದ್ದಾರೆ.

2018ರಲ್ಲಿಯೇ ಅಂತರ ರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದ ಎಬಿಡಿ ಫ್ರ್ಯಾಂಚೈಸಿ ಲೀಗ್‌ಗಳಲ್ಲಿ ಆಡಿದ್ದರು. ಗೆಳೆಯ ಕೊಹ್ಲಿಗಾಗಿ ಆರ್‌ಸಿಬಿಯಲ್ಲಿ ಉಳಿದುಕೊಂಡಿದ್ದರು.

ಎಬಿ ಡಿವಿಲಿಯರ್ಸ್ ಮತ್ತು ವಿರಾಟ್ ಕೊಹ್ಲಿ

ಐಪಿಎಲ್‌ನಲ್ಲಿ

413 ಬೌಂಡರಿ | **251** ಸಿಕ್ಸರ್

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಾಧನೆ

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	4	6
ಟೆಸ್ಟ್	114	8765	278	22	46	1024	64
ಏಕದಿನ	228	9577	176	25	53	840	204
ಟಿ20	78	1672	79	--	10	140	60

ಐಪಿಎಲ್ ಸಾಧನೆ

ತಂಡ	ಅವಧಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	ಕ್ಯಾಚ್
ಡೆಲ್ಲಿ	2008-10	28	671	105*	1	3	22
ಆರ್‌ಸಿಬಿ	2011-21	156	4491	133*	2	37	96

ಮುಷ್ತಾಕ್ ಅಲಿ ಟಿ20: ಕರ್ನಾಟಕ–ವಿದರ್ಭ ಹಣಾಹಣಿ

ಮನೀಷ್ ಬಳಗಕ್ಕೆ ಫೈನಲ್ ಕನಸು

ನವದೆಹಲಿ(ಪಿಟಿಐ): ಕರ್ನಾಟಕ ತಂಡ ಶನಿವಾರ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯ ಸೆಮಿಫೈನಲ್‌ನಲ್ಲಿ ವಿದರ್ಭಕ್ಕೆ ಸವಾಲೊಡ್ಡಲು ಸಿದ್ಧವಾಗಿದೆ.

ಕ್ವಾರ್ಟರ್‌ಫೈನಲ್‌ನಲ್ಲಿ ಬಲಿಷ್ಠ ಬಂಗಾಳ ತಂಡದ ಎದುರು 'ಸೂಪರ್ ಓವರ್'ನಲ್ಲಿ ಗೆದ್ದು ನಾಲ್ಕರ ಘಟ್ಟಕ್ಕೆ ಪ್ರವೇಶಿಸಿರುವ ಕರ್ನಾಟಕ ಭರ್ತಿ ಆತ್ಮವಿಶ್ವಾಸದಲ್ಲಿದೆ.

ಕರ್ನಾಟಕ ತಂಡವು ಬ್ಯಾಟಿಂಗ್ ವಿಭಾಗದ ಮೇಲೆ ಹೆಚ್ಚು ಅವಲಂಬಿತವಾಗಿದೆ. ಆದರೆ, ಕಳೆದೆರಡು ಪಂದ್ಯಗಳಲ್ಲಿ ಇನಿಂಗ್ಸ್ ಆರಂಭದ ಅವಕಾಶ ಪಡೆದಿದ್ದ ಬಿ.ಆರ್. ಶರತ್ ವಿಫಲರಾಗಿದ್ದರು. ಆದ್ದರಿಂದ ಈ ಪಂದ್ಯದಲ್ಲಿ ಅವರ ಕ್ರಮಾಂಕ ಬದಲಾಗುವ ಸಾಧ್ಯತೆ ಇದೆ. ಮಧ್ಯಮ ಕ್ರಮಾಂಕದಲ್ಲಿ ಅಭಿನವ್ ಮನೋಹರ್ ಮಿಂಚುತ್ತಿರುವುದು ತಂಡದ ಬಲ ಹೆಚ್ಚಿಸಿದೆ. ಅನುಭವಿ ಕರುಣ್ ನಾಯರ್, ಪಾಂಡೆ ಅವರೂ ಉತ್ತಮ ಲಯದಲ್ಲಿದ್ದಾರೆ. ಯುವ ಬೌಲರ್‌ಗಳಾದ ಎಂಬಿ. ದರ್ಶನ್, ವಿದ್ಯಾಧರ್ ಪಾಟೀಲ ಮತ್ತು ವಿಜಯಕುಮಾರ್ ವೈಶಾಖ ಇನ್ನಷ್ಟು ನಿಖರವಾದ ದಾಳಿ ನಡೆಸಿದರೆ ಎದುರಾಳಿ ಬಳಗವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕಬಹುದು. ಈ ಪಂದ್ಯದಲ್ಲಿ ಅನುಭವಿ ಶ್ರೇಯಸ್ ಗೋಪಾಲ್ ಅವರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

ವಿದರ್ಭ ತಂಡವು ಎಂಟರ ಘಟ್ಟದಲ್ಲಿ ರಾಜಸ್ಥಾನ ಎದುರು ಜಯಿಸಿತ್ತು. ವಿದರ್ಭ ಬೌಲಿಂಗ್ ಪಡೆಯು ಎದುರಾಳಿ ಬಳಗವನ್ನು 84 ರನ್‌ಗಳಿಗೆ ಕಟ್ಟಿಹಾಕಿತ್ತು. ಪ್ಲೇಟ್ ಗುಂಪಿನಿಂದ ಪ್ರೀಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದ ವಿದರ್ಭಕ್ಕೆ ಗುಂಪು ಹಂತದಲ್ಲಿ ಕಠಿಣ ಸವಾಲು ಇರಲಿಲ್ಲ.

ವಿದರ್ಭ ತಂಡದ ಬ್ಯಾಟಿಂಗ್ ವಿಭಾಗಕ್ಕೆ ಕನ್ನಡಿಗ ಗಣೇಶ್ ಸತೀಶ್ ಪ್ರಮುಖ ಶಕ್ತಿಯಾಗಿದ್ದಾರೆ. ಅಥರ್ವ ತೈಡೆ, ಅಕ್ಷಯ್ ವಾಡಕರ್ ಉತ್ತಮ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1.00
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಕರುಣ್ ನಾಯರ್ –ಪ್ರಜಾವಾಣಿ ಇತ್ರ

ಪಾಕಿಸ್ತಾನಕ್ಕೆ ಗೆಲುವು

ಢಾಕಾ (ಎಎಫ್‌ಪಿ): ಆತಿಥೇಯ ಬಾಂಗ್ಲಾದೇಶ ತಂಡವನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿದ ಪಾಕಿಸ್ತಾನ ಟ್ವೆಂಟಿ–20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ನಾಲ್ಕು ವಿಕೆಟ್‌ಗಳಿಂದ ಜಯ ಸಾಧಿಸಿತು.

ಶೇರ್ ಇ ಬಾಂಗ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಗೆಲ್ಲುವ ಮೂಲಕ ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆಯನ್ನು ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 7ಕ್ಕೆ 127 (ಅಫೀಫ್ ಹೊಸೇನ್ 36, ನೂರುಲ್ ಹಸನ್ 28, ಮೆಹದಿ ಹಸನ್ 30; ಮೊಹಮ್ಮದ್ ನವಾಜ್ 27ಕ್ಕೆ1, ಹಸನ್ ಅಲಿ 22ಕ್ಕೆ3, ಮೊಹಮ್ಮದ್ ವಾಸಿಂ 24ಕ್ಕೆ2, ಶಾದಬ್ ಖಾನ್ 20ಕ್ಕೆ1); **ಪಾಕಿಸ್ತಾನ:** 19.2 ಓವರ್‌ಗಳಲ್ಲಿ 6ಕ್ಕೆ 132 (ಫಖ್ರ್ ಜಮಾನ್ 34, ಖುಷ್‌ದಿಲ್ ಶಾ 34; ಮೆಹದಿ ಹಸನ್ 17ಕ್ಕೆ1, ತಸ್ಕಿನ್ ಅಹಮ್ಮದ್ 31ಕ್ಕೆ2, ಮುಸ್ತಫಿಜುರ್ ರಹಮಾನ್ 26ಕ್ಕೆ1, ಶೊರಿಫುಲ್ ಇಸ್ಲಾಮ್ 31ಕ್ಕೆ1). ಫಲಿತಾಂಶ: ಪಾಕಿಸ್ತಾನಕ್ಕೆ 4 ವಿಕೆಟ್‌ಗಳ ಜಯ.

ಹಾಕಿ ತಂಡಕ್ಕೆ ಸವಿತಾ ಸಾರಥ್ಯ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಿಗದಿಯಾಗಿರುವ ಏಷ್ಯನ್ ಮಹಿಳಾ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಗೆ ರಾಣಿ ರಾಂಪಾಲ್ ಅವರಿಗೆ ವಿಶ್ರಾಂತಿ ನೀಡಲಾಗಿದ್ದು, ಉಪನಾಯಕಿ ಸವಿತಾ ಅವರು ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಟೂರ್ನಿಯು ದಕ್ಷಿಣ ಕೊರಿಯಾದ ಡಾಂಗೇಯಲ್ಲಿ ಡಿಸೆಂಬರ್ 5ರಿಂದ 12ರವರೆಗೆ ಟೂರ್ನಿ ನಿಗದಿಯಾಗಿದೆ.

ಭಾರತ ಡಿಸೆಂಬರ್ 5ರಂದು ತನ್ನ ಮೊದಲ ಪಂದ್ಯದಲ್ಲಿ ಥಾಯ್ಲೆಂಡ್ ತಂಡಕ್ಕೆ ಮುಖಾಮುಖಿಯಾಗಲಿದೆ.

ರಾಣಿ ಅವರು ಬೆಂಗಳೂರಿನಲ್ಲಿ ಪುನಃಶ್ಚೇತನ ಶಿಬಿರದಲ್ಲಿದ್ದಾರೆ.

ತಂಡ: ಗೋಲ್‌ಕೀಪರ್‌ಗಳು: ಸವಿತಾ (ನಾಯಕಿ), ರಜನಿ ಎತಿಮರ್ಪು.

ಡಿಫೆಂಡರ್ಸ್: ದೀಪ್ ಗ್ರೇಸ್ ಎಕ್ಕಾ (ಉಪನಾಯಕಿ), ಉದಿತಾ, ನಿಕ್ಕಿ ಪ್ರಧಾನ್, ಗುರ್ಜಿತ್ ಕೌರ್

ಮಿಡ್‌ಫೀಲ್ಡರ್ಸ್: ನಿಶಾ, ಸುಶೀಲಾ ಚಾನು ಪುಖ್ರಂಬಮ್, ನಮಿತಾ ಟೊಪ್ಪೊ, ಮೋನಿಕಾ, ನೇಹಾ, ಜ್ಯೋತಿ, ಲಿಲಿಮಾ ಮಿನ್ಜ್.

ಫಾರ್ವರ್ಡ್ಸ್: ನವನೀತ್ ಕೌರ್, ವಂದನಾ ಕಟಾರಿಯಾ, ರಾಜ್ವಿಂದರ್ ಕೌರ್, ಮರಿಯಾನಾ ಕುಜೂರ್, ಸೋನಿಕಾ.

ಸವಿತಾ –ಪಿಟಿಐ ಚಿತ್ರ

ಭಾರತ ಆಡುವ ಪಂದ್ಯಗಳು

ದಿನಾಂಕ	ಎದುರಾಳಿ
ಡಿ.5	ಥಾಯ್ಲೆಂಡ್
ಡಿ.6	ಮಲೇಷ್ಯಾ
ಡಿ.8	ಕೊರಿಯಾ
ಡಿ.9	ಚೀನಾ
ಡಿ.11	ಜಪಾನ್

ಮುಂಬೈ ಧಾರಣೆ

ಶೇಂಗಾ

19-11-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9350-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1370 (1370)
ಒಂದು ವಾರದ ಡೆಲಿವರಿ	1365 (1365)
ಸೋಯಾ ಕಚ್ಚಾ	1197 (1195)
ಪಾಮ್ ವಾರದ ಡೆಲಿವರಿ	1203 (1200)
ಸೂರ್ಯಕಾಂತಿ ಎಣ್ಣೆ ಕಚ್ಚಾ	1210 (1215)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,000 (48,900)
ಬೆಳ್ಳಿ ಕೆ.ಜಿ 65,900 (66,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕ್ರಿಪ್ಟೊ ಕರೆನ್ಸಿ: ಹೂಡಿಕೆ ಲಾಭ ತೆರಿಗೆ ವ್ಯಾಪ್ತಿಗೆ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಕಾನೂನುಗಳಲ್ಲಿ ಬದಲಾವಣೆ ತಂದು, ಕ್ರಿಪ್ಟೊ ಕರೆನ್ಸಿಗಳನ್ನೂ ತೆರಿಗೆ ವ್ಯಾಪ್ತಿಗೆ ತರುವ ಆಲೋಚನೆ ಕೇಂದ್ರ ಸರ್ಕಾರಕ್ಕೆ ಇದೆ ಎಂದು ರೆವಿನ್ಯು ಕಾರ್ಯದರ್ಶಿ ತರುಣ್ ಬಜಾಜ್ ತಿಳಿಸಿದ್ದಾರೆ. ಬದಲಾವಣೆಗಳು ಈ ಬಾರಿಯ ಬಜೆಟ್‌ನ ಭಾಗವಾಗಬಹುದು ಎಂದೂ ಅವರು ಹೇಳಿದ್ದಾರೆ.

ಕ್ರಿಪ್ಟೊ ಕರೆನ್ಸಿಗಳ ಮೇಲಿನ ಹೂಡಿಕೆಯಿಂದ ಬರುವ ಆದಾಯಕ್ಕೆ ಕೆಲವರು ಈಗಾಗಲೇ ಬಂಡವಾಳ ವೃದ್ಧಿ ತೆರಿಗೆ ಪಾವತಿ ಮಾಡುತ್ತಿದ್ದಾರೆ. ಜಿಎಸ್‌ಟಿ ಅಡಿಯಲ್ಲಿ ಕೂಡ ಕಾನೂನು ಸ್ಪಷ್ಟವಾಗಿದೆ, ಇತರ ಸೇವೆಗಳಿಗೆ ಅನ್ವಯವಾಗುವ ತೆರಿಗೆ ಪ್ರಮಾಣವೇ ಇಲ್ಲಿಯೂ ಅನ್ವಯವಾಗುತ್ತದೆ ಎಂದು ಬಜಾಜ್ ಹೇಳಿದ್ದಾರೆ.

'ಕ್ರಿಪ್ಟೊ ಕರೆನ್ಸಿಗಳಲ್ಲಿನ ಹೂಡಿಕೆಯ ಮೂಲಕ ಹಣ ಸಂಪಾದಿಸಿದರೆ, ತೆರಿಗೆ ಕೊಡಬೇಕು. ಕೆಲವರು ಈಗಾಗಲೇ ತೆರಿಗೆ ಪಾವತಿಸಿದ್ದಾರೆ. ಕೆಲವು ವ್ಯಕ್ತಿಗಳು ಕ್ರಿಪ್ಟೊ ಕರೆನ್ಸಿಗಳನ್ನು ಹೂಡಿಕೆ ಮಾಡಬಹುದಾದ ಆಸ್ತಿ ಎಂದು ಪರಿಗಣಿಸಿದ್ದಾರೆ. ಅವರು ಬಂಡವಾಳ ವೃದ್ಧಿ ತೆರಿಗೆ ಪಾವತಿ ಮಾಡಿದ್ದಾರೆ' ಎಂದಿದ್ದಾರೆ.

ಕ್ರಿಪ್ಟೊ ಕರೆನ್ಸಿಗಳನ್ನು ಷೇರುಗಳ ರೀತಿಯಲ್ಲಿ ಖರೀದಿಸುವ, ಮಾರಾಟ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿರುವವರನ್ನು ಬ್ರೋಕರೇಜ್‌ಗಳು, ಟ್ರೇಡಿಂಗ್ ವೇದಿಕೆಗಳು ಎಂದು ವರ್ಗೀಕರಿಸಲಾಗುವುದೇ, ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಅವರಿಗೆ ಹೇಗೆ ತೆರಿಗೆ ವಿಧಿಸಲಾಗುತ್ತದೆ ಎಂಬ ಪ್ರಶ್ನೆಗೆ, 'ಈ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು. ಜಿಎಸ್‌ಟಿ ಕಾನೂನು ಸ್ಪಷ್ಟವಾಗಿದೆ. ವ್ಯಕ್ತಿಯೊಬ್ಬ ಬ್ರೋಕರ್ ಕೆಲಸ ಮಾಡುತ್ತಿದ್ದಾನೆ ಎಂದಾದರೆ, ಆತ ಜನರಿಂದ ಬ್ರೋಕರೇಜ್ ಶುಲ್ಕ ಪಡೆಯುತ್ತಿದ್ದಾನೆ ಎಂದಾದರೆ ಜಿಎಸ್‌ಟಿ ಅನ್ವಯ ಆಗುತ್ತದೆ' ಎಂದಿದ್ದಾರೆ.

ಕೇಂದ್ರ ಸರ್ಕಾರವು ಕ್ರಿಪ್ಟೊ ಕರೆನ್ಸಿಗಳಿಗೆ ಸಂಬಂಧಿಸಿದಂತೆ ಮಸೂದೆಯೊಂದನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇದೆ. ಈಗಿನ ನಿಯಮಗಳ ಅನ್ವಯ ದೇಶದಲ್ಲಿ ಕ್ರಿಪ್ಟೊ ಕರೆನ್ಸಿಗಳ ಮೇಲೆ ನಿಷೇಧ ಇಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರದ ಹಿರಿಯ ಅಧಿಕಾರಿಗಳ ಜೊತೆ ಈಚೆಗೆ ಸಭೆ ನಡೆಸಿ, ಕ್ರಿಪ್ಟೊ ಕರೆನ್ಸಿಗಳ ಬಗ್ಗೆ ಚರ್ಚಿಸಿದ್ದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1360 (1360)
ಸೋಯಾ (ರಿಫೈನ್ಡ್)	₹1245 (1248)
ಸೂರ್ಯಕಾಂತಿ (ರಿಫೈನ್ಡ್)	₹1305 (1305)
ಪಾಮೋಲಿನ್	₹1205 (1202)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಶ್ರೀಕಾಳು ಮೆಣಸು	530
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-51500
ಕುಂದಾಪುರ	
ಹಳೆಚಾಲಿ	45000-50500
ಹೊಸಚಾಲಿ	30000-37000
ಪುತ್ತೂರು	
ಕೋಕ	10500-26000
ಹೊಸತು	27500-42500
ಸಿದ್ದಾಪುರ	
ಬಿಳಿಗೋಟು	31799-41669
ಚಾಲಿ	45555-48799
ಕೋಕ	27889-37589
ಹೊಸಚಾಲಿ	32212-37289
ಕೆಂಪುಗೋಟು	30019-37689
ರಾಶಿ	42699-47969
ತಟ್ಟಿಬೆಟ್ಟೆ	39109-43812
ಶಿರಸಿ	
ಬೆಟ್ಟೆ	34091-44599
ಬಿಳಿಗೋಟು	20899-43636
ಚಾಲಿ	44686-48918
ರಾಶಿ	40019-49099
ಯಲ್ಲಾಪುರ	
ಬಿಳಿಗೋಟು	31001-41399
ಚಾಲಿ	42317-48791
ಕೋಕ	22079-34299
ಕೆಂಪುಗೋಟು	28199-32603
ರಾಶಿ	45789-53079
ತಟ್ಟಿಬೆಟ್ಟೆ	37669-44369
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	47599-53889
ಗೊರಬಲು	15069-39150
ರಾಶಿ	41969-46899
ಸರಕು	50009-72896
ಸಾಗರ	
ಬಿಳಿಗೋಟು	23699-37161
ಚಾಲಿ	35889-45700
ಕೋಕ	22099-36854
ಕೆಂಪುಗೋಟು	23899-36899
ರಾಶಿ	39199-46599
ತಟ್ಟಿಬೆಟ್ಟೆ	7100-25800
ರಾಮನಗರ ರೇಷ್ಮೆ	
ಮಿಶ್ರತಳಿ	245-546
ದ್ವಿತಳಿ	350-686

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14250	14000	---	228.95 ಸೆಂಟ್ಸ್
ಎಸಿ	6125	5300	---	
ಆರ್‌ಪಿ	6150	---	6300	ಲಂಡನ್
ಆರ್‌ಸಿ	3590	3250	3675	2212ಡಾಲರ್ಸ್

ಹೊಸ ಮರ್ಸಿಡಿಸ್ ಎಎಂಜಿ ಎ45 ಎಸ್ 4ಮ್ಯಾಟಿಕ್+ ಬಿಡುಗಡೆ

ನವದೆಹಲಿ (ಪಿಟಿಐ): ಐಷಾರಾಮಿ ಕಾರು ತಯಾರಿಸುವ ಜರ್ಮನಿಯ ಮರ್ಸಿಡಿಸ್ ಬೆಂಜ್ ಕಂಪನಿಯು ಭಾರತದ ಮಾರುಕಟ್ಟೆಗೆ ಹೊಸ 'ಎಎಂಜಿ ಎ 45 ಎಸ್ 4ಮ್ಯಾಟಿಕ್ +' ಕಾರು ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 79.50 ಲಕ್ಷ.

ಇದು 2 ಲೀಟರ್ ಟರ್ಬೊ ಚಾರ್ಜ್ಡ್ ಎಂಜಿನ್ ಹೊಂದಿದ್ದು, 421 ಎಚ್‌ಪಿ ಶಕ್ತಿ ಉತ್ಪಾದಿಸಬಲ್ಲದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಹೊಸ ಕಾರನ್ನು ಬಿಡುಗಡೆ ಮಾಡುವ ಮೂಲಕ ಕಂಪನಿಯ ಎ–ಕ್ಲಾಸ್ ವಿಭಾಗವನ್ನು ಮತ್ತಷ್ಟು ಬಲಪಡಿಸಲಾಗಿದೆ. ದೇಶದಲ್ಲೇ ಅತಿ ವೇಗದಲ್ಲಿ ಚಲಿಸುವ ಹ್ಯಾಚ್‌ಬ್ಯಾಕ್ ಇದಾಗಿದೆ ಎಂದು ಕಂಪನಿಯ ಭಾರತದ ವ್ಯವಸ್ಥಾಪಕ ನಿರ್ದೇಶಕ ಮಾರ್ಟಿನ್ ಶ್ವೆಂಕ್ ಹೇಳಿದ್ದಾರೆ.

ದೇಶದಾದ್ಯಂತ ಇರುವ ಮರ್ಸಿಡಿಸ್ ಬೆಂಜ್ ವಿತರಣಾ ಕೇಂದ್ರಗಳು ಮತ್ತು ಮರ್ಸಿಡಿಸ್ ಬೆಂಜ್‌ನ ಆನ್‌ಲೈನ್ ಮಳಿಗೆಯ ಮೂಲಕ ಈ ಕಾರು ಖರೀದಿಗೆ ಲಭ್ಯವಿದೆ ಎಂದು ಕಂಪನಿಯು ತಿಳಿಸಿದೆ.

'ತಂತ್ರಾಂಶ ಅಭಿವೃದ್ಧಿಗೆ ಇನ್ನಷ್ಟು ಕೇಂದ್ರ'

ನವದೆಹಲಿ (ಪಿಟಿಐ): ಅಮೆರಿಕದ ಪ್ರಮುಖ ತಂತ್ರಜ್ಞಾನ ಕಂಪನಿ ಐಬಿಎಂ, ತಂತ್ರಾಂಶ ಅಭಿವೃದ್ಧಿಗಾಗಿ ಭಾರತದಲ್ಲಿ ಇನ್ನೂ ಹೆಚ್ಚಿನ ಕೇಂದ್ರಗಳನ್ನು ತೆರೆಯುವುದಾಗಿ ಶುಕ್ರವಾರ ಹೇಳಿದೆ.

ಕಂಪನಿಯು ತನ್ನ ಡಿಜಿಟಲೀಕರಣದ ಪಯಣದಲ್ಲಿ ಸರ್ಕಾರದೊಂದಿಗೆ ಪಾಲುದಾರನಾಗಲು ಬಯಸುತ್ತಿದೆ. ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಕೇಂದ್ರಗಳನ್ನು ತೆರೆಯಲಾಗುವುದು ಎಂದು ಅಧ್ಯಕ್ಷ ಅರವಿಂದ ಕೃಷ್ಣನ್ ಹೇಳಿದ್ದಾರೆ.

ಭಾರತ ಪ್ರವಾಸದಲ್ಲಿರುವ ಕೃಷ್ಣನ್ ಅವರು, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರೊಂದಿಗೆ ಈ ಕುರಿತು ಚರ್ಚೆ ನಡೆಸಿದ್ದಾರೆ.

ಬೆಂಗಳೂರು, ಹೈದರಾಬಾದ್ ಮತ್ತು ಪುಣೆಯಲ್ಲಿ ಕಂಪನಿಯು ದೊಡ್ಡದಾದ ತಂತ್ರಾಂಶ ಅಭಿವೃದ್ಧಿ ಕೇಂದ್ರಗಳನ್ನು ಹೊಂದಿದೆ. ದೆಹಲಿಯಲ್ಲಿ ಸಣ್ಣ ಗಾತ್ರದ ಕೇಂದ್ರವನ್ನು ಹೊಂದಿದೆ. ಅಹಮದಾಬಾದ್ ಮತ್ತು ಕೊಚ್ಚಿ ಸಮೀಪದಲ್ಲಿ ತಲಾ ಒಂದು ಕೇಂದ್ರ ತೆರೆಯುವುದಾಗಿ ಈಗಾಗಲೇ ಘೋಷಿಸಲಾಗಿದೆ. ಉಳಿದ ಕೇಂದ್ರಗಳ ಬಗ್ಗೆ ಈಗಲೇ ತಿಳಿಸುವುದಿಲ್ಲ ಎಂದಿದ್ದಾರೆ.

'ಮ್ಯೂಚುವಲ್ ಫಂಡ್ ಹೂಡಿಕೆದಾರರಿಗೆ ಬೇಕು ಸಂಯಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿರಿಯ ನಾಗರಿಕರು ಐ.ಟಿ. ವಿವರ ಸಲ್ಲಿಸಬೇಕೇ? ಬಂಡವಾಳ ವೃದ್ಧಿ ತೆರಿಗೆಯಿಂದ ವಿನಾಯಿತಿ ಪಡೆಯುವುದು ಹೇಗೆ? ಟಿಡಿಎಸ್ ಕಡಿತ ಆಗದಂತೆ ನೋಡಿಕೊಳ್ಳಲು ಏನು ಮಾಡಬೇಕು?

'ಪ್ರಜಾವಾಣಿ' ಶುಕ್ರವಾರ ಆಯೋಜಿಸಿದ್ದ, ವೈಯಕ್ತಿಕ ಹಣಕಾಸಿಗೆ ಸಂಬಂಧಿಸಿದ ಫೋನ್–ಇನ್ ಕಾರ್ಯಕ್ರಮದಲ್ಲಿ ಬ್ಯಾಂಕಿಂಗ್ ತಜ್ಞ ಯು.ಪಿ. ಪುರಾಣಿಕ್ ಅವರಿಗೆ ಜನರು ಕೇಳಿದ ಕೆಲವು ಪ್ರಶ್ನೆಗಳು ಹೀಗಿದ್ದವು.

ಸಾಲ ಮಾಡಿ ನಿವೇಶನ ಖರೀದಿಸುವುದು ಉತ್ತಮವೇ ಅಥವಾ 15ರಿಂದ 20 ವರ್ಷಗಳವರೆಗೆ ಮ್ಯೂಚುವಲ್ ಫಂಡ್‌ಗಳಲ್ಲಿ ವ್ಯವಸ್ಥಿತವಾಗಿ ಹೂಡಿಕೆ ಮಾಡಿದ ನಂತರ ಸಿಗುವ ಹಣದಿಂದ ಮನೆ ಕಟ್ಟಿಸುವುದು ಉತ್ತಮವೇ ಎನ್ನುವ ಪ್ರಶ್ನೆಯೊಂದು ಎದುರಾಯಿತು. 'ಎರಡೂ ಉತ್ತಮ ಆಯ್ಕೆಗಳೇ ಹೌದು. ಆದರೆ, ಮ್ಯೂಚುವಲ್ ಫಂಡ್ ಹೂಡಿಕೆಗಳಲ್ಲಿ ದೀರ್ಘ ಅವಧಿಯವರೆಗೆ ಕಾಯುವ ಸಂಯಮ ಇರಬೇಕು. ಬಹಳಷ್ಟು ಜನರಿಗೆ ತಾಳ್ಮೆ ಇರುವುದಿಲ್ಲ. ಷೇರುಪೇಟೆಯಲ್ಲಿ ಕುಸಿತ ಆದಾಗ ಗಾಬರಿಗೆ ಒಳಗಾಗಿ ಹಣ ಹಿಂದಕ್ಕೆ ಪಡೆಯುತ್ತಾರೆ. ಈ ದೃಷ್ಟಿಯಿಂದ ನೋಡುವುದಾದರೆ ಸಾಲ ಮಾಡಿ ನಿವೇಶನ ಖರೀದಿಸುವುದೇ ಉತ್ತಮ' ಎಂಬ ಉತ್ತರ ನೀಡಿದರು.

'ಎಲ್‌ಐಸಿ ಜೀವ ವಿಮೆ ಏಜೆಂಟ್ ಆಗಿದ್ದೇನೆ. ಐ.ಟಿ ಉದ್ಯೋಗಿಯೊಬ್ಬರು ತಿಂಗಳಿಗೆ ₹ 18 ಲಕ್ಷ ಸಂಬಳ ಪಡೆಯುತ್ತಿದ್ದಾರೆ. ಅವರು ಆದಾಯ ತೆರಿಗೆ ಉಳಿತಾಯ ಮಾಡುವ ಬಗೆ ಹೇಗೆ' ಎಂದು ಪೀಣ್ಯದ ರಂಗನಾಥ್ ಎನ್ನುವವರು ಪ್ರಶ್ನಿಸಿದರು. 'ಸೆಕ್ಷನ್ 80ಸಿ ಅಡಿ ₹ 1.50 ಲಕ್ಷದವರೆಗೆ ಉಳಿತಾಯ ಮಾಡಿ, ತೆರಿಗೆ ವಿನಾಯಿತಿ ಪಡೆಯಬಹುದು. ಅಲ್ಲದೆ, ಎನ್‌ಪಿಎಸ್ ಹೂಡಿಕೆ ಮಾಡಿದರೆ ಸೆಕ್ಷನ್ 80ಸಿಸಿಡಿ (1ಬಿ) ಅಡಿ ಹೆಚ್ಚುವರಿಯಾಗಿ ₹ 50 ಸಾವಿರದವರೆಗೆ, ಸೆಕ್ಷನ್ 16ಎ ದಲ್ಲಿ ₹ 50 ಸಾವಿರ ಸ್ಟ್ಯಾಂಡರ್ಡ್ ಡಿಡಕ್ಷನ್, ಮನೆಯಲ್ಲಿ ಹಿರಿಯ ನಾಗರಿಕರಿದ್ದರೆ ಅವರ ವೈದ್ಯಕೀಯ ವಿಮೆಗೆ ಸೆಕ್ಷನ್ 80ಡಿ ಅಡಿ ₹ 50 ಸಾವಿರದವರೆಗಿನ ಮೊತ್ತವನ್ನು ಒಟ್ಟಾರೆ ಆದಾಯದಲ್ಲಿ ಕಳೆದು ತೆರಿಗೆ ಕೊಡಬಹುದು' ಎಂದು ಉತ್ತರ ನೀಡಿದರು.

'ನಾನು ಐ.ಟಿ. ವಿವರಗಳನ್ನು ನಾನು ಸಲ್ಲಿಸಬೇಕೇ ಬೇಡವೇ? ಟಿಡಿಎಸ್ ಕಡಿತ ಆಗದಂತೆ ಮಾಡಲು ಏನು ಮಾಡಬೇಕು' ಎಂದು ಹಿರಿಯ ನಾಗರಿಕರೊಬ್ಬರು ತಮ್ಮ ಅನುಮಾನವನ್ನು ತೆರೆದಿಟ್ಟರು. ಟಿಡಿಎಸ್ ಮುರಿಯದೇ ಇರಲು ಫಾರಂ 15ಎಚ್ ಅನ್ನು ಪ್ರತಿ ವರ್ಷ ಏಪ್ರಿಲ್ 15ರ ಒಳಗಾಗಿ ಕೊಡಬೇಕು. ಆದರೆ, ಒಟ್ಟು ಬಡ್ಡಿ ವರಮಾನವು ₹ 50 ಸಾವಿರಕ್ಕಿಂತ ಹೆಚ್ಚು ಬರುತ್ತಿದ್ದರೆ 15 ಎಚ್ ಕೊಡಬೇಕಿಲ್ಲ ಎಂದು ಪುರಾಣಿಕ್ ಉತ್ತರ ನೀಡಿದರು.

ಬಂಡವಾಳ ವೃದ್ಧಿ ತೆರಿಗೆಯ ಹೊರೆ ತಗ್ಗಿಸಿಕೊಳ್ಳಲು ಸಾರ್ವಜನಿಕರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಅಥವಾ ಗ್ರಾಮೀಣ ವಿದ್ಯುದೀಕರಣ ಯೋಜನೆ (ಆರ್‌ಇಸಿ) ಬಾಂಡ್‌ಗಳಲ್ಲಿ ಹಣ ಹೂಡಿಕೆ ಮಾಡಬಹುದು ಎಂದು ಪುರಾಣಿಕ್ ಅವರು ಸಲಹೆ ನೀಡಿದರು.



ಯು.ಪಿ. ಪುರಾಣಿಕ್

ಎಫ್‌ಪಿಐ ಹೊಂದಿರುವ ಷೇರು ಮೌಲ್ಯ ಶೇ 13ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಹೊಂದಿರುವ ದೇಶಿ ಷೇರುಗಳ ಮೌಲ್ಯವು ಸೆಪ್ಟೆಂಬರ್ ತ್ರೈಮಾಸಿಕದ ಅಂತ್ಯದ ವೇಳೆಗೆ ₹ 49.35 ಲಕ್ಷ ಕೋಟಿಯಷ್ಟಾಗಿದೆ. ಹಿಂದಿನ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 13ರಷ್ಟು ಹೆಚ್ಚಾಗಿದೆ ಎಂದು ಮಾರ್ನಿಂಗ್‌ಸ್ಟಾರ್ ಕಂಪನಿಯ ವರದಿಯು ತಿಳಿಸಿದೆ.

ಜೂನ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಹೂಡಿಕೆದಾರರು ₹ 43.80 ಲಕ್ಷ ಕೋಟಿ ಮೌಲ್ಯದ ಷೇರುಗಳನ್ನು ಹೊಂದಿದ್ದರು ಎಂದು ಹೇಳಿದೆ.

ದೇಶದ ಷೇರುಪೇಟೆಗಳಲ್ಲಿ ನಡೆಯುತ್ತಿರುವ ಉತ್ತಮ ವಹಿವಾಟು ಮತ್ತು ವಿದೇಶಿ ಬಂಡವಾಳದ ಒಳಹರಿವಿನಿಂದಾಗಿ ಹೂಡಿಕೆದಾರರ ಮೌಲ್ಯದಲ್ಲಿ ಈ ಪ್ರಮಾಣದ ಏರಿಕೆ ಕಂಡುಬಂದಿದೆ ಎಂದು ತಿಳಿಸಿದೆ.

ಸೆಪ್ಟೆಂಬರ್ ತ್ರೈಮಾಸಿಕದ ಅಂತ್ಯದ ವೇಳೆಗೆ ₹ 4,162 ಕೋಟಿ ಮೊತ್ತದ ವಿದೇಶಿ ಬಂಡವಾಳ ಹೂಡಿಕೆ ಆಗಿದೆ. ಜೂನ್ ತ್ರೈಮಾಸಿಕದ ಅಂತ್ಯದ ವೇಳೆಗೆ ಆಗಿದ್ದ ₹ 5,017 ಕೋಟಿ ಬಂಡವಾಳ ಹೂಡಿಕೆಗೆ ಹೋಲಿಸಿದರೆ ಇಳಿಕೆ ಆಗಿದೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್, ಬಡ್ಡಿದರ ಏರಿಕೆಯ ಸುಳಿವು ನೀಡಿರುವುದು ಹೂಡಿಕೆ ಮೇಲೆ ಪರಿಣಾಮ ಬೀರಿದೆ. ಇದರಿಂದಾಗಿ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಳಹರಿವು ಕಡಿಮೆ ಆಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಕೋವಿಡ್‌ನ ಎರಡನೇ ಅಲೆಯ ಬಳಿಕ ಆರ್ಥಿಕ ಚೇತರಿಕೆ ಹಾಗೂ ಕಾರ್ಪೊರೇಟ್ ಗಳಿಕೆಯು ಇನ್ನಷ್ಟು ಸ್ಥಿರಗೊಳ್ಳುವ ಸೂಚನೆಗಾಗಿ ವಿದೇಶಿ ಹೂಡಿಕೆದಾರರು ಕಾಯುತ್ತಿದ್ದಾರೆ. ಹೀಗಾಗಿ ಹೆಚ್ಚಿನ ಬಂಡವಾಳ ಹೂಡಿಕೆ ಮಾಡುವುದರಿಂದ ಹಿಂದೆ ಸರಿದಿದ್ದಾರೆ ಎಂದು ಅಭಿಪ್ರಾಯಪಡಲಾಗಿದೆ.

ಅಲೆಕ್ಸಾಂಡರ್ ಜ್ವೆರೆವ್

ಟೆನಿಸ್: ಸೆಮಿಗೆ ಅಲೆಕ್ಸಾಂಡರ್

ಟುರಿನ್ (ಎಪಿ): ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರು ಹುಬರ್ತ್ ಹುರ್ಕಾಜ್ ಅವರ ಸವಾಲು ಮೀರಿ ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಯ ನಾಲ್ಕರಘಟ್ಟ ತಲುಪಿದ್ದಾರೆ. ಇದರೊಂದಿಗೆ ಅಗ್ರಕ್ರಮಾಂಕದ ಮೂವರು ಆಟಗಾರರು ಸೆಮಿಫೈನಲ್ ತಲುಪಿದಂತಾಗಿದೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೊದಲ ಸ್ಥಾನದಲ್ಲಿರುವ ಸರ್ಬಿಯಾದ ನೊವಾಕ್ ಜೊಕೊವಿಚ್, ಎರಡನೇ ಸ್ಥಾನದಲ್ಲಿರುವ ರಷ್ಯಾ ಆಟಗಾರ ಡ್ಯಾನಿಲ್ ಮೆಡ್ವೆಡೆವ್ ಈಗಾಗಲೇ ನಾಲ್ಕರಘಟ್ಟ ಪ್ರವೇಶಿಸಿದವರು. ಜ್ವೆರೆವ್ ಅವರು ಮೂರನೇ ಕ್ರಮಾಂಕದಲ್ಲಿದ್ದಾರೆ.

ಗುರುವಾರ ನಡೆದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಜ್ವೆರೆವ್ 6-2, 6-4ರಿಂದ ಪೋಲೆಂಡ್‌ನ ಹುರ್ಕಾಜ್ ಅವರಿಗೆ ಸೋಲುಣಿಸಿದರು.

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್: ಮಿಂಚಿದ ಹ್ಯೂಗೊ ಬೌಮೋಸ್; ಕೇರಳಕ್ಕೆ ನಿರಾಸೆ

ಎಟಿಕೆ ಮೋಹನ್ ಬಾಗನ್ ಶುಭಾರಂಭ

ಮಡಗಾಂವ್: ಹ್ಯೂಗೊ ಬೌಮೋಸ್ ಗಳಿಸಿದ ಎರಡು ಸೊಗಸಾದ ಗೋಲುಗಳ ಬಲದಿಂದ ಎಟಿಕೆ ಮೋಹನ್ ಬಾಗನ್ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಇಲ್ಲಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 4–2ರಿಂದ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ಹ್ಯೂಗೊ ಮೂರು ಹಾಗೂ 39 ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರೆ, ರಾಯ್ ಕೃಷ್ಣ (27ನೇ ನಿಮಿಷ) ಹಾಗೂ ಲಿಸ್ಟನ್ ಕೊಲ್ಯಾಸೊ (50ನೇ ನಿಮಿಷ) ಎಟಿಕೆಎಂಬಿ ಪರ ಯಶಸ್ಸು ಸಾಧಿಸಿದರು.

ಎದುರಾಳಿ ಕೇರಳ ಬ್ಲಾಸ್ಟರ್ಸ್ ಪರ ಸಹಲ್ ಸಮದ್ (24) ಮತ್ತು ಜಾರ್ಜ್ ದಿಯಾಜ್ (69ನೇ ನಿಮಿಷ) ಗೋಲು ದಾಖಲಿಸಿದರು.

ಗೋಲು ಗಳಿಸಿದ ಕೇರಳ ಬ್ಲಾಸ್ಟರ್ಸ್ ಆಟಗಾರರ ಸಂಭ್ರಮ– ಪಿಟಿಐ ಚಿತ್ರ

ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮುಂದಾದ ಚಾಂಪಿಯನ್ ತಂಡಕ್ಕೆ ಹ್ಯೂಗೊ, ಲಿಸ್ಟನ್ ನೀಡಿದ ಪಾಸ್‌ನಲ್ಲಿ ಮೊದಲ ಗೋಲು ದಾಖಲಿಸಿದರು. ರಾಹುಲ್ ಕೆ.ಪಿ. ನೆರವಿನಿಂದ ಗೋಲು ಹೊಡೆದ ಸಹಲ್ ಕೇರಳ ತಂಡವು ಸಮಬಲ ಸಾಧಿಸಲು ನೆರವಾದರು. ಇದಾದ ಮೂರನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶವನ್ನು ಗೋಲಾಗಿಸುವಲ್ಲಿ ರಾಯ್‌ಕೃಷ್ಣ ತಪ್ಪು ಮಾಡಲಿಲ್ಲ. ಇದಾದ ಬಳಿಕ ಹ್ಯೂಗೊ ಮತ್ತೊಮ್ಮೆ ಮೋಡಿ ಮಾಡಿದರು.ರಾಯ್‌ಕೃಷ್ಣ ಅವರು ನೀಡಿದ ಪಾಸ್‌ನಲ್ಲಿ ಲಿಸ್ಟನ್ ಗೋಲು ದಾಖಲಿಸಿದಾಗ ಎಟಿಕೆಎಂಬಿ ತಂಡದ ಮುನ್ನಡೆ 4–1ಕ್ಕೆ ತಲುಪಿತು. ದಿಯಾಜ್ ಗೋಲು ಗಳಿಸಿ ಕೇರಳ ತಂಡದ ಹಿನ್ನಡೆಯನ್ನು 2–4ಕ್ಕೆ ತಗ್ಗಿಸಿದರು.

ಬೆಂಗಳೂರಿಗೆ ನಾರ್ತ್ ಈಸ್ಟ್ ಯುನೈಟೆಡ್ ಸವಾಲು

ಬ್ಯಾಂಬೊಲಿಮ್: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಹೊಸ ಕನಸಿನೊಂದಿಗೆ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡ ಶನಿವಾರ ಕಣಕ್ಕೆ ಇಳಿಯಲಿದೆ. ಎಂಟನೇ ಆವೃತ್ತಿಯ ಮೊದಲ ಪಂದ್ಯದಲ್ಲಿ ತಂಡ ನಾರ್ತ್ ಈಸ್ಟ್ ಯುನೈಟೆಡ್ ವಿರುದ್ಧ ಸೆಣಸಲಿದೆ.

ಮಾಜಿ ಚಾಂಪಿಯನ್ ಬಿಎಫ್‌ಸಿ ಹಿಂದಿನ ಎರಡು ಆವೃತ್ತಿಗಳಲ್ಲಿ ನಿರೀಕ್ಷೆಗೆ ತಕ್ಕಂತೆ ಆಡಲಿಲ್ಲ. 2017ರಿಂದ ಟೂರ್ನಿಯಲ್ಲಿ ಆಡುತ್ತಿರುವ ತಂಡ ಒಮ್ಮೆಯೂ ಕಳೆದ ಬಾರಿ ಮೊದಲ ಸಲ ಸೆಮಿಫೈನಲ್ ಪ್ರವೇಶಿಸದೇ ವಾಪಸ್ ಆಗಿತ್ತು.

ಮಾರ್ಕೊ ಪೆಜೊವೊಲಿ ಅವರನ್ನು ಕೋಚ್ ಆಗಿ ನೇಮಕ ಮಾಡಿಕೊಂಡಿರುವ ತಂಡ ಅಂದಿನಿಂದಲೇ ರಣತಂತ್ರಗಳನ್ನು ಹೂಡುತ್ತ ಬಂದಿದೆ. 52 ವರ್ಷದ ಮಾರ್ಕೊ ಅವರ ಮಾರ್ಗದರ್ಶನದಲ್ಲಿ ತಂಡ ಯಶಸ್ಸು ಕಾಣುವುದೇ ಎಂಬ ಕುತೂಹಲ ಈಗ ಫುಟ್‌ಬಾಲ್ ಪ್ರೇಮಿಗಳನ್ನು ಕಾಡುತ್ತಿದೆ. ಪದಾರ್ಪಣೆ ಮಾಡಿದ ವರ್ಷ ಫೈನಲ್ ಪ್ರವೇಶಿಸಿದ್ದ ಬಿಎಫ್‌ಸಿ ತಂಡ ರನ್ನರ್ ಅಪ್ ಆಗಿತ್ತು. ಮುಂದಿನ ವರ್ಷ ಚಾಂಪಿಯನ್ ಆಗಿತ್ತು. ಅದರ ನಂತರದ ಆವೃತ್ತಿಯಲ್ಲಿ ನಾಲ್ಕರ ಘಟ್ಟ ಪ್ರವೇಶಿಸಿ 'ಹ್ಯಾಟ್ರಿಕ್ ಸೆಮಿಫೈನಲ್' ಸಾಧನೆ ಮಾಡಿತ್ತು. ಈ ಬಾರಿ ನಾಯಕನಾಗಿ ಸುನಿಲ್ ಚೆಟ್ರಿ ಅವರನ್ನು ಮುಂದುವರಿಸಲಾಗಿದೆ. ತಂಡದ ಆಡಳಿತ ಇರಿಸಿರುವ ವಿಶ್ವಾಸಕ್ಕೆ ಅವರು ಯಾವ ರೀತಿಯಲ್ಲಿ ಕೃತಜ್ಞತೆ ಸಲ್ಲಿಸುತ್ತಾರೆ ಎಂಬುದನ್ನು ಕಾದುನೋಡಬೇಕು.

ಪಂದ್ಯ ಆರಂಭ: ರಾತ್ರಿ 7.30. **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆರ್ಚರಿ: ಭಾರತಕ್ಕೆ ಎರಡು ಬೆಳ್ಳಿ

ಢಾಕಾ (ಪಿಟಿಐ): ಭಾರತದ ರಿಕರ್ವ್ ವಿಭಾಗದ ಆರ್ಚರಿಪಟುಗಳು ಕೊರಿಯಾದ ಸವಾಲು ಮೀರುವಲ್ಲಿ ಮತ್ತೊಮ್ಮೆ ವಿಫಲರಾದರು. ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ದೇಶದ ಬಿಲ್ಗಾರರು ಪುರುಷರ ಮತ್ತು ತಂಡ ವಿಭಾಗಗಳಲ್ಲಿ ಎರಡು ಬೆಳ್ಳಿ ಪದಕಗಳನ್ನು ತಮ್ಮದಾಗಿಸಿಕೊಂಡರು.

ಚಾಂಪಿಯನ್‌ಷಿಪ್‌ನಲ್ಲಿ ತಂಡವು ಏಳು ಪದಕಗಳೊಂದಿಗೆ ಅಭಿಯಾನ ಮುಕ್ತಾಯಗೊಳಿಸಿತು. ರಿಕರ್ವ್ ಮಿಶ್ರ ತಂಡ ವಿಭಾಗದಲ್ಲಿ 6–0ಯಿಂದ ಉಜ್ಬೆಕಿಸ್ತಾನ ತಂಡವನ್ನು ಮಣಿಸಿದ ಭಾರತ ತಂಡದವರು ಕಂಚಿನ ಪದಕವನ್ನೂ ಗೆದ್ದರು. ಈ ತಂಡದಲ್ಲಿ ಅಂಕಿತಾ ಭಕತ್ ಮತ್ತು ಕಪಿಲ್ ಇದ್ದರು. ಒಟ್ಟು ಒಂದು ಚಿನ್ನ, ನಾಲ್ಕು ಬೆಳ್ಳಿ ಹಾಗೂ ಎರಡೂ ಕಂಚಿನ ಪದಕಗಳು ಭಾರತಕ್ಕೆ ಒಲಿದವು.

ಬಾಂಗ್ಲಾದೇಶ ಆರ್ಮಿ ಕ್ರೀಡಾಂಗಣದಲ್ಲಿ ನಡೆದ ಟೂರ್ನಿಯಲ್ಲಿ ಕಪಿಲ್, ಪ್ರವೀಣ್ ಜಾಧವ್ ಹಾಗೂ ಪಾರ್ಥ್ ಸಾಳುಂಕೆ ಅವರಿದ್ದ ಭಾರತದ ಪುರುಷರ ರಿಕರ್ವ್ ತಂಡವು ಚಿನ್ನದ ಪದಕದ ಸುತ್ತಿನಲ್ಲಿ 2–6ರಿಂದ ಅಗ್ರಶ್ರೇಯಾಂಕದ ಕೊರಿಯಾ ಆಟಗಾರರಾದ ಲೀ ಸೆಯುಂಗ್‌ಯುನ್, ಕಿಮ್ ಪಿಲ್–ಜೂಂಗ್ ಮತ್ತು ಹಾನ್ ವೂ ಟ್ಯಾಕ್ ಎದುರು ಮಣಿದರು.ಮಹಿಳಾ ರಿಕರ್ವ್ ತಂಡದಲ್ಲಿದ್ದ ಅಂಕಿತಾ ಭಕತ್, ಮಧು ವೇದ್ವಾನ್ ಹಾಗೂ ರಿಧಿ ಅವರು ಫೈನಲ್‌ನಲ್ಲಿ 0–6ರಿಂದ ರಿಯೂ ಸು ಜಂಗ್, ಒಹ್ ಯೆಜಿನ್ ಮತ್ತು ಲಿಮ್ ಹೆಜಿನ್ ಎದುರು ಸೋತರು.

ಈ ಹಿಂದಿನ ಆವೃತ್ತಿಯಲ್ಲೂ ಭಾರತ ಏಳು ಪದಕಗಳನ್ನು (ಒಂದು ಚಿನ್ನ, ಎರಡು ಬೆಳ್ಳಿ ಮತ್ತು ನಾಲ್ಕು ಕಂಚು) ಗೆದ್ದುಕೊಂಡಿತ್ತು. ಆದರೆ ತಂಡವು ಈ ಬಾರಿ ಗೆದ್ದ ಬೆಳ್ಳಿ ಪದಕಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ.

ಪ್ರಶಸ್ತಿಯೊಂದಿಗೆ ತೇಷುಬ್ ದಿನೇಶ್ ಹಾಗೂ ವೃಷಾಲಿ ಕಿಣಿ

ಟಿಟಿ:ವೃಷಾಲಿ, ತೇಷುಬ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಧಾರವಾಡ: ಬೆಂಗಳೂರಿನ ಬಿಎನ್‌ಎಂ ಕ್ಲಬ್‌ನ ವೃಷಾಲಿ ಕಿಣಿ ಹಾಗೂ ಚೆಕ್‌ಮೇಟ್ ಕ್ಲಬ್‌ನ ತೇಷುಬ್ ದಿನೇಶ್ ಅವರು ಇಲ್ಲಿನ ಕಾಸ್ಮಸ್ ಕ್ಲಬ್ ಆಯೋಜಿಸಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 13 ವರ್ಷದ ಒಳಗಿನವರ ವಿಭಾಗದಲ್ಲಿ ಚಾಂಪಿಯನ್ ಆದರು.

ಶುಕ್ರವಾರ ನಡೆದ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ವೃಷಾಲಿ ಕಿಣಿ 14–12, 13–15, 11–8, 5–11, 11–9ರಲ್ಲಿ ಬಿಟಿಟಿ ಅಕಾಡೆಮಿಯ ತನಿಷ್ಕಾ ಕಪಿಲ್ ಕಾಲಭೈರವ ಎದುರು ಗೆಲುವು ಪಡೆದರು. ಬಾಲಕರ ಫೈನಲ್‌ನಲ್ಲಿ ತೇಷುಬ್ 9–11, 11–7, 15–13, 11–7ರಲ್ಲಿ ತಮ್ಮದೇ ಕ್ಲಬ್‌ನ ಮೋಹಿನಿಷ್ ನಂದಿ ನಾರಾ ಎದುರು ಜಯ ಗಳಿಸಿ ಪ್ರಶಸ್ತಿ ಜಯಿಸಿದರು.

ಟೆನಿಸ್: ಸೆಹಜ್‌ಗೆ ವೇದಾಂಶ್ ಸವಾಲು

ಬೆಂಗಳೂರು: ಸೆಹಜ್ ಸಿಂಗ್ ಪವಾರ್ ಹಾಗೂ ವೇದಾಂಶ್ ರೆಡ್ಡಿಯರ್, ಎಐಟಿಎ ಸಿಎಸ್ 18 ವರ್ಷದೊಳಗಿನವರ ಟೆನಿಸ್‌ನ ಬಾಲಕರ ವಿಭಾಗದಲ್ಲಿ ಫೈನಲ್ ತಲುಪಿದ್ದಾರೆ.

ಫಾರ್ಚುನ್ ಸ್ಪೋರ್ಟ್ಸ್ ಅಕಾಡೆಮಿ ಅಂಗಣದಲ್ಲಿ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಸೆಹಜ್ 7–3ರಿಂದ ಚರಣ್ ವರ್ಧಮ್ ಅವರನ್ನೂ ವೇದಾಂಶ್ 7–1ರಲ್ಲಿ ಅಕ್ಷಯ್ ಪ್ರಸಾದ್ ಅವರನ್ನೂ ಮಣಿಸಿದರು.

ಬಾಲಕಿಯರ ವಿಭಾಗದಲ್ಲಿ ಚಾರ್ಮಿ ಗೋಪಿನಾಥ್ ಹಾಗೂ ವನ್ಯಾ ಶ್ರೀವಾತ್ಸವ್ ಫೈನಲ್‌ನಲ್ಲಿ ಸೆಣಸಲಿದ್ದಾರೆ.

ನಾಲ್ಕರ ಘಟ್ಟದ ಪಂದ್ಯದಲ್ಲಿ ಚಾರ್ಮಿ 7–1ರಿಂದ ಕಶೀಶ್ ಕಾಂತ್ ಎದುರು ಗೆದ್ದರೆ, ವನ್ಯಾ 7–3ರಿಂದ ಅನುಷ್ಕಾ ಪಾವನಿ ಅವರನ್ನು ಸೋಲಿಸಿದರು.

ನಿಧನ ವಾರ್ತೆ

ಎಂ.ಬಿ.ಶಿವಪ್ಪ

ಬೆಂಗಳೂರು: ಕರ್ನಾಟಕ ಕ್ರೀಡಾ ಪ್ರಾಧಿಕಾರದ ಮಾಜಿ ಉಪಾಧ್ಯಕ್ಷ ಎಂ.ಬಿ. ಶಿವಪ್ಪ (59) ಗುರುವಾರ ನಿಧನರಾದರು ಎಂದು ಪ್ರಾಧಿಕಾರ ತಿಳಿಸಿದೆ. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. 2003ರಿಂದ ಮೂರು ವರ್ಷ ಶಿವಪ್ಪ ಅವರು ಉಪಾಧ್ಯಕ್ಷರಾಗಿದ್ದರು.

ಸೆಮಿಫೈನಲ್‌ಗೆ ಸಿಂಧು, ಶ್ರೀಕಾಂತ್

ಬಾಲಿ (ಪಿಟಿಐ): ಸುಲಭ ಜಯ ಗಳಿಸಿದ ಭಾರತದ ಪಿ.ವಿ.ಸಿಂಧು, ಇಂಡೊನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ತಲುಪಿದ್ದಾರೆ. ಕಿದಂಬಿ ಶ್ರೀಕಾಂತ್ ಕೂಡ ನಾಲ್ಕರ ಘಟ್ಟ ಪ್ರವೇಶಿಸಿದ್ದಾರೆ.

ಶುಕ್ರವಾರ ನಡೆದ ಎಂಟರಘಟ್ಟದ ಹಣಾಹಣಿಯಲ್ಲಿ ಸಿಂಧು, 21-13, 21-10ರಿಂದ ಟರ್ಕಿಯ ನೆಸ್ಲಿಹಾನ್ ಯಿಜಿಟ್ ಅವರನ್ನು ಸೋಲಿಸಿದರು.

ಪುರುಷರ ಸಿಂಗಲ್ಸ್ ಎಂಟರಘಟ್ಟದ ಹಣಾಹಣಿಯಲ್ಲಿ ಶ್ರೀಕಾಂತ್ 21-7, 21-18ರಿಂದ ಸ್ವದೇಶದ ಆಟಗಾರ ಎಚ್.ಎಸ್. ಪ್ರಣಯ್ ಅವರ ಸವಾಲು ಮೀರಿದರು. ಮೊದಲ ಗೇಮ್‌ನಲ್ಲಿ ಕೇವಲ ಏಳು ಪಾಯಿಂಟ್‌ಗಳನ್ನು ಎದುರಾಳಿಗೆ ಬಿಟ್ಟುಕೊಟ್ಟ ಶ್ರೀಕಾಂತ್ ಪಾರಮ್ಯ ಮೆರೆದರು. ಆದರೆ ಎರಡನೇ ಗೇಮ್‌ನಲ್ಲಿ ಪ್ರಣಯ್ ಅವರಿಂದ ಕೊಂಚ ಪ್ರತಿರೋಧ ಎದುರಿಸಿದರು.

ಶ್ರೀಕಾಂತ್ ಅವರು ಸೆಮಿಫೈನಲ್‌ನಲ್ಲಿ ಥಾಯ್ಲೆಂಡ್‌ನ ಕುನ್ಲಾವುತ್ ವಿತಿದ್ಸನ್ ಅಥವಾ ಡೆನ್ಮಾರ್ಕ್‌ನ ಆ್ಯಂಡರ್ಸ್ ಆ್ಯಂಟನ್ಸನ್ ಸವಾಲಿಗೆ ಸಜ್ಜಾಗಲಿದ್ದಾರೆ.

ಬ್ಯಾಡ್ಮಿಂಟನ್: ಅದಿತಿ, ಪ್ರತೀಕ್ ಪಾರಮ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ಅದಿತಿ ದೀಪಕ್ ರಾಜ್ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆ ಆಶ್ರಯದಲ್ಲಿ ಇಲ್ಲಿ ನಡೆಯುತ್ತಿರುವ ರಾಜ್ಯ ಸಬ್ ಜೂನಿಯರ್ (13 ವರ್ಷದೊಳಗೆ) ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪ್ರವೇಶಿಸಿದರು.

ಶುಕ್ರವಾರ ನಡೆದ ಬಾಲಕಿಯರ ವಿಭಾಗದ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ 21-14, 21-19ರಲ್ಲಿ ಐಕ್ಯಾ ಶೆಟ್ಟಿ ವಿರುದ್ಧ ಗೆದ್ದರು.

ಇನ್ನುಳಿದ ಎಂಟರ ಘಟ್ಟದ ಪಂದ್ಯಗಳಲ್ಲಿ ಸಿಯೋನಾ ಶರ್ಮ 21-14, 21-17ರಲ್ಲಿ ವೃದ್ಧಿ ಪೊನ್ನಮ್ಮ ಎದುರೂ, ಹಿತೈಶ್ರೀ ಎಲ್.ರಾಜಯ್ಯ 21-16, 21-14ರಲ್ಲಿ ಇಶಿಕಾ ಬರುವಾ

ಅದಿತಿ ದೀಪಕ್ ರಾಜ್

ಕಶ್ಯಪ್ ವಿರುದ್ಧವೂ, ಸುಹಿನಾ ರಾಯ್ 21–6, 21–16ರಲ್ಲಿ ಸಮಿಹಾ ಸಂತೋಷ್ ಶೆಟ್ಟಿ ಮೇಲೂ ಗೆದ್ದು ಸೆಮಿಫೈನಲ್ ತಲುಪಿದರು.

ಬಾಲಕರ ವಿಭಾಗದ ಸಿಂಗಲ್ಸ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅಗ್ರಶ್ರೇಯಾಂಕದ ಆಟಗಾರ ಬೆಂಗಳೂರಿನ ಪ್ರತೀಕ್ ಕೌಂಡಿಲ್ಯ 15-21, 21-11, 21-14ರಲ್ಲಿ ಅರವ್ ಎದುರು ಗೆದ್ದು ಸೆಮಿಫೈನಲ್ ಪ್ರವೇಶಿಸಿದರು.

ಇನ್ನುಳಿದ ಎಂಟರ ಘಟ್ಟದ ಪಂದ್ಯಗಳಲ್ಲಿ ಸಾಯಿ ಪುಷ್ಕರ್ 21-10, 21-14ರಲ್ಲಿ ತೋಷಾನ್ ನಾಯಕ್ ಎದುರೂ, ಎಂ.ಪ್ರಣವ್ 21-8, 21-15 ರಲ್ಲಿ ದ್ಯಾನ್ ಪಿ.ತೊಕ್ಚೋಮ್ ವಿರುದ್ಧವೂ, ಹಾರ್ದಿಕ್ ದಿವ್ಯಾಂಶ್ 21–19, 22–20ರಲ್ಲಿ ಹರ್ಷದ್ ಮೇಲೂ ಜಯ ಗಳಿಸಿದರು.

ಶನಿವಾರ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳು ನಡೆಯಲಿವೆ.